ವಿಶ್ವವಾಣಿ
ವಿಶ್ವಾಸವೇ ವಿಶ್ವ



ಗುಜರಾತ್ ಟೈಟಾನ್ಸ್‌ಗೆ ಹೇಡನ್ ಬ್ಯಾಟಿಂಗ್ ಕೋಚ್

ಆಸ್ಟ್ರೇಲಿಯಾದ ವಿಶ್ವವಿಖ್ಯಾತ ಎಡಗೈ ಬ್ಯಾಟರ್ ಮ್ಯಾಥ್ಯೂ ಹೇಡನ್‌ರನ್ನು ಗುಜರಾತ್ ಟೈಟಾನ್ಸ್ ಐಪಿಎಲ್ ತಂಡ ತನ್ನ ಬ್ಯಾಟಿಂಗ್ ಕೋಚ್ ಆಗಿ ನೇಮಿಸಿದೆ. ಈ ಬಾರಿಯ ಐಪಿಎಲ್‌ನಲ್ಲಿ ಅವರು ಟೈಟಾನ್ಸ್ ತಂಡದ ಪರ ಕಾರ್ಯ ನಿರ್ವಹಿಸಲಿದ್ದಾರೆ.

ಸೊಂಪಾದ ಪುಟಗಳು

ನಿತೀಶ್ ಅನುಪಸ್ಥಿತಿಯಲ್ಲಿ ಜೆಡಿಯು ಭವಿಷ್ಯ ಬಿಗಿಯಾಗಿರುವುದೇ?
ಜನಪಥ
ರಾಘವಶರ್ಮ ನಿಡ್ಲೆ 6

ಡಿಜಿಟಲ್ ಯುಗದ ಡೆಡ್ಲಿ ಮಕ್ಕಳು !
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಕೋಪಿಸಿಕೊಳ್ಳುವುದೆಂದರೆ ಬೆಂಕಿ ಕೆಂಡವನ್ನು ನಮ್ಮ ಕೈಯಲ್ಲಿ ಹಿಡಿದುಕೊಂಡು ಬೇರೆಯವರ ಕೈ ಸುಟ್ಟು ಹೋಗಲಿ ಎಂದು ಆಶಿಸುವುದು. ಕೋಪವು ಬೇರೆಯವರಿಗಿಂತ ಯಾವತ್ತೂ ನಮ್ಮನ್ನೇ ಸುಡುತ್ತದೆ.

ವಕ್ರತುಂಡೋಕ್ತಿ

ಜಗತ್ತಿನ ಅತ್ಯಂತ ಸಂಕ್ಷಿಪ್ತ ಸೂಚನೆ ಅಂದ್ರೆ ಹೆಂಡತಿ ಅಡುಗೆ ಮನೆಯಿಂದ 'ಏನ್ರೀ' ಎಂದು ಕೂಗಿದಾಗ, ಗಂಡ ಓಡೋಡಿ ಬರುವುದು.

ಟಿ20 ವಿಶ್ವಕಪ್ ವಿಜೇತ ಭಾರತಕ್ಕೆ ಬಿಸಿಸಿಐನಿಂದ 131 ಕೋಟಿ ರು. ನಗದು

ದೆಹಲಿ: ಐಸಿಸಿ ಟಿ20 ವಿಶ್ವಕಪ್-2026 ಅನ್ನು ಗೆದ್ದು ಇತಿಹಾಸ ನಿರ್ಮಿಸಿದ ಸೂರ್ಯ ಕುಮಾರ್ ಯಾದವ್ ನೇತೃತ್ವದ ಭಾರತ ಕ್ರಿಕೆಟ್ ತಂಡಕ್ಕೆ ಬಿಸಿಸಿಐ 131 ಕೋಟಿ ರು.ಗಳ ಭಾರೀ ನಗದು ಬಹುಮಾನವನ್ನು ಘೋಷಿಸಿದೆ. ವಿಶ್ವಚಾಂಪಿಯನ್ ಭಾರತ ತಂಡಕ್ಕೆ ಪ್ರಶಸ್ತಿ ಮೊತ್ತವಾಗಿ ಐಸಿಸಿಯಿಂದ 20.4 ಕೋಟಿ ರೂಪಾಯಿ ದೊರಕಿತ್ತು. ಬಿಸಿಸಿಐ ನೀಡಿರುವ ಮೊತ್ತವು ಅದಕ್ಕಿಂತಲೂ 6 ಪಟ್ಟು ಅಧಿಕವಾಗಿದೆ. 2024ರಲ್ಲಿ ರೋಹಿತ್ ಶರ್ಮಾ ನೇತೃತ್ವದ ಭಾರತ ತಂಡ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಪ್ರಶಸ್ತಿ ಗೆದ್ದಾಗ ಬಿಸಿಸಿಐ 125 ಕೋಟಿ ರೂಪಾಯಿ ಬಹುಮಾನ ನೀಡಿತ್ತು.

ಹೆಣ್ಣು ಭ್ರೂಣಪತ್ತೆ ಕಳಂಕ: ಹೈಕೋರ್ಟ್

ಬೆಂಗಳೂರು: ಹೆಣ್ಣು ಭ್ರೂಣ ಹತ್ಯೆ ಕೇವಲ ಶಾಸನಬದ್ಧ ಅಪರಾಧವಲ್ಲ, ಅದೊಂದು ನೈತಿಕ ಕಳಂಕ ಮತ್ತು ಸಾಂವಿಧಾನಿಕ ಅವಮಾನ ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ. ಭ್ರೂಣ ಲಿಂಗ ಪತ್ತೆಗೆ ಸಹಕರಿಸಿದ್ದ ಚನ್ನಪಟ್ಟಣದ ತಾಲೂಕಿನ ಇಬ್ಬರ ವಿರುದ್ಧ ಮೊಕದ್ದಮೆ ರದ್ದುಗೊಳಿಸಲು ನಿರಾಕರಿಸಿದೆ.

ತುಂಗೆಗೆ 15 ಕ್ರಸ್ಟ್‌ಗೇಟ್ ಅಳವಡಿಕೆ ಸಂಪೂರ್ಣ

ಕೊಪ್ಪಳ: ಜಿಲ್ಲೆಯ ಮುನಿರಾಬಾದ್ ಬಳಿಯ ತುಂಗಭದ್ರಾ ಜಲಾಶಯಕ್ಕೆ ಕ್ರಸ್ಟ್ ಗೇಟ್ ಅಳವಡಿಕೆ ಕೆಲಸ ಭರದಿಂದ ಸಾಗಿದ್ದು, 15ಕ್ಕೂ ಹೆಚ್ಚು ಗೇಟ್‌ಗಳ ಅಳವಡಿಕೆ ಕಾರ್ಯ ಸಂಪೂರ್ಣ ಮುಗಿದಿದೆ. ಈ ಜಲಾಶಯ 3 ರಾಜ್ಯಗಳ 14 ಲಕ್ಷ ಎಕರೆ ಪ್ರದೇಶಕ್ಕೆ ನೀರುಣಿಸುತ್ತಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಸರ್ಕಾರದ ಉತ್ತರದಲ್ಲಿ ಉಪ್ಪು, ಹುಳಿ ಏನೂ ಇಲ್ಲ – ಶಾಸಕ



ನಿಮ್ ನಾಲಿಗೆಗೆ ಏನೋ ಆಗಿದೆ.. ಸರ್ಕಾರಕ್ಕೆ ಹೇಳಿದ ಹಾಗೇ ನನ್ನ ಅಡುಗೆಗೂ ಹೇಳ್ತಿದೀರಲ್ಲಾ ಉಪ್ಪು, ಹುಳಿ ಇಲ್ಲ ಅಂತ...!!

ದೇಶದ ಬಹುತೇಕ ನಗರಗಳಲ್ಲಿ ಎಲ್‌ಪಿಜಿ ವಾಣಿಜ್ಯ ಸಿಲಿಂಡರ್ ಕೊರತೆ, ಬೆದರಿದ ಹೋಟೆಲ್ ಮಾಲೀಕರು

ತಮಿಳುನಾಡಲ್ಲಿ ಹಲವು ಹೋಟೆಲ್‌ಗಳು ಬಂದ್, ಮುಂಬೈನಲ್ಲಿ ಶೇ.20 ರೆಸ್ಟೋರೆಂಟ್ ಕಾರ್ಯಾಚರಣೆ ಸ್ಥಗಿತ

ಬೆಂಗಳೂರಲ್ಲೂ ತೀವ್ರ ಸಂಕಷ್ಟ, ಕೇರಳದಲ್ಲಿ ಕೇಟರರ್‌ಗಳಿಂದ ಸದ್ಯದಲ್ಲೇ ಆಹಾರ ಪೂರೈಕೆ ನಿಲ್ಲಿಸುವ ಸುಳಿವು

ಮಹಾನಗರಗಳಲ್ಲಿ ಹೋಟೆಲ್‌ಗಳಿಗೆ ಬೀಗ

ದೆಹಲಿ: ಅಮೆರಿಕ-ಇಸ್ರೇಲ್ ಸೇರಿಕೊಂಡು ತನ್ನ ಮೇಲೆ ತೀವ್ರ ದಾಳಿ ನಡೆಸುತ್ತಿರುವ ಹೊತ್ತಿನಲ್ಲೇ ಇರಾನ್ ಹೊರ್ಮುಜ್ ಜಲಸಂಧಿಯನ್ನು ಮುಚ್ಚಿದೆ. ಇದರಿಂದ ಅಮೆರಿಕಕ್ಕೇನು ಸಮಸ್ಯೆಯಾಗಿಲ್ಲ. ಆದರೆ ಈ ಜಲಸಂಧಿಯಿಂದ ವಿಶ್ವದ ವಿವಿಧ ಭಾಗಗಳಿಗೆ ಸಾಗಬೇಕಿದ್ದ ತೈಲ ಮತ್ತು ಅದರ ಉಪ ಉತ್ಪನ್ನಗಳು ಅಲ್ಲಲ್ಲೇ ಸ್ಥಗಿತಗೊಂಡಿವೆ. ಪರಿಣಾಮ ಭಾರತ, ಪಾಕಿಸ್ತಾನ, ಬಾಂಗ್ಲಾ, ಶ್ರೀಲಂಕಾ ಸೇರಿ ವಿಶ್ವದ ಹಲವು ರಾಷ್ಟ್ರಗಳಲ್ಲಿ ಎಲ್‌ಪಿಜಿ ಅನಿಲ ಮತ್ತು ವಾಣಿಜ್ಯ ಸಿಲಿಂಡರ್‌ಗಳ ಭಾರೀ ಕೊರತೆಯುಂಟಾಗಿದೆ. ತಮಿಳುನಾಡಿನಲ್ಲಿ ಬಹುತೇಕ ಹೋಟೆಲ್‌ಗಳು ಮುಚ್ಚಿವೆ. ಮುಂಬೈನಲ್ಲಿ ಶೇ.20 ಹೋಟೆಲ್‌ಗಳು ಕಾರ್ಯಾಚರಣೆ ಸ್ಥಗಿತಗೊಳಿಸಿವೆ. ಬೆಂಗಳೂರಿನಲ್ಲಿ ವಾಣಿಜ್ಯ ಸಿಲಿಂಡರ್‌ಗಳ ಕೊರತೆಯುಂಟಾಗಿದ್ದು, ಹೋಟೆಲ್‌ಗಳನ್ನು ಮಂಗಳವಾರದಿಂದ ಬಂದ್ ಮಾಡುವತ್ತ ಮಾಲೀಕರು ಹೆಜ್ಜೆಯಿಟ್ಟಿದ್ದಾರೆ. ಕೇರಳದಲ್ಲೂ ಪರಿಸ್ಥಿತಿ ಗಂಭೀರವಾಗಿದೆ. ಯುದ್ಧ ಹೀಗೆಯೇ ಮುಂದುವರಿದರೆ ಇನ್ನು ಒಂದೆರಡು ದಿನಗಳಲ್ಲಿ ದೇಶದ ಬಹುತೇಕ ನಗರಗಳಲ್ಲಿ ಹಾಹಾಕಾರ ಶುರುವಾಗುವುದು ಖಚಿತ.

ಸಿಎನ್‌ಜಿ ಪೂರೈಕೆ ಮೇಲೆ ಅವಲಂಬಿತವಾಗಿರುವ ವಾಹನ ಸವಾರರೂ ಇಕ್ಕಟ್ಟಿಗೆ ಸಿಲುಕಲಿದ್ದಾರೆ. ಬರೀ ಹೋಟೆಲ್‌ಗಳು ಮಾತ್ರವಲ್ಲ, ನಿಧಾನಕ್ಕೆ ದಿನಬಳಕೆಯ ಸಿಲಿಂಡರ್‌ಗಳಿಗೂ ಸಮಸ್ಯೆಯಾಗಬಹುದು. ಸಿಎನ್‌ಜಿ ಬಳಸಿ ವಾಹನ ಓಡಿಸುವವರೂ ಇಕ್ಕಟ್ಟಿಗೆ ಸಿಕ್ಕುತ್ತಾರೆ. ಹೋಟೆಲ್‌ಗಳು ಬಂದ್ ಆದರೆ ಆನ್‌ಲೈನ್ ಊಟದ ಮೇಲೆ ಅವಲಂಬಿತವಾದವರು ತೊಂದರೆಗೊಳಗಾಗುತ್ತಾರೆ. ಸಾರ್ವಜನಿಕ ಸಾರಿಗೆ ಸಂಸ್ಥೆಗಳೂ ಬಾಗಿಲು ಹಾಕಿದರೆ ಅಚ್ಚರಿಯಿಲ್ಲ. ಆದರೆ ಇಷ್ಟಕ್ಕೆಲ್ಲ ಇನ್ನೂ ಹಲವು ದಿನಗಳು ಬೇಕಾಗುತ್ತದೆ, ಅಷ್ಟರಲ್ಲಿ ಯುದ್ಧ ನಿಲ್ಲಬಹುದು ಎಂಬ ಆಶಾವಾದವಿದೆ.

ತಮಿಳುನಾಡಲ್ಲಿ ಬಂದ್: ತಮಿಳುನಾಡಲ್ಲಿ ಗ್ಯಾಸ್ ಅಭಾವದಿಂದ ರೆಸ್ಟೋರೆಂಟ್‌ಗಳನ್ನು ಬಂದ್ ಮಾಡುವ ಪರಿಸ್ಥಿತಿ ಬಂದಿದೆ ಎಂದು ಮಾಲೀಕರು ಅಳಲು ತೋಡಿಕೊಂಡಿದ್ದಾರೆ. → 4

ಸಿಲಿಂಡರ್ ಕೊರತೆಯಿಂದ ಬೆಂಗಳೂರಿನ ತ್ರಿತಾರಾ ಹೋಟೆಲ್‌ವೊಂದರಲ್ಲಿ ಸೌದೆ ಬಳಸಿ ಅಡುಗೆ ಮಾಡಿದ ದೃಶ್ಯವಿದು. ಫೋಟೋ: ಸುಧಾಕರ್ ದೇವರಾಜ್

ಗುರಿ ಮುಟ್ಟಿದ್ದೇವೆ, ಯುದ್ಧ ಶೀಘ್ರ ಮುಕ್ತಾಯ: ಅಮೆರಿಕ

ದೆಹಲಿ: ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧ ಶೀಘ್ರದಲ್ಲೇ ಕೊನೆಗೊಳ್ಳಬಹುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಈ ಸಂಬಂಧ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜೊತೆಗೆ ಮಾತುಕತೆಯನ್ನೂ ನಡೆಸಿದ್ದಾರೆ. ನಮ್ಮ ಸೇನಾ ಕಾರ್ಯಾಚರಣೆ ಇರಾನ್‌ನ ನೌಕಾಪಡೆ, ಡ್ರೋನ್ ಮತ್ತು ಕ್ಷಿಪಣಿ ವ್ಯವಸ್ಥೆಗೆ ಬಲವಾದ ಹಾನಿಯನ್ನುಂಟು ಮಾಡಿದೆ. ನಾವು ಈಗಾಗಲೇ ಹಲವು ವಿಧಗಳಲ್ಲಿ ಗೆದ್ದಿದ್ದೇವೆ, ಆದರೆ ಸಂಪೂರ್ಣ ಗೆದ್ದಿಲ್ಲ. ಇರಾನ್ ಪೂರ್ಣವಾಗಿ ಶರಣಾಗುವವರೆಗೆ ಯುದ್ಧ ಮುಂದುವರಿಯುತ್ತದೆ ಎಂದು ಟ್ರಂಪ್ ಹೇಳಿದ್ದಾರೆ.

ಈಗಾಗಲೇ ಟ್ರಂಪ್‌ಗೆ ಅವರ ಖಾಸಗಿ ಸಲಹೆಗಾರರು ಯುದ್ಧ ಮುಕ್ತಾಯಕ್ಕೆ ಒಂದು ದಾರಿ ಹುಡುಕುವಂತೆ ಸಲಹೆ ನೀಡಿದ್ದಾರೆನ್ನಲಾಗಿದೆ. ಒಂದು ವೇಳೆ ಯುದ್ಧ ದೀರ್ಘವಾದರೆ ರಾಜಕೀಯವಾಗಿ ಹಿನ್ನಡೆಯಾಗಬಹುದು ಎಂಬ ಎಚ್ಚರಿಕೆ ನೀಡಲಾಗಿದೆ. ಅಮೆರಿಕದ ದಾಳಿಯಿಂದಾಗಿ ಇರಾನಿನ ನೌಕಾಪಡೆಯು ಭಾರೀ ನಷ್ಟ ಅನುಭವಿಸಿದೆ. ಇರಾನಿನ ಅನೇಕ ಸೇನಾನೆಲೆಗಳು ನಾಶವಾಗಿವೆ. ಅಮೆರಿಕವು ತನ್ನ ಉದ್ದೇಶಗಳನ್ನು ವೇಗವಾಗಿ ಸಾಧಿಸುತ್ತಿದೆ. ಇದರಿಂದ ಯುದ್ಧವು ನಿರ್ಣಾಯಕ ಹಂತದತ್ತ ಸಾಗುತ್ತಿದೆ. ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸಲು ಅಮೆರಿಕ ಅನುಮತಿಸುವುದಿಲ್ಲ ಎಂದಿದ್ದಾರೆ.

ಯಾವಾಗ ಮುಗಿಯಬೇಕೆಂದು ನಾವು ನಿರ್ಧರಿಸುತ್ತೇವೆ: ಇರಾನ್

ಯುದ್ಧ ನಿಲ್ಲಿಸುವ ನಿರ್ಧಾರ ಅಮೆರಿಕದ್ದಲ್ಲ, ಅದು ಏನಿದ್ದರೂ ನಮ್ಮ ನಿರ್ಧಾರ ಎಂದು ಇರಾನ್‌ನ ಐಆರ್‌ಜಿಸಿ (ಇರಾನ್ ಸೇನಾಪಡೆ) ಪಡೆ ಅಮೆರಿಕ ಅಧ್ಯಕ್ಷ ಟ್ರಂಪ್‌ಗೆ ತಿರುಗೇಟು ನೀಡಿದೆ. ಯುದ್ಧ ಶೀಘ್ರದಲ್ಲೇ ಕೊನೆಗೊಳ್ಳಲಿದೆ ಎಂಬ ಟ್ರಂಪ್ ಹೇಳಿಕೆಗೆ ನೀಡಿದ ಪ್ರತಿಕ್ರಿಯೆ ಇದು. ಅಮೆರಿಕ ಮತ್ತು ಇಸ್ರೇಲ್ ದಾಳಿಗಳು ಮುಂದುವರಿದರೆ, ಹೊರ್ಮುಜ್ ಪ್ರದೇಶದಿಂದ ಒಂದು ಲೀಟರ್ ತೈಲವನ್ನೂ ರಫ್ತು ಮಾಡಲು ಇರಾನ್ ಅನುಮತಿಸುವುದಿಲ್ಲ ಎಂದು ಐಆರ್‌ಜಿಸಿ ಎಚ್ಚರಿಕೆ ನೀಡಿದೆ. ಹಾಗಾಗಿ ಯುದ್ಧವನ್ನು ಯಾವಾಗ ನಿಲ್ಲಿಸಬೇಕೆಂದು ನಿರ್ಧಾರ ಮಾಡುವವರು ನಾವು. ನಾವು ಅಮೆರಿಕದ ಬೆದರಿಕೆಗಳಿಗೆ ಬಗ್ಗುವುದಿಲ್ಲ, ಅದು ಸುಳ್ಳು ಹೇಳಿಕೊಂಡು ತಿರುಗುತ್ತಿದೆ ಎಂದು ಇರಾನ್ ಹೇಳಿದೆ. ಕೊಲ್ಲಿಯಲ್ಲಿ ಉಂಟಾಗಿರುವ ಸಂಘರ್ಷ ಜಾಗತಿಕ ಇಂಧನ ಮಾರುಕಟ್ಟೆಗೆ ಭಾರೀ ಹೊಡೆತ ಕೊಡಲಿದೆ. ಜಾಗತಿಕ ಕಚ್ಚಾ ತೈಲ ಬೆಲೆಗಳು ಬ್ಯಾರಲ್‌ಗೆ 120 ಡಾಲರ್ ದಾಟಿದೆ. ಯುದ್ಧ ಮುಂದುವರಿದರೆ ಮತ್ತಷ್ಟು ಬೆಲೆ ಏರಿಕೆ ಸಾಧ್ಯತೆ ಸಹ ಇದೆ.

ಹೊರ್ಮುಜ್ ವಶಪಡಿಸಿಕೊಳ್ಳುತ್ತೇವೆ

ಒಂದು ವೇಳೆ ಇರಾನ್ ಹೊರ್ಮುಜ್ ಜಲಸಂಧಿ ಮೂಲಕ ತೈಲ ಪೂರೈಕೆಗೆ ತಡೆಯೊಡ್ಡಿದರೆ, ಅಮೆರಿಕದ ಸೇನೆ ಇರಾನ್ ಮೇಲೆ ಬಲವಾದ ಪ್ರಹಾರ ಎಸಗಲಿದೆ. ಈಗೆಷ್ಟು ಬಲವಾದ ಹೊಡೆತ ನೀಡಲಾಗಿದೆಯೋ, ಅದಕ್ಕಿಂತ 20 ಪಟ್ಟು ಬಲವಾದ ಹೊಡೆತ ನೀಡಲಾಗುತ್ತದೆ. ಹೊರ್ಮುಜ್ ಜಲಸಂಧಿಯನ್ನೂ ವಶಪಡಿಸಿಕೊಳ್ಳಲಾಗುತ್ತದೆ.

-ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಪ್ರಧಾನಿ ಮೋದಿ-ಜೈಶಂಕರ್, ಹರ್ದೀಪ್ ತುರ್ತು ಸಭೆ

ದೇಶದಲ್ಲಿ ವಾಣಿಜ್ಯ ಸಿಲಿಂಡರ್ ಕೊರತೆಯಿಂದಾಗಿ ತೀವ್ರ ಬಿಕ್ಕಟ್ಟು ಉಂಟಾಗಿರುವುದರಿಂದ ಪ್ರಧಾನಿ ಮೋದಿ, ವಿದೇಶಾಂಗ ಸಚಿವ ಎಸ್. ಜೈಶಂಕರ್, ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಜೊತೆಗೆ ಮಂಗಳವಾರ ತುರ್ತು ಸಭೆ ನಡೆಸಿದರು. ಭಾರತ ತನ್ನ ತೈಲದ ಅವಶ್ಯಕತೆಗಳನ್ನು ಪೂರೈಸಲು ಶೇ.62 ತೈಲವನ್ನು ತರಿಸಿಕೊಳ್ಳುವುದು ಇರಾನಿನ ಹೊರ್ಮುಜ್ ಜಲಸಂಧಿಯಿಂದಲೇ ಆಗಿರುವುದರಿಂದ, ಬಿಕ್ಕಟ್ಟು ಪರಿಹಾರಕ್ಕೆ ಮೋದಿ ಚರ್ಚೆ ನಡೆಸಿದ್ದಾರೆ.

ಸಿಲಿಂಡರ್ ಸಿಗುತ್ತಿಲ್ಲ: ಹೋಟೆಲ್ ಮಾಲೀಕರ ಅಳಲು

ಸಿಲಿಂಡರ್ ಅಭಾವ ಪರಿಹರಿಸಿ: ಕೇಂದ್ರಕ್ಕೆ ಸಿಎಂ ಸಿದ್ದು ಮನವಿ

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು: ಯುದ್ಧದಿಂದಾಗಿ ಬೆಂಗಳೂರಿನಲ್ಲೂ ವಾಣಿಜ್ಯ ಸಿಲಿಂಡರ್ ಕೊರತೆ ತೀವ್ರವಾಗಿದೆ. ಹೋಟೆಲ್‌ಗಳು ಮುಚ್ಚುವ ಸ್ಥಿತಿಯಲ್ಲಿವೆ. ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ನಗರಗಳಲ್ಲಿ ಹೋಟೆಲ್‌ಗಳು ಸ್ತಬ್ಧವಾಗಿರದಿದ್ದರೂ, ಯುದ್ಧ ಪರಿಸ್ಥಿತಿ ಹೀಗೇ ಮುಂದುವರೆದರೆ ಮುಂದಿನ ಕೆಲವೇ ದಿನಗಳಲ್ಲಿ ಸಮಸ್ಯೆ ತೀವ್ರವಾಗುವುದು ಬಹುತೇಕ ನಿಶ್ಚಿತ ಎನ್ನಲಾಗುತ್ತಿದೆ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಪತ್ರ ಬರೆದಿದ್ದು, ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆ ಸ್ಥಗಿತಗೊಂಡಿದ್ದರಿಂದ ಬೆಂಗಳೂರು ಮಹಾನಗರದಲ್ಲಿ ಹೋಟೆಲ್, ರೆಸ್ಟೋರೆಂಟ್, ಕೆಟರಿಂಗ್‌ಗಳಿಗೆ ತೊಂದರೆಯಾಗುತ್ತಿದೆ, ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳಿ ಎಂದು ಮನವಿ ಮಾಡಿದ್ದಾರೆ.

ಬೆಂಗಳೂರಿನ ಹೋಟೆಲ್‌ಗಳು ಮುಚ್ಚದಿದ್ದರೂ, ಹಲವೆಡೆ ಸಿಲಿಂಡರ್‌ಗಳು ಸಿಗುತ್ತಿಲ್ಲ ಎನ್ನುವ ಆರೋಪ ಕೇಳಿಬರುತ್ತಿದೆ. ಕೆಲವು ಹೋಟೆಲ್‌ಗಳು ಈಗಾಗಲೇ ಸೌದೆಯ ಬಳಕೆಗೆ ಮುಂದಾಗಿದ್ದು, ಇದೇ ಪರಿಸ್ಥಿತಿ ಮುಂದುವರಿದರೆ ಅನಿವಾರ್ಯವಾಗಿ ಹೋಟೆಲ್‌ಗಳನ್ನು ಮುಚ್ಚಬೇಕಾಗುತ್ತದೆ ಎನ್ನುವ ಆತಂಕವನ್ನು ಹೋಟೆಲ್ ಮಾಲೀಕರು ಹೊರಹಾಕಿದ್ದಾರೆ. ಮಂಗಳವಾರ ನಗರದ ಹಲವಾರು ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು ಈಗಾಗಲೇ ಹೊಂದಿರುವ ವಾಣಿಜ್ಯ ಅನಿಲ ಸಿಲಿಂಡರ್‌ಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜಿನ ಕೊರತೆಯು ಮತ್ತಷ್ಟು ಒತ್ತಡವನ್ನುಂಟು ಮಾಡಿದೆ. ಅಲ್ಲದೆ ಸಿಲಿಂಡರ್‌ಗಳ ಸ್ಟಾಕ್ ಖಾಲಿಯಾದರೆ ಆ ಬಳಿಕ ಹೋಟೆಲ್‌ಗಳನ್ನು ಮುಚ್ಚಬೇಕಾದ ಅನಿವಾರ್ಯತೆ ಎದುರಾಗಲಿದೆ ಎಂದು ಹಲವು ಹೋಟೆಲ್‌ಗಳ ಸಿಬ್ಬಂದಿ ಹೇಳಿದ್ದಾರೆ.

ದ.ಕನ್ನಡ, ಉಡುಪಿ ಹೊರಕ್ಕೆ ನಡೆಸಿದ್ರೆ ಏನಾಗುತ್ತೆ? ಪೆಟಾ ಅರ್ಜಿ ವಜಾಗೊಳಿಸಿದ ಸುಪ್ರೀಂ ಕೋರ್ಟ್

ರಾಜ್ಯದ ಇತರೆ ಭಾಗಗಳಲ್ಲೂ ಕಂಬಳ: ಸುಪ್ರೀಂ ಅನುಮತಿ

ದೆಹಲಿ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಹೊರತುಪಡಿಸಿ ಕರ್ನಾಟಕದ ಇತರ ಭಾಗಗಳಲ್ಲಿ ಕಂಬಳ ಕ್ರೀಡೆಯನ್ನು ನಡೆಸುವುದರ ವಿರುದ್ಧ ಸಲ್ಲಿಸಿದ್ದ ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯ ವಜಾಗೊಳಿಸಿದೆ. ಇದನ್ನು ರಾಜ್ಯದ ಒಂದು ನಿರ್ದಿಷ್ಟ ಪ್ರದೇಶಕ್ಕೆ ಮಾತ್ರ ಏಕೆ ಸೀಮಿತಗೊಳಿಸಬೇಕು ಎಂದು ನ್ಯಾಯಾಲಯ ಪ್ರಶ್ನಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಪೆಟಾ (ಪೀಪಲ್ ಫಾರ್ ದಿ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್ಸ್) ಇಂಡಿಯಾ ಸಲ್ಲಿಸಿದ ಅರ್ಜಿಯನ್ನು ವಿಚಾರಣೆ ನಡೆಸಿತು. → 4

ಸುಪ್ರೀಂ ಹೇಳಿದ್ದೇನು?

ರಾಜ್ಯದ ವಿವಿಧ ಭಾಗಗಳಲ್ಲಿ ಕಂಬಳ ಸಂಸ್ಕೃತಿ ಪ್ರದರ್ಶಿಸಲು ಬಯಸಿದರೆ ಏನು ತಪ್ಪಿದೆ? ಇತರ ಭಾಗಗಳ ಜನರೂ ಸಂಸ್ಕೃತಿಯೊಂದಿಗೆ ಪರಿಚಿತರಾಗಲಿ. ಒಂದು ನಿರ್ದಿಷ್ಟ ಪ್ರದೇಶಕ್ಕೆ ಮಾತ್ರ ಏಕೆ ಸೀಮಿತಗೊಳಿಸಬೇಕು?

ಶರಾವತಿ ಜಲವಿದ್ಯುತ್ ಯೋಜನೆಗೆ ತಡೆ

ಬೆಂಗಳೂರು: ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ 10 ಸಾವಿರ ಕೋಟಿ ರು. ವೆಚ್ಚದ ಶರಾವತಿ ಪಂಪ್ ಸ್ಟೋರೇಜ್ ಜಲವಿದ್ಯುತ್ ಯೋಜನೆಯ ಕಾಮಗಾರಿಯನ್ನು ಅರಣ್ಯ ಪ್ರದೇಶದಲ್ಲಿ ಕೈಗೊಳ್ಳುವುದಕ್ಕೆ ಹೈಕೋರ್ಟ್ ಮಂಗಳವಾರ ಮಧ್ಯಂತರ ತಡೆ ನೀಡಿದೆ. ವಿಚಾರಣೆಯನ್ನು ಜೂ. 10ಕ್ಕೆ ಮುಂದೂಡಲಾಗಿದೆ. ಸಾಗರದ ಪರಿಸರವಾದಿ ಅಖಿಲೇಶ್ ಚಿಪ್ಲಿ, ಉಡುಪಿಯ ಡಾ.ರವೀಂದ್ರನಾಥ ಶಾನಬಾಗ್ ಮತ್ತು ಶಿವಮೊಗ್ಗದ ಸಿ.ಬಿ.ಮನೋಹರ ಕುಮಾರ್ ಸಲ್ಲಿಸಿರುವ ಅರ್ಜಿ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದಿತು.

ಪರಿಷತ್: ಬಿಜೆಪಿ 3 ಅಭ್ಯರ್ಥಿ ಪಟ್ಟಿ ಪ್ರಕಟ

ಬೆಂಗಳೂರು: ಕರ್ನಾಟಕ ವಿಧಾನಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ, ನಾಲ್ಕು ಕ್ಷೇತ್ರಗಳ ಪೈಕಿ ಮೂರು ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿಗಳ ಹೆಸರು ಘೋಷಣೆಯಾಗಿದೆ. ಒಂದು ಸ್ಥಾನವನ್ನು ಮಿತ್ರ ಪಕ್ಷ ಜೆಡಿಎಸ್‌ಗೆ ಬಿಟ್ಟುಕೊಟ್ಟಿದ್ದು, ಈಶಾನ್ಯ ಶಿಕ್ಷಕರ ಕ್ಷೇತ್ರಕ್ಕೆ ಸುಶೀಲ್ ನಮೋಶಿ, ಪೂರ್ವ ಪದವೀಧರ ಕ್ಷೇತ್ರಕ್ಕೆ ಎಸ್.ವಿ. ಸಂಕನೂರು ಹಾಗೂ ಆಗ್ನೇಯ ಪದವೀಧರ ಕ್ಷೇತ್ರದ ಟಿಕೆಟ್ ಕೆ.ಎಂ.ಸುರೇಶ್ ಅವರಿಗೆ ನೀಡಲಾಗಿದೆ. ಒಟ್ಟು ನಾಲ್ಕು ಕ್ಷೇತ್ರಗಳಲ್ಲಿ ಜೆಡಿಎಸ್ ಎರಡು ಸ್ಥಾನಕ್ಕೆ ಬೇಡಿಕೆ ಇಟ್ಟಿತ್ತು. ಇದಕ್ಕೆ ಬಿಜೆಪಿ ಒಪ್ಪಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಪ್ರತ್ಯೇಕ ಸ್ಪರ್ಧೆ ಎಂದು ಜೆಡಿಎಸ್ ಹೇಳುತ್ತಿರುವ ನಡುವೆಯೇ ಪರಿಷತ್ ಚುನಾವಣೆಗೆ ಬಿಜೆಪಿಯೊಂದಿಗೆ ಒಂದಾಗಿದೆ.

ರಾಜ್ಯ ಸರಕಾರಿ ವೈದ್ಯರ ಮುಷ್ಕರಕ್ಕೆ ತಾತ್ಕಾಲಿಕ ತಡೆ
ಸಚಿವ ದಿನೇಶ್ ಗುಂಡೂರಾವ್ ಸಂಧಾನ ಯಶಸ್ವಿ

13 ಬೇಡಿಕೆ ಇತ್ಯರ್ಥಕ್ಕೆ ಸರಕಾರ ಅಸ್ತು: ವೈದ್ಯರ ಮುಷ್ಕರ ವಾಪಸ್

ಬೆಂಗಳೂರು: ರಾಜ್ಯದ ಸರಕಾರಿ ವೈದ್ಯಾಧಿಕಾರಿಗಳ 13 ಬೇಡಿಕೆಗಳ ಈಡೇರಿಕೆಗೆ ಸರಕಾರ ಭರವಸೆ ನೀಡಿದ ಹಿನ್ನೆಲೆಯಲ್ಲಿ ವೈದ್ಯರು ಮುಷ್ಕರ ವಾಪಸ್ ಪಡೆದಿದ್ದಾರೆ. ಎಂದಿನಂತೆ ಹೊರರೋಗಿಗಳ ವಿಭಾಗ ಸೇವೆ ಮುಂದುವರಿಯಲಿದೆ. ವಿಧಾನಸೌಧದಲ್ಲಿ ಮಂಗಳವಾರ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಸಚಿವ ಎಚ್.ಸಿ. ಮಹದೇವಪ್ಪ ಹಾಗೂ ವೈದ್ಯರ ಸಂಘದ ನಡುವೆ ನಡೆದ ಸಂಧಾನಸಭೆ ಯಶಸ್ವಿಯಾಗಿದೆ. 14ರಲ್ಲಿ 13 ಬೇಡಿಕೆಗಳನ್ನು ಮೂರು ತಿಂಗಳಲ್ಲಿ ಈಡೇರಿಸುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಮುಷ್ಕರ ವಾಪಸ್ ಪಡೆಯಲಾಗಿದೆ. → 4



ಏನಿದು ಮುಷ್ಕರ?

- ಅನನುಕೂಲ ಬಗೆಹರಿಸಲು ಆಗ್ರಹಿಸಿ ಮುಷ್ಕರಕ್ಕೆ ಮುಂದಾಗಿದ್ದ ಸರಕಾರಿ ವೈದ್ಯರು
- ಮುಂದಿನ 3 ತಿಂಗಳಲ್ಲಿ 14 ಬೇಡಿಕೆಗಳ ಪೈಕಿ 13 ಬೇಡಿಕೆ ಈಡೇರಿಕೆಗೆ ಸರ್ಕಾರ ಸಮ್ಮತಿ

ಮುಖ್ಯಮಂತ್ರಿ, ಸಚಿವರು, ಶಾಸಕರಿಂದ ಅಭಿನಂದನೆ
ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಡಿಕೆ ಔತಣಕೂಟ

ಡಿಕೆಶಿ ರಾಜ್ಯ ಕಾಂಗ್ರೆಸ್ ಸಾರಥ್ಯಕ್ಕೆ 6 ವರ್ಷ ಭರ್ತಿ

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು

ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ.ಶಿವಕುಮಾರ್ ಸಾರಥ್ಯವಹಿಸಿಕೊಂಡು ಮಂಗಳವಾರಕ್ಕೆ ಆರು ವರ್ಷ ಪೂರೈಸಿದ್ದು, ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಂಪುಟ ಸಹೋದ್ಯೋಗಿ, ಶಾಸಕರಿಗೆ ಮಂಗಳವಾರ ಸಂಜೆ ಔತಣಕೂಟ ಏರ್ಪಡಿಸಲಾಗಿತ್ತು. ಮಂಗಳವಾರ ಬೆಳಗ್ಗಿಯಿಂದಲೇ ಕಾಂಗ್ರೆಸ್ ಶಾಸಕರು, ನಾಯಕರು ಹಾಗೂ ಪ್ರಮುಖರು ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಿದರು. ಕೆಲವರು ನೇರವಾಗಿ ಭೇಟಿಯಾಗಿ ಅಭಿನಂದಿಸಿದರೆ, ಇನ್ನೂ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ಬಳಿಕ ಸಂಜೆ ಖಾಸಗಿ ಹೋಟೆಲ್‌ನಲ್ಲಿ ನಡೆದ ಔತಣಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವರು ಭಾಗವಹಿಸಿದ್ದರು.

ವಿಧಾನಸಭೆಯಲ್ಲಿ ಆಹ್ವಾನ ನೀಡಿದ ಡಿಕೆ: ಆರು ವರ್ಷ ಪೂರ್ಣಗೊಳಿಸಿರುವ ಡಿಕೆಶಿ, ಕಾಂಗ್ರೆಸ್ ಶಾಸಕರಿಗೆ, ಜನಪ್ರತಿನಿಧಿಗಳಿಗೆ ಔತಣಕೂಟ ಆಯೋಜಿಸಿದ್ದರು. ಪಕ್ಷದ ಶಾಸಕರಿಗೆ ಖುದ್ದಾಗಿ ಆಹ್ವಾನ ನೀಡಿದರು. ವಿಧಾನಸಭೆಯಲ್ಲಿ ಪ್ರಶ್ನೋತ್ತರ ನಡುವೆ ತಮ್ಮ ಸ್ಥಾನದಿಂದ ಎದ್ದು ಕಾಂಗ್ರೆಸ್ ಪಕ್ಷದ ಪ್ರತಿಯೊಬ್ಬ ಶಾಸಕರ ಬಳಿಗೆ ಹೋದ ಡಿ.ಕೆ.ಶಿವಕುಮಾರ್ ಔತಣಕೂಟಕ್ಕೆ ಆಮಂತ್ರಿಸಿದರು.

ನನಗಿಂತ ಕಿರಿಯರಾದ ಶಿವಕುಮಾರ್‌ಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮೆಲ್ಲರ ಬಯಕೆ. ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ನಾನು ಕೂಡಾ ಅವರ ಜತೆಯಿರುತ್ತೇನೆ. ಶಿವಕುಮಾರ್ ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ನಮ್ಮ ಪಕ್ಷದ ಎಲ್ಲ ಯುವನಾಯಕರಿಗೆ ಮಾದರಿ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಚಲ ವಿಶ್ವಾಸದಲ್ಲಿ ಸಾಗಿದ ಆರು ವರ್ಷ, ಕರ್ನಾಟಕದಲ್ಲಿ ಪ್ರಗತಿ ಪರ್ವದ ಹರ್ಷ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ 6 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಶೇಷ ಲೇಖನ ಬರೆದಿದ್ದಾರೆ. 2020, ಮಾ.11ರಂದು ಡಿಕೆಶಿ ಕೆಪಿಸಿಸಿ ಅಧ್ಯಕ್ಷರಾಗಿ ಆಯ್ಕೆಯಾದರು. ನಂತರ ಅವರ ನೇತೃತ್ವದಲ್ಲೇ 2023ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿತು. ಅವರು ಉಪಮುಖ್ಯಮಂತ್ರಿಯಾಗಿ ಗ್ಯಾರಂಟಿಗಳ ಜಾರಿಯಲ್ಲಿ ಮಹತ್ವ ವಹಿಸಿದರು. ಈ ಎಲ್ಲವನ್ನೂ ಡಿಕೆಶಿ ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.

'ಹನುಮನು ಉದಿಸಿದ ನಾಡು
ಬಸವನು ಆಳಿದ ಬೀಡು
ಆಚಾರ್ಯರು ಬೆಳಗಿದ ಶ್ರೀನಾಡು
ವೀರಪರಂಪರೆಯ ನೆಲೆಬೀಡು'

ಧರ್ಮ, ದಕ್ಷತೆಗಳ ಕನ್ನಡ ನಾಡು ಎಂದು ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ಹೇಳಿದ್ದಾರೆ. ಇಂತಹ ವೀರ ಪರಂಪರೆಯ ಕನ್ನಡ ನಾಡಿನ ಜನರ ಸೇವೆ ಮಾಡುವ ಸೌಭಾಗ್ಯ ಪಡೆದ ನಾನೇ ಧನ್ಯ. ರಾಜಕೀಯ ಅಂದರೆ ಅದು ಜನರ ಬದುಕಿನ ಸುತ್ತ ಗಿರಕಿ ಹೊಡೆಯಬೇಕಾದ ಒಂದು ಪವಿತ್ರ ಕಾರ್ಯ. ಆದರೆ ಕಳೆದ ಕೆಲವು ವರ್ಷಗಳಿಂದ ರಾಜಕೀಯ ಅಂದರೆ ಜನರ ಭಾವನೆಗಳ ಜತೆ ಚೆಲ್ಲಾಟವಾಡುವ ಒಂದು ಪಗಡೆಯಾಟ ಎನ್ನುವ ಸಂಪ್ರದಾಯ ಹುಟ್ಟಿಕೊಂಡಿದೆ. ಆದರೆ ರಾಷ್ಟ್ರ, ರಾಜ್ಯದಲ್ಲೀಗ ಒಂದು ವಿಭಿನ್ನ ರಾಜಕೀಯ ಅಲೆ ಇದೆ. ಅದು ಜನರ ಭಾವನೆಗಳ ಮೇಲೆ ರಾಜಕೀಯ ಮಾಡುವ ಅಲೆಯಲ್ಲ. ಬದಲಾಗಿ ಜನರ ಬದುಕಿಗೆ ನೆಮ್ಮದಿಯ ಗ್ಯಾರಂಟಿ ತಂದುಕೊಟ್ಟಿರುವ ಅಲೆ. ಈ ಅಲೆಯನ್ನು ಹುಟ್ಟುಹಾಕಿದ ಕೀರ್ತಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ಸಲ್ಲುತ್ತದೆ.

'ಕಳೆದ ಒಂದು ದಶಕದಿಂದ ರಾಜಕೀಯವೆಂದರೆ ಜನರ ಭಾವನೆಗಳ ಜತೆ ಚೆಲ್ಲಾಟವಾಡುವ ಪಗಡೆಯಾಟ' ಎಂಬಂತಾಗಿರುವ ಕಾಲಘಟ್ಟದಲ್ಲಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಒಂದು ವಿಭಿನ್ನ ಅಲೆಯನ್ನೇ ಸೃಷ್ಟಿಸಿತು. ಭಾವನೆಗಳ ಮೇಲೆ ರಾಜಕೀಯ ಮಾಡುವ ಸಂಪ್ರದಾಯಕ್ಕೆ ಸೆಡ್ಡು ಹೊಡೆದು, ಜನರ ಬದುಕಿನ ಸಬಲೀಕರಣವನ್ನೇ ಮುನ್ನೆಲೆಗೆ ತಂದಿದ್ದು ಕೆಪಿಸಿಸಿಯ ಐತಿಹಾಸಿಕ ಸಾಧನೆ. 2023ರಲ್ಲಿ ರಾಷ್ಟ್ರ ರಾಜಕಾರಣಕ್ಕೇ ಹೊಸ ದಿಕ್ಸೂಚಿ ತೋರಿದ ಈ ಕೆಪಿಸಿಸಿ ಕುಟುಂಬದ ಸಾರಥಿಯಾಗಿ ನಾನು ಆರು ವರ್ಷಗಳನ್ನು ಪೂರೈಸಿದ್ದೇನೆ. ಈ ಆರು ವರ್ಷಗಳು ನನ್ನ ರಾಜಕೀಯ ಬದುಕಿನಲ್ಲಿ ಸಾಲುಸಾಲು ಸಾಧನೆಗಳನ್ನು ತಂದುಕೊಟ್ಟ ಸಾರ್ಥಕ ವರ್ಷಗಳು. ಈ ಪಯಣದ ಬಗ್ಗೆ ಕೆಲವು ವಿಚಾರಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ.

ಭರವಸೆಯ ಹೆಜ್ಜೆ
ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷರು, ಉಪಮುಖ್ಯಮಂತ್ರಿ

ತಳಮಟ್ಟದಿಂದ ಬೆಳೆದು ರಾಜಕಾರಣ ಮಾಡುವುದಕ್ಕೆ ಹೆಚ್ಚಿನ ತಾಳ್ಮೆ ಬೇಡುತ್ತದೆ. 2020ರ ಮಾರ್ಚ್ 11ರಂದು ಕೆಪಿಸಿಸಿ ಅಧ್ಯಕ್ಷ ಸ್ಥಾನ ವಹಿಸಿಕೊಂಡಾಗಿನಿಂದ ಈವರೆಗೆ ನಾನು ನಡೆದ ಹಾದಿ ಹಾಗೂ ಪಕ್ಷದ ಕಾರ್ಯಕರ್ತರು ನನ್ನನ್ನು ಬೆಳೆಸಿದ ರೀತಿ ಅಭೂತಪೂರ್ವವಾದುದು. ರಾಜಕೀಯ ಎಂಬುದು ಕೇವಲ ಅಧಿಕಾರ ಹಿಡಿಯುವ ಮಾರ್ಗವಲ್ಲ, ಅದು ಜನಸೇವೆಯ ಪವಿತ್ರ ವೇದಿಕೆ. 2020ರಲ್ಲಿ ಕೆಪಿಸಿಸಿ ಜವಾಬ್ದಾರಿ ವಹಿಸಿಕೊಂಡಾಗ, ನನ್ನ ಮುಂದಿದ್ದ ಹಾದಿ ಹೂವಿನ ಹಾಸಿಗೆಯಾಗಿರಲಿಲ್ಲ. ಸವಾಲುಗಳ ಸರ ಮಾಲೆಯೇ ಎದುರಿಗಿತ್ತು. ಆ ಸವಾಲುಗಳೇ ನನ್ನ ಶಕ್ತಿಯಾಗಿ ಮಾರ್ಪಟ್ಟು, ಕಾಂಗ್ರೆಸ್ ಅನ್ನು ಮರಳಿ ಅಧಿಕಾರಕ್ಕೆ ತಂದ ಸಾರ್ಥಕತೆ ನನ್ನಲ್ಲಿ ಹಾಗೂ ಕಾರ್ಯಕರ್ತರಲ್ಲಿದೆ. ಈ ಪಯಣ ಕೇವಲ ಹೋರಾಟದ್ದಲ್ಲ, ಅದು ಆತ್ಮವಿಶ್ವಾಸವನ್ನು ಮರಳಿ ಗಳಿಸಿದ ಪಯಣ ಎಂಬ ಸಾರ್ಥಕತೆ ಉಂಟಾಗುತ್ತದೆ.

ಸಂಕಷ್ಟದ ನಡುವೆ ಸಾರಥ್ಯ: ನಾನು ಅಧಿಕಾರ ವಹಿಸಿಕೊಂಡಾಗ ಕಾರ್ಯಕರ್ತರಲ್ಲಿ ಉತ್ಸಾಹ ಸ್ವಲ್ಪ ಕಡಿಮೆ ಕಾಣುತ್ತಿತ್ತು. ಭ್ರಷ್ಟ ಬಿಜೆಪಿಯ ಆಡಳಿತದಿಂದ ಜನ ರೋಸಿ ಹೋಗಿದ್ದರು. ಬಿಜೆಪಿಯ ದ್ವೇಷದ ರಾಜಕಾರಣ, ಐಟಿ ಮತ್ತು ಇಡಿಯಂತಹ ಕೇಂದ್ರ ತನಿಖಾ ಸಂಸ್ಥೆಗಳ ದುರ್ಬಳಕೆ, ನಮ್ಮವರ ಮನೋಬಲ ಕುಗ್ಗಿಸುತ್ತಿತ್ತು.

ಆದರೆ ನಮ್ಮ ನಾಯಕಿ ಸೋನಿಯಾ ಗಾಂಧಿ ಹಾಗೂ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ಗಾಂಧಿ ನನ್ನ ಮೇಲೆ ಅಚಲ ವಿಶ್ವಾಸವಿಟ್ಟಿದ್ದರು. ಆ ದಿನ ನಾನು ಅವರಿಗೆ ಒಂದು ಮಾತು ಕೊಟ್ಟಿದ್ದೆ: ವೈಯಕ್ತಿಕವಾಗಿ ನನಗೆ ಎಷ್ಟೇ ಕಿರುಕುಳ ನೀಡಲಿ, ಎಂತಹ ಕಷ್ಟಗಳೇ ಎದುರಾಗಲಿ, ಕರ್ನಾಟಕದಲ್ಲಿ ಕಾಂಗ್ರೆಸ್ ಬಾವುಟವನ್ನು ಹಾರಿಸಿಯೇ ತೀರುತ್ತೇನೆ! ಆ ಇಚ್ಛಾಶಕ್ತಿಯೇ ನನ್ನ ಪರಿಶ್ರಮಕ್ಕೆ ಇಂಧನವಾಯಿತು. ಆ ಒಂದು ಮಾತು ನನ್ನ ಹೋರಾಟಕ್ಕೆ ಶಕ್ತಿಯಾಯಿತು. ಟೀಕೆಗಳು ಸಾಯುತ್ತವೆ, ಕೆಲಸಗಳು ಮಾತ್ರ ಉಳಿಯುತ್ತವೆ ಎನ್ನುವುದು ನನ್ನ ನಂಬಿಕೆ. → 5

Titan company Ltd.
Reg office : 3, SIPCOT INDUSTRIAL COMPLEX, HOSUR - 635126, TAMIL NADU

NOTICE is hereby given that the certificate for the undermentioned securities of the Company has been lost/misplaced and the holder of the said securities has applied to the Company to issue duplicate certificate. The said shares are transferred to IEPF Authority. Any person who has a claim in respect of the said securities should lodge such claim with the Company at its Registered Office within 15 days from this date, else the Company will proceed to issue duplicate certificate without further intimation.

Name of the Shareholder	Folio No.	No. of securities held	Distinctive Nos From - To	Face Value
Radhika Acharya (Deceased)	TWR0009347	1000	2191461 - 2192460	1/-

Place: Hosur
Date: 11-03-2026
Name of the legal Claimant:
Badragiri Raghuveera Acharya

SRUSTI
Green Grow Nutrients Private Limited.
Sjp Arcade No-21, 2nd Floor, 2nd Cross, Balaji Layout, Dasarahalli, H.A. Farm Post, Bengluru-560024
CIN NO: U24290KA2016PTC094062

Green Grow Nutrients Pvt Ltd, here manufacturing and introducing to the Famers ,100% water soluble mixture of fertilizer grades as per the specifications given: (1) NPK 19-19-19, Total Nitrogen- 19.0%, Total Phosphate as P2O5-19.0%, Total Potash as K2O-19.0%. (2) NPK 20-20-20, Total Nitrogen- 20.0%, Total Phosphate as P2O5-20.0%, Total Potash as K2O-20.0%. (3) NPK 28-28-0, Total Nitrogen- 28.0%, Total Phosphate as P2O5-28.0%, Total Potash as K2O-0.0%. (4) NPK 13-40-13, Total Nitrogen- 13.0%, Total Phosphate as P2O5-40.0%, Total Potash as K2O-13.0%. (5) NPK 16-8-24, Total Nitrogen- 16.0%, Total Phosphate as P2O5-8.0%, Total Potash as K2O-24.0%. (6) NPK 19-11-11-3MgO, Total Nitrogen- 19.0%, Total Phosphate as P2O5-11.0%, Total Potash as K2O-11.0%, Magnesium as MgO 3.0%. (7) NPKS 15-8-35-4.5 Total Nitrogen- 15.0%, Total Phosphate as P2O5-8.0%, Total Potash as K2O-35.0%, Sulphur as S-4.5%. (8) NPK 6-54-17, Total Nitrogen- 6.0%, Total Phosphate as P2O5-54.0%, Total Potash as K2O-17.0%. (9) NPK 00-37-37, Total Nitrogen- 0.0%, Total Phosphate as P2O5-37.0%, Total Potash as K2O-37.0%. (10) NPK 15-15-30, Total Nitrogen- 15.0%, Total Phosphate as P2O5-15.0%, Total Potash as K2O-30.0%. (11) NPKSMg 12-5-27-11-2, Total Nitrogen- 12.0%, Total Phosphate as P2O5-5.0%, Total Potash as K2O-27.0%, Sulphur as S-11.0%, Magnesium as Mg-2.0% (12) NPKSMg 14-13-9-14-3, Total Nitrogen-14.0%, Total Phosphate as P2Os-13.0%, Total Potash as K2O-9.0%,Total Sulphur as S-14.0%, Magnesium as Mg-3.0% (13) NPKS 11-44-11-3, Total Nitrogen-11.0%, Total Phosphate as P2O5-44%, Total Potash as K2O-11.0%, Sulphur as S-3.0% (14) NPKSMg 14-48-00-2.5-2, Total Nitrogen-14.0%, Total Phosphate as P2O5-48.0%, Total Potash as K2O-0.0%, Sulphur as S-2.5%, Magnesium as Mg-2.0% (15) NPKZnB 12-00-42-1-0.3, Total Nitrogen-12.0%, Total Phosphate as P2Os-0.0%, Total Potash as K2O-42.0%, Zinc as Zn-1.0%, Boron as B-0.3%.

In above all 15 grades, (a) Moisture per cent by weight max - 0.5% (b) Total Chloride per cent by weight, max - 1.5% (c) Sodium as NaCl, per cent by weight, max - 0.5% (d) Matter insoluble in water % by wt.,max,-0.5% (e) Lead (as Pb)% by weight, max ,- 0.003% (f) Cadmium (as Cd)% by weight, max,- 0.0025%, (g) Arsenic (as As)% by weight, max,- 0.01%.In Pursuance to the order No. 2900(E) dated 24th October 2015, issued by Department of Agriculture and cooperation, Ministry of Agriculture, Govt. of India.

Email ID: gnpl@greengrownutrients.com
Tel : +9686195503 Web: www.greengrownutrients.com

35 ಲಕ್ಷ ರು. ಮೌಲ್ಯದ ಚಿನ್ನಾಭರಣ ಪಡೆದು ಗಿಳಿರಾಮ ಪರಾರಿ

ಹುದ್ದೆ ಬಡ್ತಿಗೆ ಗಿಳಿ ಶಾಸ್ತ್ರದ ಮೊರೆ ಹೋದ ಐಟಿ ಅಧಿಕಾರಿಗೆ ಮೋಸ

ಬೆಂಗಳೂರು: ವರ್ಗಾವಣೆಯ ಆಸೆಯಿಂದ ಗಿಳಿಶಾಸ್ತ್ರ ಹೇಳುವವನನ್ನು ನಂಬಿದ ಆದಾಯ ತೆರಿಗೆ ಇಲಾಖೆಯ ಅಧಿಕಾರಿಯೊಬ್ಬರು ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕಳೆದುಕೊಂಡಿರುವ ಘಟನೆ ಬೆಳಕಿಗೆ ಬಂದಿದೆ.

ಸುಮಾರು 35 ಲಕ್ಷ ರು. ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣಗಳನ್ನು ಪಡೆದು ಪರಾರಿಯಾದ, ಗಿಳಿಶಾಸ್ತ್ರ ಹೇಳುತ್ತಿದ್ದ ವ್ಯಕ್ತಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಕೆಲವು ವರ್ಷಗಳಿಂದ ಬೆಂಗಳೂರಿನ ಐಟಿ ಇಲಾಖೆ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಯೊಬ್ಬರು ಕಳೆದ ಡಿಸೆಂಬರ್ ತಿಂಗಳಲ್ಲಿ ರಸ್ತೆಯಲ್ಲಿ ತೆರಳುತ್ತಿದ್ದ ವೇಳೆ ಗಿಳಿಶಾಸ್ತ್ರ ಹೇಳುತ್ತಿದ್ದ ಶೇಖರ್ ಎಂಬಾತನ ಪರಿಚಯವಾಗಿತ್ತು. ಭಾರತಿನಗರದ ಶ್ರೀ ಸರ್ಕಲ್ ಬಳಿ ಗಿಳಿಶಾಸ್ತ್ರ ಹೇಳುತ್ತಿದ್ದ ಶೇಖರ್ ಎಂಬಾತ, ಮುಖ ನೋಡಿ ಜಾತಕ ಹಾಗೂ ಭವಿಷ್ಯ ಹೇಳುತ್ತೇನೆ ಎಂದು ಅಧಿಕಾರಿಯನ್ನು ನಂಬಿಸಿದ್ದ.

ವಿಶೇಷ ಪೂಜೆ ನೆಪದಲ್ಲಿ 50 ಸಾವಿರ ರು.ಲೂಟಿ: ಜೀವನದಲ್ಲಿ ಅಭಿವೃದ್ಧಿ ಆಗಬೇಕಾದರೆ ವಿಶೇಷ ಪೂಜೆ ಮಾಡಿಸಬೇಕು ಎಂದು ಹೇಳಿದ ಗಿಳಿಶಾಸ್ತ್ರದ ಶೇಖರ್, ಅದಕ್ಕಾಗಿ ಆರಂಭದಲ್ಲಿ ಸುಮಾರು 50 ಸಾವಿರ ರು. ಪಡೆದು ಪೂಜೆ ಮಾಡಿಸಿದ್ದ. ನಂತರವೂ ಆ ಅಧಿಕಾರಿಗೆ ಪದೇ ಪದೇ ಕರೆ ಮಾಡಿ ವಿವಿಧ ಪೂಜೆಗಳ ಬಗ್ಗೆ ಹೇಳುತ್ತಿದ್ದ. ಇದೇ ವೇಳೆ ವರ್ಗಾವಣೆಯ ವಿಚಾರವಾಗಿ ಗಿಳಿಶಾಸ್ತ್ರ ಕೇಳಿದಾಗ, ದೊಡ್ಡ ಪೂಜೆ ಮಾಡಬೇಕು. ಅದಕ್ಕಾಗಿ ಮನೆಯಲ್ಲಿರುವ ಚಿನ್ನಾಭರಣಗಳನ್ನು ತರಬೇಕು ಎಂದು ಶೇಖರ್ ಸಲಹೆ ನೀಡಿದ್ದ. ಅವನ ಮಾತನ್ನು ನಂಬಿದ ಐಟಿ ಅಧಿಕಾರಿ ಸುಮಾರು 35 ಲಕ್ಷ ರು. ಮೌಲ್ಯದ 194 ಗ್ರಾಂ ಚಿನ್ನಾಭರಣ ಮತ್ತು 1 ಕೆಜಿ 300 ಗ್ರಾಂ ಬೆಳ್ಳಿ ತೆಗೆದುಕೊಂಡು ಹೋಗಿ ಆತನಿಗೆ ನೀಡಿದ್ದರು.

ವಂಚನೆ ಅರಿವು: ಪೊಲೀಸರ ಮೊರೆ

ಒಂದು ದಿನದಲ್ಲೇ ವಾಪಸ್ ಕೊಡುತ್ತೇನೆ ಎಂದು ಹೇಳಿದ್ದ ಶೇಖರ್, ನಂತರ ಪೂಜೆ ಇನ್ನೂ ಮುಗಿದಿಲ್ಲ ಎಂದು ಹೇಳಿ ಸುಮಾರು ಒಂದು ವಾರ ಕಾಲ ಅಧಿಕಾರಿಯನ್ನು ಸತಾಯಿಸಿದ್ದ. ಬಳಿಕ ಐಟಿ ಅಧಿಕಾರಿ ಭಾರತಿನಗರದ ಶ್ರೀ ಸರ್ಕಲ್ ಬಳಿ ಹೋದಾಗ ಅಲ್ಲಿಗೆ ಗಿಳಿಯೂ ಇಲ್ಲ, ಗಿಳಿಶಾಸ್ತ್ರ ಹೇಳುತ್ತಿದ್ದ ಶೇಖರ್ ಕೂಡ ಇರಲಿಲ್ಲ. ಆತ ಅದಾಗಲೇ ಪರಾರಿಯಾಗಿದ್ದ. ವಂಚನೆಗೆ ಒಳಗಾದ ವಿಚಾರ ತಿಳಿದು ಐಟಿ ಅಧಿಕಾರಿಯು ಭಾರತಿನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿ ಶೇಖರ್‌ಗಾಗಿ ಹುಡುಕಾಟ ಆರಂಭಿಸಿದ್ದಾರೆ.

ಭ್ರೂಣ ಹತ್ಯೆ ಸಾಂವಿಧಾನಿಕ ಅವಮಾನ

ಬೆಂಗಳೂರು: ಹೆಣ್ಣು ಭ್ರೂಣ ಹತ್ಯೆ ಕೇವಲ ಶಾಸನಬದ್ಧ ಅಪರಾಧವಲ್ಲ. ಅದೊಂದು ನೈತಿಕ ಕಳಂಕ ಮತ್ತು ಸಾಂವಿಧಾನಿಕ ಅವಮಾನ ಎಂದು ಸ್ಪಂದನಶೀಲ ಶಬ್ದಗಳ ಮೂಲಕ ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, ಕಾನೂನುಬಾಹಿರವಾಗಿ ಭ್ರೂಣ ಲಿಂಗ ಪತ್ತೆ ನಿರ್ಧರಿಸುವ ಉದ್ದೇಶಕ್ಕಾಗಿ ಪೋಷಕರನ್ನು ಕರೆತರಲು ಏಜೆಂಟ್‌ಗಳಾಗಿ ಕಾರ್ಯನಿರ್ವಹಿಸಿದ ಇಬ್ಬರು ಆರೋಪಿಗಳ ವಿರುದ್ಧದ ಕ್ರಿಮಿನಲ್ ಮೊಕದ್ದಮೆ ರದ್ದುಗೊಳಿಸಲು ನಿರಾಕರಿಸಿದೆ.

ಬೆಂಗಳೂರಿನ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಈ ಸಂಬಂಧ ವಿಚಾರಣಾಧೀನ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಗೆ ತಡೆ ನೀಡಬೇಕು ಎಂದು ಕೋರಿ ಚನ್ನಪಟ್ಟಣ ತಾಲ್ಲೂಕು ಮಾಲೂರಿನ ಶಾರದಮ್ಮ ಹಾಗೂ ಇವರ ಪತಿ ದಾಸೇಗೌಡ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ವಜಾಗೊಳಿಸಿದೆ.

ಪ್ರಸ್ತುತ ಪ್ರಕರಣದಲ್ಲಿ ಕಂಡುಬರುತ್ತಿರುವ ಸ್ಪಷ್ಟ ಸಂಗತಿಗಳನ್ನು ಗಮನಿಸಿದರೆ, ಈ ಹಂತದಲ್ಲಿ ಹೈಕೋರ್ಟ್ ತನ್ನ ಅಂತರ್ಗತ ಅಥವಾ ಅಸಾಧಾರಣ ನ್ಯಾಯ ವ್ಯಾಪ್ತಿಯನ್ನು ಚಲಾಯಿಸುವ ನೆಪದಲ್ಲಿ ಹಸ್ತಕ್ಷೇಪ ಮಾಡುವುದು ಸಲ್ಲ. ಇದು ಮೊಕದ್ದಮೆಯನ್ನು ಶೈಶವಾವಸ್ಥೆಯಲ್ಲಿಯೇ ಹತ್ತಿಕ್ಕಿದಂತಾಗುತ್ತದೆ. ಆರೋಪಗಳ ಸತ್ಯಾಸತ್ಯತೆ ಅಥವಾ ಅಥವಾ ಸಾಕ್ಷ್ಯಗಳನ್ನು ಒರೆಗೆ ಹಚ್ಚುವುದು ವಿಚಾರಣಾಧೀನ ನ್ಯಾಯಾಲಯದ ನಿರ್ಣಾಯಕ ಅಂಶಗಳಿಗೆ ಸಂಬಂಧಿಸಿದೆ ಎಂದಿದೆ.

ವೈದ್ಯಕೀಯ ಪರಿಣತಿಯ ಸೋಗಿನಲ್ಲಿ ಲಿಂಗ ತಾರತಮ್ಯದ ವ್ಯಾಪಾರ ಮಾಡುವವರು ಸಮಾಜಕ್ಕೆ ಅಪಾಯ ಉಂಟು ಮಾಡಬಲ್ಲರು. ಇಂತಹ ಗಂಭೀರ ಪ್ರಕರಣಗಳಲ್ಲಿ ಆರಂಭದಲ್ಲೇ ಕೋರ್ಟ್ ಸಡಿಲಿಕೆಗೆ ಅವಕಾಶ ನೀಡಿದರೆ ಕಾನೂನೇ ಅರ್ಥ ಹೀನವಾಗುತ್ತದೆ ಮತ್ತು ಲಿಂಗಭೇದದ ಅಪರಾಧಗಳನ್ನು ಉತ್ತೇಜಿಸುವ ಪರಿಸ್ಥಿತಿ ಉಂಟಾಗುತ್ತದೆ. ಹೀಗಾಗಿ ಈ ಹಂತದಲ್ಲಿ ಪ್ರಕರಣ ರದ್ದುಪಡಿಸುವುದು ಸೂಕ್ತವಲ್ಲ ಎಂದು ಪೀಠ ಸ್ಪಷ್ಟಪಡಿಸಿದೆ.

ಅರ್ಜಿದಾರರ ವಿರುದ್ಧ ವೈದ್ಯಕೀಯ ಗರ್ಭಪಾತ ಕಾಯಿದೆ-1971ರ ಸೆಕ್ಷನ್ 4 ಮತ್ತು ಭಾರತೀಯ ನ್ಯಾಯ ಸಂಹಿತಾ-2023ರ ಸೆಕ್ಷನ್ 91 ಮತ್ತು 3(5)ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಚನ್ನಪಟ್ಟಣ ತಾಲ್ಲೂಕಿನ ದಂಪತಿ ತಮಗೆ ಜನಿಸಲಿರುವ ಮೂರನೇ ಮಗುವಿನ ಲಿಂಗವನ್ನು ಖಚಿತಪಡಿಸಿಕೊಳ್ಳಲು ಉದ್ದೇಶಪೂರ್ವಕ ಅನ್ವೇಷಣೆ ಪ್ರಾರಂಭಿಸಿದ್ದರು. ಈ ಹಂತದಲ್ಲಿ ತಮ್ಮ ಸಂಬಂಧಿಕರಾದ ಶಾರದಮ್ಮ ಮತ್ತು ದಾಸೇಗೌಡ ಅವರ ಸಹಾಯದಿಂದ ಜಿಲ್ಲಾಸ್ಪತ್ರೆಯ ಡಾ.ಶಶಿ ಅವರ ಮೂಲಕ ಅಕ್ರಮವಾಗಿ ಲಿಂಗ ಪತ್ತೆಗೆ ಸ್ಕ್ಯಾನಿಂಗ್ ಮಾಡಿಸಿದ್ದರು. ಗರ್ಭಿಣಿಗೆ ಖಾಸಗಿ ಕ್ಲಿನಿಕ್‌ನಲ್ಲಿ ಗರ್ಭಪಾತಕ್ಕೆ ಔಷಧಿ ನೀಡಲಾಗಿದೆ ಮತ್ತು ಔಷಧಿ ಸೇವಿಸಿದ ರಾತ್ರಿ ಮಹಿಳೆಗೆ ತೀವ್ರ ರಕ್ತಸ್ರಾವ ಉಂಟಾಗಿ ಭ್ರೂಣ ಮೃತಪಟ್ಟಿತ್ತು. ಈ ಸಂಬಂಧ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ದೂರು ನೀಡಿದ್ದರು. ಆರೋಪಿಗಳು ಲಿಂಗ ಪರೀಕ್ಷೆಗೆ ರೋಗಿಗಳನ್ನು ಕರೆತರುವ ಏಜೆಂಟ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ಈಗ ಬೆಳಕಿಗೆ ಬಂದಿರುವುದು ಒಂದೇ ಘಟನೆ. ಆದರೆ, ಇದರ ಹಿಂದೆ ಹಲವು ಘಟನೆಗಳು ಮರೆಯಾಗಿರುವುದು ಕಂಡು ಬರುತ್ತದೆ. ಅಷ್ಟೇ ಅಲ್ಲ, ಘಟನೆ ಹಿಂದೆ ಸಂಘಟಿತ ಜಾಲವಿರುವ ಸಾಧ್ಯತೆ ಇದೆ ಎಂದು ದೂರಿನಲ್ಲಿ ವಿವರಿಸಲಾಗಿತ್ತು.

AXIS BANK

ರೀಟೈಲ್ ಲೆಂಡಿಂಗ್ & ಪೇಮೆಂಟ್ ಗ್ರೂಪ್ (ದಕ್ಷಿಣ ವಲಯ ಕಛೇರಿ/ ಶಾಖೆ) ಎಕ್ಸಿಸ್ ಬ್ಯಾಂಕ್ ಲಿಮಿಟೆಡ್, #45, ಪ್ರೆಸ್ಟೀಜ್ ಲಿಬ್ರಾ, 1ನೇ ಮಹಡಿ, ಪ್ರಾದೇಶಿಕ ಪಾಸ್‌ಪೋರ್ಟ್ ಕಛೇರಿ, ಊರ್ವಶಿ ಥಿಯೇಟರ್ ಹತ್ತಿರ, ಲಾಲ್‌ಬಾಗ್ ರಸ್ತೆ, ಲಾಲ್‌ಬಾಗ್, ಬೆಂಗಳೂರು-560027.
ಎಕ್ಸಿಸ್ ಬ್ಯಾಂಕ್ ಲಿ., 3ನೇ ಮಹಡಿ, ಗಿಗಪ್ಲೆಕ್ಸ್, ಎನ್‌ಪಿಸಿ-1, ಟಿಟಿಸಿ ಇಂಡಸ್ಟ್ರಿಯಲ್ ಪ್ರದೇಶ್, ಮುಗಲಸನ್ ರಸ್ತೆ, ಏರೋಲಿ, ನವಿ, ಮುಂಬೈ-400708,
ನೋಂದಾಯಿತ ಕಛೇರಿ: "ತ್ರಿಶೂಲ್" 3ನೇ ಮಹಡಿ, ಸಮರ್ಥೇಶ್ವರ ದೇವಸ್ಥಾನದ ಎದುರು, ಲಾ ಗಾರ್ಡನ್, ಎಲಿಸ್‌ಬ್ರಿಡ್ಜ್, ಅಹಮದಾಬಾದ್-380006.

ಸ್ಥಿರಾಸ್ತಿಯ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ಸೂಚನೆ

ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ಸೆಕ್ಯುರಿಟಿ (ಎನ್‌ಫೋರ್ಸ್‌ಮೆಂಟ್) (ಅಮೆಂಡ್‌ಮೆಂಟ್) ನಿಯಮಗಳು 2002ರ ನಿಯಮ 8(6) ರ ನಿಬಂಧನೆಗಳನ್ನು ಓದಿಕೊಂಡಂತೆ ಇದರ ಅನ್ವಯ ಸ್ಥಿರಾಸ್ತಿಯ ಸಾರ್ವಜನಿಕ ಇ-ಹರಾಜು ಮಾರಾಟ ಸೂಚನೆ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್, ಪ್ರಾದೇಶಿಕ ಕಛೇರಿ ಪಶ್ಚಿಮ, ಬೆಂಗಳೂರು ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು. ಸಂದಾಯವಾಗತಕ್ಕ ಮೊಬಲಗು ಮೊತ್ತದ ವಸೂಲಿಗೆ "ಯಾವುದೇ ಮರುಪಾವತಿ ಆಧಾರವಿಲ್ಲ" (ಆಯಾ ಕಾಲಂನಲ್ಲಿ ಕೆಳಗೆ ತಿಳಿಸಲಾದ), ಆಕ್ಸಿಸ್ ಬ್ಯಾಂಕ್ ಸುರಕ್ಷಿತ ಸಾಲಗಾರರಿಂದ ಸಂಬಂಧಿತ ಸಾಲಗಾರರು ಮತ್ತು ಖಾತರಿದಾರರಿಂದ ಕೆಳಗೆ ತೋರಿಸಲಾಗಿದೆ: ಆಯಾ ಸಾಲಗಾರರು ಮತ್ತು ಖಾತರಿದಾರರಿಂದ ಆಕ್ಸಿಸ್ ಬ್ಯಾಂಕ್ ಸುರಕ್ಷಿತ ಸಾಲಗಾರರಿಗೆ ಬಾಕಿ ಇರುವ ಮೊತ್ತವನ್ನು ಕೆಳಗೆ ತಿಳಿಸಲಾದ ಆಯಾ ಸಾಲಗಾರರು ಮತ್ತು ಖಾತರಿದಾರರಿಂದ ಆಕ್ಸಿಸ್ ಬಾನಿಕ್ ಸುರಕ್ಷಿತ ಸಾಲಗಾರರಿಗೆ ಬಾಕಿ ಇರುವ ಮೊತ್ತವನ್ನು (ಕೆಳಗೆ ಆಯಾ ಕಾಲಂನಲ್ಲಿ ತೋರಿಸಿರುವಂತೆ) ಆಯಾ ಆಸ್ತಿಗಳ ಮೀಸಲು ಬೆಲೆ ಮತ್ತು ಅರ್ನೆಸ್ಟ್ ಮನಿ ಠೇವಣಿ. ಆಯಾ ಸಾಲಗಾರರು ಮತ್ತು ಖಾತರಿದಾರರಿಂದ ಆಕ್ಸಿಸ್ ಬ್ಯಾಂಕ್ ಸುರಕ್ಷಿತ ಸಾಲಗಾರರಿಗೆ ಬಾಕಿ ಇರುವ ಮೊತ್ತವನ್ನು (ಆಯಾ ಕಾಲಂನಲ್ಲಿ ಕೆಳಗೆ ತೋರಿಸಿರುವಂತೆ) ವಸೂಲಿ ಮಾಡಲು ಕೆಳಗೆ ಆಯಾ ಕಾಲಂನಲ್ಲಿ ತೋರಿಸಿರುವಂತೆ ಸಂಬಧಿಸಿದವರಿಗೆ ಸೂಚಿಸಲಾಗಿದೆ. ಮೀಸಲು ಬೆಲೆ, ಮುಂಗಡ ಠೇವಣಿ ಮತ್ತು ಬಿಡ್ ಗುಣಾಂಕದ ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಸಾಲಗಾರರು/ಅಡಮಾನದಾರರ ಹೆಸರು	ಆಸ್ತಿಯ ವಿವರ	ಮೀಸಲು ಬೆಲೆ ಇಎಂಡಿ ಮೊತ್ತ	ಹರಾಜು ದಿನಾಂಕ & ಸಮಯ	ಒಟ್ಟು ಬಾಕಿ ಮೊತ್ತ (ರೂ.ಗಳಲ್ಲಿ)	ಸಂಪರ್ಕ ವ್ಯಕ್ತಿ
1	(1) ಶ್ರೀ ಲಲ್ಲುಶ್ ಮ್ಯಾಥ್ಯೂ, ಕಿಂಗ್ಸ್ ಬ್ರೂಕ್, ವಿಲ್ಲಾ ನಂ-19, ಮರಡು, ಎರನಾಕುಲಂ-682304. **ಮತ್ತೊಂದು ವಿಳಾಸ:** 308/32, ಪಲತಾರಾ, ಮಾತುಮೂಲ, ಚಂಗನಾಸ್ಸೆರಿ, ಕೊಟ್ಟಾಯಂ-686103. **ಮತ್ತೊಂದು ವಿಳಾಸ:** ಪಲತಾರಾ ಫ್ಯೂಲ್ಸ್, I.O.C ಡೀಲರ್, ವಾಜಪ್ಪಲ್ಲಿ ಪೋಸ್ಟ್, ಚಂಗನಾಸ್ಸೆರಿ, ಕೊಟ್ಟಾಯಂ-686101. (2) **ಶ್ರೀಮತಿ ಮೇರಿ ಸುಮಿ,** ಕಿಂಗ್ಸ್ ಬ್ರೂಕ್, ವಿಲ್ಲಾ ನಂ-19, ಮರಡು, ಎರನಾಕುಲಂ-682304. **ಮತ್ತೊಂದು ವಿಳಾಸ:** ಮುಲ್ಲೋತ್, ಪೊನ್ನೆಕ್ಕರ, ಎಲಮಕರ (ಪೋಸ್ಟ್). ಎರನಾಕುಲಂ-682026.	**ಷೆಡ್ಯೂಲ್** : 0.0239% ಅವಿಭಾಜಿತ ಭಾಗ (312.47 ಚದರ ಅಡಿಗಳಿಗೆ ಸಮನವಾಗಿರುತ್ತದೆ), ಭೂಮಿಯ ವಿಸ್ತೀರ್ಣ 1006611.05 ಚದರ ಸರ್ವೆ ನಂ.30, 31, 32, 33, 34 ಮತ್ತು 161ರಲ್ಲಿ ನಿರ್ಮಿಸಲಾಗಿದ್ದು, ಕಾಡತನಮಲೆ ಗ್ರಾಮದಲ್ಲಿದೆ, ಜೊತೆಗೆ ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.705, (1075 ಚದರ ಅಡಿ) 7ನೇ ಮಹಡಿ, ಬ್ಲಾಕ್/ವಿಂಗ್ ಜಿ-8ನ್ನು, 'PROVIDENT WELWORTH CITY' ಎಂದು ಕರೆಯಲ್ಪಡುವ ಬಹುಮಹಡಿಯ ಕಟ್ಟಡದಲ್ಲಿ ನಿರ್ಮಿಸಲಾಗಿದೆ, ಈ ಆಸ್ತಿಯು ಕಾಡತನಮಲೆ ಗ್ರಾಮ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದೆ ಮತ್ತು ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿದೆ, ಬೆಂಗಳೂರು, ಯಲಹಂಕ, SRO ನ ಮಾರಾಟ ಪತ್ರ ಸಂಖ್ಯೆ 11760/2013. ಚಕ್ಕುಬಂದಿ: ಪೂರ್ವಕ್ಕೆ: ಭೂಮಿ ಸರ್ವೆ ನಂ.160, ದೊಡ್ಡಬಳ್ಳಾಪುರ ರಸ್ತೆ, ಭೂಮಿ ಸರ್ವೆ ನಂ.162.163, 164, 40, ಮತ್ತು 41, ಉತ್ತರಕ್ಕೆ: ಭೂಮಿ ಸರ್ವೆ ನಂ.37, 38 ಮತ್ತು 160, ಪಶ್ಚಿಮಕ್ಕೆ: ಭೂಮಿ ಸರ್ವೆ ನಂ.41, 29, 30/7(P), 31/4(P), 31/3(P), 31/2(P), 31/1(P), 34/1(P) & 34/2(P), ದಕ್ಷಿಣಕ್ಕೆ: ಭೂಮಿ ಸರ್ವೆ ನಂ.41 ಮತ್ತು 29.	ರೂ.41,30,100/- (ರೂಪಾಯಿ ನಲವತ್ತೊಂದು ಲಕ್ಷದ ಮೂವತ್ತು ಸಾವಿರದ ಒಂದುನೂರು ಮಾತ್ರ) ರೂ.4,13,010/- (ರೂಪಾಯಿ ನಾಲ್ಕು ಲಕ್ಷದ ಹದಿಮೂರು ಸಾವಿರದ ಹತ್ತು ಮಾತ್ರ)	ದಿನಾಂಕ: 27.03.2026 ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ರವರೆಗೆ. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ: 26.03.2026 ಸಂಜೆ 05:00 ಗಂಟೆಯವರೆಗೆ	ರೂ. 25,06,016/- (ರೂಪಾಯಿ ಇಪ್ಪತ್ತೈದು ಲಕ್ಷದ ಆರು ಸಾವಿರದ ಹದಿನಾರು ಮಾತ್ರ) ದಿನಾಂಕ: 07.032026 ರಂತೆ	ಅಧಿಕೃತ ಅಧಿಕಾರಿ ಶ್ರೀ ಸುಧಾಕರ್ ಎ 9176662617 & ಶ್ರೀ ಪ್ರೇಮ್ 8880041234

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಭದ್ರತಾ ಸಾಲದಾತರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ನೋಡಿ ಅಂದರೆ **https://www.axisbank.com/auction-retail** ಮತ್ತು ಬ್ಯಾಂಕ್‌ನ ಅನುಮೋದಿತ ಸೇವಾ ಪೂರೈಕೆದಾರ **M/S C1 India Private Limited** ಅವರ ವೆಬ್ ಪೋರ್ಟಲ್ **https://www.bankeauctions.com**
ಹರಾಜನ್ನು ಬ್ಯಾಂಕಿನ ಅನುಮೋದಿತ ಸೇವಾ ಪೂರೈಕೆದಾರರಾದ **M/S C1 India Private Limited** ಅವರ ವೆಬ್ ಪೋರ್ಟಲ್ **https://www.bankeauctions.com** ಮೂಲಕ ಆನ್‌ಲೈನ್‌ನಲ್ಲಿ ನಡೆಸಲಾಗುತ್ತದೆ.
ಯಾವುದೇ ಇತರ ಸಹಾಯಕ್ಕಾಗಿ, ಉದ್ದೇಶಿತ ಬಿಡ್‌ದಾರರು ಕಚೇರಿ ಸಮಯದಲ್ಲಿ ಅಧಿಕೃತ ಅಧಿಕಾರಿಗಳನ್ನು ಸಂಪರ್ಕಿಸಬಹುದು.
ಭದ್ರತಾ ಹಿತಾಸಕ್ತಿ (ಜಾರಿ) (ತಿದ್ದುಪಡಿ) ನಿಯಮಗಳು, 2002 ರ ನಿಯಮ 8(6) ಅಡಿಯಲ್ಲಿ ಸಾಲಗಾರರು/ಸಹ-ಸಾಲಗಾರರು/ಜಾಮೀನುದಾರರಿಗೆ ಈ ಸೂಚನೆಯನ್ನು 15 ದಿನಗಳ ಸೂಚನೆ ಎಂದು ಪರಿಗಣಿಸಬೇಕು.
ಪ್ರತಿ ಖಾತೆಗೆ ಬಿಡ್‌ನ ಏರಿಕೆ ಮೊತ್ತ ರೂ. 10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ),
ಬಿಡ್ ಸಲ್ಲಿಕೆಗೆ ಸ್ಥಳ: **https://axisbank.auctiontiger.net**

ದಿನಾಂಕ: 10.03.2026
ಸ್ಥಳ: ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

Form No. INC-26
[Pursuant to rule 30 the Companies (Incorporation) Rules, 2014]
Advertisement to be published in the newspaper for change of registered office of the company from one state to another
Before The Central Government
(Regional Director, South-Western Region)
In the matter of Section 13(4) of the Companies Act, 2013 read with Rule 30 of the Companies (Incorporation) Rules, 2014
AND
In the matter of DUTCHWERK INDIA PRIVATE LIMITED having its registered office at No 299A, 1st Cross, Btm 2nd Stage, 7th Main, Micro Layout Bangalore Karnataka 560076
...Petitioner
Notice is hereby given to the General Public that the company proposes to make application to the Central Government under section 13 of the Companies Act, 2013 seeking confirmation of alteration of the Memorandum of Association of the Company in terms of the special resolution passed at the Extraordinary general meeting held on 25th February 2026 and to enable the company to change its Registered Office from "State of Karnataka" to "State of Tamil Nadu". Any person whose interest is likely to be affected by the proposed change of the registered office of the company may deliver either on the MCA-21 portal (www.mca.gov.in) by filing investor complaint form or cause to be delivered or send by registered post of his/her objections supported by an affidavit stating the nature of his/her interest and grounds of opposition to the Regional Director, South-Western Region at the address 'E' Wing, 2nd Floor, Kendriya Sadana, Kormangala, Banglore-560034, Karnataka within fourteen days of the date of publication of this notice with a copy to the Applicant Company at its registered office at the address mentioned below:
No 299A,1st Cross, Btm 2nd Stage, 7th Main, Micro Layout Bangalore Karnataka 560076
For and on behalf of the Applicant
For DUTCHWERK INDIA PRIVATE LIMITED
Sd/-
Director
Date: 11-03-2026 **Mohamed Hashique**
Place: Bangalore **DIN: 08844795**

ಮಾತಿನ ಮನೆಯ ಆರನೇ ವಾರ್ಷಿಕೋತ್ಸವ ಹಾಗೂ 125ನೇ ಕಾರ್ಯಕ್ರಮದಲ್ಲಿ ಮಂಕುತಿಮ್ಮನ ಕಗ್ಗ ವಾಚನ-ವ್ಯಾಖ್ಯಾನ ಮಾಡಿದ ಚಿ. ಆರ್ಯ ಭಟ್ ಹಾಗೂ ಕು. ಗಾರ್ಗಿ ಭಟ್ ಅವರಿಗೆ ಪ್ರಶಂಸಾ ಪತ್ರ ಪ್ರದಾನ ಮಾಡಲಾಯಿತು. ಈ ವೇಳೆ ನಟಿ ಹೇಮಾ ಪ್ರಭಾತ, ನೂಪುರ ಕಲಾಸಂಸ್ಥೆಯ ವಿದುಷಿಗಳಾದ ಪದ್ಮಿನಿ ಉಪಾಧ್ಯ, ಬೃಂದಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಐಡಿಬಿಐ ಬ್ಯಾಂಕ್ ಮೈಕೋ ಲೇಔಟ್ ಶಾಖೆಯ ವತಿಯಿಂದ ಸಿಎಸ್‌ಆರ್ ಚಟುವಟಿಕೆಗಳ ಅಂಗವಾಗಿ ನಗರದ ಯಳ್ಳುಂಕುಂಟೆ ಹಿರಿಯ ಪ್ರಾಥಮಿಕ ಶಾಲೆಗೆ ನೀರು ಶುದ್ಧೀಕರಣ ಯಂತ್ರ ಹಾಗೂ ಅಡುಗೆ ಪಾತ್ರೆಗಳನ್ನು ದೇಣಿಗೆಯಾಗಿ ನೀಡಲಾಯಿತು. ಈ ವೇಳೆ ಬ್ಯಾಂಕಿನ ಅಧಿಕಾರಿಗಳಾದ ಎಂ.ಮಹೇಶ್ವರನ್ ಮತ್ತು ಪ್ರಾಗ್ಯ ತ್ರಿಪಾಠಿ, ಶಾಲೆಯ ಮುಖ್ಯೋಪಾಧ್ಯಾಯ ಎಂ. ಶ್ರೀನಾಥ್, ಎಚ್‌ಎಸ್‌ಆರ್ ಸಿಟಿಜನ್ ಫೋರಂ ಅಧ್ಯಕ್ಷ ಬಿ.ಎನ್.ಎಸ್. ರತ್ನಾಕರ್, ಬ್ಯಾಂಕರ್ಸ್ ಕನ್ನಡಿಗರ ಬಳಗದ ಅಧ್ಯಕ್ಷ ಎಂ.ವೆಂಕಟೇಶ ಶೇಷಾದ್ರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001.
ದೂ: 080-25310066, ಇ-ಮೇಲ್: cb2366@canarabank.com

ಇ-ಹರಾಜು ಮಾರಾಟ ಪ್ರಕಟಣೆ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ- 1 ಶಾಖೆ, ಬೆಂಗಳೂರು** ರವರು ಭೌತಿಕ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ಸ್ವತ್ತನ್ನು **"ಎಲ್ಲಿ ಏನಿದೇಯೋ ಹಾಗೆ", "ಹೇಗಿದೆಯೋ ಹಾಗೆ", "ಏನೇ ಇದ್ದರೂ"**, ಆಧಾರದಲ್ಲಿ ಸಾಲ ವಸೂಲಾತಿಗಾಗಿ ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಇ-ಹರಾಜು ಮೂಲಕ ಮಾರಾಟ ಮಾಡಲಾಗುವುದು.
ಇ-ಹರಾಜು ಮತ್ತು ಡಿಜಿಟಲ್ ಸಿಗ್ನೇಚರ್‌ಗೆ ಸಂಬಂಧಪಟ್ಟ ವಿವರಗಳಿಗೆ ಸೇವಾ ಪೂರೈಕೆದಾರರಾದ **M/s PSB Alliance (https://baanknet.com/), E-mail: support.ebkray@psballiance.com, Helpdesk Number : 8291220220, Website: https://baanknet.com/** ಸಂಪರ್ಕಿಸಬಹುದು.
ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ ಠೇವಣಿ ಮಾಡಬೇಕು.
(ರೂ. ಲಕ್ಷಗಳಲ್ಲಿ)

ಲಾಟ್ ನಂ.	ಸಾಲಗಾರರು / ಜಾಮೀನುದಾರರು / ಅಡಮಾನದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಗಳ ವಿವರಣೆ	(1) ಒಟ್ಟು ಬಾಕಿ ಮೊತ್ತ (2) ಹರಾಜಿನ ದಿನಾಂಕ & ಸಮಯ	ಎ. ಮೀಸಲು ಬೆಲೆ ಬಿ. ಇಎಂಡಿ ಸಿ. ಬಿಡ್ ಹೆಚ್ಚಳ ಮೊತ್ತ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ ಇಎಂಡಿ ಠೇವಣಿ ದಿನಾಂಕ
1	(1) ಮೆ॥ ಭರಣಿ ಹೈ ಟೆಕ್ ಆಗ್ರೋ ಇಡಸ್ಟ್ರೀಸ್, (2) ಶ್ರೀ.ಆನಂದ್ ಎಲ್ (3) ಶ್ರೀ.ಹರ್ಷ ಆನಂದ್, (4) ಶ್ರೀಮತಿ ಚಿತ್ರಾ ಆನಂದ್ (5) ಶ್ರೀ.ವಿಜಯ್ ಆನಂದ್, ಇವರೆಲ್ಲರ ವಿಳಾಸ: ನಂ.1136, 2ನೇ ಮುಖ್ಯರಸ್ತೆ, 2ನೇ ಬ್ಲಾಕ್, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು-560097.	ಭೂಮಿಯ ಜೊತೆಗೆ ಪೌಲ್ಟ್ರಿ ಶೆಡ್‌ಗಳು ಮತ್ತು ಸಂಪರ್ಕಿತ ರಚನೆಗಳ ಸರ್ವೆ ನಂ.309/1 ಪ್ರದೇಶ 4 ಎಕರೆ 20 ಗುಂಟೆಗಳು ಈ ಆಸ್ತಿಯು ಗಂಗಸಂದ್ರ ಗ್ರಾಮ, ಕಸಬಾ ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ. ಮತ್ತು ಚಕ್ಕುಬಂದಿ: ಉತ್ತರಕ್ಕೆ: ಗಂಗಿರೆಡ್ಡಿಯವರ ಆಸ್ತಿ, ದಕ್ಷಿಣಕ್ಕೆ: ಕೃಷ್ಣಪ್ಪನವರ ಆಸ್ತಿ, ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಕೆ ಹೆಚ್ ರಾಮಕೃಷ್ಣಪ್ಪ ರವರ ಆಸ್ತಿ. **Coordinates of the property: Latitude- 13.576574, Longitude- 77.560258**	ರೂ. 10,37,90,624.70 ಜೊತೆಗೆ ದಿನಾಂಕ: 04.03.2026 ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು. 27.03.2026 ಬೆಳಿಗ್ಗೆ 10.30 ರಿಂದ 11.00 ರವರೆಗೆ	ಎ) ರೂ. 560.00 ಬಿ) ರೂ. 56.00 ಸಿ) ರೂ. 1.00	17.03.2026 ಬೆಳಿಗ್ಗೆ 10.00 ರಿಂದ ಸಂಜೆ 02.00 ರವರೆಗೆ. 26.03.2026 ಸಂಜೆ 5.00 ಗಂಟೆ
		ಫ್ಲಾಟ್ ನಂ.313, 3ನೇ ಮಹಡಿ, ಶ್ರೀಕೃಷ್ಣ ಸಾಯಿ ಎನ್‌ಕ್ಲೇವ್‌ನಲ್ಲಿ ಭೂ ಪರಿವರ್ತಿತ ಸರ್ವೆ ನಂ.111/1, ಪ್ರಸ್ತುತ ಬಿಬಿಎಂಪಿ ಖಾತಾ ನಂ.406, ಹೂಡಿ ಗ್ರಾಮ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ಪೂರ್ವ. ಒಟ್ಟು ಪ್ಲಿಂತ್ ಪ್ರದೇಶ 1523 ಚದರ ಅಡಿ. **Coordinates of the property: Latitude- 12.59422N, Longitude- 77.43084E**		ಎ) ರೂ. 60.00 ಬಿ) ರೂ. 6.00 ಸಿ) ರೂ. 1.00	
		ಫ್ಲಾಟ್ ನಂ.203, 2ನೇ ಮಹಡಿ, ಶ್ರೀಕೃಷ್ಣ ಸಾಯಿ ಎನ್‌ಕ್ಲೇವ್‌ನಲ್ಲಿ ಭೂಪರಿವರ್ತಿತ ಸರ್ವೆ ನಂ.111/1, ಪ್ರಸ್ತುತ ಬಿಬಿಎಂಪಿ ಖಾತಾ ನಂ.406, ಹೂಡಿ ಗ್ರಾಮ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ಪೂರ್ವ. ಒಟ್ಟು ಪ್ಲಿಂತ್ ಪ್ರದೇಶ 1241 ಚದರ ಅಡಿ. **Coordinates of the property: Latitude- 12.59422N, Longitude- 77.43084E**		ಎ) ರೂ. 56.00 ಬಿ) ರೂ. 5.60 ಸಿ) ರೂ. 1.00	
		ಫ್ಲಾಟ್ ನಂ.308, 3ನೇ ಮಹಡಿ, ಶ್ರೀಕೃಷ್ಣ ಸಾಯಿ ಎನ್‌ಕ್ಲೇವ್‌ನಲ್ಲಿ ಭೂಪರಿವರ್ತಿತ ಸರ್ವೆ ನಂ.111/1, ಪ್ರಸ್ತುತ ಬಿಬಿಎಂಪಿ ಖಾತಾ ನಂ.406, ಹೂಡಿ ಗ್ರಾಮ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ಪೂರ್ವ. ಒಟ್ಟು ಪ್ಲಿಂತ್ ಪ್ರದೇಶ 1241 ಚದರ ಅಡಿ. **Coordinates of the property: Latitude- 12.59422N, Longitude- 77.43084E**		ಎ) ರೂ. 56.00 ಬಿ) ರೂ. 5.60 ಸಿ) ರೂ. 1.00	
		ಫ್ಲಾಟ್ ನಂ.311, 3ನೇ ಮಹಡಿ, ಶ್ರೀಕೃಷ್ಣ ಸಾಯಿ ಎನ್‌ಕ್ಲೇವ್‌ನಲ್ಲಿ ಭೂಪರಿವರ್ತಿತ ಸರ್ವೆ ನಂ.111/1, ಪ್ರಸ್ತುತ ಬಿಬಿಎಂಪಿ ಖಾತಾ ನಂ.406, ಹೂಡಿ ಗ್ರಾಮ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ಪೂರ್ವ. ಒಟ್ಟು ಪ್ಲಿಂತ್ ಪ್ರದೇಶ 1250 ಚ.ಅಡಿ. **Coordinates of the property: Latitude- 12.59422N, Longitude- 77.43084E**		ಎ) ರೂ. 50.00 ಬಿ) ರೂ. 5.00 ಸಿ) ರೂ. 1.00	
		ಫ್ಲಾಟ್ ನಂ.111, 1ನೇ ಮಹಡಿ, ಶ್ರೀಕೃಷ್ಣ ಸಾಯಿ ಎನ್‌ಕ್ಲೇವ್‌ನಲ್ಲಿ ಭೂಪರಿವರ್ತಿತ ಸರ್ವೆ ನಂ.111/1, ಪ್ರಸ್ತುತ ಬಿಬಿಎಂಪಿ ಖಾತಾ ನಂ.406, ಹೂಡಿ ಗ್ರಾಮ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ಪೂರ್ವ. ಒಟ್ಟು ಪ್ಲಿಂತ್ ಪ್ರದೇಶ 1250 ಚ.ಅಡಿ. **Coordinates of the property: Latitude- 12.59422N, Longitude- 77.43084E**		ಎ) ರೂ. 50.00 ಬಿ) ರೂ. 5.00 ಸಿ) ರೂ. 1.00	
		ಒಟ್ಟು		832.00	
2	(1) ಅನಿಲ್ ಕುಮಾರ್ ರಾಜು ನಂ.1844, 22ನೇ ಮುಖ್ಯರಸ್ತೆ, 25ನೇ ಕ್ರಾಸ್, ಹೆಚ್ ಎಸ್ ಆರ್ ಲೇಔಟ್, ಬೆಂಗಳೂರು-560102.	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ನಿವೇಶನ ನಂ.37, ವಿಲ್ಲಾ ನಂ.37, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಚದರ ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಚದರ ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ, 2600 ಚದರ ಅಡಿ ನಿರ್ಮಿತ ಬಿಲ್ಟ್‌ಅಪ್ ಪ್ರದೇಶವನ್ನು ಎಸ್‌ಕೆಆರ್ ಗಾರ್ಡನ್ಸ್ ಪ್ರಾಜೆಕ್ಟ್‌ನಲ್ಲಿ ನಿರ್ಮಿಸಲಾಗಿದೆ. ಈ ಆಸ್ತಿಯು ಕೈಲಸನಹಳ್ಳಿ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ವಿಲ್ಲಾ ನಂ.78, ಉತ್ತರಕ್ಕೆ : ವಿಲ್ಲಾ ನಂ.36, ದಕ್ಷಿಣಕ್ಕೆ : ವಿಲ್ಲ ನಂ.38. **Google Co-ordinates: 12.802222, 77.671917.**	ರೂ. 1,18,28,440.07 ಜೊತೆಗೆ ದಿನಾಂಕ: 06.03.2026 ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು. 16.04.2026 ಬೆಳಿಗ್ಗೆ 10.00 ರಿಂದ 11.00 ರವರೆಗೆ	ಎ) ರೂ. 130.00 ಬಿ) ರೂ. 13.00 ಸಿ) ರೂ. 1.00	08.04.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ. 15.04.2026 ಸಂಜೆ 5.00 ಗಂಟೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ಅಥವಾ **M/s PSB Alliance (https://baanknet.com/)**, ಅಥವಾ ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು ದೂರವಾಣಿ ಸಂಖ್ಯೆ: 080-25310066, 8598009010 ಮತ್ತು 9483544116, 6381952519 ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 10.03.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 30.03.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 95,66,93,113.43 (ರೂಪಾಯಿ ತೊಂಭತ್ತೈದು ಕೋಟಿ ಅರವತ್ತಾರು ಲಕ್ಷದ ತೊಂಭತ್ತಮೂರು ಸಾವಿರದ ಒಂದುನೂರ ಹದಿಮೂರು ಮತ್ತು ನಲವತ್ತಮೂರು ಪೈಸೆ ಮಾತ್ರ) ಜೊತೆಗೆ ದಿನಾಂಕ: 01.12.2025** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: (1) **ಮೆ॥ ಕಶ್ಯಪ್ ಕನ್ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್,** ನಂ.216/1, 1ನೇ ಮಹಡಿ, 3ನೇ ಹಂತ 100 ಅಡಿ ರಿಂಗ್ ರಸ್ತೆ, ಬಿಎಸ್‌ಕೆ 3ನೇ ಹಂತ, ಬೆಂಗಳೂರು-560085, (2) **ಸಂತೋಷ್ ಎಲ್ ಎಸ್,** ಸಂಖ್ಯೆ 537, ಜ್ಯೇಷ್ಠ, 3ನೇ ಮುಖ್ಯ ರಸ್ತೆ, ಹೊಸಕೆರೆಹಳ್ಳಿ ಕ್ರಾಸ್, ಬಿಎಸ್‌ಕೆ 3ನೇ ಹಂತ, ಗಿರಿನಗರ, ಬೆಂಗಳೂರು-560085, (3) **ಶ್ರೀರಂಗರಾಜು ಎಲ್ ವಿ,** (4) **ಭಾರತಿ ಬಿ ಆರ್,** ಸಂಖ್ಯೆ 537, ಜ್ಯೇಷ್ಠ, 3ನೇ ಮುಖ್ಯ ರಸ್ತೆ, ಹೊಸಕೆರೆಹಳ್ಳಿ ಕ್ರಾಸ್, ಬಿಎಸ್‌ಕೆ 3ನೇ ಹಂತ, ಗಿರಿನಗರ, ಬೆಂಗಳೂರು-560085, (5) **ಶ್ರೀಮತಿ. ವಾಣಿ ಎಂ,** ಸಂಖ್ಯೆ 537, ಜ್ಯೇಷ್ಠ, 3ನೇ ಮುಖ್ಯ ರಸ್ತೆ, ಹೊಸಕೆರೆಹಳ್ಳಿ ಕ್ರಾಸ್, ಬಿಎಸ್‌ಕೆ 3ನೇ ಹಂತ, ಗಿರಿನಗರ, ಬೆಂಗಳೂರು-560085, (6) **ಶ್ರೀ. ಅಶೋಕ್ ರಾಜ್ ಎ,** ನಂ. 8, 13 ನೇ ಕ್ರಾಸ್, ರಮೇಶ್ ನಗರ, ಮಾರತಹಳ್ಳಿ, ಬೆಂಗಳೂರು-560037, (7) **ಶ್ರೀಮತಿ. ಜೋಸಿಮೆಟ್ಲೆಡಾ,** ನಂ. 8, 13ನೇ ಕ್ರಾಸ್, ರಮೇಶ್ ನಗರ, ಮಾರತಹಳ್ಳಿ, ಬೆಂಗಳೂರು-560037, (8) **ವೆಂಕಟೇಶ್ವರ ರವಿ ಪ್ರಸಾದ್ ಜೆ,** ಹೆಚ್ ನಂ. 51/936-ಸಿ, ಹೊಸ ಬಸ್ ನಿಲ್ದಾಣದ ಎದುರು, ಬಳ್ಳಾರಿ ರಸ್ತೆ, ಕರ್ನೂಲ್-518001, (9) **ಬಸವರ ಪಟೇಲ್,** ನಂ.32, ಶಂಕರ್ 4ನೇ ಕ್ರಾಸ್, 1ನೇ ಮೇನ್ ಆರ್‌ಕೆ ಗಾರ್ಡನ್, ಹೊಸ ಬಿಇಎಲ್ ರಸ್ತೆ, ಬೆಂಗಳೂರು 560054. (10) **ಜೆ. ಗೋಪಾಲ್,** ಸಂಖ್ಯೆ 51/913-ಎ, ಎದುರು, ಹೊಸ ಬಸ್ ನಿಲ್ದಾಣ ಬಳ್ಳಾರಿ ರಸ್ತೆ, ಕರ್ನೂಲ್-518001. (11) **ಭಾಸ್ಕರ್ ಜೆ,** ನಂ.51/913-ಎ, ಎದುರು, ಹೊಸ ಬಸ್ ನಿಲ್ದಾಣ ಬಳ್ಳಾರಿ ರಸ್ತೆ ಕರ್ನೂಲ್-518001. (12) **ಶ್ರೀ.ಜೆ ಸುಧಾಕರ್** ಬಿನ್ ಜೂಟೂರು ಚಿನ್ನ ಶೇಷಯ್ಯ ಶೆಟ್ಟಿ, ನಂ. 51/1967-ಎ7 ಇಲ್ಲೂರು ನಗರ, ಕರ್ನೂಲ್-518001. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.
ಅರ್ನೆಸ್ಟ್ ಹಣವನ್ನು **E-Wallet of M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 29.03.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು.
(₹. ಲಕ್ಷಗಳಲ್ಲಿ)

ಕ್ರ ಸಂ	ಆಸ್ತಿಯ ವಿವರ :	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಇಎಂಟಿ **"ಕಮಲ ಲಾಡ್ಜ್"** ಎಂಬ ಕಮರ್ಷಿಯಲ್ ಕಟ್ಟಡದ ಡೋರ್ ನಂ.51/936 ಜಿ, ಸರ್ವೆ ನಂ.403/2ಎ3, 404ಬಿ/2ಸಿ & 404/ಎ3, 51ನೇ ವಾರ್ಡ್, ಹೊಸ ಎಪಿಎಸ್‌ಆರ್‌ಟಿಎಸ್ ಬಸ್ ನಿಲ್ದಾಣದ ಎದುರು, ಬಳ್ಳಾರಿ ರಸ್ತೆ, ಕರ್ನೂಲ್‌ನಲ್ಲಿದೆ. ಈ ಆಸ್ತಿಯು ಜೆ ಗೋಪಾಲ್, ಜೆ ಭಾಸ್ಕರ್, ಜೆ ಸುಧಾಕರ್, ಜೆ ವೆಂಕಟೇಶ್ವರ ರವಿ ಪ್ರಸಾದ್ ಅವರ ಜಂಟಿ ಹೆಸರಿನಲ್ಲಿದೆ. ಭೂಮಿಯ ಒಟ್ಟು ವಿಸ್ತೀರ್ಣ 3702.28 ಚದರ ಅಡಿ. **Coordinates of the property Latitude- 15.8255150, Longitude- 78.0279510**	₹. 960.00	₹. 96.00	₹. 5.00
2	ಇಎಂಟಿ **"ಜೆಸಿಎಸ್ ಕಾಂಪ್ಲೆಕ್ಸ್"** ಎಂಬ ಕಮರ್ಷಿಯಲ್ ಕಟ್ಟಡದ ಡೋರ್ ನಂ.51/939 ಎ, ಸರ್ವೆ ನಂ.403/2ಎ3, 404ಬಿ/2ಸಿ & 404/ಎ3, 51ನೇ ವಾರ್ಡ್, ಹೊಸ ಎಪಿಎಸ್‌ಆರ್‌ಟಿಎಸ್ ಬಸ್ ನಿಲ್ದಾಣದ ಹತ್ತಿರ, ಬಳ್ಳಾರಿ ರಸ್ತೆ, ಕರ್ನೂಲ್‌ನಲ್ಲಿದೆ. ಈ ಆಸ್ತಿಯು ಜೆ ಗೋಪಾಲ್, ಜೆ ಭಾಸ್ಕರ್, ಜೆ ಸುಧಾಕರ್, ಜೆ ವೆಂಕಟೇಶ್ವರ ರವಿ ಪ್ರಸಾದ್ ಅವರ ಜಂಟಿ ಹೆಸರಿನಲ್ಲಿದೆ. ಭೂಮಿಯ ಒಟ್ಟು ವಿಸ್ತೀರ್ಣ 6529.50 ಚದರ ಅಡಿ. **Coordinates of the property Latitude- 15.825509, Longitude- 78.028149**	₹. 700.00	₹. 70.00	₹. 5.00

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **E-Wallet of M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-I ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **080-25310066, 9483544116 ಮತ್ತು 8508442767** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 07.03.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ರಸ್ತೆ ಅಭಿವೃದ್ಧಿಗೆ ಕ್ರಮವಹಿಸಿ

ಬೆಂಗಳೂರು: ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ಎಂಜಿನಿಯರ್‌ಗಳೊಂದಿಗೆ ಸಭೆ ನಡೆಸಿ, ವಿವಿಧ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಪ್ರಗತಿ ಪರಿಶೀಲನೆ ಸಭೆ ನಡೆಸಿದರು. ಸಭೆ ಬಳಿಕ ಮಾತನಾಡಿದ ಆಯುಕ್ತರು, ಮಾನ್ಸೂನ್ ಪ್ರಾರಂಭವಾಗುವ ಹಿನ್ನೆಲೆಯಲ್ಲಿ ನೀರು ನಿಲ್ಲುವ ಪ್ರಮುಖ ಸ್ಥಳಗಳು ಗುರುತಿಸುವುದು, ಹಾಗೂ ದುರಸ್ಥಿಯಲ್ಲಿರುವ ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳನ್ನು ಕಾರ್ಯಪಾಲಕ ಎಂಜಿನಿಯರ್‌ಗಳು ಖುದ್ದಾಗಿ ಸ್ಥಳ ತಪಾಸಣೆ ನಡೆಸಿ, ದುರಸ್ಥಿ ಕೈಗೊಳ್ಳಬೇಕಾದ ರಸ್ತೆಗಳ ಪಟ್ಟಿ ಸಲ್ಲಿಸಲು ಸೂಚಿಸಿದರು. ನಗರದ ಎಂ. ಜಿ ರಸ್ತೆಯಲ್ಲಿ ನಡೆಯುತ್ತಿರುವ ಡಾಂಬರೀಕರಣ ಕಾಮಗಾರಿಯನ್ನು ಬೇಗ ಮುಕ್ತಾಯಗೊಳಿಸಲು ಸೂಚಿಸಿದರು. ಹಾಗೂ ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಎಲ್ಲಾ ಡಾಂಬರೀಕರಣ ಕಾಮಗಾರಿಗಳನ್ನು ಆದಷ್ಟು ಬೇಗ ಮುಗಿಸಿ ನಾಗರಿಕರ ಸಂಚಾರಕ್ಕೆ ಉತ್ತಮ ರಸ್ತೆ ಒದಗಿಸಲು ಕ್ರಮ ವಹಿಸುವಂತೆ ಎಂಜಿನಿಯರ್‌ಗಳಿಗೆ ನಿರ್ದೇಶನ ನೀಡಿದರು. ಬೆಂಗಳೂರು ಜಲ ಮಂಡಳಿ ಯವರು ರಸ್ತೆಗಳನ್ನು ಅಗೆದಿರುವುದರಿಂದ ರಸ್ತೆಗಳು ಹಾಳಾಗಿ ಸಾರ್ವಜನಿಕರ ಸಂಚಾರರಕ್ಕೆ ಸಮಸ್ಯೆಯಾಗುತ್ತಿದ್ದು, ಕೂಡಲೇ ಅವುಗಳನ್ನು ದುರಸ್ಥಿ ಮಾಡುವ ಕಾರ್ಯ ಕೈಗೊಳ್ಳಬೇಕು. ಪ್ರಮುಖ ಜಂಕ್ಷನ್ ಗಳಲ್ಲಿ ಸಂಚಾರ ದಟ್ಟಣೆ ಯಾಗಿ ಸಾರ್ವಜನಿಕ ಸಂಚಾರಕ್ಕೆ ಸಮಸ್ಯೆ ಆಗುತ್ತಿರುವುದರಿಂದ ಅಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬೇಕು ಮತ್ತು ಅಗತ್ಯ ಇರುವ ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆಗಳ ನಿರ್ಮಾಣಕ್ಕೆ ಕ್ರಮ ವಹಿಸಲು ಸೂಚನೆ ನೀಡಿದರು.

ಸಮಾಚಾರ ಸಣ್ಣದಲ್ಲ

ಇಂದು ಪುಸ್ತಕ ಲೋಕಾರ್ಪಣೆ

ಬೆಂಗಳೂರು: ನೆಲ್ಲೂರು ಚಲಪತಿ ವಿರಚಿತ ಗೆಳತನ ಮಕ್ಕಳ ಕಥೆ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಮಾ.11 ರಂದು ಮ.3.30ಕ್ಕೆ ನಗರದ ಕೆ.ಆರ್ ಪುರದ ಕಲ್ಕೆರೆ ಸರಕಾರಿ ಪ್ರೌಢಶಾಲೆ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ಈ ವೇಳೆ ಕಾರ್ಯಕ್ರಮದಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ.ಬೈರ ಮಂಗಲ ರಾಮೇಗೌಡ, ಕೆ.ಆರ್ ಪುರದ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್ ಗೋವಿಂದಪ್ಪ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಎನ್. ನರಹರಿ, ಕಲ್ಕೆರೆ ಸರಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ರಿಯಾಜ್ ಎಚ್., ಅಧ್ಯಕ್ಷ ಕನ್ಯಾಗಪ್ಪ ಪಿ.ಎಂ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಇಂದಿರಾ ಕ್ಯಾಂಟೀನ್ ಯುಪಿಐ ವ್ಯವಸ್ಥೆ

ವಿಧಾನ ಪರಿಷತ್: ಇಂದಿರಾ ಕ್ಯಾಂಟೀನ್‌ಗಳಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಲು ಕ್ರಮ ವಹಿಸಲಾಗುತ್ತದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ವಿಧಾನಪ ರಿಷತ್ ಕಾಂಗ್ರೆಸ್ ಸದಸ್ಯ ಜಗ ದೇವ್ ಗುತ್ತೇದಾರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಇಂದಿರಾ ಕ್ಯಾಂಟೀನ್‌ಗಳಲ್ಲಿ ಕಾಲ ಕಾಲಕ್ಕೆ ಆಯಾ ಪ್ರದೇಶಗಳಿಗೆ ಅನುಗುಣವಾಗಿ ಆಹಾರ ಪೂರೈಕೆ ಮಾಡಲಾಗುತ್ತಿದೆ. ಎಲ್ಲಿಯಾದರೂ ವ್ಯತ್ಯಯ ಉಂಟಾದಲ್ಲಿ ಕೂಡಲೇ ಸರಿಪಡಿಸುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾ ಗುತ್ತದೆ ಎಂದು ತಿಳಿಸಿದರು. ಇಂದಿರಾ ಕ್ಯಾಂಟೀನ್‌ಗಳಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಜಾರಿಗೆ ತರಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗುವುದು ಎಂದು ಸಚಿವ ಬೈರತಿ ಸುರೇಶ್ ಅವರು ಇನ್ನೊಂದು ಪ್ರಶ್ನೆಗೆ ಉತ್ತರ ನೀಡಿದರು.

ಆರೋಗ್ಯ ಪರೀಕ್ಷೆ ನಿರ್ಲಕ್ಷಿಸಬಾರದು

ಬೆಂಗಳೂರು: ನಗರದ ಆಯುರ್ವೇದಾಮೃತಂ ಆರೋಗ್ಯ ಕೇಂದ್ರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಈ ಕುರಿತು ಆಯುರ್ವೇದಾಮೃತಂ ಆರೋಗ್ಯ ಕೇಂದ್ರದ ವೈದ್ಯಕೀಯ ನಿರ್ದೇಶಕಿ ಡಾ.ಟಿ.ಕೆ. ಗಿರಿಜಾ ಕುಮಾರಿ ಮಾತನಾಡಿ, ಮನೆಯಲ್ಲೇ ಇರುವ ಮತ್ತು ವೃತ್ತಿಯಲ್ಲಿರುವ ಮಹಿಳೆಯರು ಮತ್ತು ಹಿರಿಯ ವಯಸ್ಸಿನವರು ಹೀಗೆ ಎಲ್ಲ ವರ್ಗದ ಮಹಿಳೆಯರೂ ಈಗ ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿದ್ದಾರೆ. ಯಾವುದೇ ಆರೋಗ್ಯ ಸಮಸ್ಯೆಯನ್ನು ಸೂಕ್ತ ಪರೀಕ್ಷೆಗಳ ಮೂಲಕ ಆರಂಭದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ಪಡೆಯುವುದು ಒಳ್ಳೆಯದು ಎಂದರು. ಆಯುರ್ವೇದಾಮೃತಂ ಕೇಂದ್ರದ ಸ್ಥಾಪಕರಾದ ಡಾ. ಗಂಗಾಧರನ್ ಮಾತನಾಡಿ, ನಮ್ಮ ಪರಿಸರವನ್ನು ಸ್ವಚ್ಛವಾಗಿಡುವ ಪೌರಕಾರ್ಮಿಕರು ಅಭಿನಂದಾರ್ಹರು. ಯಾವುದೇ ಚಪ್ಪಾಳೆಗೂ ಕಾಯದೇ ತಮ್ಮ ಕಾಯಕವನ್ನು ಮಾಡುತ್ತಿರುವವರನ್ನು ಬಾಯಿಮಾತಿನಲ್ಲೇ ಶ್ಲಾಘಿಸದೇ ಕಾರ್ಯರೂಪದಲ್ಲಿಯೂ ತೋರಿಸಬೇಕೆಂಬ ಉದ್ದೇಶದಿಂದ ಸತ್ಕರಿಸಲಾಗುತ್ತಿದೆ ಎಂದರು. ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹತ್ತು ಮಹಿಳೆಯರು ಮತ್ತು ನಗರದ ಸ್ವಚ್ಛತೆಗೆ ಕೊಡುಗೆ ನೀಡುತ್ತಿರುವ 15 ಮಂದಿ ಪೌರಕಾರ್ಮಿಕ ಮಹಿಳೆಯರನ್ನು ಸನ್ಮಾನಿಸಲಾಯಿತು.

ಗಣಿಗಾರಿಕೆಯಲ್ಲಿ ಸುರಕ್ಷತಾ ಕ್ರಮ

ಬೆಂಗಳೂರು: ವೇದಾಂತ ಸೆಸಾ ಗೋವಾ-ಐರನ್ ಓರ್ ಗಣಿಗಾರಿಕೆಯಲ್ಲಿ ಸುರಕ್ಷಿತ ಕ್ರಮಗಳನ್ನು ಹೆಚ್ಚಿಸುವ ಉದ್ದೇಶದಿಂದ ಇಆರ್‌ಎಂ ಗ್ರೂಪ್ ಜತೆಗೂಡಿ, ಗಣಿ ಸುರಕ್ಷತೆ ಮಹಾನಿರ್ದೇಶನಾಲಯದ ಆಶ್ರಯದಲ್ಲಿ ಬೆಂಗಳೂರಿನಲ್ಲಿ ತ್ರಿಪಕ್ಷೀಯ ಸುರಕ್ಷತಾ ಸಮಿತಿ ಸಭೆಯನ್ನು ಯಶಸ್ವಿಯಾಗಿ ಆಯೋಜಿಸಿದೆ. ಬೆಂಗಳೂರಿನ ದಕ್ಷಿಣ ವಲಯದ ಗಣಿ ಸುರಕ್ಷತೆಯ ಉಪ ಮಹಾನಿರ್ದೇಶಕ ಸೈಫುಲ್ಲಾ ಅನ್ಸಾರಿ ಮಾತನಾಡಿ, ಗಣಿ ಸುರಕ್ಷತೆಯ ಪ್ರಮುಖ ಅಂಶಗಳ ಕುರಿತು ನಿಯಂತ್ರಕರು, ಉದ್ಯಮ ಮತ್ತು ಕಾರ್ಮಿಕರ ನಡುವಿನ ಸಂವಾದವನ್ನು ಉತ್ತಮಗೊಳಿಸುವಲ್ಲಿ ತ್ರಿಪಕ್ಷೀಯ ಸುರಕ್ಷತಾ ಸಮಿತಿ ಸಭೆಯು ಪ್ರಮುಖ ಪಾತ್ರವಹಿಸುತ್ತದೆ. ಸುರಕ್ಷತಾ ಕ್ರಮಗಳು, ಕಂಪನಿಯ ಸುರಕ್ಷತೆ ಮತ್ತು ಆರೋಗ್ಯ ನೀತಿಗಳ ಅನುಷ್ಠಾನದ ಪ್ರಗತಿ ಹಾಗೂ ಗಣಿ ಸುರಕ್ಷತೆಯ ಕುರಿತು ರಾಷ್ಟ್ರೀಯ ಸಮ್ಮೇಳನಗಳಲ್ಲಿ ಮಾಡಿದ ಶಿಫಾರಸುಗಳ ಬಗ್ಗೆ ಚರ್ಚಿಸುವುದು ಈ ಸಭೆಯ ಮುಖ್ಯ ಉದ್ದೇಶವಾಗಿದೆ. ಸುರಕ್ಷತಾ ಮಾನದಂಡಗಳು ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ನೋಡಿಕೊಳ್ಳುವುದು ಮತ್ತು ಪ್ರತಿಯೊಬ್ಬ ವ್ಯಕ್ತಿಯ ಯೋಗಕ್ಷೇಮಕ್ಕೆ ಆದ್ಯತೆ ನೀಡುವ ಸಂಸ್ಕೃತಿಯನ್ನು ಬೆಳೆಸುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದರು.

ಬೃಹತ್ ಆರೋಗ್ಯ ತಪಾಸಣಾ ಶಿಬಿರ

ಬೆಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಎಚ್‌ಸಿಜಿ ಕ್ಯಾನ್ಸರ್ ಸೆಂಟರ್ ವತಿಯಿಂದ ಮಹಿಳೆಯರ ಆರೋಗ್ಯದ ದೃಷ್ಟಿಯಿಂದ ಬೃಹತ್ ತಪಾಸಣಾ ಶಿಬಿರ ಮತ್ತು ನಗರವ್ಯಾಪಿ 5ಕಿ.ಮೀ ವಾಕಥಾನ್ ಆಯೋಜಿಸಲಾಗಿತ್ತು. ಮಹಿಳೆಯರ ಆರೋಗ್ಯದ ಬಗ್ಗೆ ಅರಿವು ಮೂಡಿಸಲು, ನಿಯಮಿತ ತಪಾಸಣೆಯ ಪ್ರಾಮುಖ್ಯತೆಯನ್ನು ಸಾರಲು ಮತ್ತು ಪೂರ್ವಭಾವಿ ಆರೋಗ್ಯ ಕಾಳಜಿಯನ್ನು ಉತ್ತೇಜಿಸಲು ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ 600ಕ್ಕೂ ಹೆಚ್ಚು ಮಹಿಳೆಯರು ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದರು. ವೈದ್ಯಕೀಯ ಗಂಥಿಶಾಸ್ತ್ರ ವಿಭಾಗದ ಡಾ. ಸ್ಮಿತಾ ಸಲ್ಡಾನ್ಹಾ, ಹೆಡ್ ಅಂಡ್ ನೆಕ್ ಸರ್ಜನ್ ಡಾ. ಶಾಲಿನಿ ಠಾಕೂರ್ ಮತ್ತು ಕ್ಯಾನ್ಸರ್ ಅನ್ನು ಯಶಸ್ವಿಯಾಗಿ ಜಯಿಸಿರುವ ಕನಕವಲ್ಲಿ ಅವರು ಪಾಲ್ಗೊಳ್ಳುವ ಮೂಲಕ ಮಹಿಳೆಯರ ಮುನ್ನೆಚ್ಚರಿಕಾ ಆರೋಗ್ಯ ಸೇವೆಗಳು ಮತ್ತು ರೋಗದ ಆರಂಭಿಕ ಪತ್ತೆಯ ಉದ್ದೇಶಕ್ಕೆ ಬೆಂಬಲ ಸೂಚಿಸಿದರು. ಕರ್ನಾಟಕ ದಕ್ಷಿಣ ವಿಭಾಗದ ಚೀಫ್ ಆಪರೇಷನ್ ಆಫೀಸರ್ ಮನಿಶಾ ಕುಮಾರ್ ಮಾತನಾಡಿದರು.

ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆ ಸ್ಥಗಿತ | ಮೆನು ಕಡಿತಕ್ಕೆ ಪಿಜಿಗಳು ನಿರ್ಧಾರ | 10 ಲಕ್ಷಕ್ಕೂ ಜನರಿಗೆ ಆಹಾರ ಕೊರತೆ ಆತಂಕ

ರಾಜಧಾನಿಯಲ್ಲಿ ಸಿಲಿಂಡರ್ ಬಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆ ಸ್ಥಗಿತಗೊಂಡಿರುವುದರಿಂದ ಹೋಟೆಲ್ ಮಾತ್ರವಲ್ಲದೆ ಪಿಜಿಗಳ ಮೇಲೂ ಭೀತಿ ಮೂಡಿಸಿದ್ದು, ಮುಂದಿನ ಒಂದು ವಾರದಲ್ಲಿ ಸಮಸ್ಯೆ ಬಗೆಹರಿಯದಿದ್ದರೆ ಪಿಜಿಗಳಲ್ಲಿ ಆಹಾರ ಪೂರೈಕೆ ವ್ಯತ್ಯಯವಾಗಲಿದೆ ಎನ್ನುವ ಮಾತುಗಳು ಕೇಳಿ ಬಂದಿದೆ.

ಬೆಂಗಳೂರಿನಲ್ಲಿ ಅಂದಾಜು 15,000 ಪಿಜಿ ಸೌಲಭ್ಯಗಳಿದ್ದು, ಸಾಫ್ಟ್‌ವೇರ್ ಉದ್ಯೋಗಿಗಳಿಂದ ಹಿಡಿದು ವಿದ್ಯಾರ್ಥಿಗಳವರೆಗೆ ಸುಮಾರು 10 ಲಕ್ಷಕ್ಕೂ ಹೆಚ್ಚು ಜನರು ಇಲ್ಲಿ ವಾಸ್ತವ್ಯ ಹೂಡಿದ್ದು, ದಿನಕ್ಕೆ ಮೂರು ಬಾರಿ ಆಹಾರ ಒದಗಿಸುವುದು ಈಗ ಪಿಜಿ ಮಾಲೀಕರಿಗೆ ಸವಾಲಾಗಿ ಪರಿಣಮಿಸಿದೆ. ಈಗಾಗಲೇ ಕೆಲವು ಪಿಜಿಗಳಲ್ಲಿ ಬಗೆಬಗೆಯ ಅಡುಗೆ ಕಡಿಮೆ ಮಾಡಲಾಗಿದ್ದು, ಸಿಲಿಂಡರ್ ಉಳಿತಾಯಕ್ಕೆ ಮುಂದಾಗಿದ್ದಾರೆ. ಸಿಲಿಂಡರ್ ಕೊರತೆಯ ಆತಂಕ ಹೆಚ್ಚುತ್ತಿರುವ ನಡುವೆ, ಪಿಜಿ ವಸತಿ ಗೃಹಗಳ ಮಾಲೀಕರು ಕೂಡ ಎಚ್ಚರಿಕೆ ನೀಡಿದ್ದು, ಈ ಸಮಸ್ಯೆ ಮುಂದುವರಿದರೆ ಮತ್ತಷ್ಟು ಒಂದು ವಾರದವರೆಗೆ ಮಾತ್ರ ನಿವಾಸಿಗಳಿಗೆ ನಿರಂತರವಾಗಿ ಆಹಾರ ಒದಗಿಸಲು ಸಾಧ್ಯ ಎನ್ನುವ ಮಾತುಗಳು ಕೇಳಿ ಬಂದಿದೆ.

ಪಿಜಿ ಮಾಲೀಕರ ಕಲ್ಯಾಣ ಸಂಘದ ಅಧ್ಯಕ್ಷ ಅರುಣ್ ಕುಮಾರ್ ಮಾಹಿತಿ ನೀಡಿ, ಈಗಿರುವ ಗ್ಯಾಸ್ ಸಂಗ್ರಹದ ಆಧಾರದ ಮೇಲೆ ಹೆಚ್ಚುಮಂದಿ ಪಿಜಿಗಳು ಗರಿಷ್ಠ ಒಂದು ವಾರದವರೆಗೆ ಮಾತ್ರ ಅಡುಗೆ ಮಾಡಬಹುದು. ನಂತರ ಆಹಾರ ಸರಬರಾಜು ಮೇಲೆ ಪರಿಣಾಮ ಬೀಳುವ ಸಾಧ್ಯತೆ ಇದೆ. ಸರಕಾರ ತಕ್ಷಣ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಕೆಲವು ಪಿಜಿ ವಸತಿ ಗೃಹಗಳು ಈಗಾಗಲೇ ಆಹಾರದ ಮೆನು ಕಡಿಮೆ ಮಾಡುವ ಕ್ರಮಕ್ಕೆ ಮುಂದಾಗಿವೆ. ಸಾಮಾನ್ಯವಾಗಿ ಬೆಳಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಊಟಕ್ಕೆ ಮೂರು ಅಥವಾ ನಾಲ್ಕು ವಿಧದ ಆಹಾರ ನೀಡಲಾಗುತ್ತಿತ್ತು. ಆದರೆ ಗ್ಯಾಸ್ ಕೊರತೆ ಹಿನ್ನೆಲೆ ಕಡಿಮೆ ಮಾಡಲು ನಿರ್ಧರಿಸಲಾಗಿದೆ. ನಮ್ಮ ಬಳಿ ಹಲವು ಖಾಲಿ ಸಿಲಿಂಡರ್‌ಗಳಿವೆ. ಬುಕ್ಕಿಂಗ್ ಮಾಡಲು ಪ್ರಯತ್ನಿಸಿದರೂ ಸ್ಲಾಟ್ ಸಿಗುತ್ತಿಲ್ಲ. ಈ ಪರಿಸ್ಥಿತಿ ಮುಂದುವರಿದರೆ ಮೂರು-ನಾಲ್ಕು ದಿನಗಳಿಗಿಂತ ಹೆಚ್ಚು ಕಾಲ ಅಡುಗೆ ನಡೆಸಲು ಸಾಧ್ಯವಾಗುವುದಿಲ್ಲ ಎಂದು ಮಾಲೀಕರು ಆತಂಕ ವ್ಯಕ್ತಪಡಿಸಿದ್ದಾರೆ.

> ಮುಚ್ಚುವ ನಿರ್ಧಾರವು ಹೋಟೆಲ್‌ಗಳನ್ನು ವೈಯಕ್ತಿಕ ಆಯ್ಕೆಯಾಗಿದ್ದು, ಗ್ಯಾಸ್ ಇರುವವರೆಗೂ ಅವು ಕಾರ್ಯನಿರ್ವಹಿಸುತ್ತವೆ. ಗ್ಯಾಸ್ ಲಭ್ಯವಿಲ್ಲದಿದ್ದರೆ, ಬೇರೆ ಆಯ್ಕೆಗಳಿಲ್ಲ. ಆಗ ಅದು ಸ್ವಯಂಚಾಲಿತವಾಗಿ ಮುಚ್ಚಲ್ಪಡುತ್ತದೆ. ಕೊನೆಯ ಹನಿ ಗ್ಯಾಸ್ ಲಭ್ಯವಾಗುವವರೆಗೆ, ನಾವು ಅಡುಗೆ ಮಾಡಿ ಬಡಿಸುತ್ತೇವೆ. ಕೆಲವು ಹೋಟೆಲ್‌ಗಳಲ್ಲಿ ಇನ್ನೂ ಸಿಲಿಂಡರ್‌ಗಳು ಲಭ್ಯವಿದೆ. ಇನ್ನೂ ಕೆಲವರು ಸ್ವಲ್ಪ ಪೂರೈಕೆ ಇರಬಹುದೆಂದು ಆಶಿಸುತ್ತಾ ಕಾಯುತ್ತಿದ್ದಾರೆ. ತಕ್ಷಣ ಯಾವುದೇ ಪರ್ಯಾಯವನ್ನು ವ್ಯವಸ್ಥೆ ಮಾಡಲು ಸಾಧ್ಯವಿಲ್ಲ. ಉತ್ತಮವಾದದ್ದನ್ನು ಆಶಿಸುತ್ತಿದ್ದೇವೆ, ಏಕೆಂದರೆ ನಾವು ಮುಚ್ಚಿದರೆ ಅದು ನಮಗೆ ಮತ್ತು ಗ್ರಾಹಕರಿಗೆ ಕಷ್ಟವಾಗಿರುತ್ತದೆ.
>
> -ಪಿ.ಸಿ.ರಾವ್, ಬೆಂಗಳೂರು ಹೋಟೆಲ್‌ಗಳ ಸಂಘದ ಗೌರವಾಧ್ಯಕ್ಷ

ಪಿಜಿಗಳಲ್ಲಿ ಸಾಮಾನ್ಯವಾಗಿ ಒಂದು ಸಮಯದಲ್ಲಿ ಕನಿಷ್ಠ 50 ಮಂದಿಗೆ ಆಹಾರ ತಯಾರಿಸಲಾಗುತ್ತದೆ. ಇಂತಹ ದೊಡ್ಡ ಪ್ರಮಾಣದ ಅಡುಗೆಗೆ ಇಂಡಕ್ಷನ್ ಕುಕ್ಕರ್ ಬಳಸುವುದು ಕಷ್ಟಕರವಾಗಿರುವುದರಿಂದ ಎಲ್ಪಿಜಿಗೆ ಪರ್ಯಾಯ ವ್ಯವಸ್ಥೆ ಸಾಧ್ಯವಿಲ್ಲ ಎಂದೂ ಮಾಲೀಕರು ಹೇಳಿದ್ದಾರೆ.

ಗೇಲ್ ಇಂಡಿಯಾದ ಅಧಿಕಾರಿಗಳ ಪ್ರಕಾರ, ಸದ್ಯಕ್ಕೆ ಮನೆಗಳಿಗೆ ಪೂರೈಕೆಯಾಗುವ ಪೈಪ್ಡ್ ನ್ಯಾಚುರಲ್ ಗ್ಯಾಸ್ ಮತ್ತು ವಾಹನಗಳ ಸಿಎನ್‌ಜಿ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಿಲ್ಲ. ಆದರೆ, ವಾಣಿಜ್ಯ ಸಿಲಿಂಡರ್ ಕೊರತೆ ಮುಂದುವರಿದರೆ ಮುಂದಿನ ದಿನಗಳಲ್ಲಿ ಉದ್ಯಮಗಳ ಮೇಲೆ ಕೆಟ್ಟ ಪರಿಣಾಮ ಬೀರಲಿದೆ. ಪಿಜಿಗಳಲ್ಲಿ ಇರುವವರಿಗೆ ಅನಾನುಕೂಲ ಪಿಜಿಗಳಲ್ಲಿ ಸಾಮಾನ್ಯವಾಗಿ ದಿನಕ್ಕೆ ಮೂರು ಬಾರಿ ಊಟ ನೀಡಲಾಗುತ್ತದೆ. ಸಿಲಿಂಡರ್ ಇಲ್ಲದಿದ್ದರೆ ಅಡುಗೆ ಮಾಡುವುದು ಅಸಾಧ್ಯವಾಗುವುದರಿಂದ, ನಿವಾಸಿಗಳು ಹೊರಗಿನ ಹೋಟೆಲ್ಗಳನ್ನು ಅವಲಂಬಿಸಬೇಕಾಗುತ್ತದೆ. ಆದರೆ ಹೋಟೆಲ್‌ಗಳಲ್ಲೂ ಇದೇ ಸಮಸ್ಯೆ ಇರುವುದರಿಂದ ಅಲ್ಲಿಯೂ ಊಟ ಸಿಗುವುದು ಕಷ್ಟವಾಗಬಹುದು.

ಈಗಾಗಲೇ ಕೆಲವು ಪಿಜಿ ಮಾಲೀಕರು ಸಿಲಿಂಡರ್ ಉಳಿಸಲು ಮೆನುವಿನಲ್ಲಿ ಕಡಿತ ಮಾಡಿದ್ದಾರೆ. ಅಂದರೆ, ಹೆಚ್ಚಿನ ವೈವಿಧ್ಯತೆಯ ಆಹಾರದ ಬದಲಿಗೆ ಕೇವಲ ಸೀಮಿತ ಪ್ರಮಾಣದ ಅಥವಾ ಸುಲಭವಾಗಿ ತಯಾರಿಸಬಹುದಾದ ಆಹಾರವನ್ನು ಮಾತ್ರ ನೀಡಲಾಗುತ್ತದೆ. ಈಗ ಹೋಟೆಲ್‌ಗಳಲ್ಲೂ ದರ ಏರಿಕೆಯಾಗುವುದರಿಂದ ಇದು ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳಿಗೆ ಹೊರೆಯಾಗಲಿದೆ. ಈ ಎಲ್ಪಿಜಿ ಬಿಕ್ಕಟ್ಟು ಕೇವಲ ಹೋಟೆಲ್ ಮಾಲೀಕರ ಸಮಸ್ಯೆಯಲ್ಲ, ಇದು ಬೆಂಗಳೂರಿನಲ್ಲಿ ವಾಸಿಸುವ ಲಕ್ಷಾಂತರ ಬಾಡಿಗೆದಾರರ ದೈನಂದಿನ ಜೀವನಕ್ಕೂ ದೊಡ್ಡ ಹೊಡೆತ ನೀಡಿದೆ.

ರಾಜಧಾನಿಯ ಹೋಟೆಲ್‌ಗೆ ಸಿಲಿಂಡರ್‌ಗಳ ಸಮಸ್ಯೆ

ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧ ತೀವ್ರಗೊಂಡ ಹಿನ್ನೆಲೆ ಪೆಟ್ರೋಲ್ ಸೇರಿದಂತೆ ಅನಿಲ ಸರಬರಾಜಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ದೇಶದ ಪ್ರಮುಖ ನಗರಗಳಲ್ಲಿ ಹೋಟೆಲ್, ರೆಸ್ಟೋರೆಂಟ್‌ಗಳು ಒತ್ತಡದಲ್ಲಿ ಕಾರ್ಯನಿರ್ವಹಿಸುವಂತಾಗಿದೆ.

ಮಂಗಳವಾರ ನಗರದ ಹಲವಾರು ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು ಈಗಾಗಲೇ ಹೊಂದಿರುವ ವಾಣಿಜ್ಯ ಅನಿಲ ಸಿಲಿಂಡರ್‌ಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜಿನ ಕೊರತೆಯು ಮತ್ತಷ್ಟು ಒತ್ತಡವನ್ನುಂಟು ಮಾಡಿದೆ. ಅಲ್ಲದೆ ಸಿಲಿಂಡರ್‌ಗಳ ಸ್ಟಾಕ್ ಖಾಲಿಯಾದರೆ ಆ ಬಳಿಕ ಹೋಟೆಲ್‌ಗಳನ್ನು ಮುಚ್ಚಬೇಕಾದ ಅನಿವಾರ್ಯತೆ ಎದುರಾಗಲಿದೆ ಎಂದು ಹಲವು ಹೋಟೆಲ್‌ಗಳ ಸಿಬ್ಬಂದಿ ಹೇಳಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾದ ಹೆಚ್ಚುತ್ತಿರುವ ಇಂಧನ ವೆಚ್ಚಗಳು ಮತ್ತು ಪೂರೈಕೆ ನಿರ್ಬಂಧಗಳ ನಡುವೆ ವಾಣಿಜ್ಯ ಅನಿಲ ಸಿಲಿಂಡರ್‌ಗಳ ಪೂರೈಕೆಯಲ್ಲಿ ಹಠಾತ್ ಮತ್ತು ಸಂಪೂರ್ಣ ಸ್ಥಗಿತದ ನಂತರ ಈ ಬೆಳವಣಿಗೆ ಸಂಭವಿಸಿದೆ ಎಂದು ಬೆಂಗಳೂರು ಹೋಟೆಲ್‌ಗಳ ಸಂಘ ತಿಳಿಸಿದೆ. ಅನಿಲ ಪೂರೈಕೆ ನಿಂತಿರುವುದರಿಂದ, ಮಾರ್ಚ್ 10 ರಿಂದ ಹೋಟೆಲ್‌ಗಳನ್ನು ಮುಚ್ಚಲಾಗುವುದು ಎಂದು ಸಂಘವು ಈ ಹಿಂದೆ ಪ್ರಕಟಣೆಯನ್ನು ಬಿಡುಗಡೆ ಮಾಡಿತ್ತು. ಆದರೂ , ಕೆಲವು ಹೋಟೆಲ್ ಮಾಲೀಕರು ಕಾರ್ಯಾಚರಣೆಗಳು ಪ್ರಸ್ತುತ ನಿರ್ಬಂಧಗಳೊಂದಿಗೆ ಮುಂದುವರಿಯುತ್ತಿವೆ. ಕೆಲವು ಸಂಸ್ಥೆಗಳು ಇಂಧನವನ್ನು ಸಂರಕ್ಷಿಸಲು ಮತ್ತು ತಮ್ಮ ಅಸ್ತಿತ್ವದಲ್ಲಿರುವ ಸ್ಟಾಕ್‌ನ್ನು ದೀರ್ಘಕಾಲದವರೆಗೆ ವಿಸ್ತರಿಸಲು ಹೆಚ್ಚಿನ ಅನಿಲವನ್ನು ಬಳಸುವ ಕೆಲವು ತಿನಿಸುಗಳ ತಯಾರಿಕೆಯನ್ನೇ ನಿಲ್ಲಿಸಿವೆ.

ಇಂದಿರಾ ಕ್ಯಾಂಟೀನ್‌ಗಳಿಗೆ ಎಐ ಕ್ಯಾಮೆರಾ ಅಳವಡಿಕೆಗೆ ಚಿಂತನೆ

ಬೆಂಗಳೂರು: ಇಂದಿರಾ ಕ್ಯಾಂಟೀನ್‌ಗಳಿಗೆ ಹೈಟೆಕ್ ಸ್ಪರ್ಶ ನೀಡಲು ಜಿಬಿಎ ಮುಂದಾಗಿದ್ದು, ಮಾರ್ಷಲ್‌ಗಳನ್ನು ಹಿಂಪಡೆದು ಎಐ ಕ್ಯಾಮೆರಾ ಅಳವಡಿಸಲು ನಿರ್ಧರಿಸಿದೆ.

ನಗರದ ಹಲವು ಇಂದಿರಾ ಕ್ಯಾಂಟೀನ್‌ಗಳಲ್ಲಿ ಆಹಾರ ಪೂರೈಕೆ ಗುತ್ತಿಗೆದಾರರು ನಿಜವಾದ ಮಾರಾಟಕ್ಕಿಂತ ಹೆಚ್ಚು ಸಂಖ್ಯೆಯನ್ನು ತೋರಿಸಿ ಸುಳ್ಳು ಲೆಕ್ಕ ನೀಡುತ್ತಿದ್ದಾರೆ ನ್ನುವ ಆರೋಪಗಳು ಕೇಳಿ ಬಂದಿದ್ದು, ಕಡಿಮೆ ಪ್ರಮಾಣದಲ್ಲಿ ಊಟ-ತಿಂಡಿ ವಿತರಣೆ ನಡೆದರೂ, ಜಿಬಿಎಗೆ ಹೆಚ್ಚಿನ ಸಂಖ್ಯೆಯನ್ನು ತೋರಿಸಿ ಬಿಲ್ ಸಲ್ಲಿಸಿ ಹಣ ಪಡೆಯುತ್ತಿರುವ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ಲಭ್ಯವಾಗಿದೆ. ಈ ಹಿನ್ನೆಲೆ ಕ್ಯಾಂಟೀನ್‌ಗಳಲ್ಲಿ ನಿತ್ಯ ಎಷ್ಟು ಊಟ-ತಿಂಡಿ ಮಾರಾಟವಾಗುತ್ತಿದೆ ಎಂಬುದನ್ನು ಗಮನಿಸಲು ಮಾರ್ಷಲ್‌ಗಳನ್ನು ನೇಮಕ ಮಾಡಲಾಗಿತ್ತು. ಆದರೆ ಕೆಲವು ಕಡೆ ಮಾರ್ಷಲ್‌ಗಳು ಕೂಡ ಗುತ್ತಿಗೆದಾರರ ಜತೆ ಕೈಜೋಡಿಸಿ ಸರಿಯಾದ ಲೆಕ್ಕ ನೀಡುತ್ತಿಲ್ಲ ಎಂಬ ಆರೋಪಗಳು ಕೇಳಿಬಂದಿವೆ.

ಈ ಹಿನ್ನೆಲೆ ಮಾರ್ಷಲ್ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದ್ದು, ಈಗ ತಂತ್ರಜ್ಞಾನ ಬಳಕೆ ಮಾಡುವ ಬಗ್ಗೆ ಜಿಬಿಎ ತೀರ್ಮಾನಿಸಿದೆ. ಎಲ್ಲಾ ಇಂದಿರಾ ಕ್ಯಾಂಟೀನ್‌ಗಳಲ್ಲಿ ಎಐ ಆಧಾರಿತ ಕ್ಯಾಮೆರಾಗಳನ್ನು ಅಳವಡಿಸಿ, ದಿನವೂ ಎಷ್ಟು ಮಂದಿ ಊಟ-ತಿಂಡಿ ಪಡೆಯುತ್ತಾರೆ ಎಂಬುದನ್ನು ಸ್ವಯಂಚಾಲಿತವಾಗಿ ದಾಖಲಿಸುವ ವ್ಯವಸ್ಥೆ ಮಾಡಲಾಗುವ ಸಾಧ್ಯತೆ ಇದೆ. ಎಐ ಕ್ಯಾಮೆರಾಗಳಿಂದ ಸಿಗುವ ಮಾಹಿತಿಯ ಆಧಾರದ ಮೇಲೆ ಗುತ್ತಿಗೆದಾರರಿಗೆ ಬಿಲ್ ಮೊತ್ತ ಪಾವತಿಸುವ ಹೊಸ ವ್ಯವಸ್ಥೆ ಜಾರಿಗೆ ತರಲು ಜಿಬಿಎ ಯೋಜನೆ ರೂಪಿಸುತ್ತಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಇಂದಿರಾ ಕ್ಯಾಂಟೀನ್‌ಗಳಲ್ಲಿ ಕಾರ್ಯನಿರ್ವಹಿಸಿತ್ತಿರುವ ಮಾರ್ಷಲ್‌ಗಳನ್ನು ತೆಗೆದು ಹಾಕಲು ಈಗಾಗಲೇ ಜಿಬಿಎ ಮುಖ್ಯ ಅಯುಕ್ತರು ಎಲ್ಲಾ ನಗರಪಾಲಿಕೆ ಅಯುಕ್ತರಿಗೆ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಡಿಜಿಟಲ್ ಪಾವತಿ ಜಾಗೃತಿ ವಾಹನಕ್ಕೆ ಚಾಲನೆ

ಬೆಂಗಳೂರು: ಡಿಜಿಟಲ್ ಪಾವತಿ ವ್ಯವಸ್ಥೆಗಳ ಸುರಕ್ಷತೆ ಮತ್ತು ಸುಭದ್ರ ಬಳಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಚ್ 9 ರಿಂದ 15ರವರೆಗೆ ಡಿಜಿಟಲ್ ಪಾವತಿ ಜಾಗೃತಿ ಸಪ್ತಾಹವನ್ನು ಘೋಷಿಸಿದೆ. ಇದರ ಅಂಗವಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರಾಜ್ಯಾದ್ಯಂತ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಈ ಕಾರ್ಯಕ್ರಮದ ಭಾಗವಾಗಿ ಮಂಗಳವಾರ ಬೆಂಗಳೂರಿನ ಎಸ್‌ಬಿಐ ಸ್ಥಳೀಯ ಪ್ರಧಾನ ಕಚೇರಿಯಲ್ಲಿ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ ಜೂಹಿ ಸ್ಮಿತಾ ಸಿನ್ಹಾ ಜಾಗೃತಿ ವಾಹನಕ್ಕೆ ಹಸಿರು ನಿಶಾನೆ ತೋರಿದರು. ಈ ವಾಹನವು ನಗರಾದ್ಯಂತ ಸಂಚರಿಸಿ ಸಾರ್ವಜನಿಕರಲ್ಲಿ ಡಿಜಿಟಲ್ ಪಾವತಿ ವಿಧಾನಗಳು ಹಾಗೂ ಸೈಬರ್ ವಂಚನೆ ತಡೆಗಟ್ಟುವ ಬಗ್ಗೆ ಜಾಗೃತಿ ಮೂಡಿಸಲಿದೆ.

ಈ ಕುರಿತು ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ ಜೂಹಿ ಸ್ಮಿತಾ ಸಿನ್ಹಾ ಮಾತನಾಡಿ, ದೇಶದ ಅತಿದೊಡ್ಡ ಗ್ರಾಹಕ ನೆಲೆಗೆ ಸೇವೆ ನೀಡುತ್ತಿರುವ ಬ್ಯಾಂಕಿನ ಪ್ರತಿಯೊಬ್ಬ ಉದ್ಯೋಗಿಯು ಗ್ರಾಹಕರಿಗೆ ಸುರಕ್ಷಿತ ಡಿಜಿಟಲ್ ಬ್ಯಾಂಕಿಂಗ್ ಬಗ್ಗೆ ತಿಳುವಳಿಕೆ ನೀಡುವುದು ಮಹತ್ವದ ಜವಾಬ್ದಾರಿಯಾಗಿದೆ. ಡಿಜಿಟಲ್ ವಹಿವಾಟು ಮಾಡುವಾಗ ಗ್ರಾಹಕರು ಹೆಚ್ಚಿನ ಜಾಗ್ರತೆ ವಹಿಸಬೇಕು. ಒಟಿಪಿಯನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ, ಅಪರಿಚಿತ ಲಿಂಕ್‌ಗಳ ಮೇಲೆ ಕ್ಲಿಕ್ ಮಾಡಬೇಡಿ ಎಂಬಂತಹ ಸರಳ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವ ಮೂಲಕ ಸೈಬರ್ ವಂಚನೆಗಳಿಂದ ತಪ್ಪಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಮಂಗಳವಾರ ಬೆಂಗಳೂರಿನ ಎಸ್‌ಬಿಐ ಸ್ಥಳೀಯ ಪ್ರಧಾನ ಕಚೇರಿಯಲ್ಲಿ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ ಜೂಹಿ ಸ್ಮಿತಾ ಸಿನ್ಹಾ ಜಾಗೃತಿ ವಾಹನಕ್ಕೆ ಹಸಿರು ನಿಶಾನೆ ನೀಡಿದರು.

ಇದೇ ವೇಳೆ ಕರ್ನಾಟಕ ರಾಜ್ಯದಾದ್ಯಂತ ಬಸ್ ನಿಲ್ದಾಣಗಳಲ್ಲಿ 680 ಪರದೆಗಳು, ರೈಲ್ವೆ ನಿಲ್ದಾಣಗಳಲ್ಲಿ 150 ಪರದೆಗಳು ಹಾಗೂ ವಿಮಾನ ನಿಲ್ದಾಣಗಳಲ್ಲಿ 7 ಪರದೆಗಳ ಮೂಲಕ ಶೈಕ್ಷಣಿಕ ವಿಡಿಯೊಗಳನ್ನು ಪ್ರದರ್ಶಿಸಿ ಸಾರ್ವಜನಿಕರಿಗೆ ಸೈಬರ್ ಜಾಗೃತಿ ಸಂದೇಶಗಳನ್ನು ಪ್ರಸಾರ ಮಾಡಲಾಗುತ್ತಿದೆ. ಈ ಉಪಕ್ರಮಗಳ ಮೂಲಕ ಸುರಕ್ಷಿತ ಡಿಜಿಟಲ್ ಪಾವತಿ ವಿಧಾನಗಳ ಬಗ್ಗೆ ಪ್ರತಿಯೊಬ್ಬ ಬಳಕೆದಾರನಿಗೂ ಜಾಗೃತಿ ಮೂಡಿಸುವ ಗುರಿಯನ್ನು ಬ್ಯಾಂಕ್ ಹೊಂದಿದೆ ಎಂದರು.

ಕೇಂದ್ರ ಸರಕಾರದ ಆಡಳಿತ ವೈಫಲ್ಯದಿಂದ ಸಿಲಿಂಡರ್ ಬೆಲೆ ಏರಿಕೆ: ಮಂಜುನಾಥ್ ಗೌಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ಭವನದಲ್ಲಿ ಕೇಂದ್ರ ಬಿಜೆಪಿ ಸರಕಾರ ಅಡುಗೆ ಅನಿಲ ದರ ಏರಿಕೆ ಮಾಡಿರುವುದನ್ನು ಖಂಡಿಸಿ ರಾಜ್ಯ ಯುವ ಕಾಂಗ್ರೆಸ್ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಸ್.ಮಂಜುನಾಥ್ ಗೌಡರವರ ನೇತೃತ್ವದಲ್ಲಿ ವಿನೂತವಾಗಿ ಪ್ರತಿಭಟನೆ ಮಾಡಿದರು.

ಎಚ್.ಎಸ್ ಮಂಜುನಾಥ್ ಗೌಡರು ಮಾತನಾಡಿ, ಕೇಂದ್ರ ಬಿಜೆಪಿ ಸರಕಾರ ಕಳೆದ 11 ವರ್ಷಕ್ಕೂ ಹೆಚ್ಚು ಅವಧಿಯ ಆಡಳಿತದಲ್ಲಿ ಬೆಲೆ ಏರಿಕೆಯನ್ನು ಮಾಡಿರುವುದನ್ನು ಬಿಟ್ಟರೆ ಬೇರೆ ಏನು ಸಾಧನೆ ಮಾಡಿಲ್ಲ.ಅಡುಗೆ ಅನಿಲ ಬೆಲೆ ಏರಿಕೆಯಿಂದ ಬಡವರು, ಮಧ್ಯಮವರ್ಗದವರಿಗೆ ಬಹಳ ಸಂಕಷ್ಟವಾಗಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರ ಆಡಳಿತವಿದ್ದಾಗ 400 ರು. ಸಿಲಿಂಡರ್ ಬೆಲೆ ಇತ್ತು ಇಂದಿನ ಬಿಜೆಪಿ ಕೇಂದ್ರ ಸರಕಾರದ ಆಡಳಿತದಲ್ಲಿ ಸಿಲಿಂಡರ್ ಬೆಲೆ ಏರಿಕೆಯಾಗಿದೆ. ಬಿಜೆಪಿ ಸರಕಾರ ಆಡಳಿತದ ವೈಫಲ್ಯದಿಂದ ಬೆಲೆ ಏರಿಕೆಯಾಗಿದೆ. ದೇಶದ ಆರ್ಥಿಕ ಪರಿಸ್ಥಿತಿ ಶೋಚನೀಯ, ಉದ್ಯೋಗ ಸೃಷ್ಟಿಯಿಲ್ಲ ನಿರುದ್ಯೋಗ ತಾಂಡವವಾಡುತ್ತಿದೆ. ಪ್ರತಿವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿ ಭರವಸೆಯಾಗಿ ಉಳಿದಿದೆ. ವಿದೇಶದಿಂದ ಕಪ್ಪು ಹಣ ಒಂದು ನಯಾಪೈಸೆ ಬಂದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರಕಾರ ಅಡುಗೆ ಅನಿಲದ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ ಕೆಪಿಸಿಸಿ ಯುವ ಘಟಕದ ಅಧ್ಯಕ್ಷ ಎಚ್.ಎಸ್.ಮಂಜುನಾಥ್ ಗೌಡ ನೇತೃತ್ವದಲ್ಲಿ ನಗರದ ಮೌರ್ಯ ವೃತದ ಬಳಿ ಬೃಹತ್ ಪ್ರತಿಭಟನೆ ನಡೆಯಿತು. ಪ್ರತಿಭಟನೆಯಲ್ಲಿ ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ಜ್ಯೋತಿಷ್, ರಾಜ್ಯ ಉಪಾಧ್ಯಕ್ಷೆ ದಿವ್ಯಾ ಹಾಗೂ ನಿಖಿಲ್ ಶಂಕರ್ ಸೇರಿದಂತೆ ಬೆಂಗಳೂರು ವ್ಯಾಪ್ತಿಯ ಐದು ಜಿಲ್ಲೆಗಳ ಜಿಲ್ಲಾ, ವಿಧಾನಸಭಾ ಹಾಗೂ ಬ್ಲಾಕ್ ಸಮಿತಿಗಳ ನೂರಾರು ಮುಖಂಡರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ರಾಜ್ಯ ಸರಕಾರ ಬಡವರ ಏಳಿಗೆಗಾಗಿ , ಆರ್ಥಿಕವಾಗಿ ಸಬಲರಾಗಿ ಮಾಡಲು ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ತಂದಿದೆ ಅದರೆ ಬಿಜೆಪಿ ಕೇಂದ್ರ ಸರ್ಕಾರ ಬಡವರ ಹೊಟ್ಟೆಯ ಮೇಲೆ ಬರೆ ಎಳೆಯುತ್ತಿದ್ದಾರೆ. ಪ್ರಧಾನಿ ನರೇಂದ್ರಮೋದಿರವರು ದೇಶದ ಜನತೆಗೆ ಸುಳ್ಳು ಹೇಳಿ ಜನರನ್ನು ಸಂಕಷ್ಟಕ್ಕೆ ದೂಡಿದ್ದಾರೆ. ಜನಸಾಮಾನ್ಯರ ಧ್ವನಿಯಾಗಿ ಯುವ ಕಾಂಗ್ರೆಸ್ ಪಕ್ಷ ಹೋರಾಟ ಮಾಡುತ್ತಿದೆ. ಕೇಂದ್ರ ಸರಕಾರದ ಬೆಲೆ ಏರಿಕೆ ಖಂಡಿಸಿ ನಮ್ಮ ಪ್ರತಿಭಟನೆ ಎಂದು ಹೇಳಿದರು.

ನಗರದ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಕರ್ನಾಟಕ ರಾಜ್ಯ ಶುಶ್ರೂಷ್ ಪರಿಷತ್ ನೊಂದಣೆ ನವೀಕರಣ ತಂತ್ರಜ್ಞಾನದ ಕಾರ್ಯಗಾರ ಕಾರ್ಯಕ್ರಮವನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಉದ್ಘಾಟಿಸಿದರು. ಈ ವೇಳೆ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಬಿ.ಎಲ್. ಸುಜಾತಾ ರಾಥೋಡ್, ಇಲಾಖೆಯ ಹಣಕಾಸು ಸಲಹೆಗಾರ ಡಾ. ಹನುಮಂತೇಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಾ.15ರಿಂದ ಬಂಡಾಯ ಸಾಹಿತ್ಯ ಹೊಸ ತಲೆಮಾರು ಅಭಿಯಾನ

ಬೆಂಗಳೂರು: ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯು ಬಂಡಾಯ ಸಾಹಿತ್ಯ ಹೊಸ ತಲೆಮಾರು ಎಂಬ ಅಭಿಯಾನವನ್ನು ಆರಂಭಿಸಿ, ಹೊಸ ತಲೆಮಾರಿನ ಲೇಖಕರು, ಚಿಂತಕರು ಹಾಗೂ ಕ್ರಿಯಾಕರ್ತರಿಗೆ ವೇದಿಕೆ ಒದಗಿಸುವ ಉದ್ದೇಶದಿಂದ ರಾಜ್ಯದ ವಿವಿಧ ಕಡೆ ಚಿಂತನಾ ಕಾರ್ಯಕ್ರಮಗಳನ್ನು ಆಯೋಜಿಸಲು ಮುಂದಾಗಿದೆ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಈ ಅಭಿಯಾನದ ಅಂಗವಾಗಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಹೊಸ ತಲೆಮಾರಿಗೆ ಸೇರಿದವರಾಗಿರಬೇಕು ಎಂಬ ನಿರ್ಧಾರ ಕೈಗೊಳ್ಳಲಾಗಿದೆ. ಹಿರಿಯರು ಅನುಭವದ ನುಡಿಗಳನ್ನು ಹಂಚಿಕೊಳ್ಳುವ ಜತೆಗೆ, ಹೊಸ ತಲೆಮಾರಿನವರಿಗೆ ಅವಕಾಶ ನೀಡಿ ಅವರಲ್ಲಿ ವೈಚಾರಿಕ ಜಾಗೃತಿ ಮೂಡಿಸುವುದು ಈ ಅಭಿಯಾನದ ಮುಖ್ಯ ಆಶಯವಾಗಿದೆ. ನಮ್ಮ ಸಮಕಾಲೀನ ಸಂದರ್ಭಕ್ಕೆ ಸಂಬಂಧಿಸಿದ ಪ್ರಗತಿಪರ ವಿಚಾರಧಾರೆಗಳ ಕುರಿತು ಚರ್ಚಿಸಲು ರಾಜ್ಯದ ಹಲವೆಡೆ ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತಿದೆ. ಈ ಸರಣಿಯ ಮೊದಲ ಕಾರ್ಯಕ್ರಮವು ಮಾ. 15ರಂದು ನಗರದ ಗಾಂಧಿ ಭವನದಲ್ಲಿ ನಡೆಯಲಿದೆ. ಜನ ಚಳವಳಿಗಳು ಮತ್ತು ಸಾಹಿತ್ಯ ಎಂಬ ವಿಷಯದಡಿ ನಡೆಯುವ ಈ ವಿಚಾರ ಸಂಕಿರಣದಲ್ಲಿ ರಾಜ್ಯ, ರಾಷ್ಟ್ರ ಹಾಗೂ ಅಂತಾರರಾಷ್ಟ್ರೀಯ ಮಟ್ಟದ ಜನಚಳವಳಿಗಳು ಮತ್ತು ಸಾಹಿತ್ಯದ ನಡುವಿನ ಸಂಬಂಧಗಳನ್ನು ಚರ್ಚಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಕವಿಗೋಷ್ಠಿಯೂ ನಡೆಯಲಿದೆ ಎಂದರು.

> ಮುಂದಿನ ಮೂರು ನಾಲ್ಕು ತಿಂಗಳಲ್ಲಿ ರಾಯಚೂರು, ಚಿತ್ರದುರ್ಗ, ತುಮಕೂರು, ಹಾಸನ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಸಹ ಈ ಅಭಿಯಾನದ ಭಾಗವಾಗಿ ವಿಚಾರ ಸಂಕಿರಣಗಳನ್ನು ಆಯೋಜಿಸಲು ಸಂಘಟನೆ ಯೋಜಿಸಿದೆ. ಈ ಮೂಲಕ ವೈಚಾರಿಕ ಪ್ರಜ್ಞೆಯ ಜಾಗೃತಿಗೆ ಉತ್ತೇಜನ ನೀಡುವ ಉದ್ದೇಶ ಹೊಂದಿದ್ದು, ನಂತರ ಇನ್ನಷ್ಟು ಜಿಲ್ಲೆಗಳಲ್ಲೂ ಅಭಿಯಾನವನ್ನು ವಿಸ್ತರಿಸಲಾಗುವುದು.
>
> - ಬರಗೂರು ರಾಮಚಂದ್ರಪ್ಪ ಸಾಹಿತಿ

ಸಮೀಕ್ಷೆ ನಡೆಸುವಾಗ ಪಾರ್ಕಿಂಗ್ ಜಾಗ, ಮೆಟ್ಟಿಲು ಪರಿಗಣಿಸುವುದಿಲ್ಲ: ಡಿಕೆಶಿ

ಆಸ್ತಿ ತೆರಿಗೆ ಲೋಪದೋಷ ನಿವಾರಣೆಗೆ ಕ್ರಮ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಬೆಂಗಳೂರಿನಲ್ಲಿ ಡ್ರೋನ್ ಸರ್ವೆ ಮೂಲಕ ಆಸ್ತಿ ತೆರಿಗೆ ಮಾಡುತ್ತಿರುವ ವ್ಯವಸ್ಥೆಯಲ್ಲಿ ಲೋಪ ದೋಷಗಳು ಕಂಡು ಬಂದರೆ ಸರಿಪಡಿಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ವಿಧಾನಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ಶಾಸಕ ಸಿ.ಕೆ.ರಾಮಮೂರ್ತಿ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಸಮೀಕ್ಷೆ ನಡೆಸುವಾಗ ಪಾರ್ಕಿಂಗ್ ಜಾಗ, ಮೆಟ್ಟಿಲು ಹಾಗೂ ಇತರ ಅಂಶಗಳನ್ನು ಪರಿಗಣಿಸುವುದಿಲ್ಲ. ಎಲ್ಲಿಯಾದರೂ ಲೋಪಗಳಾಗಿದ್ದರೆ ಸಂಬಂಧಪಟ್ಟ ಆಸ್ತಿ ಮಾಲೀಕರು ಲಿಖಿತ ಆಕ್ಷೇಪಣೆ ಸಲ್ಲಿಸಬಹುದು. ಅದನ್ನು ಬಗೆಹರಿಸಲು ತಾವು ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ ಎಂದರು.

ಇದಕ್ಕೂ ಮೊದಲು ಪ್ರಶ್ನೆ ಕೇಳಿದ ಶಾಸಕ ಸಿ.ಕೆ. ರಾಮಮೂರ್ತಿ ಡ್ರೋನ್ ಮೂಲಕ ನೋಟಿಸ್ ನೀಡಲಾಗುತ್ತಿದೆ. ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯಿರಿ ಪದ್ಧತಿಯಡಿ ಈಗಾಗಲೇ ತೆರಿಗೆ ಪಾವತಿಸಿರುವವರಿಗೆ ಹೊಸ ಸಮೀಕ್ಷೆ ಆಘಾತ ಮೂಡಿಸಿದೆ. ಕೂಡಲೇ ಡ್ರೋಣ್ ಸಮೀಕ್ಷೆ ಹಿಂಪಡೆಯಬೇಕು ಎಂದು ಆಗ್ರಹಿಸಿದ್ದರಲ್ಲದೆ, 46,000 ಮನೆಗಳಿಗೆ ನೋಟಿಸ್ ನೀಡಲಾಗಿದೆ. ಎಸ್‌ಎಂಎಸ್ ಮೂಲಕ, ಐವಿಆರ್ ಕರೆಗಳ ಮೂಲಕ ಆಸ್ತಿ ತೆರಿಗೆ ಪಾವತಿಸುವಂತೆ ಒತ್ತಡ ಹಾಕಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದರು.

ಬಿಜೆಪಿಯ ಸುರೇಶ್ ಕುಮಾರ್, ರಾಜ್ಯ ಸರಕಾರ ತನ್ನ ಆರ್ಥಿಕ ಸಂಪನ್ಮೂಲಕ್ಕಾಗಿ ಜನರ ಮೇಲೆ ತೆರಿಗೆ ಭಯೋತ್ಪಾದನೆ ನಡೆಸುತ್ತಿದೆ. ನಾಗರೀಕರು ಮತ್ತಷ್ಟು ಬಸವಳಿದಿದ್ದಾರೆ ಎಂದರು. ಪ್ರತಿಪಕ್ಷದ ನಾಯಕ ಆರ್.ಅಶೋಕ ಡ್ರೋನ್ ಸರ್ವೆಯನ್ನು ಕೈಬಿಡಬೇಕು ಭೌತಿಕ ಸಮೀಕ್ಷೆ ಮಾಡಬೇಕು. ಆಕ್ಷೇಪಣೆ ಸಲ್ಲಿಸಲು ವೆಬ್ ಸೈಟ್‌ನಲ್ಲಿ ಅಥವಾ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಅವಕಾಶ ಇಲ್ಲ. ಕೂಡಲೇ ಅವಕಾಶ ಮಾಡಿಕೊಡ ಬೇಕು ಎಂದು ಆಗ್ರಹಿಸಿದ್ದರು. ಹೊಸದಾಗಿ ರಚಿಸಿರುವ 5 ಪಾಲಿಕೆಗಳು ತಮಗೆ ತಲಾ 500 ಕೋಟಿ ಅನುದಾನ ನೀಡಬೇಕು ಎಂದು ಬೇಡಿಕೆ ಮಂಡಿಸಿವೆ. ಸರಕಾರ ಹಣ ನೀಡುವ ಸ್ಥಿತಿಯಲ್ಲಿ ಇಲ್ಲ. ಇದಕ್ಕಾಗಿ ಜನರಿಂದಲೇ ವಸೂಲಿ ಮಾಡಲು ಬೇರೆ ಬೇರೆ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಎಂದು ಆರೋಪಿಸಿದರು.

ಇದಕ್ಕೆ, ಡಿಸಿಎಂ ಪ್ರತಿಕ್ರಿಯೆ ನೀಡಿ, ಡ್ರೋಣ್ ಮೂಲಕ ಯಾರಿಗೂ ನೋಟಿಸ್ ನೀಡುತ್ತಿಲ್ಲ, ಸಮೀಕ್ಷೆ ಮಾತ್ರ ನಡೆಸಲಾಗುತ್ತಿದೆ. ಈ ಹಿಂದೆ ಬಿಜೆಪಿ ಸರಕಾರ 2020ರಲ್ಲಿ ರೂಪಿಸಿದ್ದ ಕಾನೂನಿನ ಅನುಸಾರವೇ ನಾವು ಕ್ರಮ ಕೈಗೊಳ್ಳುತ್ತಿದ್ದೇವೆ. ಆ ಕಾನೂನಿನಲ್ಲಿ ಎರಡು ವರ್ಷಕ್ಕೆ ಶೇಕಡ 25ರಷ್ಟು ದಂಡ ವಿಧಿಸಲು ಅವಕಾಶ ಇತ್ತು. ಅದನ್ನು ತಾವು ಶೇ.9ಕ್ಕೆ ಕಡಿಮೆ ಮಾಡಿದ್ದೇನೆ. 23 ಸಾವಿರ ಜನರಿಗೆ ನೋಟಿಸ್ ನೀಡಲಾಗಿದೆ. 680 ಕೋಟಿ ರು. ತೆರಿಗೆ ವಸೂಲಿಯಾಗಬೇಕೆಂದು ಅಂದಾಜಿಸಲಾಗಿದೆ. ಇದರಲ್ಲಿ ಯಾವುದೇ ಲೋಪಗಳಿದ್ದರೂ ಆಕ್ಷೇಪಣೆ ಸಲ್ಲಿಸಬಹುದು ಅದನ್ನು ಸರಿಪಡಿಸಿ ಕೊಡುತ್ತೇವೆ, ಅನಗತ್ಯವಾಗಿ ದಂಡ ಹಾಕುವುದಿಲ್ಲ. ನಿಯಮಗಳ ಉಲ್ಲಂಘನೆಯಾಗಿದ್ದರೆ ಮಾತ್ರ ಪರಿಗಣಿಸಲಾಗುತ್ತಿದೆ. ಅದರಲ್ಲೂ ಹೆಚ್ಚು ಕಡಿಮೆಯಾಗಿದ್ದರೆ ಮರುಪರಿಶೀಲನೆ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಒಂಟಿ ಮನೆ ನಿರ್ಮಾಣಕ್ಕೆ ಹಣ ಬಿಡುಗಡೆ: ಡಿಸಿಎಂ

ಬೆಂಗಳೂರು ನಗರದಲ್ಲಿ ಒಂಟಿ ಮನೆಗಳ ನಿರ್ಮಾಣಕ್ಕೆ ಹಳೆಯ ಪದ್ಧತಿಯ ಅಡಿಯಲ್ಲಿ ಹಣ ಬಿಡುಗಡೆ ಮಾಡುವುದಾಗಿ ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಭರವಸೆ ನೀಡಿದರು.

ವಿಧಾನಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ದಾಸರಹಳ್ಳಿ ಕ್ಷೇತ್ರದ ಶಾಸಕ ಮುನಿರಾಜು ಒಂಟಿ ಮನೆಗಳಿಗೆ ಬಿಬಿಎಂಪಿಯಿಂದ ನೀಡುವ ಅನುದಾನ ಈವರೆಗೂ ಬಾಕಿ ಉಳಿಸಿಕೊಳ್ಳಲಾಗಿದೆ. ಐದು ಹಂತದಲ್ಲಿ 5 ಲಕ್ಷ ಹಣ ಬಿಡುಗಡೆ ಮಾಡಬೇಕಿದ್ದು ಆದರೆ ಮನೆ ನಿರ್ಮಾಣ ಪೂರ್ಣಗೊಂಡಿದ್ದರೂ ಈವರೆಗೂ ಬಡ ಫಲಾನುಭವಿಗಳಿಗೆ ಅನುದಾನ ತಲುಪಿಲ್ಲ ಎಂದು ಆಕ್ಷೇಪಿಸಿದರು.

ಉತ್ತರ ನೀಡಿದ ಡಿ.ಕೆ.ಶಿವಕುಮಾರ್ ಅವರು 2019 ರಲ್ಲಿ ಬಿಬಿಎಂಪಿಯಿಂದ ಒಂಟಿ ಮನೆ ಯೋಜನೆಯನ್ನು ಆರಂಭಿಸಲಾಗಿದ್ದು 600 ಚದುರ ಅಡಿ ವಿಸ್ತೀರ್ಣದಲ್ಲಿ ಮೂರು ಲಕ್ಷ ವಾರ್ಷಿಕ ಆದಾಯಕ್ಕಿಂತ ಕಡಿಮೆ ದುಡಿಮೆಯ ಬಡವರಿಗೆ ಈ ಸೌಲಭ್ಯ ದೊರೆಯುತ್ತಿದೆ. ಮನೆ ಇಲ್ಲದವರಿಗೆ ಮನೆ ನಿರ್ಮಿಸಿಕೊಳ್ಳಲು ನಿರ್ಮಾಣದಿಂದ ಕೊನೆಯ ಹಂತದವರೆಗೂ ಐದು ಹಂತಗಳಲ್ಲಿ 5 ಲಕ್ಷಗಳನ್ನು ನೀಡಲಾಗುತ್ತದೆ. ಹಣ ಬಿಡುಗಡೆಯಾಗಬೇಕಾದರೆ ಮೊಬೈಲ್ ಅಪ್ಲಿಕೇಶನ್ ನಲ್ಲಿ ಮಾಹಿತಿಗಳನ್ನು ಭರ್ತಿ ಮಾಡಬೇಕು ಅಡಿಪಾಯ ಹಾಕಿದ್ದಾಗ ಗೋಡೆ ಕಟ್ಟಿದಾಗ ಮೇಲ್ಚಾವಣಿ ಕೆಲಸ ಮುಗಿದಾಗ ಹಂತ ಹಂತವಾಗಿ ಮೊಬೈಲ್ ಫೋಟೋ ತೆಗೆದು ಜಿಪಿಎಸ್ ನೊಂದಿಗೆ ಅಪ್‌ಲೋಡ್ ಮಾಡಬೇಕು. ಬಡವರಿಗೆ ಈ ಅಪ್ಲಿಕೇಶನ್ ಬಳಸಲು ಗೊತ್ತಿಲ್ಲ ತಾಂತ್ರಿಕ ಸಮಸ್ಯೆಯಿಂದಾಗಿ 2023ರಿಂದಲೂ ಹಣ ಬಿಡುಗಡೆಯಾಗದೆ ಬಾಕಿ ಉಳಿದಿದೆ. ಶಾಸಕರು ಇದನ್ನು ತಮ್ಮ ಗಮನಕ್ಕೆ ತಂದು ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಹೊಸ ಪದ್ಧತಿಯನ್ನು ಬದಿಗಿರಿಸಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಹಂತದಲ್ಲೇ ಆಶ್ರಯ ಮನೆಗಳಿಗೆ ಹಣ ನೀಡುವಂತೆ ಹಳೆಯ ಪದ್ಧತಿಯಲ್ಲಿಯೇ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಬೆಂಗಳೂರಿನಲ್ಲಿ 1229 ಒಂಟಿ ಮನೆಗಳಿಗೆ ಅನುದಾನ ಮಂಜೂರಾಗಿದೆ ಮತ್ತಷ್ಟು ಸಲಹೆ ಸೂಚನೆಗಳಿಗಾಗಿ ಬಿಬಿಎಂಪಿಯ ಬಜೆಟ್ ತಯಾರಿಕೆಯ ವೇಳೆ ಎಲ್ಲಾ ಶಾಸಕರ ಜೊತೆಯೂ ಚರ್ಚೆ ನಡೆಸುವುದಾಗಿ ಡಿಸಿಎಂ ಭರವಸೆ ನೀಡಿದರು.

ಸಮಾಚಾರ ಸಣ್ಣದಲ್ಲ

ಪರಿಷತ್ ಚುನಾವಣೆ ಬಿಜೆಪಿ ಪಟ್ಟಿ ಬಿಡುಗಡೆ

ಬೆಂಗಳೂರು: ಕರ್ನಾಟಕ ವಿಧಾನಪರಿಷತ್ ನಾಲ್ಕು ಕ್ಷೇತ್ರಗಳ ಪೈಕಿ ಮೂರು ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿಗಳ ಹೆಸರು ಘೋಷಣೆಯಾಗಿದೆ. ಒಟ್ಟು ನಾಲ್ಕು ಸೀಟುಗಳ ಪೈಕಿ ಒಂದು ಸ್ಥಾನವನ್ನು ಮಿತ್ರ ಪಕ್ಷ ಜೆಡಿಎಸ್‌ಗೆ ಬಿಟ್ಟುಕೊಟ್ಟಿದ್ದು, ಇನ್ನುಳಿದ ಮೂರು ಈಶಾನ್ಯ ಶಿಕ್ಷಕರ ಕ್ಷೇತ್ರ, ಪೂರ್ವ ಪದವೀಧರ ಕ್ಷೇತ್ರ ಹಾಗೂ ಆಗ್ನೇಯ ಪದವೀಧರ ಕ್ಷೇತ್ರಕ್ಕೆ ಬಿಜೆಪಿ ತನ್ನ ಅಭ್ಯರ್ಥಿಗಳ ಪಟ್ಟಿ ಪ್ರಕಟ ಮಾಡಿದೆ. ಬೆಂಗಳೂರು ಶಿಕ್ಷಕರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದೆ. ಇದರೊಂದಿಗೆ ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಂಡಿದ್ದ ಜೆಡಿಎಸ್ ಹಾಗೂ ಬಿಜೆಪಿ ವಿಧಾನ ಪರಿಷತ್ ಚುನಾವಣೆಗೂ ತಮ್ಮ ಮೈತ್ರಿ ಮುಂದುವರಿಸಿದೆ.

ಯಾರು ಯಾವ ಕ್ಷೇತ್ರಕ್ಕೆ?: ಈಶಾನ್ಯ ಶಿಕ್ಷಕರ ಕ್ಷೇತ್ರಕ್ಕೆ ಸುಶೀಲ್ ನಮೋಶಿ, ಪೂರ್ವ ಪದವೀಧರ ಕ್ಷೇತ್ರಕ್ಕೆ ಎಸ್.ವಿ ಸಂಕನೂರು ಹಾಗೂ ಆಗ್ನೇಯ ಪದವೀಧರ ಕ್ಷೇತ್ರದ ಟಿಕೆಟ್ ಕೆ.ಎಂ.ಸುರೇಶ್ ಅವರಿಗೆ ನೀಡಲಾಗಿದೆ. ಒಟ್ಟು ನಾಲ್ಕು ಕ್ಷೇತ್ರಗಳಲ್ಲಿ ಜೆಡಿಎಸ್ ಎರಡು ಸ್ಥಾನಕ್ಕೆ ಬೇಡಿಕೆ ಇಟ್ಟಿತ್ತು. ಬೆಂಗಳೂರು ಶಿಕ್ಷಕರ ಹಾಗೂ ಆಗ್ನೇಯ ಪದವೀಧರ ಪದವೀಧರ ಕ್ಷೇತ್ರಗಳನ್ನು ಜೆಡಿಎಸ್ ಕೇಳಿತ್ತು. ಆದ್ರೆ, ಆಗ್ನೇಯ ಪದವೀಧರ ಕ್ಷೇತ್ರವನ್ನು ಬಿಜೆಪಿಯ ಚಿದಾನಂದಗೌಡ ಪ್ರತಿನಿಧಿಸುತ್ತಿದ್ದಾರೆ. ಹೀಗಾಗಿ ಈ ಕ್ಷೇತ್ರವನ್ನು ಬಿಜೆಪಿ ಬಿಟ್ಟು ಕೊಟ್ಟಿಲ್ಲ. ಇನ್ನು ಕಾಂಗ್ರೆಸ್‌ನ ಪುಟ್ಟಣ್ಣ ಇರುವ ಬೆಂಗಳೂರು ಶಿಕ್ಷಕರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲಾಗಿದೆ. 2020ರಲ್ಲಿ ಪಶ್ಚಿಮ ಪದವೀಧರ ಕ್ಷೇತ್ರ, ಆಗ್ನೇಯ ಪದವೀಧರರ ಕ್ಷೇತ್ರ, ಈಶಾನ್ಯ ಶಿಕ್ಷಕರ ಕ್ಷೇತ್ರ ಮತ್ತು ಬೆಂಗಳೂರು ಶಿಕ್ಷಕರ ಕ್ಷೇತ್ರಗಳಿಗೆ ಚುನಾವಣೆಗಳು ನಡೆದಿತ್ತು. ಎರಡು ಪದವೀಧರರ ಕ್ಷೇತ್ರಗಳಿಂದ ಎಸ್.ವಿ.ಸಂಕನೂರು ಮತ್ತು ಚಿದಾನಂದ್ ಗೌಡ ಆಯ್ಕೆಯಾಗಿದ್ದರು. ಎರಡು ಶಿಕ್ಷಕರ ಕ್ಷೇತ್ರಗಳಿಂದ ಶಶಿಲ್ ನಮೋಶಿ ಮತ್ತು ಪುಟ್ಟಣ್ಣ ಆಯ್ಕೆಯಾಗಿದ್ದರು. ನಾಲ್ವರೂ ಬಿಜೆಪಿಯವರಾಗಿದ್ದರು. ಆದರೆ ಪುಟ್ಟಣ್ಣ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದರು. ನಂತರ, ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಅದೇ ಕ್ಷೇತ್ರದಿಂದ ಮರು ಆಯ್ಕೆಯಾದರು. ಇವರೆಲ್ಲರ ಅವಧಿಗಳು 2026ರ ನವೆಂಬರ್ 11 ರಂದು ಕೊನೆಗೊಳ್ಳುತ್ತವೆ.

ಸರಕಾರದ ವಿರುದ್ಧ ಪ್ರತಿಪಕ್ಷಗಳಿಂದ ತೀವ್ರ ವಾಗ್ದಾಳಿ | ಅಂಕಿ ಅಂಶಗಳ ಸಮೇತ ವಿವರಣೆ

2.85 ಲಕ್ಷ ಸರಕಾರಿ ಹುದ್ದೆಗಳು ಖಾಲಿ

ವಿಧಾನ ಪರಿಷತ್: ರಾಜ್ಯ ಸರಕಾರದ ವಿವಿಧ ಇಲಾಖೆಗಳು, ನಿಗಮ- ಮಂಡಳಿಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬರೋಬ್ಬರಿ 2.85 ಲಕ್ಷ ಹುದ್ದೆಗಳ ಭರ್ತಿ ವಿಚಾರವು ವಿಧಾನ ಪರಿಷತ್ತಿನಲ್ಲಿ ತೀವ್ರ ಚರ್ಚೆಗೆ ಗ್ರಾಸವಾಯಿತು. ಈ ಸಂಬಂಧ ಮೇಲ್ಮನೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ನಿಲುವಳಿ ಸೂಚನೆ ಮಂಡಿಸಿದ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಸದನದಲ್ಲಿ ವಿಷಯ ಪ್ರಸ್ತಾಪಿಸಿದ ಛಲವಾದಿ ನಾರಾಯಣಸ್ವಾಮಿ, ರಾಜ್ಯದಲ್ಲಿ ಭೀಕರವಾಗಿ ನಿರುದ್ಯೋಗ ಸಮಸ್ಯೆಯನ್ನು ಅಂಕಿ-ಅಂಶಗಳ ಸಮೇತ ವಿವರಿಸಿದರು. ಕಳೆದ ಹಲವಾರು ವರ್ಷಗಳಿಂದ ಸರಕಾರಿ ನೇಮಕಾತಿ ಪ್ರಕ್ರಿಯೆಗಳು ಸಂಪೂರ್ಣವಾಗಿ ಸ್ಥಗಿತಗೊಂಡಿವೆ. ಇದರಿಂದಾಗಿ ಲಕ್ಷಾಂತರ ಪದವೀಧರರು ಸರಕಾರಿ ಕೆಲಸ ನಿರೀಕ್ಷೆಯಲ್ಲೇ ವಯೋಮಿತಿ ಮೀರುವ ಆತಂಕದಲ್ಲಿದ್ದಾರೆ. ಒಮ್ಮೆ ವಯೋಮಿತಿ ಮೀರಿದರೆ ಅವರು ಜೀವನಪರ್ಯಂತ ಸರಕಾರಿ ಹುದ್ದೆಯ ಕನಸಿನಿಂದ ವಂಚಿತರಾಗಬೇಕಾಗುತ್ತದೆ. ಸರಕಾರದ ಈ ವಿಳಂಬ ಧೋರಣೆಯು ಕೇವಲ ಆಡಳಿತಾತ್ಮಕ ವೈಫಲ್ಯವಲ್ಲ; ಬದಲಿಗೆ, ಇದು ಯುವ ಜನತೆಯ ಭವಿಷ್ಯದ ಜೊತೆ ನಡೆಸುತ್ತಿರುವ ಚೆಲ್ಲಾಟವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆಡಳಿತ ಯಂತ್ರ ಸಂಪೂರ್ಣ ಕುಸಿತ: ರಾಜ್ಯದ ಆಡಳಿತ ಯಂತ್ರವು ಸಿಬ್ಬಂದಿ ಕೊರತೆಯಿಂದಾಗಿ ಸಂಪೂರ್ಣವಾಗಿ ಕುಸಿದಿದೆ. ಕಂದಾಯ, ಶಿಕ್ಷಣ, ಆರೋಗ್ಯ ಮತ್ತು ಪೊಲೀಸ್ ಇಲಾಖೆಗಳಂತಹ 43 ಪ್ರಮುಖ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕ ಸೇವೆಗಳು ಕುಂಠಿತಗೊಂಡಿವೆ. ಪ್ರಸ್ತುತ ಕೆಲಸ ಮಾಡುತ್ತಿರುವ ಒಬ್ಬರೇ ನೌಕರರು ಮೂರ್ನಾಲ್ಕು ಜನರ ಜವಾಬ್ದಾರಿಯನ್ನು ನಿರ್ವಹಿಸುವ ಅನಿವಾರ್ಯತೆ ಎದುರಾಗಿದೆ. ಇದರಿಂದಾಗಿ ನೌಕರರ ಮೇಲೆ ಕೆಲಸದ ಒತ್ತಡ ಹೆಚ್ಚಾಗಿ ಅವರ ದಕ್ಷತೆಯೂ ಕುಸಿಯುತ್ತಿದೆ. ಗ್ರಾಮ ಪಂಚಾಯಿತಿಯಿಂದ ಹಿಡಿದು ಜಿಲ್ಲಾಧಿಕಾರಿ ಕಚೇರಿಯವರೆಗೆ ಸಾಮಾನ್ಯ ಜನರು ಸಣ್ಣಪುಟ್ಟ ಕೆಲಸಗಳಿಗೂ ದಿನಗಟ್ಟಲೆ ಕಾಯುವಂತಾಗಿದೆ. ಸರಕಾರದ ಮಹತ್ವಾಕಾಂಕ್ಷೆಯ ಯೋಜನೆಗಳು ತಳಮಟ್ಟದ ಜನರಿಗೆ ತಲುಪಲು ಸಿಬ್ಬಂದಿಯೇ ಇಲ್ಲದಂತಾಗಿದೆ, ಎಂದು ಅವರು ಕಿಡಿಕಾರಿದರು.

ಸರಕಾರದ ಮುಂದಿರುವ ಪ್ರಮುಖ ಆಗ್ರಹಗಳು: ಸರಕಾರವು ಕೇವಲ ಗ್ಯಾರಂಟಿ ಯೋಜನೆಗಳ ಪ್ರಚಾರದಲ್ಲಿ ಮಗ್ನವಾಗಿದ್ದು, ರಾಜ್ಯದ ಅಭಿವೃದ್ಧಿಗೆ ಪೂರಕವಾದ ಉದ್ಯೋಗ ಸೃಷ್ಟಿ ಹಾಗೂ ಖಾಲಿ ಹುದ್ದೆಗಳ ಭರ್ತಿಯನ್ನು ಮರೆತಿದೆ ಎಂದು ಟೀಕಾಪ್ರಹಾರ ನಡೆಸಿದ ವಿಪಕ್ಷ ನಾಯಕರು, ಸರಕಾರದ ಮುಂದೆ ಬೇಡಿಕೆಗಳನ್ನು ಇಟ್ಟಿದ್ದಾರೆ. ತಕ್ಷಣವೇ ಎಲ್ಲಾ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳ ಪಟ್ಟಿಯನ್ನು ಅಂತಿಮಗೊಳಿಸಿ ವಿಶೇಷ ನೇಮಕಾತಿ ಅಭಿಯಾನ ಆರಂಭಿಸಬೇಕು. ನೇಮಕಾತಿ ಪ್ರಕ್ರಿಯೆಯನ್ನು ನಿರ್ದಿಷ್ಟ ಕಾಲ ಮಿತಿಯೊಳಗೆ ಪೂರ್ಣಗೊಳಿಸಿ ಅಭ್ಯರ್ಥಿಗಳಿಗೆ ಆದೇಶ ಪತ್ರ ನೀಡಬೇಕು. ನೇಮಕಾತಿ ವಿಳಂಬದಿಂದಾಗಿ ವಯೋಮಿತಿ ಮೀರಿರುವ ಅಭ್ಯರ್ಥಿಗಳಿಗೆ ಕನಿಷ್ಠ 2ರಿಂದ 3 ವರ್ಷಗಳ ವಯೋಮಿತಿ ಸಡಿಲಿಕೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಶಿಕ್ಷಣ ಕ್ಷೇತ್ರದ ಸ್ಥಿತಿ ಶೋಚನೀಯ

ರಾಜ್ಯದ 37 ವಿಶ್ವವಿದ್ಯಾಲಯಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕೊರತೆಯು ಉನ್ನತ ಶಿಕ್ಷಣ ವ್ಯವಸ್ಥೆಯನ್ನೇ ಬುಡಮೇಲು ಮಾಡಿದೆ. ಅನೇಕ ವಿಶ್ವವಿದ್ಯಾಲಯಗಳಲ್ಲಿ ಅರ್ಧಕ್ಕಿಂತ ಹೆಚ್ಚು ಬೋಧಕ ಹುದ್ದೆಗಳು ಖಾಲಿ ಇವೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ ಹಾಗೂ ಸಂಶೋಧನಾ ಚಟುವಟಿಕೆಗಳು ಸ್ಥಗಿತಗೊಂಡಿವೆ. ಬೋಧಕೇತರ ಸಿಬ್ಬಂದಿ ಇಲ್ಲದೆ ಆಡಳಿತಾತ್ಮಕ ಕೆಲಸಗಳೂ ಹಳಿ ತಪ್ಪಿವೆ. ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಬೇಕಾದ ಶಿಕ್ಷಣ ಸಂಸ್ಥೆಗಳೇ ನೌಕರರಿಲ್ಲದೆ ಸೊರಗುತ್ತಿವೆ. ರಾಜ್ಯದಲ್ಲಿ ಲಕ್ಷಾಂತರ ಯುವಕರು ಉದ್ಯೋಗಕ್ಕಾಗಿ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಆದರೆ, ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರವು ಮಾತ್ರ ಕುಂಭಕರ್ಣ ನಿದ್ರೆಯಲ್ಲಿದೆ ಎಂದು ಟೀಕಿಸಿದರು.

ಡಿಸಿಎಂ ಡಿಕೆಶಿಗೆ ಸಿಹಿ ಸುದ್ದಿ ಎಂದ ಬಿಜೆಪಿ

ವಿಧಾನಸಭೆ: ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ದೆಹಲಿ ಭೇಟಿಯ ವೇಳೆ ಸಿಹಿ ಸುದ್ದಿ ಸಿಕ್ಕಿರಬಹುದು ಅದಕ್ಕಾಗಿ ಸದನದಲ್ಲಿ ಬಜೆಟ್ ಅನ್ನು ಬೆಂಬಲಿಸುವ ಮಾತುಗಳನಾಡುತ್ತಿದ್ದಾರೆ ಎಂದು ವಿರೋಧ ಪಕ್ಷದ ಸದಸ್ಯರು ಕಾಲೆಳೆದರು. ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ಪ್ರತಿಪಕ್ಷದ ನಾಯಕ ಆರ್.ಅಶೋಕ, ಸಿದ್ದರಾಮಯ್ಯ ಅವರು ಮಂಡಿಸಿರುವ 2026 27ನೇ ಸಾಲಿನ ಬಜೆಟ್ ಖಾಲಿ ಚೊಂಬು ಎಂದು ಟೀಕಿಸಿದರು. ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಡಿ.ಕೆ.ಶಿವಕುಮಾರ್ ಬಜೆಟ್ ಪ್ರತಿಯನ್ನು ಪೂರ್ತಿ ಓದಿದ ಬಳಿಕ ಅದಕ್ಕೆ ಪ್ರತಿಕ್ರಿಯಿಸುವುದು ಒಪ್ಪಬಹುದಾದ ವಿಷಯ. ಆದರೆ ಬಜೆಟ್ ಅನ್ನು ಇನ್ನು ಅರ್ಧ ಭಾಗವೂ ಓದಿಲ್ಲ. ಆಗಲೇ ಬಿಜೆಪಿಯವರು ಖಾಲಿ ಚೆಂಬು ಹಿಡಿದು ಪ್ರತಿಭಟಿಸಿದ್ದಾರೆ ಇದು ಪೂರ್ವ ನಿಯೋಜಿತ ಅಲ್ಲವೇ? ಎಂದು ಪ್ರಶ್ನಿಸಿದರು.

ಬಜೆಟ್ ಓದುತ್ತಿರುವಾಗ ಅದರಲ್ಲಿ ಏನೂ ಇಲ್ಲ ಎಂದು ಗ್ರಹಿಸಿಕೊಂಡು ಆಗ ಮಾರುಕಟ್ಟೆಯಿಂದ ಚೊಂಬುಗಳನ್ನು ತರಿಸಿದರೆ ನಂಬಬಹುದಿತ್ತು. ಆದರೆ ಬಿಜೆಪಿಯವರು ಮೊದಲೇ ಪೂರ್ವ ನಿರ್ಧಾರಿತರಾಗಿ ಚೊಂಬು ತಂದಿದ್ದರು. ಇದು ರಾಜಕೀಯ ಟೀಕೆಯಾಗಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ಅನ್ನು ನಾವು ಖಾಲಿ ಡ್ರಮ್ ಎಂದು ಕರೆಯಬಹುದೇ? ಎಂದು ಪ್ರಶ್ನಿಸಿದರು. ಆಗ ಮಧ್ಯಪ್ರವೇಶಿಸಿದ ಅರವಿಂದ ಬೆಲ್ಲದ್, ದೆಹಲಿಗೆ ಹೋಗಿ ಬಂದಿರುವ ಡಿ.ಕೆ.ಶಿವಕುಮಾರ್ ಅವರಿಗೆ ಬಹುಶ ಸಿಹಿ ಸುದ್ದಿ ಸಿಕ್ಕಿರಬಹುದು ಅದಕ್ಕಾಗಿ ಈಗ ಸಿದ್ದರಾಮಯ್ಯ ಅವರ ಪರವಾಗಿ ಮಾತನಾಡುತ್ತಿದ್ದಾರೆ ಎಂದರು. ಬಿಜೆಪಿಯ ವಿ.ಸುನಿಲ್ ಕುಮಾರ್ ಬಜೆಟ್ ಮಂಡನೆಯಿಂದ ಈವರೆಗೂ ಡಿ.ಕೆ.ಶಿವಕುಮಾರ್ ಅವರು ಎಲ್ಲಿಯೂ ತಮ್ಮ ಅನಿಸಿಕೆ ಹೇಳಿದ್ದನ್ನು ನಾನು ನೋಡಿಲ್ಲ. ಈಗ ಸಮರ್ಥಿಸಿಕೊಳ್ಳುತ್ತಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದರು. ಬಜೆಟ್ ಪೂರ್ವಭಾವಿ ಸಭೆಗಳಿಗೂ ಡಿ.ಕೆ.ಶಿವಕುಮಾರ್ ಗೈರು ಹಾಜರಾಗಿದ್ದರು ಎಂದರು. ಈ ವೇಳೆ ಡಿ.ಕೆ. ಶಿವಕುಮಾರ್, ನಾನು ಏನು ಹೇಳಬೇಕು ಹೇಳಿದ್ದೇನೆ ಎಂದರು.

ಸರಕಾರಿ ವೈದ್ಯರ ಸಮಸ್ಯೆ ಶೀಘ್ರದಲ್ಲೇ ಪರಿಹಾರ

ವಿಧಾನಸಭೆ: ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರಕಾರಿ ವೈದ್ಯಾಧಿಕಾರಿಗಳ ಸಂಘ ಮತ್ತು ಇತರ ಆರೋಗ್ಯ ಇಲಾಖೆ ನೌಕರರ ಸಂಘಗಳು ಬುಧವಾರದಿಂದ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದು, ಅವರ ಸಮಸ್ಯೆಗಳನ್ನು ಶೀಘ್ರ ಪರಿಹರಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಂಗಳವಾರ ಭರವಸೆ ನೀಡಿದ್ದಾರೆ.

ನಾವು ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಯೊಂದಿಗೆ ಚರ್ಚಿಸಿದ್ದೇವೆ. ನಾವು ಅವರೊಂದಿಗೆ ಎರಡು ಬಾರಿ ಮಾತನಾಡಿದ್ದೇವೆ. ನಮ್ಮ ಆಯುಕ್ತರ ಮೂಲಕ ಸರಕಾರದ ಕ್ರಮಗಳನ್ನು ಅವರಿಗೆ ತಿಳಿಸಿದ್ದೇವೆ. ಅವರ ಬೇಡಿಕೆಗಳಲ್ಲಿ ಹಲವು ವರ್ಷದಿಂದ ಬಾಕಿ ಉಳಿದಿರುವ ವೃಂದ ಹಾಗೂ ನೇಮಕಾತಿ, ಜೇಷ್ಠತಾ ಪಟ್ಟಿ ಮತ್ತು ಕಳೆದ ಕೌನ್ಸೆಲಿಂಗ್‌ನಲ್ಲಿನ ವ್ಯತ್ಯಾಸಗಳು ಸೇರಿವೆ. ನಾವು ಅವುಗಳನ್ನು ಪರಿಹರಿಸಲು ಯೋಜಿಸಿದ್ದೇವೆ. ಇನ್ನೂ ಹಲವು ಸಮಸ್ಯೆಗಳಿವೆ, ನಾನು ಈಗ ಚರ್ಚಿಸಲು ಬಯಸುವುದಿಲ್ಲ. ಇಂದು ನಾವು ಸಿಎಂ ಜತೆ ಸಭೆಗೆ ಅವರನ್ನು ಕರೆದಿದ್ದೇವೆ. ಇಲಾಖೆ ಮತ್ತು ಮುಖ್ಯವಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ನಾವು ಏನು ಮಾಡಬಹುದು ಎಂಬುದನ್ನು ಚರ್ಚಿಸಿ ಪರಿಹರಿಸುತ್ತೇವೆ ಎಂದರು.

ನೇಮಕಾತಿ ನಿಯಮಾವಳಿಗಳ ಬದಲಾವಣೆ, ಕೌನ್ಸೆಲಿಂಗ್ ಪದ್ಧತಿಯ ವರ್ಗಾವಣೆ ಸೇರಿದಂತೆ ಹಲವು ವಿಚಾರ ಸರಕಾರದ ಗಮನದಲ್ಲಿದೆ. ವರ್ಗಾವಣೆಯ ನ್ಯೂನ್ಯತೆಗಳನ್ನು ಸರಿಪಡಿಸಲಾಗುವುದು. ವೈದ್ಯಕೀಯ ಸಂಘದ ಪದಾಧಿಕಾರಿಗಳ ಜತೆ ಸಿಎಂ ಸಮ್ಮುಖದಲ್ಲಿ ಸಭೆ ನಡೆಸಲಾಗುವುದು. ಬೇಡಿಕೆಗಳ ಈಡೇರಿಕೆಗೆ ಸಾಧ್ಯ ಇರುವ ಎಲ್ಲ ಕ್ರಮ ಸರಕಾರ ತೆಗೆದುಕೊಳ್ಳಲಿದೆ ಎಂದು ಹೇಳಿದರು.

ಮಹಾನಗರಗಳಲ್ಲಿ ಹೋಟೆಲ್‌ಗಳಿಗೆ ಬೀಗ

← ಮೊದಲಪುಟದಿಂದ

ಈ ಬಗ್ಗೆ ಚೆನ್ನೈ ಹೋಟೆಲ್ ಅಸೋಸಿಯೇಷನ್ ತಮಿಳುನಾಡು ಸಿಎಂಗೆ ಪತ್ರ ಬರೆದು ಸೂಕ್ತ ಕ್ರಮಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಸಿಲಿಂಡರ್ ಸಿಗದೆ ಪರಿಸ್ಥಿತಿ ತುಂಬಾ ಹದಗೆಟ್ಟಿದೆ. ವಿತರಕರು ಸಿಲಿಂಡರ್ ಪೂರೈಕೆ ಸಂಪೂರ್ಣ ಸ್ಥಗಿತ ಮಾಡಿದ್ದಾರೆ. ಸಂಗ್ರಹವಿಲ್ಲ ಎಂದು ಹೇಳುತ್ತಿದ್ದಾರೆ. ಬಹುತೇಕ ರೆಸ್ಟೋರೆಂಟ್ ಬಂದ್ ಮಾಡುವ ಪರಿಸ್ಥಿತಿ ಬಂದಿದೆ ಎಂದು ಪತ್ರದಲ್ಲಿ ಅಳಲು ತೋಡಿಕೊಂಡಿದ್ದಾರೆ.

ಮುಂಬೈನಲ್ಲಿ ಬಿಕ್ಕಟ್ಟು: ವಾಣಿಜ್ಯ ಎಲ್‌ಪಿಜಿ ಪೂರೈಕೆಯಲ್ಲಿನ ಅಡಚಣೆಯಿಂದಾಗಿ ಮುಂಬೈನಲ್ಲಿ ಸುಮಾರು ಶೇ.20 ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು ಆಗಿವೆ ಎಂದು ನಗರದ ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘ ಆಹಾರ್ ತಿಳಿಸಿದೆ. ಅನಿಲ ಪೂರೈಕೆ ಪರಿಸ್ಥಿತಿ ಸುಧಾರಿಸದಿದ್ದರೆ ಮುಂದಿನ ಎರಡು ದಿನಗಳಲ್ಲಿ ನಗರದ ಶೇ.50 ಹೋಟೆಲ್‌ಗಳು ಮುಚ್ಚುವ ಸಾಧ್ಯತೆಗಳಿವೆ ಎಂದು ಸಂಘ ಎಚ್ಚರಿಸಿದೆ. ಆಹಾರ್ ಪ್ರಕಾರ, ಕಾರ್ಯನಿರ್ವಹಿಸುತ್ತಿರುವ ರೆಸ್ಟೋರೆಂಟ್‌ಗಳ ಸಂಖ್ಯೆಯು ಪ್ರಸ್ತುತ ಎಷ್ಟು ಸಿಲಿಂಡರ್ ಸ್ಟಾಕ್ ಅನ್ನು ಹೊಂದಿವೆ ಎಂಬುದರ ಆಧಾರದ ಮೇಲೆ ಅವಲಂಬಿತವಾಗಿವೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ಮುಂಬರುವ ದಿನಗಳಲ್ಲಿ ಮುಂಬೈನ ಅರ್ಧದಷ್ಟು ಹೋಟೆಲ್‌ಗಳು ಮುಚ್ಚುವ ಸಾಧ್ಯತೆಗಳಿವೆ ಎಂದು ಸಂಘ ಹೇಳಿದೆ.

ಕೇರಳದಲ್ಲಿ ಕೇಟರಿಂಗ್ ಸದ್ಯದಲ್ಲೇ ಸ್ಥಗಿತ: ಕೇರಳದಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ಹಲವು ಹೋಟೆಲ್‌ಗಳು, ಕೇಟರಿಂಗ್ ಉದ್ಯಮ ನಡೆಸುತ್ತಿರುವವರು ತಮ್ಮ ವಹಿವಾಟನ್ನು ನಿಲ್ಲಿಸುವ ಯೋಚನೆಯಲ್ಲಿದ್ದಾರೆ. ಅಖಿಲ ಕೇರಳ ಕೇಟರರ್ಸ್ ಸಂಘದ ಅಧ್ಯಕ್ಷರ ಪ್ರಕಾರ, ಒಂದು ಕೇಟರಿಂಗ್ ಸಂಸ್ಥೆಗೆ ದಿನಕ್ಕೆ 7-8 ವಾಣಿಜ್ಯ ಸಿಲಿಂಡರ್ ಬೇಕಾಗುತ್ತದೆ. ಸದ್ಯ ದಿನಕ್ಕೆ 2 ಸಿಲಿಂಡರ್‌ಗಳು ಮಾತ್ರ ಸಿಗುತ್ತಿವೆ ಎಂದಿದ್ದಾರೆ. ತಕ್ಷಣಕ್ಕೆ ವಿದ್ಯುತ್ ಚಾಲಿತ ಸ್ಟವ್‌ಗಳನ್ನು ಬಳಸುವ ಸ್ಥಿತಿಯಲ್ಲಿ ಸಂಸ್ಥೆಗಳಿಲ್ಲ. ಅದಕ್ಕೆ ಇನ್ನೂ ವ್ಯವಸ್ಥೆ ಮಾಡಿಕೊಂಡಿಲ್ಲ. ಅದಕ್ಕೆ ಹೆಚ್ಚುವರಿ ಹೂಡಿಕೆಯೂ ಬೇಕಾಗುವುದರಿಂದ ತಕ್ಷಣಕ್ಕೆ ಸಾಧ್ಯವಿಲ್ಲ ಎಂದು ಹೇಳಲಾಗಿದೆ.

ಕೇಂದ್ರಕ್ಕೆ ಪತ್ರ ಬರೆದ ಸಿಎಂ

ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಪತ್ರ ಬರೆದಿದ್ದು, ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆ ಸ್ಥಗಿತಗೊಂಡಿದ್ದರಿಂದ ಬೆಂಗಳೂರು ಮಹಾನಗರದಲ್ಲಿ ಹೋಟೆಲ್, ರೆಸ್ಟೋರೆಂಟ್, ಕೆಟರಿಂಗ್‌ಗಳಿಗೆ ತೊಂದರೆಯಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ತೈಲ ಮಾರುಕಟ್ಟೆ ಕಂಪನಿಗಳು ಪೂರೈಸುವ ಎಲ್‌ಪಿಜಿಯನ್ನು ಕೇವಲ ಗೃಹ ಬಳಕೆದಾರರಿಗೆ ಮಾತ್ರ ಮಾರಾಟ ಮಾಡಬೇಕೆಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಆದೇಶಿಸಿದೆ. ದೇಶದ ಪ್ರತಿ ಮನೆಗಳಿಗೆ ಅಡೆತಡೆಯಿಲ್ಲದೆ ಅಡುಗೆ ಅನಿಲ ಪೂರೈಕೆ ಮಾಡಬೇಕೆಂಬುದು ಈ ಆದೇಶದ ಹಿಂದಿನ ಉದ್ದೇಶವಾದರೂ, ಇದರ ಅನುಷ್ಠಾನದಿಂದಾಗಿ ಬೆಂಗಳೂರಿನಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಕೊರತೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ತೈಲ ಮಾರುಕಟ್ಟೆ ಕಂಪನಿಗಳು ಪೂರೈಸುವ ಎಲ್‌ಪಿಜಿಯನ್ನು ಕೇವಲ ಗೃಹ ಬಳಕೆದಾರರಿಗೆ ಮಾತ್ರ ಮಾರಾಟ ಮಾಡಬೇಕೆಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಆದೇಶಿಸಿದೆ. ದೇಶದ ಪ್ರತಿ ಮನೆಗಳಿಗೆ ಅಡೆತಡೆಯಿಲ್ಲದೆ ಅಡುಗೆ ಅನಿಲ ಪೂರೈಕೆ ಮಾಡಬೇಕೆಂಬುದು ಈ ಆದೇಶದ ಹಿಂದಿನ ಉದ್ದೇಶವಾದರೂ, ಇದರ ಅನುಷ್ಠಾನದಿಂದಾಗಿ ಬೆಂಗಳೂರಿನಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಕೊರತೆಯಾಗಿದೆ. ವಾಣಿಜ್ಯ ಬಳಕೆಯ ಸಿಲಿಂಡರ್ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘಗಳು ವರದಿ ಮಾಡಿವೆ. ಸಿಲಿಂಡರ್ ಪೂರೈಕೆ ಶೀಘ್ರವಾಗಿ ಪುನರಾರಂಭಗೊಳ್ಳದಿದ್ದರೆ ಅನೇಕ ಹೋಟೆಲ್‌ಗಳು ತಮ್ಮ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕಾಗಬಹುದು ಎಂದಿದ್ದಾರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಅಥಣಿ-591304, ಕಾರ್ಯಾಲಯ, ತಾ:ಅಥಣಿ ಜಿ:ಬೆಳಗಾವಿ (ಕರ್ನಾಟಕ)

ಅಧಿಸೂಚನೆ ಸಂ.ಕನೀನಿನಿ/ಪುಪುವಿ/ಟೆಂಡರ /ಎಫ್‌ಐಸಿ/ಟಿಬಿಎಲ್‌ಐಎಸ್/ಡಿಸಿ-1ಎ/ಕೆಡಬ್ಲೂಸಿ/2025-26/1862 ದಿನಾಂಕ:09-03-2026

ಅಲ್ಪಾವಧಿ ಟೆಂಡರ ಅಧಿಸೂಚನೆ 2ನೇ ಕರೆ
(ಕೆ.ಪಿ.ಪಿ.ಪಿ ಮೂಲಕ ಮಾತ್ರ)

ಅಧಿಸೂಚನೆ ಸಂ.ಕನೀನಿನಿ/ಪುಪುವಿ/ಟೆಂಡರ/ಎಫ್‌ಐಸಿ/ಟಿಬಿಎಲ್‌ಐಎಸ್/ಡಿಸಿ-1ಎ/ಕೆಡಬ್ಲೂಸಿ/2025-26/1298 ದಿನಾಂಕ: 18.01.2024

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಆರ್&ಆರ್ ವಿಭಾಗ ಅಥಣಿ, ಇವರು ಕೆ.ಪಿ.ಪಿ ಪೋರ್ಟಲ್ ಮುಖಾಂತರ ನೊಂದಾಯಿತ ದ್ವಿತಿಯ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರು ಇವರಿಂದ KPP I.NO 548 ಕಾಮಗಾರಿಗಳಿಗೆ ಶೇಕಡಾವಾರು ಟೆಂಡರನ್ನು ಅಹ್ವಾನಿಸಿರುತ್ತಾರೆ.

ಗುತ್ತಿಗೆದಾರರು 02-ಕವರ್ ಬಿಡ್ ಸಲ್ಲಿಕೆ ವಿಧಾನವನ್ನು ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸುವುದು.

ಟೆಂಡರಿಗಿಟ್ಟ ಮೊತ್ತ (ಜಿ.ಎಸ್.ಟಿ ರಹಿತ) ರೂ. 400.39 ಲಕ್ಷಗಳು ಇರುತ್ತವೆ. ಟೆಂಡರ ಅವಧಿ ಮಳೆಗಾಲ ಸಹಿತ (6) ತಿಂಗಳು.

1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:11.03.2026 ಬೆಳಿಗ್ಗೆ 10.30 ರಿಂದ ದಿನಾಂಕ: 18.03.2026 ರ ಸಾಯಂಕಾಲ 4.00 ರವರೆಗೆ, 2:ಆಕ್ಷೇಪಣೆಗಳನ್ನು ಸಲ್ಲಿಸುವ ದಿನಾಂಕ:16.03.2026 ರ ಸಾಯಂಕಾಲ 4.00 ಘಂಟೆಯವರೆಗೆ. 3:ಪ್ರಿ-ಬಿಡ್ ಪೂರ್ವಭಾವಿ ಸಭೆ:16.03.2026 ಬೆಳಿಗ್ಗೆ 11.00 ಘಂಟೆಗೆ, 4:ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:11.03.2026 ಬೆಳಿಗ್ಗೆ 10.30 ರಿಂದ ದಿನಾಂಕ: 18.03.2026 ರ ಸಾಯಂಕಾಲ 4.00 ರವರೆಗೆ, 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:20.03.2026 ರ ಸಾಯಂಕಾಲ 4.30 ಘಂಟೆಗೆ, 6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:23.03.2026 ರ ಬೆಳಿಗ್ಗೆ 11.00 ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಚೇರಿ ದೂರವಾಣಿ ಸಂಖ್ಯೆ:08289-285031 ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಪುವ ಮತ್ತು ಪುನಿ ವಿಭಾಗ, ಅಥಣಿ.

DIPR/BGM/RO-NO-2038/KSMCA/2025-26

ದಿವ್ಯಾಂಗ ಬಾಲಕಿ ಮೇಲೆ ಅತ್ಯಾಚಾರ: 40 ವರ್ಷ ಸಜೆ

ಬೆಂಗಳೂರು: ಅಪ್ರಾಪ್ತ ವಯಸ್ಸಿನ ದಿವ್ಯಾಂಗ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ ಆರೋಪಿಗೆ 40 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದೂವರೆ ಲಕ್ಷ ರು. ದಂಡ ವಿಧಿಸಿ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ವಿಶೇಷ ತ್ವರಿತ ಪೋಕ್ಸೋ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ಧರೆಪ್ಪಾ ಖನಸೆ(25) ಶಿಕ್ಷೆಗೆ ಒಳಗಾದ ಅಪರಾಧಿ. 2025ರ ಆಗಸ್ಟ್ 25ರಂದು ಅಪ್ರಾಪ್ತ ವಿಶೇಷಚೇತನ ಬಾಲಕಿ ಮನೆಯಲ್ಲಿ ಯಾರೂ ಇಲ್ಲದ ಸಮಯವನ್ನು ನೋಡಿಕೊಂಡು, ಮನೆಯ ಹೊರಗೆ ಕಟ್ಟೆಯ ಮೇಲೆ ಕುಳಿತಿದ್ದ ಅಪ್ರಾಪ್ತೆಯನ್ನು ಮನೆಯ ಒಳಗೆ ಎಳೆದೊಯ್ದು ಆರೋಪಿ ಅತ್ಯಾಚಾರ ಎಸಗಿದ್ದ ಆರೋಪ ಕೇಳಿಬಂದಿತ್ತು. ಈ ಸಂಬಂಧ ಸಂಕೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖಾಧಿಕಾರಿ ಮಹಾಂತೇಶ ಹೊಸಪೇಟಿ ತನಿಖೆ ಕೈಗೊಂಡು, ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ವಿಶೇಷ ತ್ವರಿತ ಪೋಕ್ಸೋ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಅಮೀರ ನದಾಫ ತನಿಖಾ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿದ್ದರು.

13 ಬೇಡಿಕೆ ಈಡೇರಿಕೆಗೆ ಸರ್ಕಾರ ಅಸ್ತು: ವೈದ್ಯರ ಮುಷ್ಕರ ವಾಪಸ್

← ಮೊದಲಪುಟದಿಂದ

ವೈದ್ಯಾಧಿಕಾರಿಗಳು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮುಷ್ಕರಕ್ಕೆ ಸಜ್ಜಾಗಿದ್ದ ಹಿನ್ನೆಲೆಯಲ್ಲಿ, ಬುಧವಾರದಿಂದ ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಹೊರರೋಗಿಗಳ ಸೇವೆ (ಒಪಿಡಿ) ಬಂದ್ ಮಾಡುವ ಎಚ್ಚರಿಕೆಯನ್ನು ನೀಡಿದ್ದರು. ಇದರಿಂದ ರಾಜ್ಯದ ಆರೋಗ್ಯ ಸೇವೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಗಳ ಬಗ್ಗೆ ಸರಕಾರವೂ ಎಚ್ಚೆತ್ತುಕೊಂಡಿತು. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರಿ ವೈದ್ಯಾಧಿಕಾರಿಗಳ ಸಂಘದ ಪದಾಧಿಕಾರಿಗಳೊಂದಿಗೆ ಸರಕಾರ ಸಂಧಾನಕ್ಕೆ ಮುಂದಾಗಿದ್ದು, ಮೊದಲ ಹಂತದ ಸಭೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ನೇತೃತ್ವದಲ್ಲಿ ನಡೆದಿತ್ತು. ಆದರೆ ಆ ಸಭೆಯಲ್ಲಿ ಯಾವುದೇ ಅಂತಿಮ ನಿರ್ಧಾರವಾಗದ ಕಾರಣ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ಮತ್ತೊಂದು ಸುತ್ತಿನ ಮಹತ್ವದ ಸಭೆಯನ್ನು ಕರೆಯಲಾಯಿತು.

ಎರಡು ಗಂಟೆ ನಡೆದ ಸಭೆ

ಸಭೆಯಲ್ಲಿ ವೈದ್ಯರ ಸಂಘದ ಅಧ್ಯಕ್ಷ ರವೀಂದ್ರ ಮೇಟಿ, ರಾಜ್ಯ ಸರಕಾರ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಹಾಗೂ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಸತತವಾಗಿ ಸುಮಾರು ಎರಡು ಗಂಟೆಗಳ ಕಾಲ ನಡೆದ ಈ ಸಭೆಯಲ್ಲಿ ವೈದ್ಯರ ವಿವಿಧ ಬೇಡಿಕೆಗಳ ಬಗ್ಗೆ ಸಮಗ್ರ ಚರ್ಚೆ ನಡೆಯಿತು. ವೈದ್ಯರು ಮುಷ್ಕರವನ್ನು ಕೈಬಿಡುವಂತೆ ಮನವೊಲಿಸಲು ಸಚಿವರಾದ ಎಚ್.ಸಿ. ಮಹದೇವಪ್ಪ ಮತ್ತು ದಿನೇಶ್ ಗುಂಡೂರಾವ್ ಅವರು ಹಲವು ಪ್ರಯತ್ನಗಳನ್ನು ನಡೆಸಿದರು. ಇದಕ್ಕೆ ಪ್ರತಿಕ್ರಿಯಿಸಿದ ವೈದ್ಯಾಧಿಕಾರಿಗಳ ಸಂಘದ ಮುಖಂಡರು, ತಮ್ಮ ಬೇಡಿಕೆಗಳನ್ನು ಸಂಪೂರ್ಣವಾಗಿ ಈಡೇರಿಸುವುದರ ಕುರಿತು ಸರಕಾರ ಸ್ಪಷ್ಟ ಭರವಸೆ ನೀಡಬೇಕು ಎಂದು ಪಟ್ಟು ಹಿಡಿದರು. ಸರಕಾರ ಕೆಲವು ಬೇಡಿಕೆಗಳಿಗೆ ಒಪ್ಪಿಗೆ ಸೂಚಿಸಿ, ಉಳಿದ ಬೇಡಿಕೆಗಳ ಕುರಿತು ಕಾಲಮಿತಿಯೊಳಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿದೆ.

ಲೋಕೋಪಯೋಗಿ ಇಲಾಖೆ,
ತುಮಕೂರು,

ಕ್ರ.ಸಂ:ಕಾಇಂ:ಲೋಇವಿ:ತುಮ:ಸಇಂ-2: ಟೆಂಡರ್ 59:2025-26, ದಿನಾಂಕ: 03-03-2026

ಟೆಂಡರ್ ಪ್ರಕಟಣೆ ಸಂ. 59/2025-26 ದಿನಾಂಕ 07-03-2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: **59/2025-26** ದಿನಾಂಕ **07-03-2026** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ **5054-03-337-0-17-154 ರಾಜ್ಯ ಹೆದ್ದಾರಿ-ಸುಧಾರಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 02 ಕಾಮಗಾರಿಗೆ ಹಾಗೂ ಲೆಕ್ಕಶೀರ್ಷಿಕೆ: 8443 ಠೇವಣಿ ವಂತಿಕೆ** ಅಡಿಯಲ್ಲಿ **01 ಕಾಮಗಾರಿಗೆ** KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ. 59.65 ಲಕ್ಷಗಳು** ಮತ್ತು ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ. 8.60 ಲಕ್ಷಗಳು** ಇ.ಎಂ.ಡಿ ಗರಿಷ್ಠ ಮೊತ್ತ **ರೂ. 1,19,301/-** ಮತ್ತು ಇ.ಎಂ.ಡಿ ಕನಿಷ್ಠ ಮೊತ್ತ **ರೂ. 21,493/-**, ಅರ್ಹ ಗುತ್ತಿಗೆದಾರರು 4 & 3ನೇ ದರ್ಜೆ ಮೇಲ್ಪಟ್ಟು, **ಕಾಲಾವಧಿ:03 ಹಾಗೂ 14 ತಿಂಗಳು**, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟಿಕರಣಗಳಿಗೆ ಕೊನೆ **ದಿನಾಂಕ ಮತ್ತು ವೇಳೆ: 20-03- 2026 ರ 17-30 ಗಂಟೆಗೆ,** KPPP-Portal ಮೂಲಕ ಟೆಂಡರ್ ಅನ್ನು **ದಿನಾಂಕ 06-03-2026 ರಿಂದ 23-03-2026 ರ 16.00 ಗಂಟೆವರೆಗೆ** ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 23-03-2026 ರ 16-00 ಗಂಟೆವರೆಗೆ,** ತಾಂತ್ರಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 24-03-2026 ರ 16-30 ಗಂಟೆಗೆ,** ಆರ್ಥಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 25-03-2026 ರ 17-00 ಗಂಟೆಗೆ,** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:**https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ಉಪವಿಭಾಗ
ತುಮಕೂರು.

DIPR/TUM/RO-298/25-26/Oysters

ರಾಜ್ಯದ ಇತರೆ ಭಾಗಗಳಲ್ಲೂ ಕಂಬಳ: ಸುಪ್ರೀಂ ಅನುಮತಿ

← ಮೊದಲಪುಟದಿಂದ

ನವೆಂಬರ್ 14ರಂದು ಆದೇಶ ನೀಡಿದ್ದ ಕರ್ನಾಟಕ ಉಚ್ಚನ್ಯಾಯಾಲಯ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಹೊರಗೂ ಕಂಬಳ ನಡೆಸಲು ಅನುಮತಿ ನೀಡಿತ್ತು. ಹೊರಗಡೆ ನಡೆಸಲು ಅನುಮತಿ ನೀಡಬಾರದೆಂಬ ಪೇಟಾ ಮನವಿಯನ್ನು ತಿರಸ್ಕರಿಸಿತ್ತು.

ಇದನ್ನು ಪ್ರಶ್ನಿಸಿ ಪೇಟಾ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿತ್ತು. ಈ ವೇಳೆ ಪ್ರತಿಕ್ರಿಯಿಸಿದ ನ್ಯಾ.ಮೆಹ್ತಾ, ಅವರು ರಾಜ್ಯದ ವಿವಿಧ ಭಾಗಗಳಲ್ಲಿ ಸಂಸ್ಕೃತಿ ಯನ್ನು ಪ್ರದರ್ಶಿಸಲು ಬಯಸಿದರೆ, ಅದರಲ್ಲಿ ಏನು ತಪ್ಪಿದೆ? ರಾಜ್ಯದ ಇತರ ಭಾಗಗಳ ಜನರು ಸಹ ಸಂಸ್ಕೃತಿಯೊಂದಿಗೆ ಪರಿಚಿತರಾಗಲಿ. ಅದನ್ನು ಒಂದು ನಿರ್ದಿಷ್ಟ ಪ್ರದೇಶಕ್ಕೆ ಮಾತ್ರ ಏಕೆ ಸೀಮಿತಗೊಳಿಸಬೇಕು? ಎಂದರು.

ಕಂಬಳಕ್ಕೆ ಸಂಬಂಧಿಸಿದ ಅರ್ಜಿಗಳನ್ನು ವಿಚಾರಣೆ ನಡೆಸುತ್ತಿದ್ದ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯವು ಈ ಹಿಂದೆ ಸಲ್ಲಿಸಿದ ಅಫಿಡವಿಟ್ ಅನ್ನು ಪೇಟಾ ಇಂಡಿಯಾ ಪರ ಹಾಜರಾದ ವಕೀಲರು ಉಲ್ಲೇಖಿಸಿದರು. ಕರ್ನಾಟಕದ ಎರಡು ಕರಾವಳಿ ಜಿಲ್ಲೆಗಳಲ್ಲಿ ಇದು ಸಾಂಪ್ರದಾಯಿಕ ಕ್ರೀಡೆಯಾಗಿದೆ ಎಂದು ರಾಜ್ಯ ಸರ್ಕಾರವೇ ಪ್ರಮಾಣ ಪತ್ರದಲ್ಲಿ ಸಲ್ಲಿಸಿದೆ. ಆದರೆ ಈ ಸಂಸ್ಕೃತಿಗೂ ಬೆಂಗಳೂರಿನ ಸಂಪ್ರದಾಯ ಮತ್ತು ಸಂಸ್ಕೃತಿಗೂ ಯಾವುದೇ ಸಂಬಂಧವಿಲ್ಲ. ಹಾಗಿದ್ದರೂ ಬೆಂಗಳೂರಿನಲ್ಲಿ ಅದನ್ನು ಆಯೋಜಿಸಲು ನಿರ್ಧರಿಸಲಾಗಿದೆ ಎಂದು ವಕೀಲರು ವಾದಿಸಿದರು.

ಡಿಕೆಶಿ ರಾಜ್ಯ ಕಾಂಗ್ರೆಸ್ ಸಾರಥ್ಯಕ್ಕೆ 6 ವರ್ಷ ಭರ್ತಿ

← ಮೊದಲಪುಟದಿಂದ

ಡಿಕೆಗೆ ರಾಜಕೀಯ ಭವಿಷ್ಯವಿದೆ: ಇನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಶುಭಕೋರಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಡಿ.ಕೆ. ಶಿವಕುಮಾರ್ ಅವರಿಗೆ ಉಜ್ವಲ ಭವಿಷ್ಯವಿದೆ. 2028ರಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮೆಲ್ಲರ ಬಯಕೆ ಎಂದಿದ್ದಾರೆ. ನನಗಿಂತ ಕಿರಿಯರಾದ ಶಿವಕುಮಾರ್ ಅವರಿಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮೆಲ್ಲರ ಬಯಕೆಯಾಗಿದೆ. ಇದಕ್ಕಾಗಿ ನಡೆಯುವ ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ನಾನು ಕೂಡಾ ಜತೆಯಿರುತ್ತೇನೆ. ಶಿವಕುಮಾರ್ ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ನಮ್ಮ ಪಕ್ಷದ ಎಲ್ಲ ಯುವನಾಯಕರಿಗೆ ಮಾದರಿಯಾದುದು. ಪ್ರತಿಪಕ್ಷ ಬಿಜೆಪಿ ಸುಳ್ಳು ಕೇಸ್‌ಗಳನ್ನು ಹಾಕಿ ಬಗೆಬಗೆಯ ಕಿರುಕಳ ನೀಡಿದರೂ ಶಿವಕುಮಾರ್ ಅವರು ಮಣಿಯದೆ ಪಕ್ಷಕ್ಕೆ ನಿಷ್ಠರಾಗಿ ಉಳಿದಿರುವುದು ಕಾಂಗ್ರೆಸ್ ಪಕ್ಷದ ಬಗ್ಗೆ ಅವರಲ್ಲಿರುವ ರಾಜಿಯಿಲ್ಲದ ನಿಷ್ಠೆಗೆ ಸಾಕ್ಷಿಯಾಗಿದೆ. ಪಕ್ಷವನ್ನು ಅಧಿಕಾರಕ್ಕೆ ತರಲು ನಾಯಕರು, ಕಾರ್ಯಕರ್ತರೊಂದಿಗೆ ನಿಂತು ಹಗಲಿರುಳು ದುಡಿದಿದ್ದಾರೆ. ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮತ್ತೆ ಕಟ್ಟುವಲ್ಲಿ ಶಿವಕುಮಾರ್ ನನ್ನ ಹೆಗಲಿಗೆ ಹೆಗಲಾಗಿ ನಿಂತಿದ್ದಾರೆ ಎಂದು ಟ್ವೀಟ್ ಮಾಡಿದ್ದಾರೆ.

ಸಿಎಂ ಕುರ್ಚಿಯಲ್ಲಿ ಕುಳಿತ ಗರುಡಾಚಾರ್: ಡಿಕೆ ಗಾಬರಿ

ವಿಧಾನಸಭೆ: ವಿಧಾನಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ಬಿಜೆಪಿಯ ಶಾಸಕ ಉದಯ್ ಗರುಡಾಚಾರ್ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಳಿ ಮಾತನಾಡಲು ಹೋಗಿದ್ದರು.ಇದೇ ವೇಳೆ ಬೆಂಗಳೂರಿನ ತೆರಿಗೆ ಪದ್ಧತಿಗೆ ಸಂಬಂಧಪಟ್ಟಂತೆ ವಿರೋಧ ಪಕ್ಷದ ನಾಯಕರು ಸದಸ್ಯರು ಪ್ರಶ್ನೆಗಳನ್ನು ಕೇಳುತ್ತಿದ್ದರು. ಅತ್ತ ಗಮನ ಕೊಟ್ಟಿದ್ದ ಡಿ.ಕೆ.ಶಿವಕುಮಾರ್ ಅವರು ತಮ್ಮ ಬಳಿ ಬಂದ ಉದಯ್ ಗರುಡಾಚಾರ್ ಅವರನ್ನು ಸ್ವಲ್ಪ ಸಮಯ ಕುಳಿತುಕೊಳ್ಳುವಂತೆ ಕೈ ಸನ್ನೆ ಮಾಡಿದರು. ಉದಯ್ ಗರುಡಾಚಾರ್ ಅವರು ಡಿ.ಕೆ.ಶಿವಕುಮಾರ್ ಪಕ್ಕದಲ್ಲಿ ಅವರ ಕುರ್ಚಿಯಲ್ಲಿ ಕೂರಲು ಮುಂದಾದರು. ಗಾಬರಿಯಾದ ಡಿ.ಕೆ.ಶಿವಕುಮಾರ್ ಅವರು ಉದಯ್ ಗರುಡಾಚಾರ್ ಅವರ ಕೈಹಿಡಿದು ಅಲ್ಲಿ ಕುಳಿತುಕೊಳ್ಳದಂತೆ ಎಚ್ಚರಿಸಿ ತಮ್ಮ ಬಲಬದಿಯಲ್ಲಿದ್ದ ಖಾಲಿ ಕುರ್ಚಿಯಲ್ಲಿ ಕೂರಲು ತಿಳುವಳಿಕೆ ನೀಡಿದರು. ಇದನ್ನು ಗಮನಿಸಿದ ಬಿಜೆಪಿಯ ಸುನಿಲ್ ಕುಮಾರ್ ಮುಖ್ಯಮಂತ್ರಿ ಕುರ್ಚಿಯಲ್ಲಿ ಯಾರು ಕೂರಬೇಕು ಯಾರ್ಯಾರೋ ಕೂರುತ್ತಿದ್ದಾರೆ ಎಂದರು. ಡಿ.ಕೆ.ಶಿವಕುಮಾರ್ ಅವರ ಜೊತೆಯಲ್ಲಿ ಮಾತುಕತೆ ಮುಗಿಸಿದ ಬಳಿಕ ಅಲ್ಲಿಂದ ನೇರವಾಗಿ ಸಭಾಧ್ಯಕ್ಷರ ಮುಂದಿನ ಬಾವಿಯ ಬಳಿಯಿಂದ ಹಾದು ಬಂದರು. ಇದು ಕೆಲಕಾಲ ಗೊಂದಲದ ವಾತಾವರಣ ನಿರ್ಮಿಸಿತು. ಪ್ರತಿಭಟನೆ ನಡೆಸದ ಹೊರತು ಶಾಸಕರು ಸದನದ ಸಂದರ್ಭದಲ್ಲಿ ಬಾವಿಯಲ್ಲಿ ಹಾದು ಹೋಗಬಾರದು ಎಂದು ಸಭಾಧ್ಯಕ್ಷ ಯು.ಟಿ.ಖಾದರ್ ತಿಳಿ ಹೇಳಿದರು.

ಸ್ಥಳೀಯ ಸಂಸ್ಥೆಗಳಲ್ಲಿ ಮತಪತ್ರ ಬಳಕೆಯ ವಿಧೇಯಕ ಮಂಡನೆ

ವಿಧಾನಸಭೆ ಬೆಂಗಳೂರು

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತ ಯಂತ್ರಗಳ ಬದಲಿಗೆ ಮತ ಪತ್ರ ಬಳಸಲು ಅನುವು ಮಾಡುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ ವಿಧಾನಸಭೆಯಲ್ಲಿ ಮಂಡನೆ ಮಾಡ ಲಾಯಿತು.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪರವಾಗಿ ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ-2026 ಮಂಡಿಸಿದರು. ಗ್ರಾಮ ಪಂಚಾಯಿತಿ ಸೇರಿದಂತೆ ಇತರ ಚುನಾವಣೆ ಸಂದರ್ಭದಲ್ಲಿ ಮತದಾರರ ಮೇಲಿನ ದಬ್ಬಾಳಿಕೆ, ಬೆದರಿಕೆ ಹಾಗೂ ಅನಗತ್ಯ ಪ್ರಭಾವ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳುವ ಅಂಶವನ್ನು ಈ ವಿಧೇಯಕದಲ್ಲಿ ಸೇರ್ಪಡೆಗೊಳಿಸಲಾಗಿದೆ.

ಭಾರತ ಸಂವಿಧಾನದ 326ನೇ ಅನುಚ್ಛೇದ ದಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವ ಸಲುವಾಗಿ ಈ ವಿಧೇಯಕ ಅಗತ್ಯತೆ ಇದೆ. ಅದರಲ್ಲೂ ಮುಖ್ಯವಾಗಿ ಮತದಾರರ ಮತಪತ್ರದ ಗೌಪ್ಯತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯವನ್ನು ಸುರಕ್ಷಿತಗೊಳಿಸಲು ಈ ವಿಧೇಯಕ ತರಲಾಗಿದೆ. ಇವಿಎಂ ಕಾರ್ಯನಿರ್ವಹಣೆಯ ಕುರಿತು ಕಳವಳ ವ್ಯಕ್ತವಾಗಿದ್ದು, ಸಾರ್ವಜನಿಕ ನಂಬಿಕೆಯನ್ನು ಮರುಸ್ಥಾಪಿಸಲು ಸದೃಢ ರಹಸ್ಯ ಮತದಾನ ಪದ್ಧತಿಗೆ ಮರಳುವುದು ಅವಶ್ಯಕ ಎಂದು ವಿವರಿಸಲಾಗಿದೆ.



ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರಹಸ್ಯ ಮತದಾನ ವ್ಯವಸ್ಥೆಯ ಬಳಕೆ ಕಡ್ಡಾಯಗೊಳಿಸಲು ಶಾಸನ ರೂಪಿಸುವುದು ಅಗತ್ಯವಾಗಿದೆ. ರಾಜ್ಯ ಕಾಗದ ಪತ್ರಗಳನ್ನು ಬಳಸಿಕೊಂಡು ರಹಸ್ಯ ಮತದಾನ ವ್ಯವಸ್ಥೆ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲು ಸ್ಥಳೀಯ ಸಂಸ್ಥೆಗಳನ್ನು ನಿಯಂತ್ರಿಸುವ ಸಂಬಂಧ ಕಾನೂನು ತಿದ್ದುಪಡಿ ಮಾಡಲು ತಿದ್ದುಪಡಿ ವಿಧೇಯಕ ಮಂಡಿಸಲಾಗಿದೆ.

ಉಪವಿಭಾಗಾಽಕಾರಿಯಿಂದ ಮತದಾರರ ಪಟ್ಟಿ: ಜಿಲ್ಲಾ ಪಂಚಾಯಿತಿಯ ಪ್ರತಿಯೊಂದು ಮತಕ್ಷೇತ್ರಗಳಲ್ಲಿ ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಾಧಿಕಾರಿ ಮತದಾರರ ಪಟ್ಟಿ ಸಿದ್ಧಪಡಿಸಬೇಕು. ಈ ಮುಂಚೆ ಸಹ ಆಯುಕ್ತರಿಂದ ಮತದಾನದ ಪಟ್ಟಿಯನ್ನು ಸಿದ್ಧಪಡಿಸಬಹುದಾಗಿತ್ತು. ಇದೀಗ ಆ ಹೊಣೆಯನ್ನು ಉಪವಿಭಾಗಾಧಿಕಾರಿಗೆ ನೀಡಲಾಗಿದೆ. ಈ ಸಂಬಂಧ ಮೂಲ ಅಧಿನಿಯಮದ 165ನೇ ಪ್ರಕರಣಕ್ಕೆ ತಿದ್ದುಪಡಿ ಮಾಡಲಾಗಿದೆ.

ಅದರಂತೆ ಸಿದ್ಧಪಡಿಸಲಾದ ಮತದಾರರ ಪಟ್ಟಿಯನ್ನು ಈ ಅಧಿನಿಯಮದ ಅನುಸಾರವಾಗಿ ಪರಿಷ್ಕರಿಸಬೇಕು, ಮಾರ್ಪಡಿಸಬೇಕು ಹಾಗೂ ಪ್ರಕಟಿಸಬೇಕು ಎಂದು ವಿಧೇಯಕದಲ್ಲಿ ಹೇಳಲಾಗಿದೆ. ಜಿಲ್ಲಾ ಪಂಚಾಯಿತಿ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲಾಗಿರುವ ಯಾರೇ ವ್ಯಕ್ತಿ, ಆ ಮತಕ್ಷೇತ್ರದ ಚುನಾವಣೆಯಲ್ಲಿ ಮತದಾನಕ್ಕೆ ಹಕ್ಕುಳ್ಳವನಾಗಿರಲಿದ್ದಾನೆ. ಮೂಲ ಅಧಿನಿಯಮದಲ್ಲಿದ್ದ ಜಿಲ್ಲಾ ಪಂಚಾಯಿತಿಯ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ವಿಧಾನಸಭೆಯ ಮತದಾರರ ಪಟ್ಟಿಯನ್ನು ಜಿಲ್ಲಾ ಪಂಚಾಯಿತಿಯ ಮತದಾರರ ಪಟ್ಟಿಯ ಸಿದ್ಧತೆಯ ಉದ್ದೇಶಕ್ಕಾಗಿ ಅಳವಡಿಸಿಕೊಳ್ಳುವ ಅಂಶ ಕೈಬಿಡಲಾಗಿದೆ. ಅಂದರೆ ಭಾರತೀಯ ಚುನಾವಣಾ ಆಯೋಗ ಸಿದ್ಧಪಡಿಸುವ ವಿಧಾನ ಸಭೆಯ ಮತದಾರರ ಪಟ್ಟಿ ಅಳವಡಿಸಿಕೊಳ್ಳಬಹುದಾದ ಅಂಶವನ್ನು ಕೈಬಿಡಲಾಗಿದೆ.

ಕೆಂಪೇಗೌಡ ಬಸ್ ನಿಲ್ದಾಣ ಸಿಂಗಾಪುರದಂತೆ ಹೈಟೆಕ್

ವಿಧಾನ ಪರಿಷತ್: ನಗರದ ಕೆಂಪೇಗೌಡ ಬಸ್ ನಿಲ್ದಾಣವನ್ನು ಸಿಂಗಾಪುರಕ್ಕಿಂತಲೂ ಚೆನ್ನಾಗಿ ನಿರ್ಮಾಣ ಮಾಡಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದರು. ಶಾಸಕ ಎಂ. ನಾಗರಾಜು ಅವರು ನಿಯಮ 330 ರಡಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಅವರು, ಕೆಎಸ್ಆರ್‌ಟಿಸಿ, ಬಿಎಂಟಿಸಿ ಜಂಟಿಯಾಗಿ ಕೆಂಪೇಗೌಡ ಬಸ್ ನಿಲ್ದಾಣವನ್ನು ಇಂರ್ಟ ಮಾಡಲ್ ಟ್ರಾನ್ಸಿಸ್ಟ್ ಅಭಿವೃದ್ಧಿಪಡಿಸುವ ಸಾರ್ವಜನಿಕ, ಖಾಸಗಿ ಸಹಭಾಗಿತ್ವದಲ್ಲಿ ಪ್ರಾಜೆಕ್ಟ್ ಮೆಜೆಸ್ಟಿಕ್ ಯೋಜನೆಯನ್ನು ಕೈಗೊಳ್ಳಲು ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಟೆಂಡರ್ ಪಡೆದವರಿಗೆ ಕಾರ್ಯಾದೇಶ ಪತ್ರ ನೀಡಿದೆ. ಟೆಂಡರ್ ಪಡೆದವರು ಯೋಜನೆಯನ್ನು ಅನುಷ್ಠಾನಗೊಳಿಸಲು ಬೇಕಾದ ನಕ್ಷೆ, ಯೋಜನೆಯ ರೂಪುರೇಷೆ ದಾಖಲೆಗಳು ಅಭಿವೃದ್ಧಿದಾರರನ್ನು ಆಯ್ಕೆಗೊಳಿಸಲು ಬೇಕಾದ ಟೆಂರ್ಡ ದಸ್ತಾವೇಜನ್ನು ತಯಾರಿಸಲು ಸಂಚಾರ ಅಧ್ಯಯನ, ಮಾರುಕಟ್ಟೆ ಅಧ್ಯಯನ, ತಾಂತ್ರಿಕ ಪ್ರಕ್ರಿಯೆಗಳನ್ನು ಪ್ರಾರಂಭಿಸಿದ್ದಾರೆ ಎಂದರು.

ಹಲಸು ಮಂಡಳಿ ಸ್ಥಾಪನೆ ಮಾಡುವ ಉದ್ದೇಶ ಇಲ್ಲ

ವಿಧಾನ ಪರಿಷತ್: ರಾಜ್ಯದಲ್ಲಿ 726.41 ಹೆಕ್ಟೇರ್ ಪ್ರದೇಶದಲ್ಲಿ ಹಲಸಿನಹಣ್ಣನ್ನು ಬೆಳೆಯಲಾಗುತ್ತಿದ್ದು, ವಾರ್ಷಿಕವಾಗಿ 29,576 ಮೆಟ್ರಿಕ್ ಟನ್ ಉತ್ಪಾದನೆಯಾಗುತ್ತಿದ್ದು, ಹಲಸಿನ ಮಂಡಳಿ ಸ್ಥಾಪಿಸುವ ಉದ್ದೇಶ ಇಲ್ಲ ಎಂದು ತೋಟಗಾರಿಕಾ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ತಿಳಿಸಿದರು. ಪ್ರಶೋತ್ತರ ವೇಳೆಯಲ್ಲಿ ಶಾಸಕ ಸಿ.ಎನ್. ಮಂಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹಲಸಿನ ಹಣ್ಣು ಅತಿ ಶೀಘ್ರವಾಗಿ ಹಾಳಾಗುವ ಗುಣ ಹೊಂದಿದ್ದು, ಮಾರು ಕಟ್ಟೆಯನ್ನು ತಮಗೊಳಿಸಲು ಹಲಸಿನ ಮೇಳ ನಡೆಸಲಾಗುತ್ತಿದೆ. ಹಣ್ಣುಗಳು ವ್ಯರ್ಥವಾಗದಂತೆ ತಡೆಯಲು ಶೀತ ಲೀಕರಣ ಕೇಂದ್ರ ಸ್ಥಾಪಿಸಲು ಸಲಹೆ ನೀಡಲಾಗಿದೆ. ರಾಜ್ಯದಲ್ಲಿ 236 ಶೀತಲ ಗೃಹಗಳಿದ್ದು, 8.45 ಲಕ್ಷ ಮೆಟ್ರಿಕ್ ಟನ್ ಸಂಗ್ರಹಣೆ ಮಾಡಬಹುದು. ತೋಟಗಾರಿಕೆ ಇಲಾಖೆಯಿಂದ ಹೊಸದಾಗಿ 7 ಶೀತಲಗೃಹಗಳನ್ನು ನಿರ್ಮಿಸ ಲಾಗುತ್ತಿದ್ದು, 24 ಸಾವಿರ ಮೆಟ್ರಿಕ್ ಟನ್ ಸಾಮರ್ಥ್ಯ ಹೊಂದಲಿವೆ. ಶೀತಲಗೃಹ ಅಥವಾ ಸಂಸ್ಕರಣಾ ಘಟಕ ಸ್ಥಾಪಿಸಲು ಮುಂದಾಗುವ ರೈತರು/ಖಾಸಗಿ, ರೈತ ಉತ್ಪಾದಕ ಸಂಸ್ಥೆಗಳು, ಸಂಘ ಸಂಸ್ಥೆಗಳಿಗೆ ಸಹಾಯ ಧನ ನೀಡಲಾಗುವುದು. ಹಲಸಿನ ಹಣ್ಣಿನ ಮೌಲ್ಯವರ್ಧನೆ ಪರಿಶೀಲನೆ ಮಾಡಲು ಸಣ್ಣ ಕೈಗಾರಿಕೆ ಇಲಾಖೆಗೆ ಈ ವಿಚಾರವನ್ನು ವರ್ಗಾಯಿಸಲಾಗುವುದು ಎಂದು ತಿಳಿಸಿದರು.

ಬೆಳಗಾವಿ ಮಹಾನಗರ ಪಾಲಿಕೆಗೆ 170 ಕೋಟಿ

ವಿಧಾನ ಪರಿಷತ್: ಬೆಳಗಾವಿ ಮಹಾನಗರ ಪಾಲಿಕೆಗೆ 170 ಕೋಟಿ ರು. ಅನುದಾನ ನೀಡಲಾಗಿದೆ ಎಂದು ನಗರಾಭಿವೃದ್ಧಿ ವಿಧಾನ ಪರಿಷತ್ ಸಚಿವ ಬಿ.ಎಸ್.ಸುರೇಶ್ ತಿಳಿಸಿದರು. ಪ್ರಶೋತ್ತರ ವೇಳೆಯಲ್ಲಿ ಶಾಸಕ ತಳವಾರ್ ಸಾಬಣ್ಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು ಬೆಳಗಾವಿ ನಗರದ ಬಸವನಕುಡುಚಿಯ ದೇವರಾಜ ಅರಸು ಕೆ.ಎಚ್.ಬಿ ಬಡಾವಣೆಯಲ್ಲಿ ಮೂಲ ಸೌಕರ್ಯಗಳಾದ ರಸ್ತೆ, ಯುಜಿಡಿ, ವಿದ್ಯುತ್ ಸಂಪರ್ಕ ಮೊದಲಾದ ಸೌಲಭ್ಯಗಳನ್ನು ಕಲ್ಪಿಸಲು 15 ಕೋಟಿ ರು. ಮೊತ್ತದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಎಂದರು.

ವಿಶ್ವವಾಣಿ ಕ್ಲಬ್ ಹೌಸ್
11.03.2026
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀರಾಜು ಅಡಕಳ್ಳಿ
ವಿಷಯ
ಹಾಸ್ಯ ವಿಲಾಸ

vishwavani.news

ದಿನ ವಿಶೇಷ

11 ಮಾರ್ಚ್ 2026 ಬುಧವಾರ

» ಸೂರ್ಯೋದಯ	: 06-32
» ಸೂರ್ಯಾಸ್ತ	: 06-29
» ತಿಥಿ	: ಅಷ್ಟಮಿ
» ನಕ್ಷತ್ರ	: ಜೇಷ್ಠಾ
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಸೌರ ವಸಂತ
» ಮಾಸ	: ಫಾಲ್ಗುಣ
» ಪಕ್ಷ	: ಕೃಷ್ಣಪಕ್ಷ

ನಿಗಮಗಳಿಗೆ ಅನುದಾನ ಕಡಿತ, ಆಸ್ಪತ್ರೆಗಳಲ್ಲಿ ಔಷಧಿ ಇಲ್ಲ, ಇಲಾಖೆಗಳಲ್ಲಿ ಅನುದಾನ ಖರ್ಚಾಗಿಲ್ಲ: ಅಶೋಕ

ಜನರನ್ನು ಸಾಲದ ಸುಳಿಯಲ್ಲಿ ಸಿಲುಕಿಸಿದ ಬಜೆಟ್

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ರಾಜ್ಯದ ಜನರನ್ನು ಸಾಲದ ಸುಳಿಯಲ್ಲಿ ಸಿಲುಕಿಸಿದೆ. ಹಿಂದುಳಿದ ವರ್ಗ, ಪರಿಶಿಷ್ಟ ವರ್ಗ ಹಾಗೂ ಎಲ್ಲ ವರ್ಗದ ಜನರಿಗೆ ಈ ಬಜೆಟ್ ತೀವ್ರ ಅನ್ಯಾಯ ಮಾಡಿದೆ. ವಿತ್ತೀಯ ಕೊರತೆ ಹಾಗೂ ಸಾಲದ ಪ್ರಮಾಣ ಮಿತಿ ಮೀರಿ ಹೋಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ದೂರಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ, ಸಿಎಂ ಸಾಲ ತೀರಿಸಲು ಹೊಸ ಸಾಲ ಮಾಡಿದ್ದಾರೆ. ಹಿಂದಿನ ಯೋಜನೆಗಳ ಪ್ರಗತಿ ಹೇಳದೆ ಸಾಲ ಮಾತ್ರ ಮಾಡಿದ್ದಾರೆ. 1995-96 ರಲ್ಲಿ ಸಿದ್ದರಾಮಯ್ಯ ಅವರನ್ನು ಮಾಜಿ ಪ್ರಧಾನಿ ದೇವೇಗೌಡರು ಮೊದಲ ಬಾರಿಗೆ ಆರ್ಥಿಕ ಸಚಿವರನ್ನಾಗಿ ಮಾಡಿದ್ದರು. ಆಗ ಕುರಿ ಕಾಯಲು ಬಾರದವನು ಬಜೆಟ್ ಹೇಗೆ ಮಂಡಿಸುತ್ತಾನೆ ಎಂಬ ಟೀಕೆ ಕೇಳಿಬಂದಿತ್ತು. ಇದಕ್ಕೆ ತಕ್ಕ ಉತ್ತರ ನೀಡಬೇಕೆಂಬ ತುಡಿತ ಸಿದ್ದರಾಮಯ್ಯನವರಲ್ಲಿ ಇತ್ತು. ಅಂದು ಬಜೆಟ್ ಮಂಡಿಸಿದಾಗ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದ್ದರು. ಈ ಬಾರಿ ಬಜೆಟ್ ಮಂಡಿಸಿದಾಗ ಕೇವಲ 60 ಸದಸ್ಯರಿದ್ದರು. ವಿರೋಧ ಪಕ್ಷಗಳು ಬಜೆಟ್ ಟೀಕಿಸುತ್ತವೆ. ಆದರೆ ಆಡಳಿತ ಪಕ್ಷದ ಸದ್ಯಸರೇ ಬಜೆಟ್ ಬಗ್ಗೆ ಅಸಮಾಧಾನ ಹೊಂದಿದ್ದಾರೆ. ಇದರಲ್ಲಿ ಕಳೆಯೂ ಇಲ್ಲ, ಕೊಳೆಯೂ ಇಲ್ಲ ಅಂದಿನ ಬಜೆಟ್‌ನಲ್ಲಿ 66 ಪುಟ, 181 ಅಂಶಗಳಿದ್ದರೆ, ಈ ಬಾರಿ 171 ಪುಟ ಹಾಗೂ 532 ಅಂಶಗಳಿವೆ.

ಕೇಂದ್ರ ಸರಕಾರದಿಂದ 63,049 ಕೋಟಿ ರು. ಅನುದಾನ ಬಂದಿದೆ. 50 ವರ್ಷಕ್ಕೆ ಬಡ್ಡಿ ರಹಿತ ಸಾಲ ನೀಡಲಾಗಿದೆ. 8191 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದೆ. ಭಾರತ್ ಮಾಲಾ ಯೋಜನೆಯಡಿ ಕರ್ನಾಟಕಕ್ಕೆ 63,304 ಕೋಟಿ ರು. ವೆಚ್ಚದ ಕಾರಿಡಾರ್ ಸಿಕ್ಕಿದರೂ ಕೇಂದ್ರದ ಮೇಲೆ ರಾಜ್ಯದ ಕಾಂಗ್ರೆಸ್ ಸರಕಾರ ಆರೋಪ ಮಾಡುತ್ತಿದೆ.

-ಆರ್.ಅಶೋಕ ಪ್ರತಿಪಕ್ಷದ ನಾಯಕ

ಸಾಲದ ಸುಳಿ, ಅತ್ಯಧಿಕ ಖರ್ಚು

ಜಿಎಸ್‌ಟಿ, ತೆರಿಗೆ , ಸಾಲ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಅಂಕಿ ಅಂಶ ಗಳ ಮೂಲಕ ಕಾಂಗ್ರೆಸ್ ಸರಕಾರವನ್ನು ತರಾಟೆಗೆ ತೆಗೆದುಕೊಂಡ ಆರ್.ಅಶೋಕ, ಮೂರು ವರ್ಷದಲ್ಲಿ 2,89,025 ಕೋಟಿ ರೂ. ಸಾಲ ಮಾಡಲಾ ಗಿದೆ. ಸಿದ್ದರಾಮಯ್ಯನವರೇ ಮುಂದುವರಿದರೆ ಒಟ್ಟು 6 ಲಕ್ಷ ಕೋಟಿ ರೂ. ಆಗಲಿದೆ. ಇದು ಸಿದ್ದರಾಮಯ್ಯನ ವರದ್ದೇ ಪ್ರತ್ಯೇಕ ದಾಖಲೆ ಎಂದರಲ್ಲದೆ, ಕಂದಾಯ, ವಿತ್ತೀಯ ಕೊರತೆಗಳ ಬಗ್ಗೆ ಅಂಕಿಗಳ ಮೂಲಕ ಸರಕಾರದ ಸಮಸ್ಯೆಯನ್ನು ವಿವರಿಸಿದರು. ಅಲ್ಲದೆ, ಕಳೆದ ಬಜೆಟ್‌ನ ಶೇ.59.43 ರಷ್ಟು ಹಣ ಮಾತ್ರ ಈವರೆಗೆ ಖರ್ಚು ಮಾಡಲಾಗಿದ್ದು, ಉಳಿದ ಶೇ.41 ಬಳಸಿಯೇ ಇಲ್ಲ. ಸರಕಾರ ಪಾಪರ್ ಆಗಿಲ್ಲ ಎಂದು ಈ ಹಣವನ್ನು ಯಾಕೆ ಬಿಡುಗಡೆ ಮಾಡಿಲ್ಲ. ಇದರೊಂದಿಗೆ ಇಲಾಖಾವಾರು ಹಂಚಿಕೆ ಯಾದ ಅನುದಾನದ ಬಗ್ಗೆಯೂ ಬೆಳಕು ಚೆಲ್ಲಿ, ವಾಣಿಜ್ಯ ತೆರಿಗೆ, ಅಬಕಾರಿ, ಮುದ್ರಾಂಕ ನೋಂದಣಿ ಶುಲ್ಕ, ಮೋಟಾರು ವಾಹನ ಇಲಾಖೆಯ ವಾರ್ಷಿಕ ಸಂಗ್ರಹವಾಗದಿರುವ ಬಗ್ಗೆಯೂ ಪ್ರಶ್ನಿಸಿದರು.

ಪರಿಶಿಷ್ಟರ ಹಣ ದುರ್ಬಳಕೆ

ಪರಿಶಿಷ್ಟರ ಹಣವನ್ನು ಲೂಟಿ ಮಾಡಿದರೆ ಅದು ಸಾಮಾಜಿಕ ನ್ಯಾಯ ಅನ್ನಿಸುವುದಿಲ್ಲ. ಎಸ್‌ಸಿಎಸ್‌ಟಿ/ಟಿಎಸ್‌ಪಿ ಹಣದಲ್ಲಿ 2026-27 ರಲ್ಲಿ ಗೃಹಲಕ್ಷ್ಮಿಗೆ 8296 ಕೋಟಿ ರು. , ಶಕ್ತಿಗೆ 1537 ಕೋಟಿ, ಅನ್ನಭಾಗ್ಯಕ್ಕೆ 1612 ಕೋಟಿ, ಗೃಹ ಜ್ಯೋತಿಗೆ 2591 ಕೋಟಿ, ಯುವನಿಧಿಗೆ 1062 ಸೇರಿ ಒಟ್ಟು 14,198 ಕೋಟಿ ರು. ಹಣ ವರ್ಗಾವಣೆ ಮಾಡಲಾಗಿದೆ. ಈವರೆಗಿನ ಬಜೆಟ್‌ಗಳಲ್ಲಿ ಎಸ್‌ಸಿ , ಎಸ್‌ಟಿಗೆ ಶೇ.24.1 ಜನಸಂಖ್ಯೆಗೆ ಒಟ್ಟು 1,56,701 ಕೋಟಿ ರು. ನೀಡಿದ್ದಾರೆ. ದಲಿತ ಶಾಸಕರು, ಸಚಿವರು ನಮಗೆ ಅನ್ಯಾಯವಾಗಿದೆ ಎಂದು ಬಾಯಿ ಬಿಡಲೇ ಇಲ್ಲ. ದಲಿತ ಸಂಘಟನೆಗಳು ಸರಕಾ ರದ ವಿರುದ್ಧ ಹೋರಾಟ ಮಾಡುತ್ತಿವೆ. ಎಸ್‌ಸಿಎಸ್‌ಟಿ/ಟಿಎಸ್‌ಪಿಗೆ ಕೊನೆಗೆ 30,000 ಕೋಟಿ ರು. ಮಾತ್ರ ಉಳಿಯುತ್ತದೆ. ಈ ಹಣ ವನ್ನು ಮರಳಿ ದಲಿತರಿಗೆ ನೀಡಬೇಕು. ಈ ಹಣ ವನ್ನು ಬೇರೆ ಯೋಜನೆಗಳಿಗೆ ಬಳಸಬಾರದು ಎಂದು ಆಗ್ರಹಿಸಿದರು. ಅಲ್ಲದೆ, ಘೋಷಣೆಯಗಳು ಜಾರಿಯಾಗಿಲ್ಲ ಎಂದರು.

ಆದರೂ ಈ ಬಜೆಟ್ ಗೆ ಚಪ್ಪಾಳೆ ಸಿಕ್ಕಿಲ್ಲ ಎಂದು ಕುಟುಕಿದರು. ಸಿಎಂ ಸಿದ್ದರಾಮಯ್ಯ ಮೊದಲಿಗೆ ಮುಂದಿನ ಬಜೆಟ್ ನಾನೇ ಮಂಡಿಸುತ್ತೇನೆ ಎನ್ನುತ್ತಿದ್ದರು. ಈಗ ಆ ಬಗ್ಗೆ ಖಚಿತತೆ ಇಲ್ಲ. ಡಿ.ಕೆ. ಶಿವಕುಮಾರ್ ಜೊತೆಗೆ ಹಾಲು ಜೇನಿನಂತೆ ಇದ್ದೇನೆ ಎನ್ನುತ್ತಾರೆ. ಅದು ಹಾಲು ಜೇನಾ ಅಥವಾ ಹಾಲಾಹಲವೋ ಎಂದು ಮುಂದೆ ಗೊತ್ತಾಗುತ್ತದೆ. ಒಂದು ಕೈಯಿಂದ ಚಪ್ಪಾಳೆ ಸಾಧ್ಯವಿಲ್ಲ ಎಂದರು.

ಜೇ ಗಳ ಕಥೆ: ಈ ಬಾರಿಯ ಬಜೆಟ್‌ನಲ್ಲಿ ಜಿ ಎಂದು ಉಲ್ಲೇಖಿಸಿದ್ದು, ನಗರಾಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದ್ದೇವೆ ಎಂದಿದ್ದಾರೆ. ಆದರೆ ಆಂಧ್ರ ಸಿಎಂ ರೇವಂತ್ ರೆಡ್ಡಿ ಬೆಂಗಳೂರನ್ನು ತೆಗಳಿದ್ದಾರೆ. ಬೆಂಗಳೂರಿನ ಯಾವುದೇ ರಸ್ತೆಯು ಕಸಮುಕ್ತವಾಗಿಲ್ಲ. 10 ಸಾವಿರ ಲಂಚ ಪಡೆದು ಇ ಖಾತಾ ಮಾಡುತ್ತಿದ್ದಾರೆ. ಜನರ ಹೆಸರಿನ ಖಾತೆಯನ್ನು ಮರಳಿ ಜನರ ಹೆಸರಿಗೇ ಮಾಡಿಸಿಕೊಡುತ್ತಿದ್ದಾರೆ. ಇದರಿಂದಾಗಿ ಅಧಿಕಾರಿಗಳಿಗೆ ಲಾಭವಾಗಿದೆ. ನನ್ನ ಕಚೇರಿಗೆ ಬಹಳಷ್ಟು ಜನರು ಬಂದು ಈ ಸಮಸ್ಯೆಯ ಬಗ್ಗೆ ಹೇಳಿಕೊಂಡಿದ್ದಾರೆ. ಹಣವಿಲ್ಲದೆ ಇ ಖಾತಾ ಮಾಡಿಸುತ್ತಿಲ್ಲ ಎಂದಾದರೆ ಸರಕಾರ ನನ್ನ ಮೇಲೆ ಕ್ರಮ ಕೈಗೊಳ್ಳಬಹುದು. ಐದು ಪಾಲಿಕೆಗಳಲ್ಲಿ ಈಗ ಅನುದಾನವಿಲ್ಲ. ಪಶ್ಚಿಮ ವಲಯದಲ್ಲಿ ಕಸ ಎತ್ತಲು ಕೂಡ ಹಣವಿಲ್ಲ. ಬಾಂಡ್ ಮೂಲಕ ಹಣ ಸಂಗ್ರಹಿಸಿ ಎಂದು ಸರಕಾರ ಸೂಚಿಸಿದೆ. ಈ ಹಿಂದೆ ಜಲಾಶಯಗಳನ್ನು ನಿರ್ಮಿಸಲು ಮಾತ್ರ ಬಾಂಡ್‌ಗಳನ್ನು ನೀಡಲಾಗುತ್ತಿತ್ತು. ಕಳೆದ 3 ವರ್ಷದಲ್ಲಿ 3,617 ಸರಕಾರಿ ಶಾಲೆಗಳನ್ನು ಬಂದ್ ಮಾಡಲು ನಿರ್ಧರಿಸಲಾಗಿದೆ. ಶಾಲೆಗಳಲ್ಲಿ 17 ಲಕ್ಷ ದಾಖಲಾತಿ ಕುಸಿತವಾಗಿದೆ, 4,398 ಶಾಲೆಗಳು ಮುಚ್ಚುವ ಹಂತದಲ್ಲಿದೆ. ಶಾಲೆಗಳ ದುರಸ್ತಿಗೆ ಕೂಡ ಹಣ ಇಲ್ಲ. ಬೆಳ್ತಂಗಡಿಯ ಗ್ರಾಮದಲ್ಲಿ ಶಾಲಾ ಪ್ರವಾಸಕ್ಕೆ ಟಿಪ್ಪರ್ ಬಳಸಲಾಗಿದೆ. ಮಕ್ಕಳು ಟಿಪ್ಪರ್, ಜೆಸಿಬಿಯಲ್ಲಿ ಪ್ರಯಾಣ ಮಾಡುವುದೇ ಇವರ 11 ಜಿ ಅಭಿವೃದ್ಧಿಯಾಗಿದೆ ಎಂದು ಟೀಕಿಸಿದರು.

ಕಲುಷಿತ ನೀರಿನ ಬಾಟಲಿ ಪ್ರದರ್ಶಿಸಿದ ಸೂರಜ್ ರೇವಣ್ಣ ಇಂಥ ನೀರು ಕುಡಿದರೆ ಜನರ ಗತಿಯೇನು?

ವಿಧಾನ ಪರಿಷತ್: ಹಾಸನ ತಾಲೂಕಿನ ಕೌಶಿಕ ಗ್ರಾಮದ ಕಾರ್ಖಾನೆಗಳಿಂದ ಹೊರಬರುತ್ತಿರುವ ರಾಸಾಯನಿಕ ತ್ಯಾಜ್ಯಗಳು, ಕೊಳವೆ ಬಾವಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಅನೇಕ ಮನೆಗಳಿಗೆ ಕಲುಷಿತ ನೀರು ಪೂರೈಕೆಯಾಗುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಹೇಳಿದ್ದಾರೆ. ಅಲ್ಲಿ ಪೂರೈಕೆಯಾದ ಕಲುಷಿತ ನೀರಿನ ಬಾಟಲಿಯನ್ನು ಪ್ರದರ್ಶಿಸುವ ಮೂಲಕ ಸಮಸ್ಯೆಯ ಬಗ್ಗೆ ವಿಧಾನ ಮಂಡಲದ ಕಲಾಪದಲ್ಲಿ ಗಮನ ಸೆಳೆದರು.

ಈ ರೀತಿ ಅತ್ಯಂತ ಕಲುಷಿತ ಪ್ರಮಾಣದಲ್ಲಿ ನೀರು ಪೂರೈಕೆಯಾಗುತ್ತಿದೆ. ಇಂಥ ನೀರು ಕುಡಿದರೆ ಅಲ್ಲಿನ ಜನರ ಗತಿಯೇನು? ಕೌಶಿಕ ಗ್ರಾಮದ ಬಳಿ ಇರುವ ವೈನ್ ಸೂಪರ್ ಪ್ರೈಡ್ ಮೊದಲಾದ ವಿವಿಧ ಕಾರ್ಖಾನೆಗಳ ಲ್ಯಾಬೋರೇಟರಿಗಳಿಂದ ರಾಸಾಯನಿಕ ತ್ಯಾಜ್ಯಗಳನ್ನು ಯಾವ ಮಾನದಂಡ ಅನುಸರಿಸದೇ ಅವೈಜ್ಞಾನಿಕವಾಗಿ ಬಿಡುತ್ತಿರುವುದರಿಂದ ಈ ರಾಸಾಯನಿಕ ಕೊಳವೆಬಾವಿಗಳಿಗೆ ಸೇರುತ್ತಿದೆ. ಇದು ಗಂಭೀರ ಸಮಸ್ಯೆಯಾಗಿದ್ದು, ಇದಕ್ಕೆ ಪರಿಹಾರ ಕಲ್ಪಿಸಬೇಕಿದೆ ಎಂದು ಒತ್ತಾಯಿಸಿದರು.

ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ ಸಚಿವರು

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಈಶ್ವರ ಖಂಡ್ರೆ, ಈಗಾಗಲೇ ಈ ಸಮಸ್ಯೆಯನ್ನು ನಿವಾರಣೆ ಮಾಡಲಾಗಿದೆ. ಇನ್ನೂ ಆತಂಕವಿದ್ದರೆ ಕೂಡಲೇ ಇನ್ನೊಂದು ವೈಜ್ಞಾನಿಕ ಪರಿವೀಕ್ಷಣಾ ತಂಡವನ್ನು ಸ್ಥಳಕ್ಕೆ ಕಳುಹಿಸಲಾಗುವುದು. ಕೊಳವೆ ಬಾವಿಗಳಿಗೆ ರಾಸಾಯನಿಕ ಹರಿಬಿಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಬಳ್ಳಾರಿ ವಿಮಾನ ನಿಲ್ದಾಣ ಬಗ್ಗೆ ಸಿಎಂ ಜತೆ ಚರ್ಚೆ

ವಿಧಾನ ಪರಿಷತ್: ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ನಿರ್ಮಾಣದ ಬಗ್ಗೆ ಸಿಎಂ ಮತ್ತು ಜನಪ್ರತಿನಿಧಿಗಳ ಜತೆ ಸಭೆ ಮಾಡಿ ನಿರ್ಧಾರ ಮಾಡುವುದಾಗಿ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯ ಸತೀಶ್ ಪ್ರಶ್ನೆ ಕೇಳಿದ್ದು, ಬಳ್ಳಾರಿ ವಿಮಾನ ನಿಲ್ದಾಣದ ಕಾಮಗಾರಿ ಪೂರ್ಣ ಆಗಿಲ್ಲ, ಭೂಮಿ ಸ್ವಾಧೀನ ಮಾಡಿಕೊಳ್ಳಲಾಗಿದೆ. ಆದರೂ ಕೆಲಸ ಶುರುವಾಗಿಲ್ಲ. ಅಲ್ಲಿನ ಅಧಿಕಾರಿಗಳಿಗೆ ಪ್ರಶಸ್ತಿ ಕೊಡಬೇಕು. ಬಳ್ಳಾರಿಯಲ್ಲಿ ವಿಮಾನ ನಿಲ್ದಣ ಬರುತ್ತಾ? ಬರೊಲ್ಲವಾ? ಸರಕಾರ ಹೇಳಬೇಕು. ವಿಮಾನ ನಿಲ್ದಾಣ ಮಾಡಲು ಆಗಿಲ್ಲ ಅಂದರೆ ರೈತರಿಗೆ ಜಮೀನು ವಾಪಸ್ ಕೊಡಬೇಕು ಎಂದು ಒತ್ತಾಯ ಮಾಡಿದರು

ಇದಕ್ಕೆ ಸಚಿವ ಎಂಬಿ ಪಾಟೀಲ್ ಉತ್ತರ ನೀಡಿ, ಬಳ್ಳಾರಿಯಲ್ಲಿ 8-9 ವರ್ಷಗಳಿಂದ ವಿಮಾನ ನಿಲ್ದಾಣ ಆಗಿಲ್ಲ, ಈಗಾಗಲೇ ಭೂಮಿ ಸ್ವಾಧೀನ ಆಗಿದೆ. ಸಿಎಂ ನೇತೃತ್ವದಲ್ಲಿ ಬಳ್ಳಾರಿ, ವಿಜಯನಗರ, ಕೊಪ್ಪಳ ಭಾಗದ ಜನಪ್ರತಿನಿಧಿಗಳ ಜತೆ ಸಭೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ದೇಶದಲ್ಲಿ ವಿಮಾನ ನಿಲ್ದಾಣಗಳ ಸಮಸ್ಯೆ ಗಂಭೀರವಾಗಿದೆ. ಉಡಾನ್ ಇದ್ದಾಗ ನಡೆಯುತ್ತವೆ. ಆದು ಮುಗಿದ ಮೇಲೆ ಹೋಗುತ್ತದೆ. ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ಮಾಡಲ್ಲ ಅಂತ ಹೇಳಲ್ಲ. ಸಿಎಂ ನೇತೃತ್ವದ ಸಭೆಯಲ್ಲಿ ನಿರ್ಧಾರ ಮಾಡಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಉತ್ತರ ಒದಗಿಸದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸ್ಪೀಕರ್ ಸೂಚನೆ

ವಿಧಾನಸಭೆ: ಸದನದಲ್ಲಿ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ ಒದಗಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಸರಕಾರಕ್ಕೆ ಸೂಚನೆ ನೀಡಿದರು.

ಪ್ರಶ್ನೋತ್ತರ ಸಂದರ್ಭದಲ್ಲಿ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಲ್ಲಿ ಅರ್ಧಕ್ಕೂ ಹೆಚ್ಚು ಪ್ರಶ್ನೆಗಳಿಗೆ ಉತ್ತರ ಸಿಗದ ಬಗ್ಗೆ ಬಿಜೆಪಿಯ ಸುರೇಶ್ ಕುಮಾರ್ ಅವರು ಆಕ್ಷೇಪ ಎತ್ತಿದ್ದನ್ನು ಸಮರ್ಥಿಸಿ ಮಾತನಾಡಿದ ಸಭಾಧ್ಯಕ್ಷ ಯು.ಟಿ. ಖಾದರ್ ಅವರು, ನಿನ್ನೆ ಸಹ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳ ಸಂಖ್ಯೆ ಕಡಿಮೆ ಇತ್ತು. ಇಂದು ಸಹ ಅದೇ ಆಗಿದೆ. ಈ ರೀತಿ ಆಗುವುದು ಸರಿಯಲ್ಲ. ಸಚಿವರುಗಳು ತಮ್ಮ ಇಲಾಖಾಧಿಕಾರಿಗಳಿಗೆ ಸೂಚನೆ ಕೊಡಬೇಕು. ಸದನದಲ್ಲಿ ಶಾಸಕರು ಕೇಳುವ ಎಲ್ಲಾ ಪ್ರಶ್ನೆಗಳಿಗೆ ತಡ ಮಾಡದೆ ಉತ್ತರಗಳು ಸದನಕ್ಕೆ ಬರಬೇಕು. ಉತ್ತರಗಳು ಸಿದ್ದಪಡಿಸಿ ಕೊಡುವುದಕ್ಕೆ ಐಎಎಸ್, ಐಪಿಎಸ್ ಆಗಬೇಕಾ, ಸದನಕ್ಕೆ ಉತ್ತರ ಕೊಡದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಸೂಚನೆ ನೀಡಿದರು. ಸಭಾಧ್ಯಕ್ಷರ ಮಾತಿಗೆ ಸ್ಪಂದಿಸಿ ಮಾತ ನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಸದನದಲ್ಲಿ ಶಾಸಕರು ಕೇಳುವ ಎಲ್ಲಾ ಪ್ರಶ್ನೆಗಳಿಗೂ ಉತ್ತರ ನೀಡಲೇಬೇಕು. ಉತ್ತರವನ್ನು ವಿಳಂಬ ಮಾಡದೇ ನೀಡುವಂತೆ ಎಲ್ಲಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಸದನಕ್ಕೆ ಉತ್ತರ ಕೊಡಲು ವಿಳಂಬ ಮಾಡುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.

ಕಾಲಕಾಲಕ್ಕೆ ಕೈಗಾರಿಕಾ ನೀತಿ ಜಾರಿ: ಎಂಬಿಪಾ

ವಿಧಾನ ಪರಿಷತ್: ರಾಜ್ಯದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆಗಾಗಿ ಬಂಡವಾಳ ಹೂಡಿಕೆ ಆಕರ್ಷಿಸಲು ಸರಕಾರವು ಕಾಲಕಾಲಕ್ಕೆ ಕೈಗಾರಿಕಾ ನೀತಿ ಜಾರಿಗೆ ತರುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಪಿ.ಎಚ್. ಪೂಜಾರ್ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳನ್ನೊಳಗೊಂಡಂತೆ ರಾಜ್ಯದಲ್ಲಿ ಬಂಡವಾಳವನ್ನು ಆಕರ್ಷಿಸಲು ಹಲವು ಆದ್ಯತಾ ಹಾಗೂ ಪ್ರೋತ್ಸಾಹಕ ಕ್ರಮ ಕೈಗೊಳ್ಳಲಾಗಿದೆ. 2025-30 ಕೈಗಾರಿಕಾ ನೀತಿಯು ರಾಜ್ಯದ ಸಮಗ್ರ ಅಭಿವೃದ್ಧಿ ಹೊರಗಡೆ ಗುರಿಯೊಂದಿಗೆ ಬೆಂಗಳೂರಿನಿಂದ ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶವನ್ನು ಉತ್ತೇಜಿಸುವ ಗುರಿಯನ್ನು ಹೊಂದಲಾಗಿದೆ ಎಂದು ತಿಳಿಸಿದರು.

ಕೈಗಾರಿಕೆಯಲ್ಲಿ ಹಿಂದುಳಿದ ತಾಲೂಕುಗಳಲ್ಲಿ ಹೂಡಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ನೀತಿಯಲ್ಲಿ 3 ವಲಯಗಳಾಗಿ ರಾಜ್ಯದ ಜಿಲ್ಲೆಗಳನ್ನು ವರ್ಗೀಕರಿಸಿದೆ. ಕೈಗಾರಿಕೆಯಲ್ಲಿ ಹಿಂದುಳಿದ ತಾಲೂಕುಗಳು/ಜಿಲ್ಲೆಗಳನ್ನು ವಲಯ-1 ಮತ್ತು ವಲಯ-2 ರಲ್ಲಿ ಹಾಗೂ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ವಲಯ-3 ರಲ್ಲಿ ವರ್ಗೀಕರಿಸಲಾಗಿದೆ. ರಾಜ್ಯದ ಸಮತೋಲನ ಕೈಗಾರಿಕಾ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆಗಳು/ತಾಲೂಕುಗಳಲ್ಲಿ ಹೂಡಿಕೆಗಳನ್ನು ಆಕರ್ಷಿಸಲು ಹೆಚ್ಚಿನ ಪ್ರೋತ್ಸಾಹವನ್ನು ನೀಡಲಾಗುತ್ತಿದೆ. ದೇಶ ವಿದೇಶಗಳ ಹಲವಾರು ಪ್ರತಿಷ್ಠಿತ ಕಂಪನಿಗಳೊಂದಿಗೆ ಕರ್ನಾಟಕದಲ್ಲಿ ಬಂಡವಾಳ ಹೂಡಲು ಸಭೆಗಳನ್ನು ನಡೆಸಲಾಗುತ್ತಿದೆ ಎಂದು ಉತ್ತರಿಸಿದರು.

ಬಂಡವಾಳ ಹೂಡಿಕೆ, ಉದ್ಯೋಗ ಸೃಷ್ಟಿಗೆ 117 ಒಪ್ಪಂದ: ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ 6,70, 560 ಕೋಟಿ ಬಂಡವಾಳ ಹೂಡಿಕೆ ಹಾಗೂ 2,47, 571 ಉದ್ಯೋಗ ಸೃಜನೆಗಾಗಿ 117 ಹೂಡಿಕೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿ ಸದಸ್ಯ ಸಿ.ಟಿ.ರವಿ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಒಡಂಬಡಿಕೆ ಮಾಡಿಕೊಂಡಿರುವ ಯೋಜನೆಗಳ ಪೈಕಿ 57 ಯೋಜನೆಗಳು ರಾಜ್ಯ ಉನ್ನತಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಅನುಮೋದನೆ ಪಡೆದಿವೆ. ಇವುಗಳಿಂದ 79907.94 ಕೋಟಿ ಬಂಡವಾಳ ಹೂಡಿಕೆ ಮತ್ತು 55729 ಉದ್ಯೋಗ ಸೃಜನೆ ನಿರೀಕ್ಷಿಸಲಾಗಿದೆ. ಅನುಮೋದನೆಯಾಗಿರುವ 57 ಯೋಜನೆಗಳ ಪೈಕಿ 6 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ 6900.14 ಕೋಟಿ ರು. ಬಂಡವಾಳ ಹೂಡಿಕೆಯಾಗಿದೆ ಮತ್ತು 6,654 ಉದ್ಯೋಗ ಸೃಜನೆಯಾಗಿದೆ. ಬಾಕಿ ಯೋಜನೆಗಳು ಅನುಷ್ಠಾನ ಹಂತದಲ್ಲಿವೆ. ಇವುಗಳೆಲ್ಲ ಬೃಹತ್ ಕೈಗಾರಿಕೆಗಳಾಗಿರುವುದರಿಂದ ಅನುಷ್ಠಾನಕ್ಕೆ ಕನಿಷ್ಠ 3 ರಿಂದ 5 ವರ್ಷ ಬೇಕಾಗುತ್ತದೆ ಅನುಮೋದಿಸಲ್ಪಟ್ಟ 57 ಯೋಜನೆಗಳ 22 ಕಂಪನಿಗಳಿಗೆ 1275.93 ಎಕರೆ ಜಮೀನು ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.

ಎಪಿಎಂಸಿಗಳಲ್ಲಿ 70 ಲಕ್ಷ ಕೋಟಿ ವಹಿವಾಟು: ಶಿವಾನಂದ ಪಾಟೀಲ್

ವಿಧಾನ ಪರಿಷತ್: ಪ್ರಸಕ್ತ ಹಣಕಾಸು ವರ್ಷದ ಜನವರಿ ಅಂತ್ಯಕ್ಕೆ ರಾಜ್ಯದ ಎಪಿಎಂಸಿಗಳಲ್ಲಿ ಒಟ್ಟು71 ಲಕ್ಷ ರು. ಕೋಟಿ ವಹಿವಾಟು ನಡೆದಿದ್ದು, 476.65 ಕೋಟಿ ರು. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದೆ ಎಂದು ಸಕ್ಕರೆ, ಕಬ್ಬು ಅಭಿವೃದ್ಧಿ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದ್ದಾರೆ.

ಸದಸ್ಯ ಟಿ.ಶರವಣ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ಕಳೆದ ಹಣಕಾಸು ವರ್ಷದಲ್ಲಿ 82 ಲಕ್ಷ ರು. ಕೋಟಿ ವಹಿವಾಟು ನಡೆದಿತ್ತು. ಈ ಅವಧಿಯಲ್ಲಿ ರೂ 498 ಕೋಟಿ ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದ್ದು, ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ಪ್ರಮಾಣ ಇನ್ನು ಹೆಚ್ಚಾಗಲಿದೆ. ರಾಜ್ಯದಲ್ಲಿ 170 ಎಪಿಎಂಸಿಗಳಿದ್ದು, ಅಂಗಡಿಗಳ ಹಂಚಿಕೆ ಪ್ರಕ್ರಿಯೆ ನಿರಂತರವಾಗಿರುತ್ತದೆ. 141 ಎಪಿಎಂಸಿಗಳಲ್ಲಿ ಅಂಗಡಿ ಹರಾಜು ಬಾಕಿ ಇದ್ದು, ಕ್ರಮ ಕೈಗೊಳ್ಳಲು ಸಮಿತಿಗಳಿಗೆ ಸೂಚನೆ ನೀಡಲ ಾಗಿದೆ. ವಾಣಿಜ್ಯ ಸ್ವರೂಪದ ಚಿಕ್ಕ ಮಳಿಗೆಗಳನ್ನು 55 ತಿಂಗಳ ಹಂಚಿಕೆ ಅವಧಿ ಮುಕ್ತಾಯವಾದ ನಂತರ ಮತ್ತೆ ಮುಂದುವರಿಸಲು ಅವಕಾಶ ಇಲ್ಲ. ಅಂತಹ ಅಂಗಡಿಗಳನ್ನು ಹೊಸದಾಗಿ ಟೆಂರ್ಡ ಕರೆದು ಬೇಡಿಕೆಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಿದ್ದು, ಬಾಕಿ ಉಳಿಯುವುದಿಲ್ಲ ಎಂದು ತಿಳಿಸಿದ್ದಾರೆ.

ಅಚಲ ವಿಶ್ವಾಸದ ಆರು ವರ್ಷ, ಪ್ರಗತಿ ಪರ್ವದ ಹರ್ಷ

← ಮೊದಲಪುಟದಿಂದ

ಕೆಪಿಸಿಸಿ ಅಧ್ಯಕ್ಷನಾಗಿ ಜವಾಬ್ದಾರಿ ವಹಿಸಿಕೊಂಡಾಗಿನಿಂದ ಕಾಲಿಗೆ ಚಕ್ರ ಕಟ್ಟಿಕೊಂಡಂತೆ ರಾಜ್ಯಾದ್ಯಂತ ಪ್ರವಾಸ ಮಾಡಿದೆ. ಹಳ್ಳಿಹಳ್ಳಿಗೆ ಹೋಗಿ ಸಂಭಾವ್ಯ ಅಭ್ಯರ್ಥಿಗಳಿಗೆ ಮತ್ತು ಕಾರ್ಯಕರ್ತರಿಗೆ ಶಕ್ತಿ ತುಂಬಿದೆ. ತನು-ಮನ-ಧನವನ್ನು ಪಕ್ಷಕ್ಕಾಗಿ ಧಾರೆ ಎರೆದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದೇ ಬರುತ್ತದೆ ಎಂಬ ವಿಶ್ವಾಸವನ್ನು ಪ್ರತಿ ಕಾರ್ಯಕರ್ತನ ಮನಸ್ಸಲ್ಲಿ ಮೂಡಿಸುವುದು ನನ್ನ ಮೊದಲ ಗುರಿಯಾಗಿತ್ತು. ವ್ಯಕ್ತಿಗಿಂತ ಪಕ್ಷ ದೊಡ್ಡದು, ಪಕ್ಷ ಇದ್ದರೆ ಮಾತ್ರ ನಮಗೆ ಅಸ್ತಿತ್ವ ಎಂದು ನಾನು ಯಾವಾಗಲೂ ಹೇಳುತ್ತೇನೆ. ಇದೇ ಶಿಸ್ತನ್ನು ಸಂಘಟನೆಯಲ್ಲಿ ಅಳವಡಿಸಿಕೊಂಡೆ.

ಸವೆದ ಕಾಲು, ಒಂದಾದ ಮನಸ್ಸುಗಳು: ಕಚೇರಿಯಲ್ಲಿ ಕುಳಿತು ಪಕ್ಷ ಸಂಘಟಿಸಲು ಸಾಧ್ಯವಿಲ್ಲ. ಅದಕ್ಕಾಗಿಯೇ ನಾವು ಜನರ ಬಳಿಗೆ ಹೋದೆವು. ಕೊರೋನಾ ಸಂಕಷ್ಟದ ನಡುವೆ ಅನ್ನದಾತರ ಕಷ್ಟ ಆಲಿಸಿದೆ. ರೈತರ ಬೆಳೆ ಖರೀದಿ ಮಾಡಿದೆ. 100 ಕೋಟಿ ರು. ಮೊತ್ತದ ಹಣ್ಣು, ತರಕಾರಿ ಖರೀದಿಸಿ ಬಡವರಿಗೆ ಹಂಚಿಕೆ ಮಾಡಿದೆ. ಆರೋಗ್ಯ ಹಸ್ತ, ಉಚಿತ ವ್ಯಾಕ್ಸಿನ್ ನೀಡಲು ಆಗ್ರಹಿಸಿ ಯಶಸ್ವಿಯಾದೆ. ಚಾಮರಾಜನಗರ ಆಕ್ಸಿಜನ್ ದುರಂತದಲ್ಲಿ ಮಡಿದವರಿಗೆ ಒಂದು ಲಕ್ಷ ರು. ಪರಿಹಾರ ನೀಡಲಾಯಿತು. ಕಾರ್ಮಿಕರಿಗೆ ಉಚಿತ ಬಸ್ ವ್ಯವಸ್ಥೆ ಮಾಡಲಾಯಿತು.

ನಮ್ಮ ಪಾಲಿನ ನೀರಿಗಾಗಿ ನಾವು ನಡೆಸಿದ 'ಮೇಕೆದಾಟು ಪಾದಯಾತ್ರೆ' ಕೇವಲ ಪ್ರತಿಭಟನೆಯಾಗಿರಲಿಲ್ಲ. ಅದು ಕನ್ನಡಿಗರ ಹಕ್ಕಿನ ಧ್ವನಿಯಾಗಿತ್ತು. ಕೋವಿಡ್ ನಿರ್ಬಂಧದ ನಡುವೆಯೂ ಆ ನಡಿಗೆ ಕಾರ್ಯಕರ್ತರಲ್ಲಿ ಚೈತನ್ಯ ತುಂಬಿತು. 'ನಮ್ಮ ನೀರು ನಮ್ಮ ಹಕ್ಕು' ಎಂಬ ಘೋಷಣೆ ಎಲ್ಲೆಡೆ ಮೊಳಗಿತು. ಅದಾದ ನಂತರ, ನಾಯಕರಾದ ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೋ ಯಾತ್ರೆ' ಕರ್ನಾಟಕಕ್ಕೆ ಬಂದಾಗ ಇತಿಹಾಸ ಬದಲಾಯಿತು. ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿ ತೆರೆಯಲು ಹೊರಟ ರಾಹುಲ್ ಅವರೊಂದಿಗೆ ಹೆಜ್ಜೆ ಹಾಕಿದ ಲಕ್ಷಾಂತರ ಕನ್ನಡಿಗರು, ಬದಲಾವಣೆಯ ಗಾಳಿ ಬೀಸುತ್ತಿರುವುದನ್ನು ಸಾಬೀತುಪಡಿಸಿದರು. ಈ ಎರಡೂ ಮೈಲಿಗಲ್ಲುಗಳು ಪಕ್ಷದ ಸಂಘಟನೆಗೆ ಭದ್ರ ಬುನಾದಿ ಹಾಕಿದವು.

ಆ ಸಂದರ್ಭದಲ್ಲಿ ಬಿಜೆಪಿಯ ದುರಾಡಳಿತ ಎಲ್ಲೆ ಮೀರಿತ್ತು. 40 ಪರ್ಸೆಂಟ್ ಭ್ರಷ್ಟಾಚಾರವನ್ನು ಜನರ ಮುಂದೆ ತಂದು ಸರಕಾರದ ಬಣ್ಣ ಬಯಲು ಮಾಡಿದ್ದೆವು. ಇನ್ನೆಂದೂ ಬಿಜೆಪಿಗೆ ಮತ ಹಾಕಬಾರದು ಎಂದು ಮತದಾರ ಆಗಲೇ ನಿರ್ಧಾರ ಮಾಡಿಯಾಗಿತ್ತು. ಹಲವಾರು ಘಟಾನುಘಟಿ ನಾಯಕರು ಪಕ್ಷ ಸೇರ್ಪಡೆಯಾದರು. ಪ್ರತಿಯೊಂದು ಸಣ್ಣ ಸಮುದಾಯದ ಜನರೊಟ್ಟಿಗೆ ಸಂವಾದ ಏರ್ಪಡಿಸಿ ಅವರ ಸಮಸ್ಯೆಗಳನ್ನು ಆಲಿಸಿದೆ. 75 ಲಕ್ಷ ಕಾಂಗ್ರೆಸ್ ಸದಸ್ಯತ್ವ, ವಿಭಾಗ ಮಟ್ಟದ ಸಂಕಲ್ಪ ಸಮಾವೇಶ, ಗಾಂಧಿ ಭಾರತ, ನಮ್ಮ ಮತ ನಮ್ಮ ಹಕ್ಕು ಹೋರಾಟ, ಮನರೇಗಾ ಮರು ಜಾರಿಗೆ ಆಗ್ರಹ, ನೂರು ಕಾಂಗ್ರೆಸ್ ಕಚೇರಿಗಳ ನಿರ್ಮಾಣಕ್ಕೆ ಸಿದ್ಧತೆ ಹೀಗೆ ಹಲವಾರು ವಿಚಾರಗಳು ಪಕ್ಷದ ಸಂಘಟನೆಗೆ ಶಕ್ತಿ ನೀಡಿದವು. ಚುನಾವಣೆಗೆ ಮುನ್ನ 136 ಸ್ಥಾನ ಬರಲಿದೆ ಎಂದಾಗ, ಅನೇಕರು ಆಶ್ಚರ್ಯಪಟ್ಟಿದ್ದರು. ಇದು ಅಹಂಕಾರವಾಗಿರಲಿಲ್ಲ. ಬದಲಾಗಿ ನಮ್ಮ ತಂತ್ರಗಾರಿಕೆ. ಈ ನನ್ನ ಮಾತು ನಿಜವಾಯಿತು. ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ನನ್ನ ಮೇಲಿಟ್ಟಿದ್ದ ವಿಶ್ವಾಸಕ್ಕೆ ನ್ಯಾಯ ಒದಗಿಸಿದ್ದೇನೆ ಎಂಬ ಸಮಾಧಾನ ನನಗಿದೆ. ಕೊಟ್ಟ ಮಾತು ಉಳಿಸಿಕೊಂಡಾಗ ಸಿಗುವ ಸಾರ್ಥಕತೆ ಬೆಲೆ ಕಟ್ಟಲಾಗದ್ದು.

ನುಡಿದಂತೆ 'ಗ್ಯಾರಂಟಿ' ನೀಡಿದ ಆಡಳಿತ: ಅಂದು ಕೇಂದ್ರ ಬಿಜೆಪಿ ಸರಕಾರದಿಂದಾಗಿ ಬೆಲೆ ಏರಿಕೆಯ ಬಿಸಿ ಜನರಿಗೆ ಸರಿಯಾಗಿ ತಟ್ಟಿತ್ತು. ಇದೇ ಸಮಯದಲ್ಲೇ, ಜನರ ಕೈಗೆ ನೇರ ಹಣ ನೀಡುವ ಯೋಜನೆಗಳನ್ನು ನಾವು ಘೋಷಿಸಿದ್ದೆವು. ಅದರಂತೆ ಜಾರಿಗೆ ತಂದ ಗೃಹ ಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಮತ್ತು ಯುವ ನಿಧಿ ಪ್ರತಿ ಮನೆಯ ಆರ್ಥಿಕ ಸ್ಥಿತಿ ಸುಧಾರಿಸುತ್ತಿವೆ. ನುಡಿದಂತೆ ನಡೆಯುವುದು ನಮ್ಮ ಸಂಸ್ಕೃತಿ ಎಂಬ ನಂಬಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯರವರು ಮತ್ತು ನಾನು ಉಳಿಸಿಕೊಂಡಿದ್ದೇವೆ.

ಕಾಂಗ್ರೆಸ್ ಪಕ್ಷದ ಇತಿಹಾಸವೇ ತ್ಯಾಗದ್ದು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಈ ಪಕ್ಷ, ಅಧಿಕಾರಕ್ಕಾಗಿ ಎಂದೂ ಹಪಹಪಿಸಿಲ್ಲ. ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿಯವರು ದೇಶಕ್ಕಾಗಿ ಪ್ರಾಣ ನೀಡಿದರು. ಪ್ರಧಾನಿ ಹುದ್ದೆ ಒಲಿದು ಬಂದರೂ ಸೋನಿಯಾ ಗಾಂಧಿ ದೇಶದ ಹಿತಕ್ಕಾಗಿ ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಮನಮೋಹನ್ ಸಿಂಗ್‌ರಿಗೆ ಅವಕಾಶ ಬಿಟ್ಟುಕೊಟ್ಟರು. ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಮನಸ್ಸು ಮಾಡಿದ್ದರೆ ಎಂದೋ ಕೇಂದ್ರದಲ್ಲಿ ಮಂತ್ರಿಗಳಾಗಬಹುದಿತ್ತು. ಆದರೆ ನಮ್ಮ ನಾಯಕರು ಹೋರಾಡುತ್ತಿರುವುದು ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿಸುವುದಕ್ಕೇ ಹೊರತು ಅಧಿಕಾರಕ್ಕಾಗಿ ಅಲ್ಲ. ನಾನು ಕಾರ್ಯಕರ್ತರಿಗೆ ಯಾವಾಗಲೂ ಹೇಳುವಂತೆ - ವ್ಯಕ್ತಿಗಿಂತ ಪಕ್ಷ ದೊಡ್ಡದು. ಪಕ್ಷ ಶಕ್ತಿಯುತವಾಗಿದ್ದರೆ ಮಾತ್ರ ನಾವು ಶಕ್ತಿಯುತವಾಗಲು ಸಾಧ್ಯ. ಅಧಿಕಾರಕ್ಕಿಂತ ತ್ಯಾಗ ಮತ್ತು ಪಕ್ಷದ ಮೇಲಿನ ನಿಷ್ಠೆ ದೊಡ್ಡದು.

ಈ ಅವಧಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವದಿಸಿದ ಏಳು ಕೋಟಿ ಕನ್ನಡಿಗರಿಗೆ ಸದಾ ಋಣಿ. ಕೆಪಿಸಿಸಿ ಅಧ್ಯಕ್ಷನಾಗಿ ಇಷ್ಟು ದುಡಿಯಲು, ಸಂಕಷ್ಟದ ನಡುವೆಯೂ ಸವಾಲುಗಳನ್ನು ಮೆಟ್ಟಿ ಕರ್ನಾಟಕದಲ್ಲಿ ಕಾಂಗ್ರೆಸ್ ಬಾವುಟ ಹಾರಿಸಲು ಅವಕಾಶ ಮಾಡಿಕೊಟ್ಟ ನಾಯಕರಿಗೆ ಹೃತ್ಪೂರ್ವಕ ಧನ್ಯವಾದ ಅರ್ಪಿಸುತ್ತೇನೆ. ಸಂಕಷ್ಟದ ಪರಿಸ್ಥಿತಿಯಲ್ಲೂ ಬೆನ್ನೆಲುಬಾಗಿ ನಿಂತ ನಾಯಕರಿಗೆ ಮತ್ತು ದಿನದ 24 ಗಂಟೆಯೂ ಪಕ್ಷಕ್ಕಾಗಿ ದುಡಿಯುವ ಲಕ್ಷಾಂತರ ಕಾರ್ಯಕರ್ತರಿಗೆ ಮನಃಪೂರ್ವಕ ಧನ್ಯವಾದ ಅರ್ಪಿಸುತ್ತೇನೆ.

ಅಧಿಕಾರ ಸಿಕ್ಕಾಕ್ಷಣ ನಮ್ಮ ಹೋರಾಟ ಮುಗಿಯುವುದಿಲ್ಲ. ಕರ್ನಾಟಕವನ್ನು ದೇಶದ ನಂ.1 ರಾಜ್ಯವಾಗಿ ಮಾಡುವುದು ಮತ್ತು ಪ್ರತಿ ಕನ್ನಡಿಗನ ಮನೆಯಲ್ಲಿ ನೆಮ್ಮದಿ ಮೂಡಿಸುವುದು ನಮ್ಮ ಗುರಿ. ಕಾಂಗ್ರೆಸ್ ಎಂಬ ಶಕ್ತಿಗೆ ಎಂದಿಗೂ ಚ್ಯುತಿ ಬರುವುದಿಲ್ಲ, ಕಾಂಗ್ರೆಸ್ ಸಿದ್ಧಾಂತಕ್ಕೆ ಎಂದಿಗೂ ಸಾವಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ಜನಮಾನಸದಲ್ಲಿ ಶಾಶ್ವತ ಸ್ಥಾನವಿದೆ. ಕಾಂಗ್ರೆಸ್ ಪಕ್ಷದ ಹೃದಯ ಜನರ ಸೇವೆಗೆ ಸದಾ ಮಿಡಿಯುತ್ತಿರುತ್ತದೆ.

ವಿಶ್ವವಾಣಿ

ಸಂಪಾದಕೀಯ

ಇನ್ನೂ ಆಗಿಲ್ಲ ಜ್ಞಾನೋದಯ

ಜಗತ್ತಿನ ಯಾವುದಾದರೂ ಎರಡು ದೇಶಗಳ ಅಥವಾ ಬಣಗಳ ನಡುವೆ ಹೊತ್ತಿಕೊಳ್ಳುವ ಸಮರಜ್ವಾಲೆಯು, ಅವೆರಡಕ್ಕೆ ಸೇರಿದ ಜೀವನಷ್ಟ ಮತ್ತು ಸ್ವತ್ತುನಷ್ಟಗಳಿಗೆ ಪ್ರತ್ಯಕ್ಷ ಕಾರಣ ಆಗುವುದರ ಜತೆಗೆ, ಸಮರದಲ್ಲಿ ಭಾಗಿಯಾಗದ ಮಿಕ್ಕ ದೇಶಗಳಿಗೂ ಪರೋಕ್ಷವಾಗಿ ಬಿಸಿಮುಟ್ಟಿಸುತ್ತದೆ ಎಂಬುದಕ್ಕೆ ಇತಿಹಾಸವು ಸಾಕಷ್ಟು ಪುರಾವೆಗಳನ್ನು ಒದಗಿಸುತ್ತದೆ. ಮೊದಲನೆಯ ಮತ್ತು ಎರಡನೆಯ ಮಹಾಯುದ್ಧಗಳು ಮಾತ್ರವಲ್ಲದೆ, ದೇಶ-ದೇಶಗಳ ನಡುವೆ ಕಾಲಾನುಕಾಲಕ್ಕೆ ನಡೆಯುವ ಸಣ್ಣ ಪುಟ್ಟ ಹಣಾಹಣಿಗಳು ಇಂಥ ಸಾಕಷ್ಟು ನಷ್ಟಗಳನ್ನು ಹೊತ್ತು ತಂದಿರುವುದು ಖರೆ. ಪ್ರಸ್ತುತ, ಇಸ್ರೇಲ್-ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧವೂ ಇದಕ್ಕೆ ಹೊರತಾಗಿಲ್ಲ. ಈ ಎರಡೂ ಬಣಗಳು ವಿವಿಧ ತೆರನಾದ ನಷ್ಟಗಳನ್ನು ಈಗಾಗಲೇ ಅನುಭವಿಸಿ ಆಗಿದೆ, ಅದು ಮುಂದುವರಿಯುತ್ತಲೂ ಇದೆ. ಸಾಲದೆಂಬಂತೆ, ನಷ್ಟದ ಬಿಸಿಯು ಮಿಕ್ಕ ದೇಶಗಳಿಗೂ ನಿಧಾನವಾಗಿ ತಟ್ಟಲು ಶುರುವಾಗತೊಡಗಿದೆ. ಭಾರತದ ಷೇರು ಮಾರುಕಟ್ಟೆಯಲ್ಲಿ ಮಹಾಕುಸಿತವಾಗಿ 30 ಲಕ್ಷ ಕೋಟಿ ರುಪಾಯಿ ನಷ್ಟವಾಗಿರುವ ಸುದ್ದಿ ಬಂದಿದೆ. ಸಮಸ್ಯೆಯು ಒಂದೊಂದೇ ಸ್ತರಕ್ಕೆ ನಿಧಾನಕ್ಕೆ ಮೈಚಾಚಿಕೊಳ್ಳುತ್ತಿದೆ ಎಂಬುದಕ್ಕೆ ಅಡುಗೆ ಅನಿಲದ ಪೂರೈಕೆಯಲ್ಲಿ ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಹೆಚ್ಚಿರುವುದು, ತತ್ಪರಿಣಾಮವಾಗಿ ಹೋಟೆಲ್‌ಗಳು ಅನಿವಾರ್ಯವಾಗಿ ಕೆಲ ಕಾಲ ಬಾಗಿಲು ಮುಚ್ಚಬೇಕಾಗುವ ಪರಿಸ್ಥಿತಿ ತಲೆದೋರಿರುವುದು ಸಾಕ್ಷಿಯಾಗಿವೆ. ಆದರೆ ಸಮರೋನ್ಮಾದಿಗಳಿಗೆ ಇಂಥ ಸೂಕ್ಷ್ಮಗಳು ಇನ್ನೂ ಅರ್ಥವಾಗದಿರುವುದು ವಿಷಾದನೀಯ. ಎಲ್ಲ ಸಮಸ್ಯೆಗಳ ಪರಿಹಾರಕ್ಕೂ ಯುದ್ಧವೇ ಮಾರ್ಗೋಪಾಯ ಎಂಬ ಚಿತ್ತಸ್ಥಿತಿಯನ್ನು ಕೆಲವರು ತೊಡೆಯುವವರೆಗೂ ಇಂಥ ಪರಿಸ್ಥಿತಿ ಮುಂದುವರಿಯುತ್ತೋ ಏನೋ? ಒಟ್ಟಿನಲ್ಲಿ, ಆದಷ್ಟು ಬೇಗ ಎಲ್ಲವೂ ತಣ್ಣಗಾಗಿ, ವಾತಾವರಣ ಸಾಮಾನ್ಯ ಸ್ಥಿತಿಗೆ ಮರಳಲಿ ಎಂದಷ್ಟೇ ಆಶಿಸುವುದಷ್ಟೇ ನಮ್ಮ ಕೆಲಸ...

ಸೊಂಪಾದಕೀಯ

ಮಂಗಗಳ ಮಂಗಳಕಾರ್ಯ

ನಾವು ಅನೇಕ ಸಿನಿಮಾಗಳಲ್ಲಿ, ಕಥಾನಾಯಕನು ಕಷ್ಟದಲ್ಲಿರುವವರ ರಕ್ಷಣೆ ಮಾಡುವ ದೃಶ್ಯಗಳನ್ನು ನೋಡಿದ್ದೇವೆ. 'ಅಯ್ಯೋ, ಈ ಅನ್ಯಾಯನಾ ತಡೆಯೋಕೆ ಯಾರೂ ಇಲ್ವಾ..?' ಅಂತ ಚಿತ್ರದ ಪಾತ್ರವೊಂದು ಕೂಗಿ ಹೇಳಿದಾಗ ನಾಯಕ ನಟನ ಎಂಟ್ರಿ ಆಗೋದು, ಅವನು ಬಂದು ಅನ್ಯಾಯನ ನಿಲ್ಲಿಸೋದು ಎಲ್ಲವನ್ನೂ ನೋಡಿದ್ದೇವೆ. ಇದು ಮುಂದುವರಿದು, ಅನೇಕ ಪ್ರಾಣಿಪ್ರಧಾನ ಚಿತ್ರಗಳಲ್ಲಿ ನಾಯಿ, ಕೋತಿ, ಹಸು ಮುಂತಾದ ಪ್ರಾಣಿಗಳು ಸಂಕಷ್ಟದಲ್ಲಿರುವವರನ್ನು ಪಾರುಮಾಡಿದ ಉದಾಹರಣೆಗಳನ್ನೂ ನಾವು ನೋಡಿದ್ದೇವೆ. ಇದು ಅಂಥದ್ದೇ ಒಂದು ಪ್ರಸಂಗ. ಸೆಕ್ಸ್ ಅನ್ನೋ ವಿಷಯಕ್ಕೆ ಬಂದ್ರೆ ಮನುಷ್ಯ ಕ್ರೂರಮೃಗ ಆಗ್ತಾನೆ ಅನ್ನೋದಕ್ಕೆ ಅನೇಕ ಉದಾಹರಣೆಗಳಿವೆ. ಮನುಷ್ಯನನ್ನು ಕೊಂದು, ದೇಹವನ್ನು ಕತ್ತರಿಸಿ, ಅದರ ತುಂಡುಗಳನ್ನು ಫ್ರಿಜ್‌ನಲ್ಲಿ ಶೇಖರಿಸಿಡುವವರೆಗೆ ಈ ಕ್ರೂರತನ ಮುಂದುವರಿದಿರೋದ್ರಿಂದ ಇದು ಶೀತಲ ಸಮರವಾಗಿ ಉಳಿದಿಲ್ಲ. ಮನುಷ್ಯನೊಳಗಿನ ಮೃಗ ಒಂದು ಕಡೆ ಆದರೆ, ಮೃಗಗಳಲ್ಲಿರೋ ಮನುಷ್ಯತ್ವ ಇನ್ನೊಂದು ಕಡೆ. ಅಂಥ ಮೃಗಗಳ ಮಾನವೀಯತೆ ಸಾರುವಂಥ ವಿಷಯ ಇದು. ಸುಮಾರು 2 ವರ್ಷದ ಹಿಂದೆ ಉತ್ತರಪ್ರದೇಶದಲ್ಲಿ ಮಂಗಗಳು, ಅತ್ಯಾಚಾರಕ್ಕೆ ಒಳಗಾಗುತ್ತಿದ್ದ ಬಾಲಕಿಯನ್ನು ರಕ್ಷಣೆ ಮಾಡಿ, ಮನುಷ್ಯ ಮೇಲೋ, ಪ್ರಾಣಿ ಮೇಲೋ ಎಂಬ ಪ್ರಶ್ನೆಗೆ ಉತ್ತರ ನೀಡಿದ ಕಥೆಯಿದು. 6 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗುವ ಪ್ಲ್ಯಾನ್ ಮಾಡಿ, ಆಕೆಯ ಜತೆ ನಯವಾಗಿ ಮಾತಾಡಿ ಪಾಳುಬಿದ್ದ ಮನೆಯೊಂದಕ್ಕೆ ಕರೆದೊಯ್ದಿದ್ದ ಕಾಮುಕ, ಇನ್ನೇನು ಆಕೆಯ ಮೇಲೆ ಅತ್ಯಾಚಾರಕ್ಕೆ ಸಿದ್ಧವಾಗಿದ್ದಾಗ ಅವನ ಮೇಲೆ ಅಟ್ಯಾಕ್ ಮಾಡಿದ ಮಂಗಗಳು ಆತನನ್ನು ಅಲ್ಲಿಂದ ಓಡಿಸಿ ಮಂಗಗಳಿಗೂ ಮಾನವೀಯತೆ ಇದೆ ಅಂತ ಪ್ರೂವ್ ಮಾಡಿ ದವಂತೆ. ಬಾಲಕಿಯ ಚೀರಾಟ ಕೇಳಿ ಅಲ್ಲಿದ್ದ ಮಂಗಗಳ ಹಿಂಡು ಈ ಕಾಮು ಕನ ಮೇಲೆ ದಾಳಿ ಮಾಡಿದವಂತೆ. ಮಂಗಗಳ ಸಂಖ್ಯೆ ಜಾಸ್ತಿ ಇದ್ದಿದ್ದರಿಂದ ಅವನು ಬೇರೆ ದಾರಿ ಕಾಣದೆ ಅಲ್ಲಿಂದ ಪೇರಿ ಕಿತ್ತನಂತೆ. ಬಾಲಕಿಯ ಮನೆಯವರು ಸಾಕ್ಷಾತ್ ಹನುಮಂತನೇ ಬಂದು ನಮ್ಮ ಮಗಳನ್ನು ರಕ್ಷಿಸಿ ದ್ದಾನೆ ಅಂತ ನಿಟ್ಟುಸಿರು ಬಿಟ್ಟರಂತೆ. ಒಟ್ಟಿನಲ್ಲಿ ಮಂಗಗಳು ಅಂದ್ರೆ ಬರೀ ಕಪಿ ಚೇಷ್ಟೆ ಮಾಡಲು ಮಾತ್ರ ಅಂದುಕೊಂಡಿದ್ದವರಿಗೆ ಮಂಗಗಳಿಂದ ಮಂಗಳಕರ ಕೆಲಸಗಳೂ ಆಗುತ್ತವೆ ಅಂತ ಪ್ರೂವ್ ಮಾಡಿದವು ಈ ಕೋತಿಗಳು ಎನ್ನಲಡ್ಡಿಯಿಲ್ಲ.

ಸಂಪಾದಕರ ಸದ್ಯಶೋಧನೆ

ಖರ್ಗ್ ದ್ವೀಪದ ಮಹತ್ವ

ಹಾರ್ಮುಜ್ ಜಲಸಂಧಿಯ ಹಾಗೆ, ಪರ್ಷಿಯನ್ ಕೊಲ್ಲಿಯ ಆಳದಲ್ಲಿರುವ ಒಂದು ಸಣ್ಣ ದ್ವೀಪವು ಇಡೀ ದೇಶದ ಭವಿಷ್ಯವನ್ನೇ ನಿರ್ಧರಿಸುತ್ತದೆ ಎಂದರೆ ಅದು ಅಚ್ಚರಿಯ ಸಂಗತಿಯೇ ಸರಿ. ಇರಾನಿನ ಬುಶೆಹರ್ ಪ್ರಾಂತ್ಯದ ಕರಾವಳಿಯಿಂದ ಸುಮಾರು 25 ಕಿ.ಮೀ. ದೂರದಲ್ಲಿರುವ 'ಖರ್ಗ್ ದ್ವೀಪ' ಇರಾನಿನ ತೈಲ ಸಾಮ್ರಾಜ್ಯದ ಹೃದಯಭಾಗ. ಈ ದ್ವೀಪವನ್ನು ವಶಪಡಿಸಿಕೊಳ್ಳಲು ಈಗ ಅಮೆರಿಕ ತುದಿಗಾಲ ಮೇಲೆ ನಿಂತಿದೆ. ಖರ್ಗ್ ದ್ವೀಪವು ಸುಮಾರು 20 ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ಇದು ಹವಳದ ದಿಬ್ಬಗಳಿಂದ ಕೂಡಿದ ದ್ವೀಪವಾಗಿದ್ದು, ಸಮುದ್ರ ಮಟ್ಟದಿಂದ ಸ್ವಲ್ಪ ಎತ್ತರದಲ್ಲಿದೆ. ಇದರ ಆಯಕಟ್ಟಿನ ಸ್ಥಳವು ಪರ್ಷಿಯನ್ ಕೊಲ್ಲಿಯ ನೌಕಾಯಾನ ಮಾರ್ಗಗಳಿಗೆ ಅತ್ಯಂತ ಹತ್ತಿರದಲ್ಲಿದೆ. ದ್ವೀಪದ ಹವಾಮಾನವು ಅತಿ ಹೆಚ್ಚು ಆರ್ದ್ರತೆ ಮತ್ತು ಉಷ್ಣಾಂಶದಿಂದ ಕೂಡಿದ್ದು, ಬೇಸಗೆಯಲ್ಲಿ ಇಲ್ಲಿನ ಜೀವನ ಅಷ್ಟು ಸುಲಭವಲ್ಲ. ಖರ್ಗ್ ದ್ವೀಪಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಪ್ರಾಚೀನ ಕಾಲದಲ್ಲಿ ಇದು ನಾವಿಕರಿಗೆ ಒಂದು ಪ್ರಮುಖ ವಿಶ್ರಾಂತಿ ತಾಣವಾಗಿತ್ತು. ಇಲ್ಲಿ ದೊರೆತಿರುವ ಸಿರಿಯಾಕ್ ಶಾಸನಗಳು ಮತ್ತು ಪಾರ್ಸಿಗಳ (ಜೊರಾಸ್ಟ್ರಿಯನ್) ಬೆಂಕಿಯ ದೇವಾಲಯಗಳ ಅವಶೇಷಗಳು ಈ ದ್ವೀಪವು ಕ್ರಿಶ್ಚಿಯನ್ ಮತ್ತು ಪಾರ್ಸಿ ಸಂಸ್ಕೃತಿಗಳ ಸಂಗಮವಾಗಿತ್ತು ಎಂಬುದಕ್ಕೆ ಸಾಕ್ಷಿ ಒದಗಿಸುತ್ತವೆ. 18ನೇ ಶತಮಾನದಲ್ಲಿ ಡಚ್ಚರು ಇಲ್ಲಿ ಕೋಟೆಯನ್ನು ನಿರ್ಮಿಸಿ ವ್ಯಾಪಾರ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಇರಾನಿನ ಆರ್ಥಿಕತೆಗೆ ಖರ್ಗ್ ದ್ವೀಪದ ಕೊಡುಗೆ ಅಪ್ರತಿಮ. ಇರಾನ್ ರಫ್ತು ಮಾಡುವ ಕಚ್ಚಾ ತೈಲದ ಸುಮಾರು ಶೇ. 90ರಿಂದ ಶೇ.95ರಷ್ಟು ಪಾಲು ಈ ದ್ವೀಪದ ಮೂಲಕವೇ ಹಾದುಹೋಗುತ್ತದೆ. ಇಲ್ಲಿ ಬೃಹತ್ ತೈಲ ಟರ್ಮಿನಲ್‌ಗಳಿವೆ. ವಿಶ್ವದ ಅತಿದೊಡ್ಡ ತೈಲ ಟ್ಯಾಂಕರ್‌ಗಳು ಇಲ್ಲಿ ಲಂಗರು ಹಾಕಬಹುದು. ಇರಾನಿನ ಪ್ರಧಾನ ಭೂಭಾಗದ ತೈಲ ಬಾವಿಗಳಿಂದ ಸಮುದ್ರದ ಅಡಿಯಲ್ಲಿರುವ ಬೃಹತ್ ಪೈಪ್‌ಲೈನ್‌ಗಳ ಮೂಲಕ ತೈಲವು ಈ ದ್ವೀಪಕ್ಕೆ ಬರುತ್ತದೆ. ಇಲ್ಲಿಂದ ಅದನ್ನು ಜಗತ್ತಿನಾದ್ಯಂತ ರವಾನಿಸಲಾಗುತ್ತದೆ. ದ್ವೀಪದಲ್ಲಿ ಲಕ್ಷಾಂತರ ಬ್ಯಾರೆಲ್ ತೈಲವನ್ನು ಸಂಗ್ರಹಿಸಿಡುವ ಬೃಹತ್ ಟ್ಯಾಂಕ್‌ಗಳಿವೆ. ತನ್ನ ಆರ್ಥಿಕ ಪ್ರಾಮುಖ್ಯದಿಂದಾಗಿಯೇ ಖರ್ಗ್ ದ್ವೀಪವು ಯಾವಾಗಲೂ ಶತ್ರುಗಳ ಗುರಿಯಾಗಿದೆ. 1980-88ರ ಅವಧಿಯಲ್ಲಿ ನಡೆದ ಇರಾನ್-ಇರಾಕ್ ಸುದೀರ್ಘ ಯುದ್ಧದಲ್ಲಿ ಇರಾಕ್ ಪಡೆಗಳು ಖರ್ಗ್ ದ್ವೀಪದ ಮೇಲೆ ನೂರಾರು ಬಾರಿ ವೈಮಾನಿಕ ದಾಳಿ ನಡೆಸಿದ್ದವು. ಇರಾನಿನ ಆರ್ಥಿಕತೆಯನ್ನು ಕುಸಿಯುವಂತೆ ಮಾಡುವುದು ಇರಾಕ್‌ನ ಉದ್ದೇಶವಾ ಗಿತ್ತು. ಆದರೂ, ಇರಾನ್ ಈ ದ್ವೀಪದ ರಕ್ಷಣೆಯನ್ನು ಯಶಸ್ವಿಯಾಗಿ ಮಾಡಿತು. ಇಂದಿಗೂ ಇರಾನ್ ಮತ್ತು ಪಶ್ಚಿಮ ದೇಶಗಳ ನಡುವೆ ಉದ್ವಿಗ್ನತೆ ಉಂಟಾದಾಗ ಖರ್ಗ್ ದ್ವೀಪವು ಸುದ್ದಿಯಲ್ಲಿರುತ್ತದೆ. ಈ ದ್ವೀಪದ ಮೇಲೆ ದಾಳಿಯಾದರೆ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ತಲ್ಲಣ ಉಂಟಾಗುತ್ತದೆ. ಕೈಗಾರಿಕಾ ಪ್ರದೇಶ ಮಾತ್ರವಲ್ಲದೇ, ಈ ದ್ವೀಪವು ನೈಸರ್ಗಿಕವಾಗಿಯೂ ಶ್ರೀಮಂತವಾಗಿದೆ. ಇಲ್ಲಿ ವಿಶಿಷ್ಟ ಜಾತಿಯ ಜಿಂಕೆಗಳು ಕಂಡುಬರುತ್ತವೆ. ದ್ವೀಪದ ಸುತ್ತಲಿನ ಹವಳದ ದಿಬ್ಬಗಳು ಸಮುದ್ರ ಜೀವಿಗಳಿಗೆ ಉತ್ತಮ ಆವಾಸಸ್ಥಾನವನ್ನು ಒದಗಿಸಿವೆ. ಆದರೆ, ತೈಲ ಸೋರಿಕೆ ಮತ್ತು ಕೈಗಾರಿಕಾ ಮಾಲಿನ್ಯವು ಇಲ್ಲಿನ ಪರಿಸರಕ್ಕೆ ದೊಡ್ಡ ಸವಾಲಾಗಿದೆ. ಖರ್ಗ್ ದ್ವೀಪದಲ್ಲಿ ತೈಲ ಕಂಪನಿಯ ಉದ್ಯೋಗಿಗಳು ಮತ್ತು ಅವರ ಕುಟುಂಬಗಳು ಹೆಚ್ಚಾಗಿ ವಾಸಿಸುತ್ತವೆ. ದ್ವೀಪದಲ್ಲಿ ಶಾಲೆಗಳು, ಆಸ್ಪತ್ರೆಗಳು ಮತ್ತು ಮೂಲಭೂತ ಸೌಕರ್ಯಗಳಿವೆ. ಇಲ್ಲಿಗೆ ಹೋಗಲು ವಿಮಾನ ನಿಲ್ದಾಣ ಮತ್ತು ದೋಣಿ ವ್ಯವಸ್ಥೆ ಇದೆ. ಆದರೆ, ಭದ್ರತಾ ಕಾರಣಗಳಿಗಾಗಿ ಈ ದ್ವೀಪಕ್ಕೆ ಪ್ರವೇಶವು ಕಟ್ಟುನಿಟ್ಟಿನ ನಿಯಮಗಳಿಗೆ ಒಳಪಟ್ಟಿರುತ್ತದೆ. ಖರ್ಗ್ ದ್ವೀಪವು ಇರಾನಿನ ಕೇವಲ ಒಂದು ಭೂಪ್ರದೇಶವಲ್ಲ, ಅದು ಆ ದೇಶದ ಶಕ್ತಿ. ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಈ ದ್ವೀಪಕ್ಕೆ ಇರುವ ಸ್ಥಾನಮಾನ ಅತ್ಯಂತ ದೊಡ್ಡದು. ಇತಿಹಾಸ, ತಂತ್ರಜ್ಞಾನ ಮತ್ತು ರಾಜಕೀಯದ ದೃಷ್ಟಿಯಿಂದ ಈ ಸಣ್ಣ ದ್ವೀಪವು ಜಗತ್ತಿನ ಗಮನ ಸೆಳೆಯುತ್ತಲೇ ಇರುತ್ತದೆ.

ನಿತೀಶ್ ಅನುಪಸ್ಥಿತಿಯಲ್ಲಿ ಜೆಡಿಯು ಭವಿಷ್ಯ ಬಿಗಿಯಾಗಿರುವುದೇ?

ಎನ್‌ಡಿಎ ಮೈತ್ರಿಕೂಟದಲ್ಲಿ ಬಿಜೆಪಿ ದೊಡ್ಡ ಪಕ್ಷವಾಗಿದ್ದರೂ, ಸಿಎಂ ಸ್ಥಾನದಲ್ಲಿ ನಿತೀಶ್ ಕುಮಾರ್ ಇದ್ದುದರಿಂದ ಆಡಳಿತ ಮತ್ತು ರಾಜಕೀಯ ನಿಯಂತ್ರಣದ ಕೀಲಿಕೈ ಅವರ ಕೈಯಲ್ಲೇ ಇರುತ್ತಿತ್ತು. ಆದರೆ, ಇನ್ನು ಈ ಕೀಲಿಕೈ ದೆಹಲಿಗೆ ಶಿಫ್ಟ್ ಆಗುವುದರಿಂದ ಬಿಹಾರ ರಾಜಕೀಯವು ಹೊಸ ಬದಲಾವಣೆಗಳಿಗೆ ತೆರೆದುಕೊಳ್ಳುವುದು ನಿಶ್ಚಿತ.

ಜನಪಥ

ರಾಘವಶರ್ಮ ನಿಡ್ಲೆ

vveditoped@gmail.com

ಬಿಹಾರದಲ್ಲಿ ಸಿಎಂ ಕುರ್ಚಿ ಬಿಟ್ಟು ರಾಜ್ಯಸಭೆ ಸದಸ್ಯರಾಗಿ ದಿಲ್ಲಿಗೆ ಹಾರುವ ಸಿಎಂ ನಿತೀಶ್ ಕುಮಾರ್ ಅವರ ನಿರ್ಧಾರ ರಾಜ್ಯದ ಜನರಿಗೆ ಅನಿರೀಕ್ಷಿತ. 2025ರ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿ 10ನೇ ಬಾರಿಗೆ ಮುಖ್ಯಮಂತ್ರಿ ಗದ್ದುಗೆ ಏರಿದ್ದ ನಿತೀಶ್ ಮತ್ತೊಂದು ಪೂರ್ಣಾವಧಿಗೆ ಸಿಎಂ ಆಗಿ ಉಳಿದುಕೊಳ್ಳುವುದು ಕಷ್ಟ ಎಂದು ಅನೇಕರು ಭಾವಿಸಿದ್ದರೂ, ನಾಲ್ಕೇ ತಿಂಗಳಲ್ಲಿ ಸಿಎಂ ಸ್ಥಾನ ತ್ಯಜಿಸುತ್ತಾರೆ ಎಂದು ಯಾರೂ ಊಹಿಸಿರಲಿಲ್ಲ. ನಿತೀಶರ ನಿರ್ಧಾರ ಅವರ ಆಪ್ತ ವರ್ಗದಲ್ಲಿದ್ದವರನ್ನೂ ಚಿಂತೆಗೀಡುಮಾಡಿದೆ. ರಾಜ್ಯ ರಾಜಕಾರಣದಿಂದ ದೂರ ಸರಿಯುವ ತೀರ್ಮಾನ ಸಹಜವಾಗಿಯೇ ನಿತೀಶ್ ಅಭಿಮಾನಿಗಳಲ್ಲಿ ಬೇಸರ ತರಿಸಿದೆ. ಪರಿಣಾಮವಾಗಿ, ಜೆಡಿಯು ಕಚೇರಿ ಎದುರು ಪ್ರತಿಭಟನೆಗಳೂ ನಡೆದಿವೆ. ಪ್ರಾದೇಶಿಕ ಪಕ್ಷಗಳನ್ನು ವ್ಯವಸ್ಥಿತವಾಗಿ ಕುಗ್ಗಿಸುವ ಬಿಜೆಪಿಯ ತಂತ್ರಗಾರಿಕೆಗಳನ್ನು ಬೇರೆ ರಾಜ್ಯಗಳಲ್ಲಿ ನೋಡಿರುವುದರಿಂದ ಜೆಡಿಯು ಭವಿಷ್ಯದ ಬಗ್ಗೆ ಚರ್ಚೆಗಳು ಶುರುವಾಗಿವೆ.

''ವಿಧಾನಸಭೆ, ವಿಧಾನಪರಿಷತ್, ಲೋಕಸಭೆ ಸದಸ್ಯನಾಗಿದ್ದ ನಾನು ರಾಜ್ಯಸಭೆ ಸದಸ್ಯನಾಗಿಯೂ ಅನುಭವ ಪಡೆಯಬೇಕು ಎಂದು ಮತ್ತೆ ಸಂಸತ್ತಿಗೆ ತೆರಳುತ್ತಿದ್ದೇನೆ'' ಎಂದು ನಿತೀಶ್ ಕುಮಾರ್ ರಾಜ್ಯಸಭೆಗೆ ನಾಮಪತ್ರ ಸಲ್ಲಿಸುವ ದಿನದಂದು ಟ್ವೀಟ್ ಮಾಡಿದ್ದರು. ಇದನ್ನು ಅವರೇ ಮಾಡಿದ್ದರೋ ಅಥವಾ ಬೇರೆಯವರು ಮಾಡಿಸಿದ್ದರೋ ಗೊತ್ತಿಲ್ಲ. ಆದರೆ, ರಾಜ್ಯಸಭೆ ಸೀಟಿಗಾಗಿ ಸಿಎಂ ಸ್ಥಾನವನ್ನು ಯಾರೂ ಬಿಟ್ಟುಕೊಡುವುದಿಲ್ಲ. ಹೀಗಾಗಿ, ನಿತೀಶ್ ನಿರ್ಧಾರದ ಹಿಂದೆ ಬೇರೆಯದೇ ಕಾರಣವಿರುವುದು ಸ್ಪಷ್ಟ. ಹದಗೆಡುತ್ತಿರುವ ಆರೋಗ್ಯವೇ ಈ ನಿರ್ಧಾರಕ್ಕೆ ಕಾರಣ. ಕಳೆದ ಅನೇಕ ವರ್ಷಗಳಿಂದ ನಿತೀಶ್ ಆಪ್ತವರ್ಗದಲ್ಲಿರುವ ವರೊಂದಿಗೆ ಮಾತನಾಡಿದಾಗ, 'ಈಚೆಗೆ ಅವರ ನೆನಪಿನ ಶಕ್ತಿ ಕಡಿಮೆಯಾಗುತ್ತಿದೆ. ಯಾವುದೂ ನೆನಪಿನಲ್ಲಿ ಉಳಿಯುವುದಿಲ್ಲ. ವಯೋಸಹಜ ಸಮಸ್ಯೆಗಳು ಅವರನ್ನು ಬಾಧಿಸತೊಡಗಿವೆ' ಎನ್ನುವುದನ್ನು ಒಪ್ಪಿಕೊಂಡರು. ಇದಲ್ಲದೆ, ವಿಪಕ್ಷಗಳು ಕೂಡ ಅವರ ಸ್ಮರಣ ಸಾಮರ್ಥ್ಯವನ್ನು ಮತ್ತೆ ಮತ್ತೆ ಪ್ರಶ್ನೆ ಮಾಡುತ್ತಿವೆ. ''ರಾಜ್ಯ ಕ್ಯಾಬಿನೆಟ್‌ನಲ್ಲಿರುವ ಎಲ್ಲಾ ಸಚಿವರ ಹೆಸರನ್ನು ಚೀಟಿ ನೋಡದೆ ನಿತೀಶರು ಹೇಳುತ್ತಾರಾ'' ಎಂದು ಜನ ಸುರಾಜ್ ಪಕ್ಷದ ಪ್ರಶಾಂತ್ ಕಿಶೋರ್ ಸವಾಲು ಹಾಕಿದ್ದರು. ಈ ಎಲ್ಲಾ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡೇ ಬಿಜೆಪಿ-ಜೆಡಿಯು ಪ್ರಮುಖ ನಾಯಕರು ಚರ್ಚೆ ಮಾಡಿ, ನಿತೀಶರನ್ನು ರಾಜ್ಯಸಭೆಗೆ ಕಳುಹಿಸುವ ಬಗ್ಗೆ ತೀರ್ಮಾನ ಮಾಡಿದ್ದಾರೆ. ಹೀಗಾಗಿ, ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟದ ಹಿರಿಯ ಪಕ್ಷವಾಗಿರುವ ಬಿಜೆಪಿಗೆ ನಿರೀಕ್ಷೆ ಮಾಡಿದ್ದಕ್ಕಿಂತ ಮೊದಲೇ ಸಿಎಂ ಸ್ಥಾನ ಒಲಿದುಬರುತ್ತಿದೆ.

21 ವರ್ಷಗಳ ಕಾಲ 10 ಬಾರಿ ಮುಖ್ಯಮಂತ್ರಿಯಾಗಿದ್ದ ನಿತೀಶ್ ಕುಮಾರ್, ವಿವಿಧ ಹಂತಗಳಲ್ಲಿ ಆರ್‌ಜೆಡಿ ಮತ್ತು ಬಿಜೆಪಿ ಎರಡೂ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡವರು. ಹೋರಾಟಗಾರ ಜಯಪ್ರಕಾಶ ನಾರಾಯಣರ (ಜೆಪಿ) ಶಿಷ್ಯರಾಗಿದ್ದ ನಿತೀಶರು, ಲಾಲೂ ಪ್ರಸಾದ್ ಯಾದವ್, ರಾಬ್ರಿ ಯಾದವ್ ಕುಟುಂಬದ ರಾಷ್ಟ್ರೀಯ ಜನತಾದಳ ಸರಕಾರದ ದುರಾಡಳಿತದ ವಿರುದ್ಧ ಹೋರಾಟ ನಡೆಸಿ, 2005ರಲ್ಲಿ ಅತ್ಯಮೋಘ ಜನಾದೇಶದೊಂದಿಗೆ ಚುನಾವಣೆ ಗೆದ್ದು, ಅಭಿವೃದ್ಧಿ, ಸಣ್ಣ-ಸಣ್ಣ ಸಮುದಾಯ ಹಾಗೂ ಮಹಿಳಾ ಕೇಂದ್ರಿತ ಆಡಳಿತದ ಮೂಲಕ ಜನರ ಮನಸ್ಸಲ್ಲಿ ಶಾಶ್ವತ ಸ್ಥಾನವನ್ನು ಪಡೆದರು. ರಾಜ್ಯದಲ್ಲಿ ಯಾದವ ಸಮುದಾಯದ ರಾಜಕೀಯ-ಸಾಮಾಜಿಕ ಅಟ್ಟಹಾಸ ಹಾಗೂ ಪ್ರಾಬಲ್ಯಕ್ಕೆ ಕಡಿವಾಣ ಹಾಕಿ, ಯಾದವೇತರ ಒಬಿಸಿ, ಇಬಿಸಿ ಹಾಗೂ ಮುಸ್ಲಿಂ ಸಮುದಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡದ್ದರಿಂದ 21 ವರ್ಷಗಳ ಕಾಲ ಮುಖ್ಯಮಂತ್ರಿ ಸ್ಥಾನ ಅವರದ್ದೇ ಆಗಿತ್ತು. ರಾಜ್ಯದ ಅತಿಸಣ್ಣ ಕುರ್ಮಿ ಸಮುದಾಯದಿಂದ, ಎಲ್ಲಾ ಸಮುದಾಯಗಳ ನೆಚ್ಚಿನ ನಾಯಕರಾಗಿ ಬೆಳೆದ ನಿತೀಶ್, ಪಕ್ಷವನ್ನೂ ಮಜಬೂತಾಗಿ ಕಟ್ಟಿದರು. ಬಿಹಾರದಲ್ಲಿ ನಿತೀಶ್ ಎಂದರೆ ಜೆಡಿಯು, ಜೆಡಿಯು ಎಂದರೆ ನಿತೀಶ್ ಎಂಬ ಸ್ಥಿತಿ ಈಗಲೂ ಇದೆ. ಆದರೆ ಬಿಹಾರ ರಾಜಕೀಯದ ಮುಖ್ಯವೇದಿಕೆಯಿಂದ ನಿತೀಶ್ ಕುಮಾರ್ ನಿರ್ಗಮನ 1970ರ ದಶಕದ ಜಯಪ್ರಕಾಶ್ ನಾರಾಯಣ್ ಚಳವಳಿಯೊಂದಿಗೆ ಪ್ರಾರಂಭವಾದ ರಾಜಕೀಯ ಅಧ್ಯಾಯವೊಂದರ ಅಂತ್ಯ ಎನ್ನಬಹುದು. ಜೆಪಿ ಆಂದೋಲನದ ಪರಿಣಾಮ ರಾಜ್ಯದಲ್ಲಿ ರಾಮ್ ವಿಲಾಸ್ ಪಾಸ್ವಾನ್, ಲಾಲು ಪ್ರಸಾದ್ ಯಾದವ್ ಮತ್ತು ನಿತೀಶ್ ಕುಮಾರ್ ಎಂಬ ನಾಯಕರು ಹುಟ್ಟಿದ್ದರು. ರಾಮ್ ವಿಲಾಸ್ ಪಾಸ್ವಾನ್ ಜಾಗದಲ್ಲಿ ಚಿರಾಗ್ ಪಾಸ್ವಾನ್, ಲಾಲೂ ಪ್ರಸಾದ್ ಯಾದವ್ ಸ್ಥಾನದಲ್ಲಿ ತೇಜಸ್ವಿ ಯಾದವ್ ಇದ್ದರೆ ಮತ್ತು ಈಗ ನಿತೀಶ್ ಜಾಗವನ್ನು ತುಂಬಲು ನಿಶಾಂತ್ ಕುಮಾರ್ ಆಗಮಿಸಿದ್ದಾರೆ. ನಿತೀಶ್ ಕುಮಾರ್ ಅನುಪಸ್ಥಿತಿಯಲ್ಲಿ ಜೆಡಿಯು ಭವಿಷ್ಯ ಈಗಿನಷ್ಟೇ ಗಟ್ಟಿಯಾಗಿರುವುದೇ? ಪುತ್ರ ನಿಶಾಂತ್ ಕುಮಾರ್‌ಗೆ ತಂದೆಯಂತೆಯೇ ರಾಜ್ಯವ್ಯಾಪಿ ಇಮೇಜ್ ವೃದ್ಧಿಸಿಕೊಳ್ಳುವ ಸಾಮರ್ಥ್ಯ ಹಾಗೂ ಜನಬೆಂಬಲ ಸಿಗುವುದೇ? ಎಂಬ ಪ್ರಶ್ನೆಗೆ ಸದ್ಯಕ್ಕೆ ಉತ್ತರ ಇಲ್ಲ. ಆದರೆ, ಸಿಎಂ ಸ್ಥಾನ ಬಿಜೆಪಿ ಪಾಲಾಗುವುದರಿಂದ ಸರಕಾರದಲ್ಲಿ ಜೆಡಿಯು ನಾಯಕರ ಹಿಡಿತ ಮೊದಲಿನಷ್ಟು ಬಿಗಿಯಾಗಿರುವುದು ಅನುಮಾನ.

ಮುಸ್ಲಿಂ ಸಮುದಾಯದ ಬಹುಮಂದಿ ಲಾಲು ಪ್ರಸಾದ್ ಯಾದವರ ಆರ್‌ಜೆಡಿ ಜತೆ ಗುರುತಿಸಿಕೊಂಡರೂ, ನಿತೀಶ್ ಕುಮಾರ್ ಕಾರಣಕ್ಕಾಗಿ ಅನೇಕರು ಜೆಡಿಯು ಜತೆಗಿದ್ದರು. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕೆಲ ಮುಸ್ಲಿಮರು ನಿತೀಶರನ್ನೇ ಬೆಂಬಲಿಸಿದ್ದಾರೆ. ರಾಜ್ಯದಲ್ಲಿ ಹಿಂದೂ-ಮುಸ್ಲಿಂ ಗಲಭೆಗಳಾಗದಂತೆ ನೋಡಿಕೊಂಡ ಹೆಗ್ಗಳಿಕೆ ನಿತೀಶರದ್ದು. 2015ರಿಂದ ಮೈತ್ರಿಕೂಟ ಸರಕಾರದಲ್ಲಿ ಬಿಜೆಪಿ ಶಾಸಕರ ಸಂಖ್ಯೆ ಹೆಚ್ಚಿದ್ದರೂ, ಹಿಂದೂ-ಮುಸ್ಲಿಂ ಧ್ರುವೀಕರಣದ ರಾಜಕಾರಣ ನೆಲೆಯೂರಲು ನಿತೀಶ್ ನಾಯಕತ್ವ ಬಿಡಲಿಲ್ಲ. ಮುಸ್ಲಿಮರ ಕಬರಿಸ್ತಾನದ ವಿಷಯದಲ್ಲಿ ಹಿಂದೂಗಳ ಜತೆ ಸಂಘರ್ಷ ಉಂಟಾಗುತ್ತಿದ್ದುದನ್ನು ಶಾಶ್ವತವಾಗಿ ನಿಲ್ಲಿಸಿದ ಖ್ಯಾತಿಯೂ ಅವರಿಗೆ ಸಲ್ಲುತ್ತದೆ. ಕಬರಿಸ್ತಾನಗಳಿಗೆ ಕಂಪೌಂಡ್ ವಾಲ್‌ಗಳಿಲ್ಲದ ಕಾರಣ ಈ ಜಾಗದಲ್ಲಿ ಹಿಂದೂಗಳು ತಮ್ಮ ಹಸುಗಳನ್ನು ತಂದುಬಿಡುತ್ತಿದ್ದರು ಮತ್ತು ಕಬರಿಸ್ತಾನದ ಜಾಗಗಳ ಒತ್ತುವರಿಯಾಗುತ್ತಿದೆ ಎನ್ನುವುದು ಅಲ್ಲಿ ಎರಡೂ ಧರ್ಮಗಳ ನಡುವಿನ ಜಗಳಕ್ಕೆ ಕಾರಣವಾಗುತ್ತಿತ್ತು. ಇದಕ್ಕೆ ಪರಿಹಾರ ರೂಪಿಸಿದ ನಿತೀಶರು, ಎನ್‌ಡಿಎ ಸರಕಾರವಿದ್ದಾಗಲೇ ಕಬರಿಸ್ತಾನಗಳಲ್ಲಿ ಸುಮಾರು 8-9 ಸಾವಿರ ಕಂಪೌಂಡ್ ವಾಲ್‌ಗಳನ್ನು ನಿರ್ಮಾಣ ಮಾಡಿಸಿ, ಮುಂದೆಂದೂ ಈ ವಿಷಯದಲ್ಲಿ ಎರಡೂ ಧರ್ಮೀಯರ ಮಧ್ಯೆ ಕಿತ್ತಾಟವಿರಬಾರದು ಎಂಬ ಸಂದೇಶ ರವಾನಿಸಿದ್ದರು. ಮದರಸಾಗಳಲ್ಲಿ ಪಾಠ ಮಾಡುತ್ತಿದ್ದ ಶಿಕ್ಷಕರಿಗೆ ಕಾಯಂ ವೇತನ ಜಾರಿ, ಪಂಚಾಯತ್ ಚುನಾವಣೆಗಳಲ್ಲಿ ಮುಸ್ಲಿಂ ಧರ್ಮದಲ್ಲಿರುವ ಇಬಿಸಿಗಳಿಗೆ (ಅತಿ ಹಿಂದುಳಿದ ವರ್ಗ) ಮೀಸಲಾತಿ ಜಾರಿ ಮಾಡಿದ್ದು ಇದೇ ನಿತೀಶ್ ಕುಮಾರ್. 'ರಾಜಕೀಯ ಕಾರಣಗಳಿಗಾಗಿ ಲಾಲೂ ಪ್ರಸಾದ್ ಯಾದವರನ್ನು ಬೆಂಬಲಿಸಿದರೂ, ನಮ್ಮವರ ಹಿತ ಕಾಪಾಡಿದ್ದು ನಿತೀಶ್' ಎಂದು ಬಿಹಾರ ಮುಸ್ಲಿಮರು ಒಪ್ಪಿಕೊಳ್ಳುತ್ತಾರೆ. ಅದೇ ಕಾರಣಕ್ಕಾಗಿ, ನಿತೀಶರ ನಿರ್ಧಾರವು ಅವರ ಪಕ್ಷವನ್ನು ಬೆಂಬಲಿಸುತ್ತಿದ್ದ ಮುಸ್ಲಿಮರಲ್ಲೂ ಬೇಸರ ಉಂಟುಮಾಡಿದೆ. ಹಾಗಾದರೆ, ನಿತೀಶರಿಲ್ಲದ ಜೆಡಿಯುವನ್ನು ಅವರು

ಒಪ್ಪಿಕೊಳ್ಳುತ್ತಾರಾ? ಅನಾರೋಗ್ಯದ ಕಾರಣದಿಂದ ನಿತೀಶ್ ದಿಲ್ಲಿಗೆ ಮುಖ ಮಾಡಿರುವುದರಿಂದ ನಿರ್ಮಾಣವಾಗಿರುವ ರಾಜಕೀಯ ನಿರ್ವಾತ ಸ್ಥಿತಿ ತುಂಬಲು ಮತ್ತು ನಿತೀಶರಷ್ಟೇ ಎಲ್ಲರನ್ನೊಳಗೊಳ್ಳುವ ನಾಯಕನನ್ನು ನೀಡಲು ಬಿಜೆಪಿಗೆ ಸಾಧ್ಯವಿದೆಯೇ ಎನ್ನುವುದೂ ಸದ್ಯಕ್ಕೆ ಉತ್ತರವಿಲ್ಲದ ಪ್ರಶ್ನೆ.

ಜೆಡಿಯುನಲ್ಲಿ ಕೂಡ ನಿತೀಶ್ ರೀತಿಯ ವರ್ಚಸ್ವಿ ನಾಯಕರಿಲ್ಲ. 21 ವರ್ಷಗಳ ಕಾಲ ಅವರು ಮಗ ನಿಶಾಂತ್ ಕುಮಾರ್‌ನನ್ನು ರಾಜಕಾರಣದ ಹತ್ತಿರ ಸುಳಿಯಲೂ ಬಿಡಲಿಲ್ಲ. ಬಿಹಾರ ಚುನಾವಣೆಗೆ ನಿಶಾಂತ್‌ಗೆ ಟಿಕೆಟ್ ನೀಡಬೇಕು ಎಂದು ಬಿಹಾರದ ನಲಂದಾ ಜಿಲ್ಲೆಯ (ನಿತೀಶ್ ತವರು ಜಿಲ್ಲೆ) ಜೆಡಿಯು ಕಾರ್ಯಕರ್ತರು ಪಟನಾಗೆ ಬಂದು ಮನವಿ ನೀಡಿದ್ದಾಗ ಅವರನ್ನು ''ಫಾಲ್ತು ಬಾತ್ ಮತ್ ಕರೋ. ಆಪ್ ಸಬ್ ಯಹಾ ಸೇ ನಿಕ್ಲೋ'' ಎಂದು ಬೈದು ಕಳುಹಿಸಿದ್ದರು ನಿತೀಶ್ ಕುಮಾರ್. ಬಿಹಾರ ಚುನಾವಣೆ ವರದಿಗೆಂದು ನಾನು ನಲಂದಾ ಜಿಲ್ಲೆಯಲ್ಲಿದ್ದಾಗ ಅಲ್ಲಿನ ಕಾರ್ಯಕರ್ತರೇ ಈ ಮಾತುಗಳನ್ನು ನನ್ನ ಬಳಿ ಹೇಳಿದ್ದರು. ಇಂತಿಪ್ಪ ನಿತೀಶ್ ಕುಮಾರ್ ದೆಹಲಿಗೆ ಹೋಗುವ ನಿರ್ಧಾರ ಮಾಡುತ್ತಿದ್ದಂತೆಯೇ ಪುತ್ರ ನಿಶಾಂತ್, ಸೋಮವಾರದಂದು ಪಕ್ಷದ ಅಧಿಕೃತ ಸದಸ್ಯತ್ವ ಪಡೆದುಕೊಂಡ ಬೆಳವಣಿಗೆಯಾಗಿದೆ. ಪುತ್ರನ ಆಗಮನವನ್ನು ನಿತೀಶ್ ರಾಜಕೀಯ ಒಡನಾಡಿಗಳೆಲ್ಲರೂ ಸ್ವಾಗತಿಸಿದ್ದಾರೆ ಮತ್ತು ನಿಶಾಂತ್ ರಾಜ್ಯದ ಉಪ ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಬಹುಶಃ ಸಾಮಾಜಿಕ ಸಮೀಕರಣ ಕಾಯ್ದುಕೊಳ್ಳಲು ಹಾಗೂ ಜೆಡಿಯುವನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದೇವೆ ಎಂಬ ಸಂದೇಶ ರವಾನೆ ಮಾಡಲು ನಿಶಾಂತ್‌ರನ್ನು ಡಿಸಿಎಂ ಮಾಡಲು ಬಿಜೆಪಿ ಒಪ್ಪಲೂಬಹುದು. ಹಾಗಂತ, ಆರ್‌ಜೆಡಿಯ ತೇಜಸ್ವಿ ಯಾದವ್ ಅಥವಾ ಎಲ್‌ಜೆಪಿಯ ಚಿರಾಗ್ ಪಾಸ್ವಾನ್ ಅವರಂಥ 'ಪೊಲಿಟಿಕಲ್ ಸ್ಮಾರ್ಟ್‌ನೆಸ್' ನಿಶಾಂತ್‌ರಲ್ಲಿ ಇನ್ನೂ ಕಂಡಿಲ್ಲ.

ನಿತೀಶ್ ನಿರ್ಗಮನ ಆರ್‌ಜೆಡಿಯ ರಾಜಕೀಯ ಪುನರುಜ್ಜೀವನಕ್ಕೂ ಅವಕಾಶ ಸೃಷ್ಟಿಸುವುದನ್ನು ಅಲ್ಲಗಳೆಯಲಾಗದು. 'ನಿತೀಶ್-ಕೇಂದ್ರಿತ' ರಾಜಕೀಯದಿಂದಾಗಿ ಅವರೊಂದಿಗಿದ್ದ ಸಮಾಜವಾದಿ ಮತ್ತು ಜಾತ್ಯತೀತ ಹಿನ್ನೆಲೆಯ ಅನೇಕ ನಾಯಕರು ಮತ್ತವರ ಬೆಂಬಲಿಗರು ನಿಧಾನವಾಗಿ ಆರ್‌ಜೆಡಿ ಕಡೆ ಮುಖಮಾಡಬಹುದು. ಸದ್ಯ ಬಿಹಾರ ಎನ್‌ಡಿಎಯಲ್ಲಿ ಬಿಜೆಪಿ ದೊಡ್ಡ ಪಕ್ಷವಾಗಿದ್ದು, ಮೈತ್ರಿಕೂಟವು ಶೇ. 47ರಷ್ಟು ಮತಪಾಲನ್ನು ಹೊಂದಿದೆ. ಆರ್‌ಜೆಡಿ ಶೇ.38ರಷ್ಟು ಪಾಲನ್ನು ಹೊಂದಿದೆ. ಶೇ.47ರ ಪಾಲಿನಲ್ಲಿ ಜೆಡಿಯು ಹೊಂದಿರುವ ಸುಮಾರು ಶೇ.12ರಷ್ಟು ಮತಗಳಲ್ಲಿ ಅರ್ಧದಷ್ಟು ಮತಗಳನ್ನು ಆರ್‌ಜೆಡಿ ಸೆಳೆದುಕೊಂಡರೆ ಭವಿಷ್ಯದ ರಾಜಕೀಯ ಚಿತ್ರಣ ಬದಲಾಗಬಹುದು.

2023ರ ಬಿಹಾರ ಜಾತಿ ಸಮೀಕ್ಷೆ ಪ್ರಕಾರ ರಾಜ್ಯದ ಜನಸಂಖ್ಯೆಯಲ್ಲಿ ಸರಿಸುಮಾರು ಶೇ. 63ರಷ್ಟು ಜನರು ಇಬಿಸಿ ಮತ್ತು ಒಬಿಸಿಗೆ ಸೇರಿದ್ದಾರೆ. ಇವರಲ್ಲಿ ಶೇ. 36ರಷ್ಟು ಇಬಿಸಿ ಮತ್ತು ಶೇ. 27ರಷ್ಟು ಒಬಿಸಿಗಳಿದ್ದಾರೆ. ಆರ್‌ಜೆಡಿ ಬೆಂಬಲಿಸುವ ಯಾದವರು ಶೇ. 14-15ರಷ್ಟಿದ್ದಾರೆ. ನಿತೀಶರ ಗೈರಿನಲ್ಲಿ ಜೆಡಿಯು ಸಂಘಟನಾತ್ಮಕವಾಗಿ ದುರ್ಬಲಗೊಂಡರೆ ಹಿಂದುಳಿದ ಜಾತಿಗಳನ್ನು ತನ್ನೆಡೆಗೆ ಸೆಳೆದುಕೊಳ್ಳಲು ಆರ್‌ಜೆಡಿ ಮುಂದಾಗಬಹುದು. ಉತ್ತರ ಪ್ರದೇಶದಲ್ಲಿ ಮಾಯಾವತಿ ಅವರ ಬಹುಜನ ಸಮಾಜವಾದಿ ಪಕ್ಷದ ಕುಸಿತ ಸಮಾಜವಾದಿ ಪಕ್ಷಕ್ಕೆ (ಎಸ್ಪಿ) ಲಾಭ ತಂದುಕೊಟ್ಟಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಯಾದವೇತರ ಒಬಿಸಿ ಮತ್ತು ದಲಿತ ಮತದಾರರನ್ನು ಆಕರ್ಷಿಸಿದ ಸಮಾಜವಾದಿ ಪಾರ್ಟಿ, 2024ರ ಲೋಕಸಭೆ ಚುನಾವಣೆಯಲ್ಲಿ 37 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಬಿಜೆಪಿ 33 ಸೀಟುಗಳಿಗೆ ಇಳಿದಿದ್ದರಿಂದ ಕೇಂದ್ರದಲ್ಲಿ ಜೆಡಿಯು ಮತ್ತು ಆಂಧ್ರಪ್ರದೇಶದ ಟಿಡಿಪಿಯನ್ನು ನೆಚ್ಚಿಕೊಳ್ಳುವುದು ಬಿಜೆಪಿಗೆ ಅನಿವಾರ್ಯವಾಯಿತು.

ಮುಖ್ಯಮಂತ್ರಿಯಾಗಿದ್ದ 21 ವರ್ಷಗಳಲ್ಲಿ 6 ವರ್ಷ ಆರ್‌ಜೆಡಿ ಜತೆ ಮೈತ್ರಿ ಸರಕಾರ ಮುನ್ನಡೆಸಿದ್ದ ನಿತೀಶ್ ಕುಮಾರ್‌ಗೆ, ಲಾಲು ಸಖ್ಯ ಎಂದಿಗೂ ಹಿತಕರ ಎನಿಸಿರಲಿಲ್ಲ. ಹೀಗಾಗಿಯೇ, ಎರಡೆರಡು ಬಾರಿ ಸಂಬಂಧ ಕಡಿದುಕೊಂಡು, ಆರ್‌ಜೆಡಿಗಿಂತ ಬಿಜೆಪಿಯೇ ಎಷ್ಟೋ ವಾಸಿ ಎಂದು ಮರುಮೈತ್ರಿ ಮಾಡಿಕೊಂಡಿದ್ದರು. ರಾಜಕೀಯ ಅನಿವಾರ್ಯತೆಗಳು ಲಾಲು ಅವರ ಕೈಜೋಡಿಸುವಂತೆ ಮಾಡಿದ್ದರೂ, ಅವರ ಮನಸ್ಸುಗಳು ಎಂದಿಗೂ ಕೂಡಿರಲಿಲ್ಲ. ಎನ್‌ಡಿಎ ಮೈತ್ರಿಕೂಟದಲ್ಲಿ ಬಿಜೆಪಿ ದೊಡ್ಡ ಪಕ್ಷವಾಗಿದ್ದರೂ, ಸಿಎಂ ಸ್ಥಾನದಲ್ಲಿ ನಿತೀಶ್ ಇದ್ದುದರಿಂದ ಆಡಳಿತ ಮತ್ತು ರಾಜಕೀಯ ನಿಯಂತ್ರಣದ ಕೀಲಿಕೈ ಅವರ ಕೈಯಲ್ಲೇ ಇರುತ್ತಿತ್ತು. ಆದರೆ, ಮುಂದಿನ ದಿನಗಳಿಂದ ಈ ಕೀಲಿಕೈ ದೆಹಲಿ ಬಿಜೆಪಿ ಕೇಂದ್ರ ಕಚೇರಿಗೆ ಶಿಫ್ಟ್ ಆಗಲಿದೆ. ದಿಲ್ಲಿ ನಿಯಂತ್ರಿತ ಆಡಳಿತದಲ್ಲಿ ಬಿಹಾರ ಬಿಜೆಪಿಯ ಮುಖ್ಯಮಂತ್ರಿಯು ರಾಜ್ಯವನ್ನು ಯಾವ ಹಾದಿಯಲ್ಲಿ ಕೊಂಡೊಯ್ಯಲಿದ್ದಾರೆ ಎನ್ನುವುದು ಬಿಜೆಪಿ-ಜೆಡಿಯು ಎರಡೂ ಪಕ್ಷಗಳ ಭವಿಷ್ಯವನ್ನು ನಿರ್ಧರಿಸಲಿದೆ.

ಇರಾನ್‌ನಲ್ಲಿ ಅಮೆರಿಕನ್ನರ 444 ದಿನಗಳ ಬಂಧನದ ಕರಾಳ ಅಧ್ಯಾಯ

ಯುದ್ಧಕಾಂಡ

ಲೀನಾ ಜೋಶಿ

vveditoped@gmail.com

ಇತಿಹಾಸದಲ್ಲಿ ಕೆಲ ಘಟನೆಗಳು ಒಂದು ದೇಶದ ರಾಜಕೀಯವನ್ನೇ ಅಲ್ಲ, ಸಂಪೂರ್ಣ ಜಗತ್ತಿನ ರಾಜಕೀಯ ಸಂಬಂಧಗಳನ್ನು ಬದಲಾಯಿಸುತ್ತವೆ. ಅಮೆರಿಕವು ಇರಾನ್ ಅನ್ನು, ಇರಾನ್ ಅಮೆರಿಕವನ್ನು ಈ ಪರಿ ಯಾಕೆ ದ್ವೇಷಿಸುತ್ತವೆ? ಇದು ನಮ್ಮನ್ನೆಲ್ಲ ಕಾಡುವ ಸಾಮಾನ್ಯ ಪ್ರಶ್ನೆ. ಇದರ ಉತ್ತರ ಅಷ್ಟು ಸರಳವಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಅದರಲ್ಲಿ ಒಂದು ಕಾರಣ-ಅಮೆರಿಕದ ರಾಯಭಾರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಗಳನ್ನು ಇರಾನ್ ಬರೋಬ್ಬರಿ 444 ದಿನಗಳ ಕಾಲ ಸೆರೆಯಲ್ಲಿಟ್ಟು ದೈಹಿಕ, ಮಾನಸಿಕ, ಚಿತ್ರ ಹಿಂಸೆ ನೀಡಿದ್ದು. Mark Bowden ಬರೆದ Guests of the Ayatollah ಎಂಬ ಪುಸ್ತಕ, ಇರಾನ್‌ನಲ್ಲಿ 444 ದಿನಗಳ ಕಾಲ ಬಂಧಿತರಾಗಿ ನರಳಿದ 53 ಅಮೆರಿಕನ್ನರ ಜೀವನವನ್ನು ಬಹಳ ಸ್ಪಷ್ಟವಾಗಿ ಚಿತ್ರಿಸುತ್ತದೆ. ಸ್ವಾತಂತ್ರ್ಯದ ಮಹತ್ವವನ್ನು, ಮನುಷ್ಯನ ಬರಿದಾಗದ ವಿಶ್ವಾಸವನ್ನು, ನಾಳೆ ಎಂಬ ಮಹತ್ತರ ಕಲ್ಪನೆಯನ್ನು, ಭವಿಷ್ಯದ ಕನಸಿನೊಂದಿಗೆ ಜೀವಿಸುವ ಮನುಕುಲದ ಅಪರಿಮಿತ ವಿಶ್ವಾಸವನ್ನು ಇಂಚು ಇಂಚಾಗಿ ವರ್ಣಿಸುವ ಇದರ ಲೇಖಕನ ಪ್ರತಿಭೆಗೊಂದು ದೊಡ್ಡ ಸಲಾಂ!



ಅದು 1979ರ ನವೆಂಬರ್ ತಿಂಗಳು. ಇರಾನಿನ ರಾಜಧಾನಿ ಟೆಹ್ರಾನ್‌ನಲ್ಲಿ ಒಂದು ಭಯಾನಕ ಘಟನೆ ನಡೆಯಿತು. ಅಮೆರಿಕವನ್ನು ನಖಶಿಖಾಂತ ದ್ವೇಷಿಸುತ್ತಿದ್ದ ಇರಾನಿನ ವಿದ್ಯಾರ್ಥಿಗಳ ಗುಂಪು ಅಮೆರಿಕದ ರಾಯಭಾರ ಕಚೇರಿಗೆ ಮುತ್ತಿಗೆ ಹಾಕಿ, ಅಲ್ಲಿ ಕೆಲಸ ಮಾಡುತ್ತಿದ್ದ ಅಮೆರಿಕನ್ನರನ್ನು ಬಂದಿಯಾಗಿ ಇಟ್ಟುಕೊಂಡಿತು. ಇದು ಜಗತ್ತಿನ ಇತಿಹಾಸದಲ್ಲಿ ಅತ್ಯಂತ ಚರ್ಚಿತ ಹಾಗೂ ಆಘಾತಕಾರಿ ಘಟನೆ. ಮುಂದಿನ 444 ದಿನಗಳು, ಬಂಧಿತರ ಪಾಲಿಗೆ ಅಕ್ಷರಶಃ ನರಕವಾಯಿತು. ಬಂಧಿತರನ್ನು ಮೊದಲಿಗೆ ರಾಯಭಾರ ಕಚೇರಿಯಲ್ಲೇ ಇರಿಸಲಾಯಿತು. ಕೆಲವು ವಾರಗಳ ನಂತರ ಅವರನ್ನು ಬೇರೆ ಬೇರೆ ಸ್ಥಳಗಳಿಗೆ ಕರೆದೊಯ್ಯಲಾಯಿತು. ಕೈಗಳನ್ನು ಕಟ್ಟಿಹಾಕಿ, ಕಣ್ಣುಗಳಿಗೆ ಬಟ್ಟೆ ಕಟ್ಟಿಸಿ, ಅವರ ಮೇಲೆ ನಿರಂತರವಾಗಿ ದೈಹಿಕ ಮತ್ತು ಮಾನಸಿಕ ಚಿತ್ರಹಿಂಸೆ ನೀಡಲಾಯಿತು. ಕೆಲವರನ್ನು ತಿಂಗಳುಗಳ ಕಾಲ ಒಂಟಿ ಕೊಠಡಿಗಳಲ್ಲಿ ಇರಿಸಲಾಯಿತು. ಅವರಿಗೆ ಸರಿಯಾದ ಆಹಾರವನ್ನೂ ಕೊಡುತ್ತಿರಲಿಲ್ಲ. ವಾರಗಟ್ಟಳೆ ಹಳಸಿದ ರೊಟ್ಟಿ ಮತ್ತು ನೀರನ್ನು ನೀಡಲಾಯಿತು, ಹುಳುಗಳು ತೇಲಾಡುವ ಹಾಲನ್ನು ಒತ್ತಾಯಪೂರ್ವಕವಾಗಿ ಕುಡಿಸಲಾಯಿತು. ಅವರನ್ನು ಕೆಲವೊಮ್ಮೆ ಕುರ್ಚಿಗಳಿಗೆ ಕೈಕಾಲು ಕಟ್ಟಿಹಾಕಿ ದಿನಗಳ ಕಾಲ ಕುಳ್ಳಿರಿಸಲಾಗುತ್ತಿತ್ತು. ಕೆಲವರನ್ನು ರಾತ್ರಿಯಿಡಿ ಕೊರೆಯುವ ಚಳಿಯಲ್ಲಿ ಹೊರಗೆ ನಿಲ್ಲಿಸಲಾಗುತ್ತಿತ್ತು. ಬಟ್ಟೆ ಬಿಚ್ಚಿ ಹೊರಗಡೆ ಗಂಟೆಗಟ್ಟಲೆ ನಿಲ್ಲಿಸಲಾಗುತ್ತಿತ್ತು. ಇನ್ನೊಂದು ಭಯಾನಕ ವಿಧಾನವೆಂದರೆ ನಕಲಿ ಮರಣದಂಡನೆ (mock execution). ಕೆಲ ಬಂಧಿತರ ತಲೆಯ ಬಳಿ ಬಂದೂಕು ಹಿಡಿದು ಈಗ ನಿಮ್ಮನ್ನು ಕೊಲ್ಲುತ್ತೇವೆ ಎಂದು ಬೆದರಿಸಲಾಗುತ್ತಿತ್ತು. ಅವರು ತಮ್ಮ ಜೀವನದ ಕೊನೆಯ ಕ್ಷಣ ಬಂದಿದೆ ಎಂದು ಭಾವಿಸಿ ಕಣ್ಣೀರು ಹಾಕುತ್ತಿದ್ದರು. ಅವರಿಗೆ ಭಯ ಹುಟ್ಟಿಸಲು ಇಂಥ ಮಾನಸಿಕ ಹಿಂಸೆ ನೀಡಲಾಗುತ್ತಿತ್ತು. ಕೆಲವರಿಗೆ ಗುಂಡು ಹಾರಿಸುವ ನಾಟಕವನ್ನೇ ಮಾಡಲಾಗುತ್ತಿತ್ತು. ಈ ರೀತಿಯ ಭಯಾನಕ ಅನುಭವಗಳು ಹಲವರ ಮಾನಸಿಕ ಸ್ಥಿಮಿತವನ್ನು ಸಂಪೂರ್ಣವಾಗಿ ಕದಲಿಸಿಬಿಟ್ಟವು. ಪರಸ್ಪರ ಮಾತನಾಡಲು ಯಾರಿಗೂ ಅವಕಾಶ ನೀಡಲಿಲ್ಲ, ತಿಂಗಳುಗಟ್ಟಲೆ ಒಬ್ಬರ ಮುಖವನ್ನು ಮತ್ತೊಬ್ಬರು ನೋಡಲಿಲ್ಲ. ಯಾರಿಗೂ ಪತ್ರ ಬರೆಯಲು, ಮನೆಯವರೊಂದಿಗೆ ಮಾತನಾಡಲು ಅವಕಾಶ ಇರಲಿಲ್ಲ. ಕೆಲವರಿಗೆ ಮನೆಗಳಿಂದ ಬಂದ ಪತ್ರಗಳನ್ನು ತೋರಿಸಿ ಮತ್ತೆ ಕಿತ್ತುಕೊಳ್ಳುವಂಥ ಕ್ರೂರ ಆಟವನ್ನೂ ಆಡಲಾಗುತ್ತಿತ್ತು. ದಿನಗಳು ತಿಂಗಳುಗಳಾಗಿ, ತಿಂಗಳುಗಳು ವರ್ಷವಾಗುತ್ತಾ ಹೋದವು. ಕೆಲವರು ಬದುಕುವ ಆಸೆಯನ್ನು ಸಂಪೂರ್ಣವಾಗಿ ಕಳೆದುಕೊಂಡರು. ಕೆಲವರು ಅರೆಹುಚ್ಚರಾದರು. ಈ ಎಲ್ಲಾ ಕಷ್ಟಗಳ ನಡುವೆಯೂ ಕೆಲವರು ಮನಸ್ಸಿನಲ್ಲಿ ಪ್ರಾರ್ಥನೆ ಮಾಡುತ್ತ ಬದುಕಲು ಪ್ರಯತ್ನಿಸಿದರು. ಕೆಲವರು ತಮ್ಮ ಕುಟುಂಬದೊಂದಿಗೆ ಕಳೆದ ಕ್ಷಣಗಳನ್ನು ನೆನೆಯುತ್ತಾ ಎದೆಗುಂದದೆ ಬದುಕಲು ಪ್ರಯತ್ನಪಟ್ಟರು. ಕೆಲವರು ಪ್ರತಿದಿನ ಮನಸ್ಸಿನಲ್ಲಿ, 'ಇಂದು ಬದುಕಿದ್ದೇವೆ ಎಂದರೆ ನಾಳೆ ಬಿಡುಗಡೆಯಾಗಬಹುದು' ಎಂದು ಆಶಿಸುತ್ತಿದ್ದರು.

ಕೊನೆಗೂ ಆ ದಿನ ಬಂದಿತು. 1981ರ ಜನವರಿ 20ರಂದು, 444 ದಿನಗಳ ನಂತರ ಬಂಧಿತರನ್ನು ಬಿಡುಗಡೆ ಮಾಡಲಾಯಿತು. ಈ ಘಟನೆ ಕೇವಲ ರಾಜಕೀಯ ಸಂಕಷ್ಟವಲ್ಲ, ಜತೆಗೆ ಮಾನವ ಸಹನೆಯ ಪರೀಕ್ಷೆಯಾಗಿತ್ತು. ಅವರು 444 ದಿನಗಳವರೆಗೆ ಕೇವಲ ಬಂಧಿತರಾಗಿರಲಿಲ್ಲ. ಅವರು ಪ್ರತಿದಿನವೂ ಭಯದೊಂದಿಗೆ ಬದುಕಿದ ಜೀವಂತ ಶವಗಳಾಗಿದ್ದರು. 444 ದಿನಗಳ ಕಾಲ ಭಯ, ಹಸಿವು, ಏಕಾಂತ ಮತ್ತು ಅನಿಶ್ಚಿತತೆಯ ನಡುವೆ ಬದುಕಿದ ಆ ಜನರ ಕಥೆ 20ನೇ ಶತಮಾನದ ಅಮೆರಿಕದ ಇತಿಹಾಸದಲ್ಲಿ ಒಂದು ದುಃಖಭರಿತ ಅಧ್ಯಾಯವಾಗಿದೆ.

ಈ ಸಂಕಷ್ಟದ ಹಿಂದೆ ಇರುವ ಕಾರಣಗಳನ್ನು ಅರ್ಥಮಾಡಿಕೊಳ್ಳಲು ನಾವು 1979ರ ಇರಾನ್ ಕ್ರಾಂತಿಯನ್ನು ಅರ್ಥಮಾಡಿಕೊಳ್ಳಬೇಕು. ಅದಕ್ಕೂ ಮೊದಲು ಇರಾನ್ ದೇಶದಲ್ಲಿ ಮೊಹಮ್ಮದ್ ರೆಜಾ ಪಹ್ಲವಿ (ಶಾ) ಎಂಬ ರಾಜ ಆಡಳಿತ ನಡೆಸುತ್ತಿದ್ದ. ಅಮೆರಿಕ ಸೇರಿದಂತೆ ಪಾಶ್ಚಾತ್ಯ ದೇಶಗಳು ಶಾ ಸರಕಾರವನ್ನು ಬೆಂಬಲಿಸುತ್ತಿದ್ದವು. ಆದರೆ ದೇಶದೊಳಗಿನ ಅಸಮಾಧಾನ ಹೆಚ್ಚುತ್ತಿತ್ತು. 1979ರಲ್ಲಿ ಜನರ ಬಂಡಾಯದಿಂದ ಶಾ ಅಧಿಕಾರದಿಂದ ಕೆಳಗಿಳಿದು ದೇಶದಿಂದ ಓಡಿಹೋಗಬೇಕಾಯಿತು. ಈ ಕ್ರಾಂತಿಯನ್ನು ಧಾರ್ಮಿಕ ನಾಯಕ ಆಯತೊಲ್ಲಾ ಖೊಮೇನಿ ಮುನ್ನಡೆಸಿದರು. ಕ್ರಾಂತಿಯ ನಂತರ ಇರಾನ್‌ಲ್ಲಿ ಇಸ್ಲಾಮಿಕ್ ಗಣರಾಜ್ಯ ಸ್ಥಾಪನೆಯಾಯಿತು.

ಅಮೆರಿಕಕ್ಕೆ ಚಿಕಿತ್ಸೆಗಾಗಿ ತೆರಳಿದ್ದ ಶಾ, ಯಾವುದೇ ಸಮಯದಲ್ಲಿ ಇರಾನಿಗೆ ಹಿಂದಿರುಗಿ ಬಂದು ದೇಶದ ಚುಕ್ಕಾಣಿಯನ್ನು ಮತ್ತೆ ಹಿಡಿಯುವರೆಂಬ ಆತಂಕ ಇರಾನಿಯರಲ್ಲಿತ್ತು. ಅಮೆರಿಕವು ಶಾ ಅವರನ್ನು ಮತ್ತೆ ಅಧಿಕಾರಕ್ಕೆ ತರುವ ಯತ್ನ ಮಾಡುತ್ತಿದೆ ಎಂಬ ಅನುಮಾನದ ಹಿನ್ನೆಲೆಯಲ್ಲಿ, 1979ರ ನವೆಂಬರ್ 4ರಂದು ಅಮೆರಿಕದ ರಾಯಭಾರ ಕಚೇರಿಯ ಮೇಲೆ ಇರಾನಿ ಯುವಕರ ಗುಂಪು ದಾಳಿ ನಡೆಸಿತು. ಆರಂಭದಲ್ಲಿ 66 ಜನರನ್ನು ಬಂಧಿಸಲಾಯಿತು. ನಂತರ ಮಹಿಳೆಯರು ಮತ್ತು ಆಫ್ರಿಕನ್ ಮೂಲದ ಕೆಲವರನ್ನು ಬಿಡುಗಡೆ ಮಾಡಲಾಯಿತು.

ಈ ಘಟನೆ ಅಮೆರಿಕ ಮತ್ತು ಇರಾನ್ ನಡುವಿನ ಸಂಬಂಧಗಳನ್ನು ಸಂಪೂರ್ಣವಾಗಿ ಕೆಡಿಸಿತು. ಅಮೆರಿಕದ ಅಂದಿನ ಅಧ್ಯಕ್ಷ ಜಿಮ್ಮಿ ಕಾರ್ಟರ್ ಅವರು ಬಂಧಿತರ ಬಿಡುಗಡೆಗಾಗಿ ಹಲವು ಪ್ರಯತ್ನಗಳನ್ನು ಮಾಡಿದರು. ಮೊದಲು ಅವರು ರಾಜತಾಂತ್ರಿಕ ಮಾತುಕತೆಗಳನ್ನು ಆರಂಭಿಸಿದರು. ನಂತರ ಇರಾನ್ ಮೇಲೆ ಆರ್ಥಿಕ ಒತ್ತಡ ಹಾಕಲು ಕ್ರಮ ಕೈಗೊಂಡರು. ಅಮೆರಿಕದ ಬ್ಯಾಂಕ್‌ಗಳಲ್ಲಿ ಇರಾನ್‌ಗೆ ಸೇರಿದ ಸುಮಾರು 8 ಬಿಲಿಯನ್ ಡಾಲರ್ ಹಣವನ್ನು



ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಆದರೂ ಬಂಧಿತರ ಬಿಡುಗಡೆ ಸಾಧ್ಯವಾಗಲಿಲ್ಲ. 1980ರ ಏಪ್ರಿಲ್‌ನಲ್ಲಿ ಅಮೆರಿಕ ಸೇನೆ ಒಂದು ರಹಸ್ಯ ರಕ್ಷಣಾ ಕಾರ್ಯಾಚರಣೆಯನ್ನು ನಡೆಸಲು ಪ್ರಯತ್ನಿಸಿತು. ಈ ಕಾರ್ಯಾಚರಣೆಗೆ 'ಆಪರೇಷನ್ ಈಗಲ್ ಕ್ಲಾ' (Operation Eagle Claw) ಎಂದು ಹೆಸರಿಟ್ಟಿದ್ದರು. ಆದರೆ ಈ ಕಾರ್ಯಾಚರಣೆ ವಿಫಲವಾಯಿತು. ಹೆಲಿಕಾಪ್ಟರ್ ಮತ್ತು ವಿಮಾನಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಎಂಟು ಅಮೆರಿಕನ್ ಸೈನಿಕರು ಸಾವನ್ನಪ್ಪಿದರು. ಇದರಿಂದ ಅಮೆರಿಕ ಸರಕಾರಕ್ಕೆ ದೊಡ್ಡ ಅವಮಾನ ಎದುರಾಯಿತು ಮತ್ತು ಬಂಧಿತರ ಪರಿಸ್ಥಿತಿ ಇನ್ನಷ್ಟು ಗಂಭೀರವಾಯಿತು. ಬಂಧಿತರ ಬಿಡುಗಡೆ ವಿಳಂಬವಾಗಿದ್ದರಿಂದ, ಅಧ್ಯಕ್ಷ ಜಿಮ್ಮಿ ಕಾರ್ಟರ್ ಅವರ ಜನಪ್ರಿಯತೆ ಕುಸಿಯಿತು, ಮತ್ತೊಮ್ಮೆ ಅಧ್ಯಕ್ಷ ಗಾದಿಗೇರುವ ಅವರ ಪ್ರಯತ್ನ ನೆಲಕಚ್ಚಿತು.

444 ದಿನಗಳ ಕಾಲ ಮುಂದುವರಿದ ಈ ಸಂಕಷ್ಟ ಕೊನೆಗೆ ರಾಜತಾಂತ್ರಿಕ ಮಾತುಕತೆಗಳ ಮೂಲಕ ಪರಿಹಾರವಾಯಿತು. ಅಲ್ಜೀರಿಯಾ ದೇಶದ ಮಧ್ಯಸ್ಥಿಕೆಯಲ್ಲಿ ಅಮೆರಿಕ ಮತ್ತು ಇರಾನ್ ನಡುವೆ ಒಪ್ಪಂದ ನಡೆಯಿತು. 1981ರ ಜನವರಿ 20ರಂದು 53 ಬಂಧಿತರನ್ನು ಬಿಡುಗಡೆ ಮಾಡಲಾಯಿತು. ಅದೇ ದಿನ ಅಮೆರಿಕದಲ್ಲಿ ಹೊಸ ಅಧ್ಯಕ್ಷ ರೊನಾಲ್ಡ್ ರೇಗನ್ ಅಧಿಕಾರ ಸ್ವೀಕರಿಸಿದರು. ಈ ಘಟನೆ ಜಗತ್ತಿನ ರಾಜಕೀಯದಲ್ಲಿ ದೊಡ್ಡ ಪರಿಣಾಮ ಬೀರಿತು. ಅಮೆರಿಕ ಮತ್ತು ಇರಾನ್ ನಡುವಿನ ಸಂಬಂಧಗಳು ಇನ್ನಷ್ಟು ಹದಗೆಟ್ಟವು, ಮತ್ತೆಂದೂ ಸರಿಪಡಿಸಲಾಗದ ಪರಿಸ್ಥಿತಿ ನಿರ್ಮಾಣವಾಯಿತು

ರಾಯಭಾರ ಕಚೇರಿಯಿಂದ ತಪ್ಪಿಸಿಕೊಂಡ 6 ಜನ

1979ರ ನವೆಂಬರ್ 4ರಂದು ಟೆಹ್ರಾನ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಯನ್ನು ಆಕ್ರಮಿಸಿದಾಗ ಬಹುತೇಕ ಎಲ್ಲ ಸಿಬ್ಬಂದಿಗಳನ್ನು ಬಂಧಿಸಲಾಯಿತು. ಆದರೆ ಆ ಗೊಂದಲದ ನಡುವೆ 6 ಅಮೆರಿಕನ್ ರಾಜತಾಂತ್ರಿಕರು ತಪ್ಪಿಸಿಕೊಂಡರು. ಆಗ ಇರಾನ್‌ನಲ್ಲಿನ ಪರಿಸ್ಥಿತಿ ಅಪಾಯಕಾರಿ ಮಟ್ಟಕ್ಕೆ ಏರಿತ್ತು, ಅಮೆರಿಕನ್ನರನ್ನು ಕಂಡರೆ ಗುಂಡು ಹೊಡೆಯಬೇಕೆನ್ನುವ ಮನಸ್ಥಿತಿ ಅದಾಗಿತ್ತು. ಆ ಸಮಯದಲ್ಲಿ ಕೆನಡಾದ ರಾಯಭಾರಿ ಕೆನ್ ಟೇಲರ್ ಅವರಿಗೆ ರಹಸ್ಯವಾಗಿ ಆಶ್ರಯ ನೀಡಿದರು. ಸುಮಾರು ಮೂರು ತಿಂಗಳುಗಳ ಕಾಲ 6 ಮಂದಿ ಅಡಗಿಕೊಂಡೇ ಬದುಕಿದರು.

ಅಮೆರಿಕದ ಗುಪ್ತಚರ ಸಂಸ್ಥೆ Central Intelligence Agency (CIA) ಈ 6 ಜನರನ್ನು ಸುರಕ್ಷಿತವಾಗಿ ಅಮೆರಿಕಕ್ಕೆ ರವಾನಿಸಲು ಒಂದು ವಿಚಿತ್ರ ಯೋಜನೆ ರೂಪಿಸಿತು. ಸಿಐಎ ಏಜೆಂಟ್ ಟೋನಿ ಮೆಂಡೆಜ್ ಒಂದು ವಿಭಿನ್ನವಾದ ಪ್ಲಾನ್ ಮಾಡಿದರು. ಅವರು ಈ 6 ಜನರನ್ನು ಹಾಲಿವುಡ್ ಚಿತ್ರತಂಡದ ಸದಸ್ಯರಂತೆ ಬಿಂಬಿಸಿ ಇರಾನ್‌ನಿಂದ ಹೊರಗೆ ಕರೆದೊಯ್ಯಬೇಕೆಂದು ನಿರ್ಧರಿಸಿದರು. ಸಿಐಎ ಕೃತಕ ಸಿನಿಮಾ ಯೋಜನೆ ಸೃಷ್ಟಿಸಿತು. ಆ ಸಿನಿಮಾಕ್ಕೆ Argo ಎಂದು ಹೆಸರಿಸಲಾಯಿತು. ಹಾಲಿವುಡ್‌ನಲ್ಲಿ ನಕಲಿ ಸಿನಿಮಾ ಕಂಪನಿ, ಪೋಸ್ಟರ್, ಸ್ಕ್ರಿಪ್ಟ್, ಪ್ರಚಾರ ಎಲ್ಲವನ್ನೂ ಸಿದ್ಧಪಡಿಸಿದರು. 6 ಅಮೆರಿಕನ್ನರಿಗೆ ಹೊಸ ಪಾಸ್‌ಪೋರ್ಟ್‌ಗಳನ್ನು ನೀಡಲಾಯಿತು. ಅವರನ್ನು ಕೆನಡಾದ ಸಿನಿಮಾ ನಿರ್ಮಾಣ ತಂಡದ ಸದಸ್ಯರೆಂದು ಬಿಂಬಿಸಲಾಯಿತು. 1980ರ ಜನವರಿಯಲ್ಲಿ ಅವರನ್ನು ಟೆಹ್ರಾನ್ ವಿಮಾನ ನಿಲ್ದಾಣಕ್ಕೆ ಕರೆದೊಯ್ಯಲಾಯಿತು. ಅವರ ಕೈಯಲ್ಲಿ ಸಿನಿಮಾ ಸ್ಕ್ರಿಪ್ಟ್ ಮತ್ತು ಇತರ ದಾಖಲೆಗಳಿದ್ದವು. ಇರಾನ್ ಅಧಿಕಾರಿಗಳು ಅವರ ದಾಖಲೆಗಳನ್ನು ಸಂಪೂರ್ಣವಾಗಿ ಪರಿಶೀಲಿಸಿದರು, ಅದೊಂದು ಉದ್ವಿಗ್ನ ಕ್ಷಣ. ಯಾರಾದರೂ ಅನುಮಾನಪಟ್ಟರೆ ಅವರ ಜೀವಕ್ಕೆ ಅಪಾಯವಿತ್ತು. ಕೊನೆಗೂ ವಿಮಾನ ಹಾರಿತು, ಅವರೆಲ್ಲ ಸುರಕ್ಷಿತವಾಗಿ ಇರಾನ್ ದೇಶದಿಂದ ಹೊರಬಂದಿದ್ದರು. ಈ ಕಾರ್ಯಾಚರಣೆಯನ್ನು ಗುಪ್ತಚರ ಇತಿಹಾಸದಲ್ಲಿ ಅತ್ಯಂತ ವಿಚಿತ್ರ ಮತ್ತು ಧೈರ್ಯಶಾಲಿ ಕಾರ್ಯಾಚರಣೆಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಈ ಘಟನೆ ಆಧರಿಸಿ ನಂತರ Argo ಎಂಬ ಪ್ರಸಿದ್ಧ ಹಾಲಿವುಡ್ ಸಿನಿಮಾ ಕೂಡ ನಿರ್ಮಾಣವಾಯಿತು.

Guests of the Ayatollah ಕೇವಲ ಒಂದು ಪುಸ್ತಕವಲ್ಲ; ಅದು ಮಾನವ ಸಹನೆ, ಭಯ ಮತ್ತು ಆಸೆಯ ಕಥೆಯನ್ನು ಕಣ್ಣಿಗೆ ಕಟ್ಟುವಂತೆ ಹೇಳುವ ಅದ್ಭುತ ಕೃತಿ.

(ಲೇಖಕಿ ಖಾಸಗಿ ಕಂಪನಿಯಲ್ಲಿ ಉದ್ಯೋಗಿ)

ಭಟ್ಟರ್ ಸ್ಕ್ಯಾಚ್

- ಶ್ರೀಕಾಂತ ಭಟ್, ಯಲ್ಲಾಪುರ
ಭಟ್ರೇ, ಮೊಬೈಲ್ ಬ್ಯಾಟರಿ ಮತ್ತು ಮನುಷ್ಯನ ತಾಳ್ಮೆಯ ನಡುವೆ ಇರುವ ಸಾಮ್ಯತೆ ಏನು?
– **ಎರಡೂ ಸಂಜೆಯಾಗುವುದರೊಳಗೆ 'ಲೋ' ಆಗಿಬಿಡುತ್ತವೆ!**

- ದಾಮೋದರ ಬಿ. (ಇಮೇಲ್ ಮೂಲಕ)
ಭಟ್ರೇ, ಈ ಕಾಲದಲ್ಲಿ ನಿಜವಾದ ಶ್ರೀಮಂತ ಯಾರು?
– **ಬೇಕೆಂದಾಗ ವೈ-ಫೈ ಕನೆಕ್ಟಿವಿಟಿ ಹೊಂದಿರುವವರು!**

- ಸಿ.ಕೇಶವ, ಗುಬ್ಬಿ
ಭಟ್ರೇ, ಮನುಷ್ಯನಿಗೆ ಅತಿ ಹೆಚ್ಚು ಶಾಂತಿ ಸಿಗುವ ಜಾಗ ಯಾವುದು?
– **ಫೋನ್‌ನಲ್ಲಿ 'ನೋಟಿಫಿಕೇಶನ್' ಆಫ್ ಮಾಡಿದಾಗ ಮತ್ತು ವೈ-ಫೈ ಕಟ್ ಆದಾಗ!**

- ನಾಗೇಂದ್ರ ರೆಡ್ಡಿ, ಬೆಂಗಳೂರು
ಭಟ್ರೇ, ಒಬ್ಬ ಸೋಮಾರಿ ವಿಜ್ಞಾನಿ ಏನು ಕಂಡುಹಿಡಿಯುತ್ತಾನೆ?
– **ರಿಮೋಟ್ ಕಂಟ್ರೋಲ್‌ನಿಂದ ಇನ್ನೊಂದು ರಿಮೋಟ್ ಕಂಟ್ರೋಲ್ ತರುವುದನ್ನು!**

- ಸುಧೀರ ಶೆಟ್ಟಿ, ಮೈಸೂರು
ಭಟ್ರೇ, ವಿಮಾನದ ಒಳಗಡೆ ಸೊಳ್ಳೆಗಳು ಯಾಕೆ ಇರುವುದಿಲ್ಲ?
– **ಯಾಕೆಂದರೆ ಅವಕ್ಕೆ 'ಬೋರ್ಡಿಂಗ್ ಪಾಸ್' ಸಿಗಲ್ಲ!**

- ಶಾಲಿನಿ ಪಿ., ಕುಣಿಗಲ್
ಒಬ್ಬ ಮನುಷ್ಯ ತನ್ನ ಫೋನ್‌ಗೆ ಹೂವಿನ ಹಾರ ಹಾಕಿದ್ದ ಯಾಕೆ?
– **ಯಾಕೆಂದರೆ ಅದು 'ಡೆಡ್' ಆಗಿದೆ ಅಂತ ಸರ್ವೀಸ್ ಸೆಂಟರ್‌ನವನು ಹೇಳಿರಬೇಕು!**

- ಜೆ.ರಂಗಸ್ವಾಮಿ, ಪಿರಿಯಾಪಟ್ಟಣ
ಭಟ್ರೇ, ತರಕಾರಿ ಮಾರ್ಕೆಟ್‌ಗೆ ಹೋದಾಗ ಯಾವ ತರಕಾರಿ ಅತಿ ಹೆಚ್ಚು ಸೌಂಡ್ ಮಾಡುತ್ತದೆ?
– **ಎಲ್ಲರ ಕಿವುಚಿಕೊಂಡ ಮುಖಗಳನ್ನು ನೋಡಿದ 'ಹಾಗಲಕಾಯಿ'!**

- ರಣಜಿತ್ ರಾವ್, ಶಿವಮೊಗ್ಗ
ಭಟ್ರೇ, ಗಂಡ-ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗೋದ್ರಿಂದ ಆಗುವ ಲಾಭ ಏನು?
– **ಇಬ್ಬರೂ ಸಂಜೆ ಸುಸ್ತಾಗಿ ಮನೆಗೆ ಬರುವುದರಿಂದ ಜಗಳ ಆಡಲು ಎನರ್ಜಿ ಇರಲ್ಲ!**

- ತ್ಯಾಗರಾಜ ಗೌಡ, ಚಿಕ್ಕಮಗಳೂರು
ಭಟ್ರೆ, ಸೊಳ್ಳೆಗಳು ಮನುಷ್ಯರಿಗೆ ಕಚ್ಚಿದ ಮೇಲೆ ಯಾಕೆ ಹಾರಿ ಹೋಗುತ್ತವಲ್ಲ?
– **ಯಾಕಂದ್ರೆ, ಕಚ್ಚಿದ ಮೇಲೆ 'ರಕ್ತ ಸಂಬಂಧ' ಬೆಳೆಸಿಕೊಂಡರೆ ಎಲ್ಲಿ ಆಸ್ತಿಯಲ್ಲಿ ಪಾಲು ಕೇಳುತ್ತಾರೋ ಎನ್ನುವ ಭಯ!**

ಡಿಜಿಟಲ್ ಯುಗದ ಡೆಡ್ಲಿ ಮಕ್ಕಳು !

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com

ನೀಟ್‌ಗೆ ಓದಲು ಹೇಳಿದ ತಂದೆಯ ಗುಂಡಿಕ್ಕಿ ಕೊಲೆ.., ತಂದೆ, ತಾಯಿ, ತಂಗಿಯನ್ನು ಕೊಲೆ ಮಾಡಿ ಮನೆಯಲ್ಲೇ ಹೂತಿಟ್ಟ ಮಗ..., ಹಣಕ್ಕಾಗಿ ತಂದೆ-ತಾಯಿಯನ್ನು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ ಟೆಕ್ಕಿ ಪುತ್ರ.., ಹೆತ್ತ ತಾಯಿಯ ಕೊಲೆ ಮಾಡಿ ಕತೆ ಕಟ್ಟಿದ ಪುತ್ರಿ..., ಕ್ಲಾಸ್ ರೂಮ್‌ನಲ್ಲಿಯೇ ಶಿಕ್ಷಕನ ಎದೆಗೆ ಗುದ್ದಿದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ..., ಸಹಪಾಠಿಯ ಕೊಂದು, ವಾರ್ಡನ್ ಸಹಿತ ಏಳು ಮಂದಿ ವಿರುದ್ಧ ಮಾರಕಾಸ್ತ್ರಗಳಿಂದ ದಾಳಿ ಮಾಡಿ ಪರಾರಿಯಾದ 9ನೇ ತರಗತಿ ವಿದ್ಯಾರ್ಥಿ...

ಇವೆಲ್ಲವೂ ನಿನ್ನೆ, ಮೊನ್ನೆ, ಒಂದೆರಡು ವಾರಗಳ ಅವಧಿಯಲ್ಲಿ ನಾವು ಓದಿದ ಸುದ್ದಿಗಳು. ಮೊದಲಿನ ಒಂದು ಘಟನೆ ಬಿಟ್ಟರೆ ಉಳಿದ ಎಲ್ಲವೂ ನಮ್ಮದೇ ರಾಜ್ಯದಲ್ಲಿ ಘಟಿಸಿದ ವಿದ್ಯಮಾನಗಳು. ನೂರಾರು ಜನರನ್ನು ಬಲಿ ಪಡೆಯುತ್ತಿರುವ ಯುದ್ಧದ ವರದಿಗಳ ನಡುವೆ ಈ ಸುದ್ದಿಗಳು ನಮ್ಮನ್ನು ಹೆಚ್ಚು ಕಾಡುತ್ತವೆ. ಕಾರಣ ಇಲ್ಲಿ ವ್ಯಕ್ತಿಗಳಷ್ಟೇ ಕೊಲೆಯಾಗಿಲ್ಲ. ನಮ್ಮ ನಂಬಿಕೆ, ಸಂಸ್ಕಾರ, ಸಂಸ್ಕೃತಿ, ಕೌಟುಂಬಿಕ ಮೌಲ್ಯಗಳೂ ಕೊಲೆಯಾಗಿವೆ. ನಮ್ಮ ಮನೆಯಲ್ಲಿ, ನಾವು ಓದುವ/ಕಲಿಸುವ ಶಾಲೆಯಲ್ಲಿಯೇ ನಾವು ಅಸುರಕ್ಷಿತರಾಗುವುದು ಯಾವುದೇ ಯುದ್ಧಕ್ಕಿಂತ ಹೆಚ್ಚು ಆತಂಕದ ವಿಷಯ.

ಕುಟುಂಬ ಎಷ್ಟೇ ಸುಶಿಕ್ಷಿತವಿರಬಹುದು, ಅಪ್ಪ-ಅಮ್ಮ ಸಂಸ್ಕಾರದ ಪಾಠ ಹೇಳಿ ಕೊಟ್ಟಿರಬಹುದು. ಆದರೆ ಕ್ಷಣಿಕ ಆವೇಶ, ತಾಳ್ಮೆಗೆಟ್ಟ ವರ್ತನೆ ಹೆತ್ತವರನ್ನೇ ಸಾಯಿಸುವಷ್ಟರ ಮಟ್ಟಿಗೆ ಹೋಗುತ್ತದೆ ಎಂದರೆ ನಮ್ಮ ಸಮಾಜ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬ ಗಂಭೀರ ಪ್ರಶ್ನೆಯನ್ನು ಮುಂದೆ ಇಟ್ಟಿವೆ. ನಮ್ಮ ರಾಷ್ಟ್ರ ಆರ್ಥಿಕವಾಗಿ ಬಲಿಷ್ಠವಾಗಿರಬಹುದು. ನಮ್ಮ ಸೇನೆ ಬಲಶಾಲಿಯಾಗಿರಬಹುದು. ಆದರೆ ಸಮಾಜದ ಬುನಾದಿ ಹಳಿ ತಪ್ಪಿದರೆ ಯಾರೂ ಅಂತಹ ದೇಶವನ್ನು ರಕ್ಷಿಸಲು ಸಾಧ್ಯವಿಲ್ಲ. ಇಡೀ ವಿಶ್ವದಲ್ಲಿಯೇ ಅತಿ ಹೆಚ್ಚಿನ ಕೌಟುಂಬಿಕ ಭದ್ರತೆ ಮತ್ತು ಸುರಕ್ಷತೆಗೆ ಹೆಸರಾದ ದೇಶದಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ಮಕ್ಕಳು ಹಂತಕರಾಗುತ್ತಿದ್ದಾರೆ ಎಂದರೆ ಇದು ಅವರ ನೈತಿಕ ಅಧಃಪತನವಲ್ಲ. ನಾವು ಕಟ್ಟಿದ ನಾಗರಿಕ ಸಮಾಜದ ಪತನ.

ನೀಟ್ ಪರೀಕ್ಷೆಗೆ ಓದಲು ಮಗನನ್ನು ಒತ್ತಾಯಿಸುತ್ತಿದ್ದ ತಂದೆಯಲ್ಲಿ 'ಕುಲೋದ್ಧಾರಕ'ನ ಭವಿಷ್ಯ ಬಿಟ್ಟರೆ ಬೇರೆ ಯಾವುದೇ ಉದ್ದೇಶವಿರಲಿಕ್ಕಿಲ್ಲ. ಆದರೆ ವಿದ್ಯಾರ್ಥಿಯ ಕುಟುಂಬ ಮತ್ತು ಸುತ್ತಲ ಸಮಾಜ ಅಂಕಗಳಿಕೆಯನ್ನೇ ಜೀವನದ ಉದ್ದೇಶವೆಂದು ಬಿಂಬಿಸುವ ಬದಲು ಅಂಕಗಳಿಗಿಂತ ಜೀವನದ ಮೌಲ್ಯ ದೊಡ್ಡದೆಂದು ಕಲಿಸಿ ಕೊಟ್ಟಿದ್ದರೆ ಈ ಪಾತಕ ನಡೆಯುತ್ತಿರಲಿಲ್ಲವೇನೋ? ನಮ್ಮ ಮಕ್ಕಳ ಉದ್ಯೋಗ ಭವಿಷ್ಯದ ಬಗ್ಗೆಯೇ ಯೋಚಿಸುತ್ತಾ ಅವರ ಮಿದುಳಿಗೆ 'ಪಠ್ಯದ ಅರಿವು' ತುಂಬುವ ಭರದಲ್ಲಿ, ನಮ್ಮ ಕೈಯಾರೆ ಅವರ ಹೃದಯದ ಸಂವೇದನೆಗಳನ್ನು ಕಿತ್ತು ಹಾಕುತ್ತಿದ್ದೇವೆಯೇ ಎಂಬ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳಬೇಕಾಗಿದೆ. ಮಕ್ಕಳಲ್ಲಿ ಮನುಷ್ಯ ಸಹಜವಾದ ಪ್ರೀತಿ, ಬಂಧುತ್ವ, ಅಂತಃಕರಣ, ಸಂವೇದನೆಗಳನ್ನು ಬೆಳೆಯಲು ಅವಕಾಶ ಕೊಟ್ಟಿದ್ದರೆ, ಅವರ ಬಾಲ್ಯದ ಸಹಜ ಕುತೂಹಲದ ಪ್ರಶ್ನೆಗಳಿಗೆ ಕಿವಿಯಾಗಿ, ನಮ್ಮ ಬೆಚ್ಚನೆಯ ಅಪ್ಪುಗೆಯಲ್ಲಿ ಬಂಧಿಸಿಡುತ್ತಿದ್ದರೆ ಇವರಲ್ಲಿ ಕೆಲವರಾದರೂ ಹಂತಕರಾಗುತ್ತಿರಲಿಲ್ಲ.

ಒಂದು ಕಾಲದಲ್ಲಿ ಮನೆಗಳು ಸಂಸ್ಕಾರದ ಪಾಠಶಾಲೆಗಳಾಗಿದ್ದವು, ಶಾಲೆಗಳು ಜ್ಞಾನದ ದೇಗುಲಗಳಾಗಿದ್ದವು. ಆದರೆ ಈ ಪವಿತ್ರ ಆವರಣಗಳು ಇಂದು ರಕ್ತಸಿಕ್ತವಾಗುತ್ತಿರುವುದು ನಮ್ಮ ಸಮಾಜದ 'ಮಾನಸಿಕ ಆರೋಗ್ಯ' ಕೆಟ್ಟಿರುವುದಕ್ಕೆ ಸಾಕ್ಷಿ. ಉದ್ಯೋಗಕ್ಕಾಗಿ ಅಂಕಗಳನ್ನು ಬೆನ್ನತ್ತಿ ಹೋಗುವ ನಮ್ಮ ಶಿಕ್ಷಣ ವ್ಯವಸ್ಥೆ ಸಂವೇದನಾರಹಿತ ನವಪೀಳಿಗೆಯನ್ನು ಹುಟ್ಟು ಹಾಕುತ್ತಿದೆ. ಇದು ನಮ್ಮ ಸಮಾಜದ ಸಮಸ್ಯೆಯೊಂದೇ ಅಲ್ಲ. ಪಾಶ್ಚಾತ್ಯ ಸಮಾಜಕ್ಕೆ ಎಂದೋ ಕಾಲಿಟ್ಟ ಪಿಡುಗು ಈಗ ನಮ್ಮ ಮುಂದೆ ಬಂದು ನಿಂತಿದೆ.

ಕ್ಲಾಸ್ ರೂಂನಲ್ಲಿ ಶಿಕ್ಷಕನ ಮೇಲೆ ಹಲ್ಲೆ ಮಾಡುವುದು ಶಿಕ್ಷಣ ವ್ಯವಸ್ಥೆಯಲ್ಲಿನ 'ಶಿಸ್ತಿನ ಪತನ'ವನ್ನು ತೋರಿಸುತ್ತದೆ. ಹಿಂದೆ ಗುರು-ಶಿಷ್ಯರ ನಡುವೆ ಇದ್ದ ಪವಿತ್ರ ಸಂಬಂಧ ಇಂದು 'ಸೇವಕ-ಗ್ರಾಹಕ'ನ ಸಂಬಂಧವಾಗಿ ಬದಲಾಗಿದೆ. ಸಂಬಳಕ್ಕಾಗಿ ದುಡಿಯುವ ಇತರ ನೌಕರ ವರ್ಗ ಮತ್ತು ಶಿಕ್ಷಕರ ನಡುವೆ ಇಂದಿನ ಸಮಾಜ ಯಾವುದೇ ಭಿನ್ನತೆ ಕಾಣುತ್ತಿಲ್ಲ. ಲಕ್ಷಗಟ್ಟಲೆ ಫೀಜು ಕೊಟ್ಟು ಶಾಲೆ/ಕಾಲೇಜು ಸೇರಿದ ವಿದ್ಯಾರ್ಥಿಗಳು ಕ್ಯಾಂಪಸ್‌ನಲ್ಲೂ ತಮ್ಮ ದುಡ್ಡಿಗೆ ತಕ್ಕ 'ಗೌರವ, ಪ್ರತಿಫಲ' ಅಪೇಕ್ಷಿಸುತ್ತಿದ್ದಾರೆ. ಪೋಷಕರಲ್ಲಿ, ವಿದ್ಯಾರ್ಥಿಗಳಲ್ಲಿ ತಮ್ಮ ಹಕ್ಕುಗಳ ಅರಿವಿದೆ. ಆದರೆ ಕನಿಷ್ಠ ಜವಾಬ್ದಾರಿಯ ಅರಿವು ಕಡಿಮೆಯಾಗಿದೆ.

ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳು ಪರೀಕ್ಷೆಯ ಒತ್ತಡ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಈಗಿನ ಹೊಸ ಪ್ರವೃತ್ತಿಯೆಂದರೆ, ಈ ಒತ್ತಡವನ್ನು ತಮ್ಮನ್ನು ನಿಯಂತ್ರಿಸುವವರ (ಪೋಷಕರು ಅಥವಾ ಶಿಕ್ಷಕರು) ಮೇಲೆ ಹಿಂಸೆಯ ರೂಪದಲ್ಲಿ ಹೊರಹಾಕುವುದು. ನೀಟ್‌ಗಾಗಿ ಓದಲು ಹೇಳಿದ ತಂದೆಯ ಕೊಲೆಯು ಕೇವಲ ಒಂದು ಕ್ರಿಮಿನಲ್ ಪ್ರಕರಣವಲ್ಲ. ಇದು Academic Burnoutನ ಪರಮಾವಧಿ. ಒಬ್ಬ ವಿದ್ಯಾರ್ಥಿ ತನ್ನ ಹೆತ್ತವರನ್ನೇ ಕೊಲ್ಲುವ ಹಂತಕ್ಕೆ ಹೋಗುತ್ತಾನೆ ಎಂದರೆ, ಅವನ ಮನಸ್ಸಿನಲ್ಲಿ ಆ ಪರೀಕ್ಷೆಯ ಬಗ್ಗೆ ಎಷ್ಟು ಭಯ ಮತ್ತು ದ್ವೇಷ ತುಂಬಿರಬಹುದು ಎಂಬುದನ್ನು ನಾವು ಊಹಿಸಬೇಕು. ಇಲ್ಲಿ ತಂದೆ ಕೇವಲ ವ್ಯಕ್ತಿಯಲ್ಲ, ಆ ವಿದ್ಯಾರ್ಥಿಯ ಪಾಲಿಗೆ ಆತ 'ಒತ್ತಡದ ಸಂಕೇತ'.

ಒಬ್ಬ ಸುಶಿಕ್ಷಿತ ಸಾಫ್ಟ್‌ವೇರ್ ಇಂಜಿನಿಯರ್ ತನ್ನ ಕುಟುಂಬವನ್ನೇ ಕೊಲ್ಲುವುದು ಸಂತೆಯಲ್ಲಿದ್ದರೂ ಒಂಟಿಯಾಗಿರುವವನ ಕಥೆ. ತಾಂತ್ರಿಕವಾಗಿ ಜಗತ್ತಿನೊಂದಿಗೆ ಸಂಪರ್ಕದಲ್ಲಿರುವ ವ್ಯಕ್ತಿಗಳು ಭಾವನಾತ್ಮಕವಾಗಿ ಒಂಟಿಯಾಗುತ್ತಿದ್ದಾರೆ. ಉದ್ಯೋಗದ ಅಭದ್ರತೆ, ಆರ್ಥಿಕ ಮುಗ್ಗಟ್ಟು, ಡಿಜಿಟಲ್ ಮತ್ತು ಮಾದಕ ದ್ರವ್ಯದ ವ್ಯಸನಗಳು ಯುವ ವರ್ಗವನ್ನು ಸಮಾಜವಿರೋಧಿ ವ್ಯಕ್ತಿತ್ವದತ್ತ ತಳ್ಳುತ್ತಿವೆ.

ತಾಂತ್ರಿಕವಾಗಿ ಹೊಸ ಬದಲಾವಣೆಗಳಿಗೆ ಒಗ್ಗಿಕೊಂಡ ನಮ್ಮ ಬದುಕು ನಮಗರಿವಿಲ್ಲದಂತೆಯೇ ನಮ್ಮ ಮಕ್ಕಳನ್ನು ನಮ್ಮಿಂದ ದೂರ ಮಾಡಿದೆ. ಪೋಷಕರ ಕಣ್ಣು ಸದಾ ಮೊಬೈಲ್‌ನತ್ತ ನೆಟ್ಟಿದ್ದರೆ ಮಕ್ಕಳು ರೀಲ್ಸ್, ಶಾರ್ಟ್ ವಿಡಿಯೋಗಳು ಮತ್ತು ಗೇಮ್‌ಗಳಿಂದ ಸಿಗುವ ತಕ್ಷಣದ ಸಂತೋಷಕ್ಕೆ ಒಗ್ಗಿಕೊಂಡಿದ್ದಾರೆ. ತಜ್ಞರ ಪ್ರಕಾರ ಯಾವುದಾದರೂ ವಿಷಯದಲ್ಲಿ ವಿಳಂಬವಾದರೆ ಅಥವಾ ಯಾರಾದರೂ ತಡೆದರೆ ಅವರ ಮೆದುಳು ತಕ್ಷಣವೇ ತೀವ್ರ ಕೋಪದ ಸಂಕೇತಗಳನ್ನು ರವಾನಿಸುತ್ತದೆ. ಈ ಡೋಪಮೈನ್ ಚಕ್ರ (Dopamine Loop) ನಮ್ಮ ಮಕ್ಕಳ ಪಾಲಿಗೆ ಸೈಲೆಂಟ್ ಕಿಲ್ಲರ್‌ಗಳಾಗಿವೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ವರದಿಗಳ ಪ್ರಕಾರ, ಇತ್ತೀಚೆಗೆ ಭಾರತದಲ್ಲಿ 'ಕ್ಷಣಿಕ ಆವೇಶ' ಅಥವಾ 'ಕ್ಷುಲ್ಲಕ ಕಾರಣ'ಗಳಿಂದ ನಡೆಯುವ ಕೊಲೆಗಳ ಸಂಖ್ಯೆ ಏರುತ್ತಿದೆ. ಹಾರ್ನ್ ಮಾಡಿದ, ಓವರ್‌ಟೇಕ್ ಮಾಡಿದ, ಮುಂದಕ್ಕೆ ಸಾಗಲು ಬಿಡಲಿಲ್ಲ ಎಂಬಿತ್ಯಾದಿ ಕಾರಣಗಳಿಗೆ ನಡೆಯುವ ರೋಡ್ ರೇಜ್ ಘಟನೆಗಳು ಇಂದು ತೀರಾ ಸಾಮಾನ್ಯವಾಗಿವೆ. ಇವುಗಳಲ್ಲಿ ಎಷ್ಟೋ ಘಟನೆಗಳು ಕೊಲೆಯಲ್ಲಿ ಪರ್ಯಾವಸಾನಗೊಂಡಿವೆ. ಇವೆಲ್ಲವೂ 'ಕ್ಷಣಿಕ' ಆವೇಶದ ಕೃತ್ಯಗಳು. ಕಳೆದ ಒಂದು ದಶಕದಲ್ಲಿ 16 ರಿಂದ 18 ವರ್ಷದೊಳಗಿನ ಯುವಕರು ಕ್ಷಣಿಕ ಆವೇಶದಲ್ಲಿ ಎಸಗಿದ ಗಂಭೀರ ಅಪರಾಧಗಳ ಪ್ರಮಾಣದಲ್ಲಿ ಶೇ. 20ರಷ್ಟು ಏರಿಕೆ ಕಂಡುಬಂದಿದೆ.

ಕೂಡು ಕುಟುಂಬದ ಬೇಲಿ ದಾಟಿ, ತಮ್ಮದೇ ಗೂಡು ಕಟ್ಟಿಕೊಂಡ ಕುಟುಂಬ ಈಗ ಅಜ್ಜ-ಅಜ್ಜಿಯರನ್ನೂ ದೂರವಿಟ್ಟು ಅಣುವಿನಿಂದ ಪರಮಾಣುವಿನತ್ತ ಸಾಗಿದೆ. ಹಿರಿಯರ ಮಾರ್ಗದರ್ಶನವಿಲ್ಲದ, ಕೇವಲ ಪೋಷಕರು ಮತ್ತು ಮಕ್ಕಳಿರುವ ಮನೆಗಳಲ್ಲಿ ಸಂಘರ್ಷಗಳು ನಡೆದಾಗ ಅದನ್ನು ಮಧ್ಯಪ್ರವೇಶಿಸಿ ಸರಿಪಡಿಸುವವರು ಯಾರೂ ಇರುವುದಿಲ್ಲ. ಕೌಟುಂಬಿಕ ತಾಕಲಾಟಗಳು ಎದುರಾದಾಗ ಅನುಭವದ ಮಾತುಗಳಿಂದ ತಿಳಿ ಹೇಳುವವರಿಲ್ಲ. ನಮಗೆ ಗಣಿತ, ವಿಜ್ಞಾನ ಗೊತ್ತು. ಅತ್ಯಾಧುನಿಕ ತಂತ್ರಜ್ಞಾನ, ಜಗತ್ತಿನ ವಿದ್ಯಮಾನಗಳೆಲ್ಲವೂ ಗೊತ್ತು. ಆದರೆ ಕೋಪ ಬಂದಾಗ ಏನು ಮಾಡಬೇಕು? ಬೇಸರವಾದಾಗ ಯಾರ ಬಳಿ ಹೇಳಿಕೊಳ್ಳಬೇಕು? ಎಂಬ 'ಭಾವನಾತ್ಮಕ ನಿರ್ವಹಣೆ' ತಿಳಿದಿಲ್ಲ. ಕಣ್ಣೀರು ಒರೆಸಬೇಕಿದ್ದ ಬಂಧುವರ್ಗವೂ ಜತೆಗಿಲ್ಲ.

ಮೂವರು, ನಾಲ್ವರಿದ್ದ ಅನೇಕ ಕುಟುಂಬಗಳು ಈಗ ಇಬ್ಬರಿಗೆ ಸೀಮಿತವಾಗುತ್ತಿವೆ. ಸಿಂಗಲ್ ಪೇರೆಂಟಿಂಗ್ ಭಾರತದಲ್ಲೂ ಸಾಮಾನ್ಯ ಸಂಗತಿಯಾಗಿದೆ. ತಾಯಿ ಅಥವಾ ತಂದೆ ಪೈಕಿ ಒಬ್ಬರ ಆಸರೆಯನ್ನಷ್ಟೇ ಪಡೆದು ದೊಡ್ಡವರಾದ ಮಕ್ಕಳು ಸ್ವಾಭಿಮಾನದ ಬದುಕು ರೂಪಿಸಿಕೊಂಡ ಉದಾಹರಣೆಗಳಿವೆ. ಆದರೆ ಒಂದೇ ಮನೆಯಲ್ಲಿ ವಾಸವಿದ್ದರೂ ಪ್ರತ್ಯೇಕ ಕೊಠಡಿಗಳಲ್ಲಿ ಮಲಗುವ, ಹಾವು ಮುಂಗುಸಿಗಳಂತೆ ಸದಾ ಕಿತ್ತಾಡುವ ದಂಪತಿ ಮಧ್ಯೆ ಬೆಳೆದ ಮಕ್ಕಳು ತಮ್ಮ ಅಸಹನೆ ಮತ್ತು ಕೋಪವನ್ನು ಹೊರಗೆ ತೋರಿಸಲಾರಂಭಿಸುತ್ತವೆ. ಬಾಲಾಪರಾಧಿಗಳ ಹಿನ್ನೆಲೆ ಕೆದಕುತ್ತಾ ಹೋದರೆ ಬಹುತೇಕರ ವಿಷಯದಲ್ಲಿ ಅವರ ಪೋಷಕರ ನಡುವೆ ಹೊಂದಾಣಿಕೆ ಸಮಸ್ಯೆ ಇರುವುದು ಕಂಡು ಬರುತ್ತದೆ.

ಹಿಂದೆ ಎಲ್ಲವೂ ಸರಿ ಇತ್ತೆಂದು ಇದರ ಅರ್ಥವಲ್ಲ. ಕೂಡು ಕುಟುಂಬವಿದ್ದಾಗಲೂ ಎಲ್ಲರಿಗೂ 'ಭಾವನಾತ್ಮಕ ಆಸರೆ' ಸಿಗುತ್ತಿರಲಿಲ್ಲ. ಆದರೆ ಸುತ್ತಲಿನ ಪರಿಸರದಲ್ಲಿ ನಾವು ಒಂದಾಗಲು ಸಾಧ್ಯವಿತ್ತು. ನಾವು ಓದುತ್ತಿದ್ದ ಚಂದಮಾಮ ಕಥೆಗಳು, ಕಥೆ, ಕಾದಂಬರಿ, ಧಾರಾವಾಹಿಗಳಲ್ಲಿ, ರಾಮಾಯಣ, ಮಹಾಭಾರತದ ಪಾತ್ರಗಳಲ್ಲಿ, ಯಕ್ಷಗಾನ, ನಾಟಕ, ಸಿನಿಮಾದ ತುಣುಕುಗಳಲ್ಲಿ ನಮ್ಮ ಸಂವೇದನೆಗಳು ಮರು ಹುಟ್ಟು ಪಡೆಯುತ್ತಿದ್ದವು. ಡಾ. ರಾಜ್‌ಕುಮಾರ್ ಅವರ ಸಿನಿಮಾದ ಒಂದು ಪಾತ್ರ, ಒಂದು ಸನ್ನಿವೇಶ ನಮ್ಮ ಮನಸ್ಸನ್ನು ಇನ್ನಷ್ಟು ಆರ್ದ್ರಗೊಳಿಸುತ್ತಿದ್ದವು. ಆದರೆ ಇಂದಿನ ಸಿನಿಮಾಗಳು, ಟಿವಿಯಲ್ಲಿ ಬರುವ ಧಾರಾವಾಹಿಗಳು, ಮಕ್ಕಳ ಕಾರ್ಟೂನ್‌ಗಳು ನಮ್ಮ ಮನಸ್ಸನ್ನು ಕದಡಿ ವಿಕ್ಷಿಪ್ತ ಮತ್ತು ಸಂಕ್ಷಿಪ್ತಗೊಳಿಸುತ್ತಿವೆಯೇ ಹೊರತು ಪ್ರಫುಲ್ಲಗೊಳಿಸುತ್ತಿಲ್ಲ.

ಮನೋವೈದ್ಯರ ಪ್ರಕಾರ, ಇದು ಕೇವಲ ಅಪರಾಧವಲ್ಲ, ಇದೊಂದು ಸಾಮಾಜಿಕ ತುರ್ತುಸ್ಥಿತಿ. ನಾವು ಅಂಕಗಳ ಬೆನ್ನತ್ತಿ ಹೋಗುವ ರೇಸ್‌ನಲ್ಲಿ ಮಕ್ಕಳನ್ನು 'ಸ್ಪರ್ಧಿ'ಗಳಾಗಿ ನೋಡುತ್ತಿದ್ದೇವೆಯೇ ಹೊರತು 'ಮನುಷ್ಯ'ರನ್ನಾಗಿ ಅಲ್ಲ. ಮಕ್ಕಳಿಗೆ ಸಣ್ಣ ವಯಸ್ಸಿನಿಂದಲೇ ಸೋಲನ್ನು ಅಥವಾ ನಿರಾಕರಣೆಯನ್ನು ಅರಗಿಸಿಕೊಳ್ಳುವ ಶಕ್ತಿ ಕುಂದುತ್ತಿದೆ. ಅನುಭೂತಿ, ಸಹಾನುಭೂತಿ ಎಂಬ ಗುಣಗಳು ಮೊಳಕೆಯಲ್ಲೇ ಕಮರುತ್ತಿವೆ. ಅವರ ಮಿದುಳು ವಿಷಯ ಸಂಗ್ರಹಣೆಯ ಭಂಡಾರವಾದರೂ ಹೃದಯ ಖಾಲಿಯಾಗುತ್ತಿದೆ. ಭಾವನೆಗಳನ್ನು ನಿರ್ವಹಿಸುವ ಕೌಶಲವನ್ನು ಹೃದಯ ಮತ್ತು ಮಿದುಳು ಜತೆಯಾಗಿ ನಿರ್ವಹಿಸಬೇಕು. ಆದರೆ ಹೆಚ್ಚುತ್ತಿರುವ ಯುವಜನರ ಅಸಹನೆ (Impulse Control Disorder) ಸಮಾಜದ ಶಾಂತಿಗೆ ಧಕ್ಕೆ ತರುತ್ತಿದೆ.

ಸಮಾಜದ ಈ ರೋಗಕ್ಕೆ ಜೈಲುಗಳು ಮದ್ದಲ್ಲ, ಬದಲಾಗಿ ನಮ್ಮ ಮನೆಗಳ ಸಂಸ್ಕಾರ ಮತ್ತು ಶಾಲೆಗಳ ಮಾನವೀಯ ಶಿಕ್ಷಣವೇ ಮದ್ದು. ಹೂವಿನಂತಹ ಮನಸ್ಸುಗಳು ಕಲ್ಲಿನಂತಾಗುವ ಮುನ್ನ ನಾವು ಎಚ್ಚೆತ್ತುಕೊಳ್ಳಬೇಕಿದೆ. ಸಮಾಜವು ತನ್ನ ಮೂಲ ಮೌಲ್ಯಗಳಿಗೆ ಮರಳದಿದ್ದರೆ, ನಾವು ಯಂತ್ರಗಳನ್ನು ಸೃಷ್ಟಿಸುತ್ತೇವೆಯೇ ಹೊರತು ಮಾನವರನ್ನಲ್ಲ. ಮೇಲೆ ಉಲ್ಲೇಖಿಸಿದ ಪ್ರತಿ ಘಟನೆಯೂ ನಮಗೆ ಎಚ್ಚರಿಕೆಯ ಗಂಟೆಯಾಗಿದೆ. ಇವು ಮನೆಮನೆಯ ದುರಂತ ಕಥೆಗಳಾಗುವ ಮುನ್ನ ಪ್ರೀತಿ, ಕರುಣೆ ಮತ್ತು ಪರಸ್ಪರ ಗೌರವದ ಆಧಾರದ ಮೇಲೆ ಸಮಾಜವನ್ನು ಕಟ್ಟುವ ಬಗ್ಗೆ ನಾವು ಗಂಭೀರ ಚಿಂತನೆ ನಡೆಸಬೇಕು. ಇದೊಂದೇ ಈಗ ಉಳಿದಿರುವ ದಾರಿ.

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹೊಣೆಗಾರಿಕೆ ಅಗತ್ಯ

ಕರೋನಾ ಮಹಾಮಾರಿಯ ಸಮಯದಲ್ಲಿ ಕೆಲವು ಮಾಧ್ಯಮಗಳು ಮತ್ತು ವಿರೋಧ ಪಕ್ಷಗಳು ತೋರಿದ ವರ್ತನೆ ಈಗ ಮತ್ತೆ ನೆನಪಾಗುತ್ತದೆ. ಮಾಧ್ಯಮಗಳು ದಿನವಿಡೀ ಬಣ್ಣಬಣ್ಣದ ವೈರಸ್‌ಗಳ ಚಿತ್ರಗಳನ್ನು ಪ್ರದರ್ಶಿಸುವ, ವಿವಿಧ ದೇಶಗಳ ಆಸ್ಪತ್ರೆ ಹಾಗೂ ಸ್ಮಶಾನಗಳ ಭಯಾನಕ ದೃಶ್ಯಗಳನ್ನು ನಿರಂತರ ಪ್ರಸಾರ ಮಾಡುವ ಮೂಲಕ ಆಗ ಜನರಲ್ಲಿ ಆತಂಕವನ್ನು ಹೆಚ್ಚಿಸಿದ ಘಟನೆಗಳು ಇನ್ನೂ ಮಸುಕಾಗಿಲ್ಲ. ಟಿಆರ್‌ಪಿ ಹೆಚ್ಚಿಸಿಕೊಳ್ಳುವ ಸ್ಪರ್ಧೆಯಲ್ಲಿ ಇವು ಸಾರ್ವಜನಿಕರ ಮನಸ್ಥಿತಿಯನ್ನು ಮತ್ತಷ್ಟು ಅಸ್ಥಿರಗೊಳಿಸಿದ ಉದಾಹರಣೆಗಳೂ ಸಾಕಷ್ಟಿವೆ. ಇನ್ನು ಕೆಲವು ವಿಪಕ್ಷಗಳಂತೂ ಲಸಿಕೆ ಕುರಿತು ಅವೈಜ್ಞಾನಿಕ ಆರೋಪಗಳನ್ನು ಮಾಡುತ್ತಾ ಜನರಲ್ಲಿ ಅನುಮಾನ ಮತ್ತು ಭಯ ಹುಟ್ಟಿಸಿದ್ದುಂಟು. ಇದೀಗ, ಇಸ್ರೇಲ್-ಅಮೆರಿಕ ಮತ್ತು ಇರಾಕ್ ನಡುವಿನ ಸಂಘರ್ಷವು ವಿಶ್ವದ ಆರ್ಥಿಕತೆಯ ಮೇಲೂ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿದೆ. ಪೆಟ್ರೋಲ್ ಸೇರಿದಂತೆ ಇಂಧನಗಳ ಬೆಲೆಯೇರಿಕೆಯಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರವು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು, ಸರಬರಾಜಿನಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳುತ್ತಿದೆ. ಪರಿಸ್ಥಿತಿ ತಿಳಿಯಾಗಲು ಇನ್ನೂ ಸ್ವಲ್ಪ ಸಮಯ ಬೇಕಾಗಬಹುದು. ಈ ಸಂದರ್ಭದಲ್ಲಿ ಶ್ರೀಸಾಮಾನ್ಯರೂ ಹೊಣೆಯರಿತು ವರ್ತಿಸಬೇಕಿದೆ. ಇಂಧನದ ಅನಗತ್ಯ ಬಳಕೆಯನ್ನು ತಗ್ಗಿಸಬೇಕಿದೆ.

ಆದರೆ, ಇಂಥ ವಿಷಯಗಳಲ್ಲಿ ಜನರಿಗೆ ಸಮತೋಲಿತ ಮಾಹಿತಿಗಳನ್ನು ನೀಡುವ ಬದಲು ಕೆಲ ಮಾಧ್ಯಮಗಳು ಆತಂಕವನ್ನು ಇನ್ನಷ್ಟು ಹೆಚ್ಚಿಸುತ್ತಿರುವಂತಿದೆ. ಆಟೋ-ಟ್ಯಾಕ್ಸಿ ಚಾಲಕರು, ಹೋಟೆಲ್ ಮಾಲೀಕರು ಮತ್ತು ಗ್ರಾಹಕರ ಸಂದರ್ಶನಗಳನ್ನು ದಿನವಿಡೀ ಬಿತ್ತರಿಸಿ, ಸಮಸ್ಯೆಯನ್ನು ಅತಿರಂಜಿತವಾಗಿ ತೋರಿಸುವ ಯತ್ನಗಳಾಗುತ್ತಿವೆ. ಇನ್ನು, ಎಲ್ಲಾ ಸಮಸ್ಯೆಗಳಿಗೂ ಕೇಂದ್ರ ಸರಕಾರವೇ ಕಾರಣ ಎಂಬಂತೆ ಅಪಪ್ರಚಾರ ಮಾಡುತ್ತಿರುವ ಕೆಲವು ವಿಪಕ್ಷಗಳ ನಡೆಯೂ ಜವಾಬ್ದಾರಿಯುತವಾಗಿಲ್ಲ. ಇದರ ಜತೆಗೆ, ಆಡಳಿತ ಪಕ್ಷದ ಕೆಲ ಶಾಸಕರು ಮತ್ತು ಸಂಸದರೂ ಜನರೊಂದಿಗೆ ನೇರ ಸಂಪರ್ಕ ಕಾಯ್ದುಕೊಳ್ಳುವಲ್ಲಿ ವ್ಯಸ್ತರಾಗಬೇಕಿದೆ. ಸಂಕಷ್ಟದ ವೇಳೆಯಲ್ಲಿ ಜನರಿಗೆ ಸ್ಪಷ್ಟ ಮಾಹಿತಿ ನೀಡಿ ವಿಶ್ವಾಸ ಮೂಡಿಸುವುದು ಆಡಳಿತ ವ್ಯವಸ್ಥೆಯ ಕರ್ತವ್ಯವಾಗಿದೆ. ಒಟ್ಟಾರೆಯಾಗಿ ಸಮಾಜದ ಪ್ರತಿಯೊಂದು ವಲಯವೂ ರಾಷ್ಟ್ರದ ಹಿತವನ್ನು ಗಮನದಲ್ಲಿಟ್ಟುಕೊಂಡು ಜವಾಬ್ದಾರಿಯುತ ವರ್ತನೆಯನ್ನು ಮೆರೆದಲ್ಲಿ, ಇಂಥ ಸವಾಲು ಮತ್ತು ಸಂಕಷ್ಟಗಳನ್ನು ಸಮರ್ಥವಾಗಿ ಎದುರಿಸಬಹುದು.

– ಶರದ್ ದೇಶಪಾಂಡೆ, ಹುಬ್ಬಳ್ಳಿ

ಬರಹ ಮತ್ತು ಪ್ರತಿಕ್ರಿಯೆ

ಶ್ರೀವತ್ಸ ಜೋಶಿಯವರ 'ತಿಳಿರು ತೋರಣ' ಅಂಕಣಬರಹ (ಮಾ.8) ಮತ್ತು ಅದಕ್ಕೆ ಎಚ್. ಆನಂದರಾಮ ಶಾಸ್ತ್ರೀ ಅವರಿಂದ ಹೊಮ್ಮಿದ 'ಪ್ರತಿಸ್ಪಂದನ' (ಮಾ.10) ಈ ಎರಡೂ ಸದಭಿರುಚಿಯ ಸೊಗಡನ್ನು ಹೊಮ್ಮಿಸುತ್ತವೆ. ಈ ಇಬ್ಬರ ಬರಹಗಳು ಓದುಗರಿಗೆ ಯಾವಾಗಲೂ ಹಿತವಾದ ಅನುಭವವನ್ನು ನೀಡುತ್ತವೆ. ಜತೆಗೆ ಜ್ಞಾನದ ಹಂಚುವಿಕೆಯೂ ಇರುವುದರಿಂದ ಅದು ಬಲು ಅರ್ಥಪೂರ್ಣ ಎನಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ನೀಡಿರುವ ಗೌರವವನ್ನು ಜೋಶಿಯವರು ಮತ್ತು ಶಾಸ್ತ್ರೀ ಅವರು ಕ್ರಮವಾಗಿ ತಮ್ಮ ಬರಹ ಮತ್ತು ಪ್ರತಿಕ್ರಿಯೆಗಳಲ್ಲಿ ಒತ್ತಿಹೇಳಿದ್ದಾರೆ. ಈ ಕಾರಣದಿಂದಾಗಿ ಈ ಸಲದ 'ಮಹಿಳಾ ದಿನದ' ಆಸುಪಾಸಿನ ಸಂದರ್ಭಕ್ಕೆ ಕಳೆಕಟ್ಟಿತು ಎನ್ನಬಹುದು. ಈ ಇಬ್ಬರು ಬರಹಗಾರರಿಗೂ ಅಭಿನಂದನೆಗಳು.

– ವಿದ್ಯಾಶಂಕರ ಶರ್ಮ, ಸಿದ್ದಾಪುರ

ನಾವು ಗುಲಾಮರಾ?

ಎಂಬತ್ತು ವರ್ಷ ವಯಸ್ಸನ್ನು ದಾಟಿರುವ ರಾಜಕಾರಣಿಗಳ ಪೈಕಿ ಒಬ್ಬರು ಅಧಿಕಾರದಾಹಿಯಾಗಿದ್ದರೆ, ಮತ್ತೊಬ್ಬರು ಪುತ್ರವ್ಯಾಮೋಹಿ ಆಗಿದ್ದಾರೆ. ಹೀಗೆ ಒಬ್ಬೊಬ್ಬರೂ ತಮಗೆ ತಾವೇ ಬೆತ್ತಲಾಗಿ, ರಾಜಕಾರಣದಲ್ಲಿ ತಾವು ಇದುವರೆಗೂ ಗಳಿಸಿದ್ದ ಮರ್ಯಾದೆಯನ್ನು ಕಳೆದುಕೊಂಡು ನಗೆಪಾಟಲಿಗೆ ಈಡಾಗುತ್ತಿದ್ದಾರೆ. 'ಎಲ್ಲರೂ ಮಾಡೋದು ಅಧಿಕಾರಕ್ಕಾಗಿ, ಕೋಟಿ ಕೋಟಿಗಳ ಸರದಾರರಾಗೋದಕ್ಕಾಗಿ' ಎಂಬುದನ್ನು ಇವರೆಲ್ಲರೂ ನಾಚಿಕೆ ಬಿಟ್ಟು ಸಾರುತ್ತಿರುವಂತಿದೆ. ಇವರಿಗೆ ಉತ್ತಮರು ದೇಶದ್ರೋಹಿಗಳಾಗಿ, ಹೇಡಿಗಳಾಗಿ ಕಂಡರೆ ಅಚ್ಚರಿಯಿಲ್ಲ. ಇಂಥವರಿಗೆ ನಾವು ಸರಿಯಾದ ಜಾಗವನ್ನು ಇನ್ನಾದರೂ ತೋರಿಸದಿದ್ದರೆ, ನಾವು ಇವರ ಗುಲಾಮರಾಗಬೇಕಾಗುತ್ತದೆ.

– ಸತ್ಯಬೋಧ, ಬೆಂಗಳೂರು

ಇದೊಂದು ಪ್ರಹಸನ

ಮಧ್ಯಪ್ರಾಚ್ಯ ವಲಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಉಂಟಾಗಿರುವ ತೈಲದ ಅಭಾವದಿಂದಾಗಿ ಕೇಂದ್ರ ಸರಕಾರವು ಗೃಹ ಮತ್ತು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನುತುಸು ಹೆಚ್ಚಿಸಿದೆ. ತತ್ಸಂಬಂಧವಾಗಿ ಕಾಂಗ್ರೆಸ್ ಪಕ್ಷವು ಪ್ರತಿಭಟನೆ ನಡೆಸುತ್ತಾ, 'ಬೆಲೆ ಹೆಚ್ಚಳವು ಘೋರ ಅಪರಾಧ' ಎಂಬಂತೆ ಬಿಂಬಿಸುತ್ತಿದೆ.

ರಾಜ್ಯ ಸರಕಾರವು ಬಸ್ ಪ್ರಯಾಣದ ದರ, ನೀರು-ವಿದ್ಯುತ್-ಇಂಧನ ದರಗಳು, ಹತ್ತು ಹಲವು ಅರ್ಜಿ ನಮೂನೆಗಳ ಶುಲ್ಕ, ಕಟ್ಟಡಗಳ ತೆರಿಗೆ, ಕಸದ ಶುಲ್ಕ ಹೀಗೆ ಯಾವುದನ್ನೂ ಬಿಡದೆ ಹೆಚ್ಚಿಸುತ್ತಾ, ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಗೆಬರಿದೆ; ಅದು ಕೂಡ ಯಾವುದೇ ಕಾರಣವಿಲ್ಲದೆ ಎಂಬುದು ಗಮನಾರ್ಹ. ಈಗ ಕೇಂದ್ರ ಸರಕಾರವು ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು ಹೆಚ್ಚಿಸಿದೆ ಎಂಬ ಕಾರಣಕ್ಕೆ ಕಾಂಗ್ರೆಸ್ಸಿಗರು ನಡೆಸುತ್ತಿರುವ ಪ್ರತಿಭಟನೆಯು ಒಂದು ಪ್ರಹಸನದಂತೆ ಕಾಣುತ್ತಿದೆ. ಗಾಜಿನ ಮನೆಯಲ್ಲಿ ವಾಸ ಮಾಡುವವರು ಅನ್ಯರ ಮನೆಯ ಮೇಲೆ ಕಲ್ಲು ತೂರುವಾಗ ಎಚ್ಚರದಿಂದ ಇರಬೇಕಲ್ಲವೇ?

– ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಶ್ಲಾಘನೀಯ ನಿರ್ಧಾರ

ಟಿ.ನರಸೀಪುರದ ಕೆಎಸ್‌ಐಸಿ ರೇಷ್ಮೆ ನೂಲು ನೇಯ್ಗೆ ಕಾರ್ಖಾನೆಯನ್ನು ಯಥಾಸ್ಥಿತಿ ಉಳಿಸಿಕೊಳ್ಳಲಾಗುವುದು ಮತ್ತು ಕ್ರೀಡಾಂಗಣ ನಿರ್ಮಾಣ ಮಾಡುವುದಿಲ್ಲ ಎಂಬುದಾಗಿ ಪಶು ಸಂಗೋಪನೆ ಮತ್ತು ರೇಷ್ಮೆ ಕೃಷಿ ಖಾತೆ ಸಚಿವ ಕೆ.ವೆಂಕಟೇಶ್ ಅವರು ಸ್ಪಷ್ಟಪಡಿಸಿರುವುದು ಶ್ಲಾಘನೀಯ.

ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ್ದ ಈ ಕಾರ್ಖಾನೆಯಲ್ಲಿ ತಯಾರಾಗುವ ರೇಷ್ಮೆ ಸೀರೆ, ಪಂಚೆ ಮುಂತಾದವು ತಮ್ಮ ಸಾಂಪ್ರದಾಯಿಕ ಶೈಲಿ ಮತ್ತು ಗುಣಮಟ್ಟದಿಂದಾಗಿ ಪ್ರಖ್ಯಾತವಾಗಿವೆ. ಈ ಪ್ರದೇಶದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ 5 ಎಕರೆ ಜಾಗವನ್ನು ನೀಡಲಾಗಿದೆ ಎಂಬ ಮಾಹಿತಿಯು ರಾಜ್ಯದ ಜನರಲ್ಲಿ ಗೊಂದಲವನ್ನು ಹುಟ್ಟುಹಾಕಿತ್ತು. ಈಗ ಅದು ನಿವಾರಣೆಯಾಗಿದೆ. ಸದರಿ ಜಾಗವನ್ನು ಆದಷ್ಟು ಬೇಗ ಕಾರ್ಖಾನೆಗೆ ಮರಳಿಸುವಂತಾಗಬೇಕು. ಜತೆಗೆ ನುರಿತ ಕುಶಲಕರ್ಮಿಗಳನ್ನು ಕಾರ್ಖಾನೆಯಲ್ಲಿ ನೇಮಿಸಿಕೊಂಡು ಹೆಚ್ಚೆಚ್ಚು ರೇಷ್ಮೆ ವಸ್ತ್ರಗಳನ್ನು ತಯಾರಿಸಿ, ಗ್ರಾಹಕರ ಮನ ತಣಿಸಬೇಕು ಮತ್ತು ಕಾರ್ಖಾನೆಯ ಅಭಿವೃದ್ಧಿಗೆ ಮತ್ತಷ್ಟು ಒತ್ತುನೀಡಬೇಕು.

– ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಜೆನ್-ಝಿ: ಡಿಜಿಟಲ್ ತಲೆಮಾರಿನ ಅನನ್ಯ ಯುವಶಕ್ತಿ

ಸ್ವಯಂಪ್ರಕಾಶ
ಪ್ರಕಾಶ ಹೆಗಡೆ
vveditoped@gmail.com

ಮೆಟ್ರೋ ರೈಲಿನಲ್ಲಿ ಪಯಣಿಸುತ್ತಿದ್ದ ಯುವಕರೀರ್ವರ ಸಂಭಾಷಣೆ ಇಂತಿತ್ತು: ''ಲಡಾಕ್ ಟೂರ್‌ಗೆ ಲೀವ್ ಸ್ಯಾಂಕ್ಷನ್ ಆಗಿತ್ತು ಕಣೋ! ಏರ್‌ಪೋರ್ಟ್‌ನಲ್ಲಿದ್ದಾಗ ಮ್ಯಾನೇಜರ್‌ರಿಂದ ಕಾಲ್ ಬಂತು- ಅರ್ಜೆಂಟಾಗಿ ಆಫೀಸ್‌ಗೆ ಬಾ ಅಂತ. ಮೈಯೆಲ್ಲಾ ಉರ್ದೋಯ್ತು. ಖಾರವಾಗಿ ಹೇಳ್ದೆ- ಬರಕ್ಕಾಗಲ್ಲ ಅಂತ''. ಇದು ಇಂದಿನ ಜೆನ್-ಝಿ ತಲೆಮಾರಿನವರ ಮನಃಸ್ಥಿತಿಯ ಒಂದು ಸಣ್ಣ ಝಲಕ್. ಸಂಭಾಷಣೆ ಮುಂದುವರಿಯಿತು: ''ಅಮೇಲೆ ಸ್ವಲ್ಪ ದಿನಕ್ಕೇ ಆಸ್ಟೆರಿಟಿ ಮೆಷರ್ ಅಂತ ಕಾರಣ ಕೊಟ್ಟು ಕೆಲಸದಿಂದ ತೆಗೆದುಹಾಕಿದ್ರು. ಒಳ್ಳೇದೇ ಆಯ್ತು. ಒಂದು ವಾರದಲ್ಲೇ ಬೇರೊಂದು ಕೆಲ್ಸಾ ಸಿಕ್ತು''. ಹಿಂದಿನ ತಲೆಮಾರಿನವರಲ್ಲಿ ಈ ರೀತಿಯ ಬಂಡಾಯದ ಮನೋಭಾವಗಳು ಅಲ್ಲೊಂದು-ಇಲ್ಲೊಂದು ಕಾಣಿಸುತ್ತಿದ್ದವು. ಆದರೆ ಈಗಿನ ಪೀಳಿಗೆಯ ನಿರ್ಲಕ್ಷ್ಯ ಮನೋಭಾವದ ಉದ್ಯೋಗಿ ವರ್ಗದವರು ತಮ್ಮದೇ ಆದ ತಾರ್ಕಿಕತೆಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ. ಹೀಗಾಗಿ, ಝೂಮರ್ ಮನಃಸ್ಥಿತಿಯನ್ನು ಅರ್ಥಮಾಡಿಕೊಂಡು ಕಾರ್ಪೋರೇಟ್ ಸಿಎಕ್ಸ್‌ಒ ಆಗಿ ಕಾರ್ಯನಿರ್ವಹಿಸುತ್ತಿರುವ ನನ್ನ ಅನುಭವವನ್ನು ಹಂಚಿಕೊಳ್ಳೋಣವೆಂದೆನಿಸಿತು.

'ಜೆನ್-ಝಿ' ಅಥವಾ 'ಝೂಮರ್' ಎಂದು ಗುರುತಿಸಿಕೊಳ್ಳುವ ಈ ವರ್ಗದವರು, ಸಾಮಾನ್ಯವಾಗಿ 1997ರಿಂದ 2012ರ ನಡುವೆ ಜನಿಸಿದ ತಲೆಮಾರಿನವರು. ಇವರನ್ನು ಡಿಜಿಟಲ್ ಯುಗದಲ್ಲಿ ಬೆಳೆದ, ಇಂಟರ್ನೆಟ್, ಸ್ಮಾರ್ಟ್‌ಫೋನ್ ಮತ್ತು ಸಾಮಾಜಿಕ ಮಾಧ್ಯಮಗಳೊಂದಿಗೆ ಸಹಜವಾಗಿ ಮೇಳೈಸಿದ ಮೊದಲ ಪೀಳಿಗೆ ಎಂದು ಪರಿಗಣಿಸಲಾಗುತ್ತದೆ. ವಿದ್ಯಾರ್ಹತೆ ಮತ್ತು ತಂತ್ರಜ್ಞಾನ ಕೌಶಲಗಳನ್ನು ಹೊಂದಿರುವುದರಿಂದ ಇವರು ವೈಯಕ್ತಿಕ ಮೌಲ್ಯಗಳಿಗೆ ಒತ್ತುನೀಡುವ ಮತ್ತು ಕೆಲಸ-ಜೀವನ ಸಮತೋಲನದ ಮೇಲೆ ಗಮನವಿರುವ ಪ್ರಮುಖ ಲಕ್ಷಣಗಳವುಳ್ಳವರಾಗಿದ್ದಾರೆ. ಜೆನ್-ಝಿ ತಲೆಮಾರಿನವರು ಅತ್ಯಂತ ಸೃಜನಶೀಲರಾಗಿದ್ದು, ಹೊಸ ಆಲೋಚನೆಗಳನ್ನು ತ್ವರಿತವಾಗಿ ಮುಂದಿರಿಸುವ ಸಾಮರ್ಥ್ಯ ಹೊಂದಿದ್ದಾರೆ. ಕೆಲಸದ ಸಮಯದಲ್ಲಿ ಫ್ಲೆಕ್ಸಿಬಿಲಿಟಿ ಮತ್ತು ಫಲಿತಾಂಶ ಆಧಾರಿತ ಕಾರ್ಯಪದ್ಧತಿಯನ್ನು ಮೆಚ್ಚುವ ಇವರು, ಚುರುಕುತನ ಮತ್ತು ಚೈತನ್ಯದಿಂದ ತಂಡಗಳಿಗೆ ಹೊಸ ಉತ್ಸಾಹವನ್ನು ನೀಡುತ್ತಾರೆ. ಬದಲಾವಣೆಗೆ ವೇಗವಾಗಿ ಹೊಂದಿಕೊಳ್ಳುವ ಇವರ ಗುಣವು ಸಂಸ್ಥೆಗಳ ನವೀನತೆ ಮತ್ತು ಬೆಳವಣಿಗೆಗೆ ಪ್ರಮುಖ ಚಾಲಕಶಕ್ತಿಯಾಗುತ್ತದೆ.

ಟೈಮ್ಸ್ ಆಫ್ ಇಂಡಿಯಾ ವರದಿಯ ಪ್ರಕಾರ, 'ಝೂಮರ್' ತಲೆಮಾರಿನವರು ಭಾರತದ ಕಾರ್ಪೋರೇಟ್ ವಲಯವನ್ನು ಹೊಸ ದಿಕ್ಕಿನಲ್ಲಿ ರೂಪಿಸುತ್ತಿದ್ದಾರೆ. ಪರಂಪರೆಯ ಹುದ್ದೆ-ಹಂತಗಳ ಪ್ರೊಮೋಷನ್‌ಗಿಂತ ಕೌಶಲಾಭಿವೃದ್ಧಿ, ಮಾನಸಿಕ ಆರೋಗ್ಯ ಮತ್ತು ವರ್ಕ್-ಲೈಫ್ ಸಮತೋಲನಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ. 2030ರ ವೇಳೆಗೆ ಉದ್ಯೋಗ ಕ್ಷೇತ್ರದ ಸುಮಾರು ಶೇ.40ರಷ್ಟು ಭಾಗವನ್ನು ಪ್ರತಿನಿಧಿಸಲಿರುವ ಈ ತಲೆಮಾರಿನವರು ಕಾರ್ಪೋರೇಟ್ ಜಗತ್ತಿನ ಅತಿ ಮುಖ್ಯ ಪಾಲುದಾರರಾಗಿರುತ್ತಾರೆ. ಸುಮಾರು ಶೇ.57ರಷ್ಟು ಉದ್ಯೋಗಿಗಳು ವೃತ್ತಿ ಬೆಳವಣಿಗೆಯನ್ನು ಕೇವಲ ವೇತನದೊಂದಿಗೆ ತುಲನೆ ಮಾಡದೇ ಕೌಶಲಾಭಿವೃದ್ಧಿ ಮತ್ತು ಮಾರ್ಗದರ್ಶನಗಳಿಗೆ ಹೊಂದಿಸಿಕೊಳ್ಳುತ್ತಾರೆ. ಶೇ.80ಕ್ಕಿಂತ ಹೆಚ್ಚು ಮಂದಿ ವೃತ್ತಿ ಪ್ರಗತಿಯನ್ನು ಹೊಸ ಕೌಶಲಗಳ ಕಲಿಕೆ ಮತ್ತು ಮನ್ನಣೆಗೆ ಅಳತೆಗೋಲಾಗಿಸಿದ್ದಾರೆ. ಶೇ.34ರಷ್ಟು ಉದ್ಯೋಗಿಗಳು ಕೆಲಸ-ಜೀವನ ಸಮತೋಲನದ ಕೊರತೆಯೇ ವೃತ್ತಿ ಬಗೆಗಿನ ಅಸಮಾಧಾನಕ್ಕೆ ಕಾರಣವೆಂದು ತಿಳಿದುದರಿಂದ 'ಬರ್ನೌಟ್ ಸಂಸ್ಕೃತಿ'ಯನ್ನು ಅವರು ತಿರಸ್ಕರಿಸುತ್ತಿರುವುದನ್ನು ಸೂಚಿಸುತ್ತದೆ. ಶೇ.14ರಷ್ಟು 'ಝೂಮರ್'ಗಳು ವೃತ್ತಿ ಬೆಳವಣಿಗೆಯಲ್ಲಿ ನಿಶ್ಚಲತೆ ಕಂಡರೆ ಒಂದು ವರ್ಷದೊಳಗೇ ತಮ್ಮ ಪ್ರಸ್ತುತ ಉದ್ಯೋಗವನ್ನು ತೊರೆಯಲು ಸಿದ್ಧರಿರುತ್ತಾರೆ. ಅನೇಕ ಜೆನ್-ಝಿಗಳು ತಮ್ಮ ಅತ್ಯಧಿಕ ಉತ್ಪಾದಕತೆ ಸಂಜೆ 6 ಗಂಟೆಯಿಂದ ರಾತ್ರಿ 3 ಗಂಟೆಯವರೆಗೆ ಎಂದು ತಿಳಿದಿದ್ದಾರೆ. ಇದರಿಂದ ಪರಂಪರೆಯ '9ರಿಂದ 5ರವರೆಗಿನ' ಕೆಲಸದ ವ್ಯವಸ್ಥೆಯ ಅಡಿಪಾಯವನ್ನೇ ಬದಲಾಯಿಸುವ ಪರಿಸ್ಥಿತಿ ಹಲವಾರು ಕಂಪನಿಗಳಲ್ಲಿ ಉಂಟಾಗಿದೆ. ಭಾರತದಲ್ಲಿನ ಶೇ.26ರಷ್ಟು ಜೆನ್-ಝಿ ಯುವಕರು ಕಾಲೇಜಿನಲ್ಲಿದ್ದಾಗಲೇ ಕೆಲಸ ಮಾಡುತ್ತ ಸಾಕಷ್ಟು ಗಳಿಸುತ್ತಿದ್ದಾರೆ. ಸೈಡ್ ಹಾಸ್ಟಲ್‌ಗಳು, ಫ್ರೀಲಾನ್ಸಿಂಗ್ ಮತ್ತು ಕಂಟೆಂಟ್ ಸೃಷ್ಟಿಯನ್ನು ತಮ್ಮ ವೃತ್ತಿಪರ ಗುರುತಿನ ಭಾಗವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಐವರಲ್ಲಿ ಇಬ್ಬರು 'ಝೂಮರ್'ಗಳು ತಾವು 'ಇನ್‌ಫ್ಲುಯೆನ್ಸರ್' ಅಂದರೆ ಇತರರ ಮೇಲೆ ಪ್ರಭಾವ ಬೀರುವವರು ಅಥವಾ ಮಾರ್ಗದರ್ಶಿಗಳು ಎಂದು ಅತಿಯಾದ ಆತ್ಮವಿಶ್ವಾಸದಿಂದ ಬೀಗುತ್ತಾರೆ.

ಡೆಲಾಯಿಟ್ ಅಧ್ಯಯನದ ಪ್ರಕಾರ, ಜೆನ್-ಝಿ ತಲೆಮಾರಿನವರು ಕೆಲಸದ ಸ್ಥಳದಲ್ಲಿ ಪ್ರಾಮಾಣಿಕತೆಗೆ ಅತ್ಯಂತ ಮಹತ್ವ ನೀಡುತ್ತಾರೆ. ಅವರು ಕೇವಲ ಸಂಬಳ ಅಥವಾ ಹುದ್ದೆಗಾಗಿ ಕೆಲಸ ಮಾಡುವುದಕ್ಕಿಂತ, ಸಂಸ್ಥೆಯ ಮೌಲ್ಯಗಳು, ನೈತಿಕತೆ ಮತ್ತು ಸಾಮಾಜಿಕ ಹೊಣೆಗಾರಿಕೆ ತಮ್ಮ ವೈಯಕ್ತಿಕ ನಂಬಿಕೆಗಳಿಗೆ ಹೊಂದಿಕೊಳ್ಳುತ್ತವೆಯೇ ಎಂಬುದನ್ನು ಗಮನಿಸುತ್ತಾರೆ. ನಾಯಕತ್ವದಲ್ಲಿ ಪಾರದರ್ಶಕತೆ, ಮುಕ್ತ ಸಂವಹನ ಮತ್ತು ನಿಜವಾದ ಸಹಾನುಭೂತಿ ಇರಬೇಕೆಂದು ನಿರೀಕ್ಷಿಸುತ್ತಾರೆ. ಕೃತಕ ಅಥವಾ ಮೇಲುಮೇಲಿನ (ಅಂದರೆ ತೋರಿಕೆಯ) ದೃಷ್ಟಿಕೋನವನ್ನು ಅವರು ತಿರಸ್ಕರಿಸುವುದರಿಂದ, ಸಂಸ್ಥೆಗಳು ವಿಶ್ವಾಸಾರ್ಹ ಮತ್ತು ನೈಜ ಕಾರ್ಯಸಂಸ್ಕೃತಿಯನ್ನು ನಿರ್ಮಿಸುವ ಅಗತ್ಯತೆ ಹೆಚ್ಚುತ್ತಿದೆ. ಇನ್ನೊಂದು ಅಧ್ಯಯನದ ಸಮೀಕ್ಷೆಗಳು ತೋರಿಸಿರುವಂತೆ, ಯುವ ಉದ್ಯೋಗಿಗಳ ಪೈಕಿ ಅರ್ಧಕ್ಕಿಂತ ಹೆಚ್ಚು ಮಂದಿ ಆರೋಗ್ಯವನ್ನು ಯಶಸ್ಸಿನ ಪ್ರಮುಖ ಮಾನದಂಡವಾಗಿ ಪರಿಗಣಿಸುತ್ತಾರೆ. ಕೆಲವೊಮ್ಮೆ ಸಂಪತ್ತು, ಉದ್ಯೋಗ ಅಥವಾ ಸಾಮಾಜಿಕ ಸ್ಥಾನಕ್ಕಿಂತಲೂ ಆರೋಗ್ಯಕ್ಕೆ ಹೆಚ್ಚು ಮಹತ್ವ ನೀಡುತ್ತಾರೆ. ಆಶ್ಚರ್ಯವೆಂಬಂತೆ ಈ ತಲೆಮಾರಿನ ಅನೇಕ ಯುವಕರು ಆರೋಗ್ಯದ ಬಗ್ಗೆ ಹೆಚ್ಚು ಜಾಗರೂಕರಾಗಿರುವುದರಿಂದ ಮದ್ಯಪಾನವನ್ನು ನಿಯಂತ್ರಿತವಾಗಿ ಸೇವಿಸುವ ಪ್ರವೃತ್ತಿ ತೋರಿಸುತ್ತಿದ್ದಾರೆ.

ಮೇಲೆ ತಿಳಿಸಿದ್ದೆಲ್ಲವೂ 'ಝೂಮರ್'ಗಳ ಸಕಾರಾತ್ಮಕ ಗುಣಲಕ್ಷಣಗಳು. ಈ ಪೀಳಿಗೆಯ ಇನ್ನೊಂದು ಮುಖವಿದೆ. ಅದೆಂದರೆ, ಕೆಲ 'ಝೂಮರ್'ಗಳು ಸಾಮಾಜಿಕ ಮಾಧ್ಯಮ ಒತ್ತಡ, ಉದ್ಯೋಗದ ಅನಿಶ್ಚಿತತೆ, ಹವಾಮಾನ ಬದಲಾವಣೆ ಹಾಗೂ ಜಾಗತಿಕ ಅಸ್ಥಿರತೆಗಳ ಪರಿಣಾಮವಾಗಿ 'ನಿಹಿಲಿಸಮ್' ಎಂಬ ತತ್ವಕ್ಕೆ ಶರಣಾಗಿದ್ದಾರೆ. ನಿಹಿಲಿಸಮ್ ಎಂದರೆ ಜೀವನಕ್ಕೆ ಅಂತಿಮ ಅರ್ಥವಿಲ್ಲ, ಪರಂಪರೆಯ ಮೌಲ್ಯಗಳು ಮತ್ತು ನಂಬಿಕೆಗಳಿಗೆ ಶಾಶ್ವತ ಆಧಾರವಿಲ್ಲ ಎಂಬ ಗ್ರಹಿಕೆ. ಆದುದರಿಂದಲೇ ಅನೇಕ 'ಝೂಮರ್'ಗಳು ಪಲಾಯನವಾದಕ್ಕೆ ಒಳ್ಳೆಯ ಮಾದರಿಗಳಾಗಿದ್ದಾರೆ.

ಜೆನ್-ಝಿ ತಲೆಮಾರಿನವರ ಗಮನದ ಅವಧಿ ಹಿಂದಿನ ತಲೆಮಾರಿನವರಿಗಿಂತ ವಿಭಿನ್ನವಾಗಿದೆ. ಡಿಜಿಟಲ್ ಮಾಧ್ಯಮಗಳು, ಸಣ್ಣ ವಿಡಿಯೋಗಳು ಮತ್ತು ತ್ವರಿತ ಮಾಹಿತಿಯ ಬಳಕೆಯಿಂದಾಗಿ ಅವರು ಚಿಕ್ಕ, ಸ್ಪಷ್ಟ ಮತ್ತು ದೃಶ್ಯಾಧಾರಿತ ವಿಷಯಗಳನ್ನು ಹೆಚ್ಚು ವೇಗವಾಗಿ ಗ್ರಹಿಸುತ್ತಾರೆ. ಓದುವಲ್ಲಿ ದೀರ್ಘ ಲೇಖನಗಳಿಗಿಂತ ಸಂಕ್ಷಿಪ್ತ ಬರಹಗಳು ಮತ್ತು 'ಬುಲೆಟ್ ಪಾಯಿಂಟ್'ನಂತಿರುವ ಮಾಹಿತಿಯನ್ನು ಇಷ್ಟಪಡುತ್ತಾರೆ; ಬರವಣಿಗೆಯಲ್ಲಿ ಸರಳ, ನೇರ ಮತ್ತು ಸಂವಹನಾತ್ಮಕ ಶೈಲಿಯನ್ನು ಅನುಸರಿಸುತ್ತಾರೆ. ಕೇಳುವಿಕೆಯಲ್ಲಿ ಕೂಡ ದೀರ್ಘ ಉಪನ್ಯಾಸಗಳಿಗಿಂತ ಪಾಡ್‌ಕಾಸ್ಟ್, ಕಿರು ವಿಡಿಯೋ ಅಥವಾ ಸಂವಾದಾತ್ಮಕ ಚರ್ಚೆಗಳಿಗೆ ಹೆಚ್ಚು ಒಲವು ತೋರುತ್ತಾರೆ. ಕೆಲವು ಕಂಪನಿಗಳಲ್ಲಿ ಜೆನ್-ಝಿ ಸಂಸ್ಕೃತಿಯವರ ಗಮನವನ್ನು ಕೆಲಸದೆಡೆಗೆ ವ್ಯಯಿಸುವುದೇ ಮುಖ್ಯ ಕಾರ್ಯವಾಗಿದೆ. ಕಾರ್ಪೋರೇಟ್ ಉದ್ದೇಶಗಳೆಡೆಗೆ ಅವರ ಗಮನವನ್ನು ಹಿಡಿದಿಟ್ಟುಕೊಳ್ಳಲು 'ಸ್ಟ್ಯಾಂಡ್-ಅಪ್ ಕಾಮಿಡಿ' ಕಾರ್ಯಕ್ರಮಗಳು,

ಮ್ಯಾನೇಜ್ಮೆಂಟ್ ಪಾಠಗಳು ಅಥವಾ ಕೌನ್ಸೆಲಿಂಗ್ ಸೆಷನ್‌ಗಳನ್ನು ನಡೆಸುತ್ತಾರೆ.

ಅಮೆರಿಕದ ಸೇಪಿಯನ್ ಲ್ಯಾಬ್ಸ್ ಸಂಸ್ಥೆ ಫೆಬ್ರವರಿಯಲ್ಲಿ ಬಿಡುಗಡೆ ಮಾಡಿದ 2025ರ ವರದಿಯು, 'ಝೂಮರ್'ಗಳಲ್ಲಿ ಗಂಭೀರ ಮಾನಸಿಕ ಅಸ್ವಸ್ಥತೆಯ ಅಂಶವಿರುವುದನ್ನು ಬಹಿರಂಗಪಡಿಸುತ್ತದೆ. ಈ ವರದಿಯ ಪ್ರಕಾರ, ಭಾರತದಲ್ಲಿನ ಯುವಕರು ಮಾನಸಿಕ ಕ್ಷೇಮದ ಅಳತೆಗೋಲುಗಳಲ್ಲಿ 84 ದೇಶಗಳಲ್ಲಿ 60ನೇ ಸ್ಥಾನ ಪಡೆದಿದ್ದಾರೆ. ಯುವಕರ ಮಾನಸಿಕ ಆರೋಗ್ಯ ಮಾನದಂಡ (MHQ) ಅಂಕಿ 33 ಮಾತ್ರವಾಗಿದ್ದು, ಹಿರಿಯ ಕಾರ್ಮಿಕರಿಗೆ ಹೋಲಿಸಿದರೆ ಅಗಾಧ ಅಂತರವಿರುವುದು ಸ್ಪಷ್ಟವಾಗಿದೆ. ಹಿರಿಯ ಕಾರ್ಮಿಕರು ಗಮನಾರ್ಹವಾಗಿ 96 ಅಂಕದ ಉತ್ತಮ ಮಾನಸಿಕ ಆರೋಗ್ಯ ಅಂಕಿಗಳನ್ನು ಪಡೆದು ಸಾಮಾನ್ಯ ಮಾನಸಿಕ ಕಾರ್ಯಕ್ಷಮತೆಗೆ ಹೊಂದಿಕೊಳ್ಳುವ ಮಟ್ಟದಲ್ಲಿದ್ದಾರೆ. ಇದಕ್ಕೆ ಪರಿಹಾರವೆಂಬಂತೆ ಕಂಪನಿಗಳಲ್ಲಿ ಮನೋವೈದ್ಯರ ಬಳಕೆ ಸಾಮಾನ್ಯವಾಗಿವೆ.

ಜೆನ್-ಝಿ ವರ್ಗದವರ ಇನ್ನೊಂದು ಋಣಾತ್ಮಕ ಗುಣಲಕ್ಷಣವೆಂದರೆ ಪರಿಣಾಮದ ಪರಿವೆಯೇ ಇಲ್ಲದೆ ಸಾಲ ಮಾಡುವುದು. ತಿಂಗಳಿಗೆ ಕೇವಲ 30-40 ಸಾವಿರ ದುಡಿಯುವವರು ಹಣಕಾಸು ಸಂಸ್ಥೆಗಳಿಂದ 40 ಲಕ್ಷ ರು.ವರೆಗೆ ಸಾಲಗಳನ್ನು ಪಡೆಯುತ್ತಿರುವುದು ವಿಷಾದದ ಬೆಳವಣಿಗೆ. ಇವರಲ್ಲಿ ಅನೇಕರು ಈ ಸಾಲಗಳ ಇಎಂಐ ಪಾವತಿಗಳನ್ನು ಸಮಯಕ್ಕೆ ಸರಿಯಾಗಿ ಮಾಡಲಾಗದೆ, 'ಡಿಫಾಲ್ಟರ್'ಗಳೆಂದು ಗುರುತಿಸಲ್ಪಟ್ಟು ತಮ್ಮ ಸಿಬಿಲ್ ಸ್ಕೋರನ್ನು ಕೆಂಪಾಗಿಸಿಕೊಳ್ಳುತ್ತಿದ್ದಾರೆ. ಸುಲಭವಾಗಿ ಲಭ್ಯವಾಗುವ ಸಾಲ ಸೌಲಭ್ಯಗಳು, ಹೆಚ್ಚುತ್ತಿರುವ ಜೀವನ ವೆಚ್ಚ ಮತ್ತು ಆಡಂಬರದ ಜೀವನಶೈಲಿ ಮುಂತಾದವು ಯುವಕರ ಮೇಲೆ ದೊಡ್ಡ ಪ್ರಭಾವ ಬೀರುತ್ತಿವೆ. ಸಾಮಾಜಿಕ ಮಾಧ್ಯಮಗಳು ಕೂಡ ಯುವಕರನ್ನು ನಿರ್ದಿಷ್ಟ ರೀತಿಯ ಜೀವನಶೈಲಿಯತ್ತ ಒಯ್ಯುತ್ತಿದ್ದು, ದುಬಾರಿ ಗ್ಯಾಜೆಟ್‌ಗಳು, ಮೊಬೈಲ್‌ಗಳು, ಲ್ಯಾಪ್‌ಟಾಪ್‌ಗಳು ಮತ್ತು ವೈಭವಯುತ ಪ್ರವಾಸಗಳು ಮಹತ್ವ ಪಡೆಯುತ್ತಿವೆ. ಜತೆಗೆ, ಜೆನ್-ಝಿ ಪೀಳಿಗೆಯವರ ಮಾನಸಿಕ ಅಂಶದಂತೆ ಕೆಲಸದ ಬಗೆಗಿನ ಸ್ವಲ್ಪ ನಿರ್ಲಕ್ಷ್ಯ ಧೋರಣೆ ಮತ್ತು ಖರ್ಚಿನ ಮೇಲಿನ ಅಜಾಗರೂಕತೆಯೂ ಈ ಪರಿಸ್ಥಿತಿಗೆ ಕಾರಣವಾಗುತ್ತಿವೆ.

ಬಾಂಗ್ಲಾದೇಶ ಮತ್ತು ನೇಪಾಳದಲ್ಲಿ ನಡೆದ ಪ್ರತಿಭಟನೆಗಳು ಹಾಗೂ ರಾಜಕೀಯ ಚಳವಳಿಗಳಲ್ಲಿ ಜೆನ್-ಝಿ ಯುವಕರ ಭಾಗವಹಿಸುವಿಕೆ ಗಮನಾರ್ಹವಾಗಿದ್ದರೂ, ಅವುಗಳನ್ನು ಕೇವಲ 'ಝೂಮರ್' ತಲೆಮಾರಿನ ಕ್ರಾಂತಿ ಎನ್ನಲು ಸಾಧ್ಯವಿಲ್ಲ. ಡಿಜಿಟಲ್ ಸಂಪರ್ಕ ಮತ್ತು ಜಾಗತಿಕ ಅರಿವಿನಿಂದ ಜೆನ್-ಝಿ ತಮ್ಮ ಹಕ್ಕುಗಳು ಮತ್ತು ಭವಿಷ್ಯದ ಕುರಿತು ಹೆಚ್ಚು ಸ್ಪಷ್ಟತೆ ನೀಡಿದ್ದು, ಸರಕಾರಗಳ ನೀತಿಗಳು ಮತ್ತು ಆಡಳಿತ ಕ್ರಮಗಳನ್ನು ಪ್ರಶ್ನಿಸುವ ಧೈರ್ಯವನ್ನು ಒದಗಿಸಿ ಈ ವರ್ಗದವರೂ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದರೆನ್ನುವುದು ಸತ್ಯ. ಈ ಚಳವಳಿಗಳ ಹಿಂದೆ ರಾಜಕೀಯ ಪಕ್ಷಗಳು, ನಾಗರಿಕ ಸಂಘಟನೆಗಳು, ವಿದ್ಯಾರ್ಥಿ ಸಂಘಗಳು ಮತ್ತು ಆರ್ಥಿಕ-ಸಾಮಾಜಿಕ ಅಸಮಾಧಾನಗಳಂಥ ಅನೇಕ ಕಾರಣಗಳು ಕೆಲಸ ಮಾಡಿದ್ದವು. ಯುವಕರು ಸಾಮಾಜಿಕ ಮಾಧ್ಯಮಗಳ ಮೂಲಕ ವೇಗವಾಗಿ ಸಂಘಟಿತರಾಗಿ ತಮ್ಮ ಧ್ವನಿಯನ್ನು ವ್ಯಕ್ತಪಡಿಸಿದರೂ, ಚಳವಳಿಗಳ ದಿಕ್ಕು ಮತ್ತು ಪರಿಣಾಮವನ್ನು ನಿರ್ಧರಿಸುವಲ್ಲಿ ಇತರ ರಾಜಕೀಯ ಮತ್ತು ಸಾಮಾಜಿಕ ಶಕ್ತಿಗಳ ಪಾತ್ರವೂ ಮಹತ್ವದ್ದಾಗಿತ್ತು. ಆದ್ದರಿಂದ, ಈ ಘಟನೆಗಳನ್ನು ಜೆನ್-ಝಿಗಳ ಪ್ರಭಾವದ ಜತೆಗೆ ವಿಶಾಲವಾದ ರಾಜಕೀಯ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಬೇಕು.

ಜೆನ್-ಝಿ ತಲೆಮಾರಿನವರು ಸಂವಹನದಲ್ಲಿ ವಿಶಿಷ್ಟವಾದ 'ಜಾರ್ಗನ್'ಗಳನ್ನು ಹೆಚ್ಚಾಗಿ ಬಳಸುತ್ತಾರೆ. ಸಾಮಾಜಿಕ ಮಾಧ್ಯಮ ಮತ್ತು ಡಿಜಿಟಲ್ ಸಂಸ್ಕೃತಿಯ ಪ್ರಭಾವದಿಂದ- lit, vibe, ghosting, flex, slay, FOMO, YOLO, Coffee Badging, Career Cushioning, Digital Nomad, Mouse Jiggling, Boomerang Employment, Quiet Quitting ಮುಂತಾದ ಪದಗಳು ಅವರ ದೈನಂದಿನ ಭಾಷೆಯಲ್ಲಿ ಸಾಮಾನ್ಯವಾಗಿವೆ. ಈ ಪದಗಳು ಕೇವಲ ಭಾಷೆಯಲ್ಲ, ಅವರ ಜೀವನಶೈಲಿ, ಭಾವನೆಗಳು ಮತ್ತು ಸಾಮಾಜಿಕ ಸಂವಹನದ ರೀತಿಯನ್ನೂ ಪ್ರತಿಬಿಂಬಿಸುತ್ತವೆ. ಹೀಗಾಗಿ, 'ಝೂಮರ್' ಸಂಸ್ಕೃತಿಯನ್ನು ನಿಭಾಯಿಸಲೆತ್ನಿಸುವವರೆಲ್ಲರೂ ಹೊಸ ಭಾಷಾಶೈಲಿಯನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ.

ಜೆನ್-ಝಿ ತಲೆಮಾರನ್ನು ಅರ್ಥಮಾಡಿಕೊಳ್ಳುವುದು ಇಂದಿನ ಕಾರ್ಪೋರೇಟ್ ಮತ್ತು ಸಾಮಾಜಿಕ ಪರಿಸರದಲ್ಲಿ ಬಹಳ ಮುಖ್ಯವಾಗಿದೆ. ಇವರು ಒಂದು ಕೈಯಲ್ಲಿ ಮೊಬೈಲ್, ಮತ್ತೊಂದು ಕೈಯಲ್ಲಿ ಕನಸುಗಳನ್ನು ಹಿಡಿದು ಬದುಕನ್ನು ನಡೆಸುವ ಪ್ರಯತ್ನದಲ್ಲಿದ್ದಾರೆ. ಜೆನ್-ಝಿಗಳ ಮನೋಭಾವ, ಆಸಕ್ತಿ ಮತ್ತು ಕೆಲಸದ ನಿರೀಕ್ಷೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಸಂಸ್ಥೆಗಳೇ ಭವಿಷ್ಯದ ಕಾರ್ಯಸ್ಥಳವನ್ನು ಯಶಸ್ವಿಯಾಗಿ ರೂಪಿಸಬಲ್ಲವು. ಇದು ಸಮಾಜದ ಭವಿಷ್ಯದ ಸಂಸ್ಕೃತಿಯನ್ನು ಯಶಸ್ವಿಯಾಗಿ ರೂಪಿಸಲೂ ಅತ್ಯಂತ ಅಗತ್ಯವಾಗಿದೆ...

(ಲೇಖಕರು ಚಾರ್ಟರ್ಡ್ ಅಕೌಂಟೆಂಟ್ ಮತ್ತು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:55

ಸಮಾಚಾರ ಸಣ್ಣದಲ್ಲ

ಅರುಣಾಚಲ ಕಾಡ್ಗಿಚ್ಚು ಶಮನಕ್ಕೆ ಕಾಪ್ಟರ್ ಬಳಕೆ

ಇಟಾನಗರ: ಅರುಣಾಚಲ ಪ್ರದೇಶದ ಪಾಸಿಘಾಟ್‌ನ ಮೆಬೊ ಮತ್ತು ಸಿಗರ್ ಪ್ರದೇಶಗಳಲ್ಲಿ ಮಂಗಳವಾರ ನಸುಕಿನಲ್ಲಿ ಭಾರೀ ಕಾಡ್ಗಿಚ್ಚು ಉಂಟಾಗಿದ್ದು, ಬೆಂಕಿ ನಂದಿಸಲು ಭಾರತೀಯ ವಾಯುಪಡೆ(ಐಎಎಫ್) ಎಂವಿ-17ವಿ 5 ಹೆಲಿಕಾಪ್ಟರನ್ನು ನಿಯೋಜಿಸಿದೆ. ಎಂವಿ-17ವಿ5 ಹೆಲಿಕಾಪ್ಟರ್ ಸಮೀಪದ ಜಲಾಶಯಕ್ಕೂ ಕಾಡ್ಗಿಚ್ಚು ಉರಿಯುತ್ತಿದ್ದ ಸ್ಥಳಕ್ಕೂ ಹಲವಾರು ಬಾರಿ ಹಾರಾಟ ನಡೆಸಿ ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದು, ಈ ಸಂದರ್ಭ ವಿಡಿಯೋವನ್ನು ಐಎಎಫ್ ಹಂಚಿಕೊಂಡಿದೆ. ಕಾಡ್ಗಿಚ್ಚು ನಂದಿಸಲು ಹೆಲಿಕಾಪ್ಟರ್‌ನಿಂದ 66 ಸಾವಿರ ಲೀ.ಗೂ ಅಧಿಕ ನೀರನ್ನು ಬಳಸಲಾಗಿದೆ.

ಕ್ಷಣದಲ್ಲಿ ಹಿಂದೂಗಳ ಮುಗಿಸಿಬಿಡುತ್ತಿದ್ದರು

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಸರಕಾರ ಇರುವುದರಿಂದಲೇ ಹಿಂದೂಗಳು ಸುರಕ್ಷಿತವಾಗಿದ್ದಾರೆ ಎಂದು ಮುಖ್ಯಮಂತ್ರಿ

ಮಮತಾ ಬ್ಯಾನರ್ಜಿ ಸೋಮವಾರ ಪ್ರತಿಭಟನಾ ಸ್ಥಳದಲ್ಲಿ ಹೇಳಿದ್ದಾರೆ. ಒಂದು ವೇಳೆ ತೃಣಮೂಲ ಸರಕಾರ ಇಲ್ಲದೇ ಹೋಗಿದ್ದರೆ ಆ ಸಮುದಾಯದವರು ಒಂದೇ ಸೆಕೆಂಡ್‌ನಲ್ಲಿ ಹಿಂದೂಗಳನ್ನು ಮುಗಿಸಿಬಿಡುತ್ತಿದ್ದರು ಎಂದು ಹೇಳಿದ್ದಾರೆ. ಮಮತಾ ಅವರ ಈ ಹೇಳಿಕೆಯ ವಿಡಿಯೋ ವೈರಲ್ ಆಗಿದ್ದು ಭಾರೀ ವಿವಾದಕ್ಕೆ ಕಾರಣವಾಗಿದೆ. ಬಿಜೆಪಿ ನಾಯಕರು ಮತ್ತು ನೆಟ್ಟಿಗರು ಟಿಎಂಸಿ ಅಧಿಕಾರದ ಮೇಲಿನ ಹಿಡಿತವನ್ನು ಕಳೆದುಕೊಳ್ಳುತ್ತಿದೆ. ಅದಕ್ಕೇ ಹಿಂದೂ ದ್ವೇಷವನ್ನು ಆಶ್ರಯಿಸುತ್ತಿದೆ ಎಂದು ಆರೋಪಿಸಿದೆ. ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ, ಬಂಗಾಳಿ ಹಿಂದೂಗಳಿಗೆ ಮಮತಾ ಬ್ಯಾನರ್ಜಿ ಬಹಿರಂಗ ಎಚ್ಚರಿಕೆ ನೀಡಿದ್ದಾರೆ. ಇದು ಟಿಎಂಸಿ ಪಕ್ಷದ ಹತಾಶೆಯನ್ನು ಪ್ರತಿಬಿಂಬಿಸುತ್ತದೆ ಎಂದು ಟೀಕಿಸಿದ್ದಾರೆ.

ನುಸುಳಲೆತ್ನಿಸಿದ ಒಬ್ಬ ಉಗ್ರನ ಕೊಂದ ಸೇನೆ

ಶ್ರೀನಗರ: ಜಮ್ಮು-ಕಾಶ್ಮೀರದ ನೌಶೇರಾ ಭಾಗದಲ್ಲಿನ ಝುಂಗಾರ್ ಪ್ರದೇಶದ ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಮಂಗಳವಾರ ಬೆಳಗ್ಗೆ ಇಬ್ಬರು ಭಯೋತ್ಪಾದಕರ ಚಲನವಲನ ಕಂಡುಬಂದಿದೆ. ನಂತರ ಕಾರ್ಯಾಚರಣೆ ಆರಂಭಿಸಿದ ಭದ್ರತಾ ಪಡೆಗಳು, ಮಂಗಳವಾರ ಮಧ್ಯಾಹ್ನ 3 ಗಂಟೆ ವೇಳೆಗೆ ಒಬ್ಬ ಉಗ್ರನನ್ನು ಹೊಡೆದುರುಳಿಸಿದ್ದಾರೆ. ಆ ಮೂಲಕ ಒಳನುಸುಳುವಿಕೆ ಯತ್ನವನ್ನು ವಿಫಲಗೊಳಿಸಿದ್ದಾರೆ. 2ನೇ ಭಯೋತ್ಪಾದಕನನ್ನು ಪತ್ತೆಹಚ್ಚಲು ಶೋಧ ಕಾರ್ಯಾಚರಣೆ ಆರಂಭಿಸಲಾಗಿದೆ. ಸಮಗ್ರ ಭೂ ಮತ್ತು ವೈಮಾನಿಕ ಮೇಲ್ವಿಚಾರಣೆಯೊಂದಿಗೆ ಭದ್ರತಾ ಪಡೆಗಳು, ಈ ವಲಯದಲ್ಲಿ ಕಣ್ಗಾವಲು ತೀವ್ರಗೊಳಿಸಲಾಗಿದೆ ಎಂದು ಸೇನೆಯ 'ವೈಟ್ ನೈಟ್ ಕಾರ್ಪ್ಸ್' ಎಕ್ಸ್ ಖಾತೆಯಲ್ಲಿ ಹೇಳಿದೆ.

ಟ್ರಂಪ್‌ಗೆ ಇರಾನ್ ಗುದ್ದು

ಟೆಹರಾನ್: ಇರಾನ್ ದೇಶದ ಹಿರಿಯ ಭದ್ರತಾ ಅಧಿಕಾರಿ ಅಲಿ ಲಾರಿಜಾನಿ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಎಚ್ಚರಿಕೆ ನೀಡಿ ಆನ್‌ಲೈನ್

ಸಂದೇಶವನ್ನು ಮಂಗಳವಾರ ಹಂಚಿಕೊಂಡಿದ್ದಾರೆ. ಹಾರ್ಮುಜ್ ಜಲಸಂಧಿ ಮೂಲಕ ತೈಲ ಸಾಗಣೆ ನೌಕೆಗಳನ್ನು ತಡೆಯಲು ಯತ್ನಿಸಿದರೆ ಇರಾನ್ ಮೇಲೆ ಅಮೆರಿಕ ಈಗಿರುವುದಕ್ಕಿಂತ 20 ಪಟ್ಟು ಹೆಚ್ಚು ಬಲವಾಗಿ ದಾಳಿ ಮಾಡುತ್ತದೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಆನಂತರ ಅದಕ್ಕೆ ಇರಾನ್‌ನ ರಾಷ್ಟ್ರೀಯ ಭದ್ರತಾ ಮಂಡಳಿಯ ಕಾರ್ಯದರ್ಶಿ ಅಲಿ ಲಾರಿಜಾನಿ, ಇರಾನ್ ಜನ ಖಾಲಿ ಬೆದರಿಕೆಗಳಿಗೆ ಹೆದರುವುದಿಲ್ಲ. ನಿಮಗಿಂತಲೂ ಪ್ರಬಲರಾದ ವಿರೋಧಿಗಳಿಂದಲೂ ಇರಾನ್ ದೇಶವನ್ನು ನಾಶ ಮಾಡಲು ಸಾಧ್ಯವಾಗಿಲ್ಲ. ಮಿ. ಟ್ರಂಪ್ ಮೊದಲು ನಿಮ್ಮ ಜೀವ ಉಳಿಸಿಕೊಳ್ಳುವ ಬಗ್ಗೆ ಗಮನಹರಿಸಿ ಎಂದು ತಿರುಗೇಟು ನೀಡಿದ್ದಾರೆ.

ತೈಲ ಕೇಳಿದ ಐಇಎಗೆ ಭಾರತ ಪ್ರತ್ಯುತ್ತರ

ದೆಹಲಿ: ಅಂತಾ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಸೋಮವಾರ ಬ್ಯಾರೆಲ್‌ಗೆ 120 ಡಾಲರ್‌ಗಳನ್ನೂ ಮೀರಿದಾಗ ಅಂತಾರಾಷ್ಟ್ರೀಯ ಇಂಧನ ಸಂಸ್ಥೆ(ಐಇಎ) ಭಾರತಕ್ಕೆ 'ನಿಮ್ಮ ದೇಶದ ಆಂತರಿಕ ಬಳಕೆಗೆ ಎಂದು ಮೀಸಲಿಡಲಾಗಿರುವ ತೈಲ ಸಂಗ್ರಹವನ್ನು ಬಿಡುಗಡೆ ಮಾಡಿ' ಎಂದು ಕರೆ ಮಾಡಿತ್ತು. 'ಐಇಎ' ಕೋರಿಕೆಯನ್ನು ಭಾರತ ಸ್ಪಷ್ಟವಾಗಿ ನಿರಾಕರಿಸಿತು. ಅಷ್ಟಕ್ಕೇ ಸುಮ್ಮನಾಗದೇ, 'ಮೊದಲನೆಯದಾಗಿ ಭಾರತ ಐಇಎ ಸದಸ್ಯ ರಾಷ್ಟ್ರವಂತೂ ಅಲ್ಲ ಎಂದು ಕಟುವಾಗಿ ಉತ್ತರಿಸಿದೆ.

{ ಮಹುವಾ ಮೋಯಿತ್ರಾ } ಟಿಎಂಸಿ ಸಂಸದೆ

ಸಿಎಂ ಮಮತಾ ಬ್ಯಾನರ್ಜಿ ಬಂಗಾಳದ ಜನರ ಪರವಾಗಿ ರಾಜಕೀಯ ಹೋರಾಟ ನಡೆಸುತ್ತಿದ್ದಾರೆ. ಟಿಎಂಸಿ ಜತೆ ನಿಲ್ಲದೇ ಇರುವವರು ಬಂಗಾಳಿಗಳೇ ಅಲ್ಲ, ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸದವರು ಬಂಗಾಳಿಗಳೇ ಅಲ್ಲ. ಅವರಿಗೆ ಪ. ಬಂಗಾಳದಲ್ಲಿ ವಾಸಿಸುವ ಯಾವುದೇ ಹಕ್ಕು ಇಲ್ಲ.

ಉಕ್ರೇನ್, ಇರಾನ್ ಯುದ್ಧಗಳ ನಿಲುಗಡೆ ಪ್ರಸ್ತಾಪ ಚರ್ಚೆ | ವೆನೆಜುವೆಲಾ ಪರಿಸ್ಥಿತಿ, ಜಾಗತಿಕ ತೈಲ ಮಾರುಕಟ್ಟೆ ಪ್ರಸ್ತಾಪ

ಪುಟಿನ್-ಟ್ರಂಪ್ 1ಗಂಟೆ ದೂರವಾಣಿ ಮಾತುಕತೆ

ವಾಷಿಂಗ್ಟನ್/ಮಾಸ್ಕೊ: ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧದ ಕಿಚ್ಚು ಹೆಚ್ಚುತ್ತಿರುವ ಮಧ್ಯೆಯೇ ಅಮೆರಿಕ-ರಷ್ಯಾ ಮಧ್ಯೆ ಸೋಮವಾರ ಮಹತ್ವದ ಬೆಳವಣಿಗೆಯಾಗಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಸೋಮವಾರ 1 ಗಂಟೆ ಕಾಲ ದೂರವಾಣಿಯಲ್ಲಿ ಮಾತನಾಡಿದ್ದಾರೆ.



ಯೂರಿ ಉಷ್ಕೋವ್

ಇಬ್ಬರೂ ನಾಯಕರು ಮುಖ್ಯವಾಗಿ, 3 ವರ್ಷಗಳಿಂದ ನಡೆಯುತ್ತಿರುವ ಉಕ್ರೇನ್ ಯುದ್ಧ ಮತ್ತು ಫೆ.18ರಂದು ಆರಂಭಗೊಂಡ ಇರಾನ್ ಸಮರದ ಬಗ್ಗೆ ಚರ್ಚಿಸಿದ್ದಾರೆ. ಈ ದೂರವಾಣಿ ಮಾತುಕತೆ ಬಹಳ ಸಕಾರಾತ್ಮಕವಾಗಿತ್ತು-ರಚನಾತ್ಮಕವಾಗಿತ್ತು ಎಂದು ತಿಳಿದುಬಂದಿದೆ. ಎರಡೂ ಯುದ್ಧಗಳೂ ಕೊನೆಗೊಂಡು ಶಾಂತಿ ನೆಲೆಸಬಹುದಾದ ಆಶಾವಾದವನ್ನು ಹುಟ್ಟುಹಾಕಿದೆ.

ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಸಮರವನ್ನು ಕೊನೆಗೊಳಿಸುವ ಮತ್ತು ಉಕ್ರೇನ್-ರಷ್ಯಾ ನಡುವಿನ ಬಿಕ್ಕಟ್ಟನ್ನು ಪರಿಹರಿಸುವ ಕುರಿತು ಇಬ್ಬರೂ ನಾಯಕರು ದೊಡ್ಡ ಯೋಜನೆ ರೂಪಿಸಿದ್ದಾರೆ. ಹಾಗಾಗಿಯೆ ಒಂದು ಗಂಟೆ ಕಾಲ ದೂರವಾಣಿ ಕರೆ ನಡೆಸಲಾಗಿದೆ ಎಂದು ಕ್ರೆಮ್ಲಿನ್ ಮೂಲಗಳು ಹೇಳಿವೆ.

ಯೂರಿ ಉಷಾಕ್ ಮಾಹಿತಿ: ಸೋಮವಾರ ನಡೆದ ದೂರವಾಣಿ ಸಂಭಾಷಣೆಯಲ್ಲಿ ಪುಟಿನ್, ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಜಂಟಿ ಸಮರವನ್ನು ತಕ್ಷಣವೇ ಅಂತ್ಯಗೊಳಿಸುವುದಕ್ಕೆ ಸಂಬಂಧಿಸಿದಂತೆ ಮಹತ್ವದ ಯೋಜನೆಯೊಂದನ್ನು ಟ್ರಂಪ್ ಮುಂದೆ ಇರಿಸಿದ್ದಾರೆ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ರಾಜತಾಂತ್ರಿಕ ಸಲಹೆಗಾರ ಯೂರಿ ಉಷ್ಕಾವ್ ಸುದ್ದಿಸಂಸ್ಥೆಗಳ ಜತೆ ಮಂಗಳವಾರ ಮಾಹಿತಿ ಹಂಚಿಕೊಂಡಿದ್ದಾರೆ.

ವಾಷಿಂಗ್ಟನ್‌ನಿಂದ ಫೋನ್ ಕರೆ ಬಂದಿದ್ದು, ಇಬ್ಬರೂ ನಾಯಕರು ಮೊದಲಿಗೆ ವಿಶ್ವ ರಾಜಕೀಯ ಬೆಳವಣಿಗೆಗಳ ಪ್ರಮುಖ ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯ ಹಂಚಿಕೊಂಡರು. ನಂತರ, ಇರಾನ್ ದೇಶ ರಷ್ಯಾದ ಪರಮಾಪ್ತ ದೇಶವಾಗಿದೆ. ಹಾಗಾಗಿ, ಇರಾನ್-ಇಸ್ರೇಲ್ ನಡುವಿನ ಹಳೆಯ ಸಂಘರ್ಷವನ್ನು ರಾಜತಾಂತ್ರಿಕ ಮಾರ್ಗಗಳ ಮೂಲಕ ಆದಷ್ಟು ಬೇಗ ಪರಿಹರಿಸಬೇಕಾದ ಅಗತ್ಯವಿದೆ ಎಂದು ಪುಟಿನ್ ಒತ್ತಿ ಹೇಳಿದ್ದಾರೆ. ಕೊಲ್ಲಿ ರಾಷ್ಟ್ರಗಳ ನಾಯಕರು, ಇರಾನ್ ಅಧ್ಯಕ್ಷರು ಮತ್ತಿತರ ಜಾಗತಿಕ ಮಟ್ಟದ ನಾಯಕರನ್ನು ಸಂಪರ್ಕಿಸಿ ಈ ಸಂಘರ್ಷಕ್ಕೆ ಶಾಂತಿಯುತ ಪರಿಹಾರ ಕಂಡುಹಿಡಿಯಬಹುದಾಗಿದೆ ಎಂಬ ತಮ್ಮ ಚಿಂತನೆಯನ್ನು ಪುಟಿನ್, ಟ್ರಂಪ್ ಅವರಿಗೆ ವಿವರಿಸಿದ್ದಾರೆ ಎಂದು ಉಷ್ಕಾವ್ ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯೆಯಾಗಿ ಡೊನಾಲ್ಡ್ ಟ್ರಂಪ್ ಅವರೂ ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ನಡೆಸುತ್ತಿರುವ ಸೇನಾ ಕಾರ್ಯಾಚರಣೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಪುಟಿನ್ ಅವರ ಜತೆ ಹಂಚಿಕೊಂಡಿದ್ದಾರೆ. ಇಬ್ಬರೂ ನಾಯಕರು ಪಶ್ಚಿಮ ಏಷ್ಯಾದಲ್ಲಿನ ಸದ್ಯದ ಪರಿಸ್ಥಿತಿ ಬಗ್ಗೆ ವಿಶ್ಲೇಷಣೆ ನಡೆಸಿದ್ದು, ಸಂಘರ್ಷವನ್ನು ಹೇಗೆ ಕೊನೆಗೊಳಿಸಬಹುದು ಎಂಬ ಬಗ್ಗೆ ಗಂಭೀರ ಚರ್ಚೆ ನಡೆಸಿದ್ದಾರೆ. ಜತೆಗೆ ಉಕ್ರೇನ್ ವಿರುದ್ಧದ ರಷ್ಯಾ ಯುದ್ಧದ ವಿಚಾರವಾಗಿಯೂ ಟ್ರಂಪ್ ಮಾತನಾಡಿದ್ದಾರೆ. ಈ ವಿಚಾರವೂ ಪ್ರಮುಖವಾಗಿ ಚರ್ಚೆಗೆ ಒಳಗಾಗಿದೆ. ಪುಟಿನ್-ಟ್ರಂಪ್ ನಡುವಿನ ಈ ದೀರ್ಘ ಸಂಭಾಷಣೆ ಬಹಳ ರಚನಾತ್ಮಕವಾಗಿತ್ತು ಎಂದು ಉಷ್ಕೋವ್ ತಿಳಿಸಿದ್ದಾಗಿ ರಷ್ಯಾ ಮಾಧ್ಯಮಗಳು ಮಂಗಳವಾರ ವರದಿ ಪ್ರಕಟಿಸಿವೆ.

2ನೇ ದೂರವಾಣಿ

ಇಬ್ಬರೂ ದಿಗ್ಗಜರ ನಡುವಿನ ಈ ರಚನಾತ್ಮಕ-ಪರಿಹಾರಾತ್ಮಕ ನಡೆ ಹೊಸ ಬಗೆಯ ಜಾಗತಿಕ ಸಮೀಕರಣಕ್ಕೆ ನಾಂದಿ ಹಾಡಲಿದೆಯೇ ಎಂಬ ಕುತೂಹಲ ಉಂಟಾಗಿದೆ. ಡಿಸೆಂಬರ್‌ನಲ್ಲಿಯೂ ಇಬ್ಬರೂ ನಾಯಕರು ದೀರ್ಘ ದೂರವಾಣಿ ಸಂಭಾಷಣೆ ನಡೆಸಿದ್ದರು. ಅದಕ್ಕೂ ಮುನ್ನ ಆಗಸ್ಟ್ ತಿಂಗಳಲ್ಲಿ ಪುಟಿನ್ ಮತ್ತು ಟ್ರಂಪ್ ಅಲಾಸ್ಕಾದಲ್ಲಿ ಭೇಟಿಯಾಗಿ ಮುಖಾಮುಖಿ ಚರ್ಚೆ ನಡೆಸಿದ್ದರು. ಅಂದಿನ ಸಭೆಯಲ್ಲಿ ರಷ್ಯಾ-ಉಕ್ರೇನ್ ಯುದ್ಧ ಕೊನೆಗೊಳಿಸುವ ವಿಚಾರವೇ ಪ್ರಧಾನವಾಗಿತ್ತು. ಆದರೆ, ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಲೆವೆನೆಸ್ಕಿ ಅವರ ಹಠಮಾರಿತನದಿಂದಾಗಿ ರಷ್ಯಾ-ಉಕ್ರೇನ್ ನಡುವಿನ ಯುದ್ಧ ನಿಲುಗಡೆಗೆ ಬರಲಿಲ್ಲ ಎನ್ನಲಾಗಿದೆ.

ಉಕ್ರೇನ್-ರಷ್ಯಾ ಸಮರ ಅಂತ್ಯ ಮುಖ್ಯ: ಟ್ರಂಪ್

ಉಕ್ರೇನ್-ರಷ್ಯಾ ಸಂಘರ್ಷವನ್ನು ಆದಷ್ಟೂ ಬೇಗ ಕೊನೆಗೊಳಿಸುವುದು ಅಮೆರಿಕದ ಹಿತಾಸಕ್ತಿಯಾಗಿದೆ ಎಂದು ಟ್ರಂಪ್ ಅಭಿಪ್ರಾಯಪಟ್ಟಿದ್ದಾರೆ. ಯುದ್ಧ ವಿರಾಮ ಹಾಗೂ ದೀರ್ಘಾವಧಿ ಶಾಂತಿ ಒಪ್ಪಂದ ಮಾತುಕತೆ ನಡೆಸಬೇಕಾದ ಅಗತ್ಯವನ್ನು ಹೇಳಿದ್ದಾರೆ. ಪುಟಿನ್ ಕೂಡ ಉಕ್ರೇನ್ ಯುದ್ಧದ ಸದ್ಯದ ಸ್ಥಿತಿಗತಿ ವಿವರಿಸಿದ್ದಾರೆ. ಗಡಿಸಂಪರ್ಕ ರೇಖೆ ಬಳಿ ರಷ್ಯಾ ಪಡೆಗಳು ಮುನ್ನಡೆಯುತ್ತಿವೆ ಎಂದು ಅವರು ಟ್ರಂಪ್‌ಗೆ ವಿವರಿಸಿದ್ದಾರೆ. ಉಕ್ರೇನ್‌ನ ಭಾಗವಾದ ಸದ್ಯ ಯುದ್ಧದಲ್ಲಿ ರಷ್ಯಾ ವಶಕ್ಕೆ ಪಡೆದಿದ್ದ ಕೈವ್ ನಗರದ ಭವಿಷ್ಯ ಕುರಿತ ಮಾತುಕತೆಗಳು ಉಭಯ ದೇಶಗಳ ನಡುವಿನ ಸಮಸ್ಯೆಗೆ ಪರಿಹಾರ ಕಂಡುಕೊಡಬಹುದು ಎಂದು ವಿಶ್ಲೇಷಿಸಲಾಗಿದೆ. ಕೇವಲ 2 ಯುದ್ಧಗಳ ಬಗೆಗಷ್ಟೇ ಇಬ್ಬರೂ ನಾಯಕರು 1 ಗಂಟೆ ಕಾಲ ಚರ್ಚೆ ನಡೆಸಿಲ್ಲ. ಜಾಗತಿಕ ತೈಲ ಮಾರುಕಟ್ಟೆ ಮೇಲಾಗಿರುವ ಪರಿಣಾಮಗಳು ಮತ್ತು ವೆನೆಜುವೆಲಾ ಪರಿಸ್ಥಿತಿ ಬಗೆಗೂ ಪುಟಿನ್-ಟ್ರಂಪ್ ಚರ್ಚಿಸಿದ್ದಾರೆ. ಜಾಗತಿಕ ಇಂಧನ ಮಾರುಕಟ್ಟೆಯ ಸ್ಥಿರತೆ ಮತ್ತು ಆರ್ಥಿಕ ಪರಿಣಾಮಗಳ ಬಗ್ಗೆ ಅಭಿಪ್ರಾಯ ವಿನಿಮಯ ನಡೆದಿದೆ ಎಂದು ಪುಟಿನ್ ಅವರ ರಾಜತಾಂತ್ರಿಕ ಸಲಹೆಗಾರ ಯೂರಿ ಉಷ್ಕೋವ್ ತಿಳಿಸಿದ್ದಾರೆ ಎಂದು ರಷ್ಯಾ ಮಾಧ್ಯಮಗಳು ವರದಿ ಮಾಡಿವೆ.

ನೌಕೆ ಮುಳುಗಿಸೋದೇ ಖುಷಿ

ವಾಷಿಂಗ್ಟನ್: ಇರಾನ್ ನೌಕೆಗಳನ್ನು ವಶಪಡಿಸಿಕೊಂಡು ಬಳಸುವುದಕ್ಕಿಂತ ಅವನ್ನು ಸಮುದ್ರದಲ್ಲಿ ಮುಳುಗಿಸುವುದೆ ನಮಗೆ ಮಜಾ ಎಂದು ಅಮೆರಿಕ ಸೇನೆ ಹೇಳಿಕೊಂಡಿದೆ. ಈ ಬಗ್ಗೆ ಡೋರಲ್‌ನಲ್ಲಿ ನಡೆದ ನ್ಯಾಷನಲ್ ರಿಪಬ್ಲಿಕನ್ ಸಭೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಹಿತಿ ಹಂಚಿಕೊಂಡಿದ್ದಾರೆ. 'ಆಪರೇಷನ್ ಎಪಿಕ್ ಫ್ಯೂರಿ'ಯಿಂದ ಇರಾನ್ ನೌಕಾಪಡೆಗೆ ಭಾರಿ ಹೊಡೆತ ಬಿದ್ದಿದೆ. ಅಮೆರಿಕನ್ ನೌಕಾಪಡೆ ಕೇವಲ 3.5 ದಿನದಲ್ಲಿ ಇರಾನ್ ನೌಕಾಪಡೆಯ 46 ಯುದ್ಧನೌಕೆಗಳ ಮೇಲೆ ಕ್ಷಿಪಣಿ ದಾಳಿ ನಡೆಸಿ ಮುಳುಗಿಸಿದೆ ಎಂದು ನೌಕಾಪಡೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ ಎಂದರು. ಇರಾನ್ ನೌಕಾಪಡೆಯ ಹಡಗುಗಳು ಉತ್ತಮ ಗುಣಮಟ್ಟದವು. ಅವನ್ನು ವಶಕ್ಕೆ ಪಡೆದು ಬಳಸಬಾರದೇಕೆ? ಎಂಬ ಪ್ರಶ್ನೆಗೆ ಟ್ರಂಪ್, ಹೌದು ಅವನ್ನು ವಶಪಡಿಸಿಕೊಂಡು ಬಳಸಬಹುದಿತ್ತು ಎಂದು ನಾನು ಕೇಳಿದ್ದಕ್ಕೆ ನಮ್ಮ ಸೈನಿಕರು, ಅವನ್ನು ಸಮುದ್ರದಲ್ಲಿ ಮುಳುಗಿಸುವುದರಲ್ಲೇ ಹೆಚ್ಚು ಖುಷಿ ಸಿಗುತ್ತದೆ. ಅಲ್ಲದೇ, ಇರಾನ್ ಹಡಗುಗಳನ್ನು ಮುಳುಗಿಸುವುದೇ ಹೆಚ್ಚು ಸುರಕ್ಷಿತ ಎಂದೂ ಸೈನಿಕರು ಹೇಳುತ್ತಾರೆಂದು ಟ್ರಂಪ್ ಸಭೆಯಲ್ಲಿ ಹೇಳಿದ್ದಾರೆ. ಈವರೆಗಿನ ಸಂಘರ್ಷದಲ್ಲಿ ಇರಾನ್‌ನ ಡ್ರೋನ್ ಮತ್ತು ಕ್ಷಿಪಣಿ ಸಾಮರ್ಥ್ಯ ಪೂರ್ಣ ನಾಶವಾಗಿದೆ. ಇರಾನ್ ಸೇನೆಗೆ ಸೋಲಾಗುತ್ತಿದೆ ಎಂದೂ ಟ್ರಂಪ್ ಹೇಳಿಕೊಂಡಿದ್ದಾರೆ.

ಸಚಿವರ 2 ತಿಂಗಳ, ಸಂಸದರ ಅರ್ಧ ವೇತನ ಕಡಿತ

ಇಂಧನವಿಲ್ಲದೆ ಪಾಕ್ ಶಾಲೆ 2 ವಾರ, ಕಚೇರಿ 3 ದಿನ ಬಂದ್

ಇಸ್ಲಾಮಾಬಾದ್: ಪಶ್ಚಿಮ ಏಷ್ಯಾದಲ್ಲಿ ಇರಾನ್-ಇಸ್ರೇಲ್ ಯುದ್ಧದ ಪರಿಣಾಮ ಕಚ್ಚಾತೈಲ ಬೆಲೆ ಬ್ಯಾರೆಲ್‌ಗೆ 120 ಡಾಲರ್ ದಾಟಿದ ಬೆನ್ನಲ್ಲೇ ಪಾಕಿಸ್ತಾನ ಸರಕಾರ ಶಾಲೆಗಳಿಗೆ 2 ವಾರ ರಜೆ ಘೋಷಿಸಿದೆ. ಸರಕಾರಿ ಕಚೇರಿ ಕಾರ್ಯನಿರ್ವಹಣೆಯನ್ನು ವಾರಕ್ಕೆ 4 ದಿನಗಳಿಗೆ ಇಳಿಸಿದೆ. ಈ ನಿಯಮ ಬ್ಯಾಂಕ್‌ಗಳಿಗೆ ಅನ್ವಯಿಸಲ್ಲ ಎಂದು ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ. ಅಲ್ಲದೇ, ದೇಶವಾಸಿಗಳಿಗೆ ಇಂಧನ ಮಿತವ್ಯಯ ಕ್ರಮಗಳನ್ನು ಸೂಚಿಸಿದ್ದಾರೆ.

ಆರ್ಥಿಕವಾಗಿ ದಿವಾಳಿ ಅಂಚಿನಲ್ಲಿರುವ ಪಾಕಿಸ್ತಾನಕ್ಕೆ ಈಗಿನ ಇರಾನ್ ಯುದ್ಧ ಸಂಕಷ್ಟ ತಂದಿಟ್ಟಿದೆ. ಕಚ್ಚಾತೈಲ ಪೂರೈಕೆ ನಿಂತು ಹೋಗಿದ್ದರಿಂದ ತೀವ್ರ ಇಂಧನ ಬಿಕ್ಕಟ್ಟು ಸೃಷ್ಟಿಯಾಗಿ ಶಾಲಾ ವಾಹನಗಳಿಗೇ ಇಂಧನವಿಲ್ಲದಂತಾಗಿದೆ. ಶಿಕ್ಷಕರು-ವಿದ್ಯಾರ್ಥಿಗಳು ಶಾಲೆ ತಲುಪಲಾಗದ ಸ್ಥಿತಿ ನಿರ್ಮಾಣವಾಗಿರುವುದರಿಂದ ಸರಕಾರ ಶಾಲೆಗಳನ್ನು 2 ವಾರ ಮುಚ್ಚಲು ಆದೇಶಿಸಿದೆ. ಆನ್‌ಲೈನ್ ತರಗತಿಗೆ ಬದಲಾಗುವಂತೆ ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಲಾಗಿದೆ. ಸರಕಾರಿ ಕಚೇರಿಗಳು ವಾರಕ್ಕೆ 4 ದಿನವಷ್ಟೇ ಕಾರ್ಯನಿರ್ವಹಿಸಲು ಸುತ್ತೋಲೆ ಹೊರಡಿಸಲಾಗಿದೆ. ಶೇ.50ರಷ್ಟು ಸರಕಾರಿ ಸಿಬ್ಬಂದಿಗೆ ಮನೆಯಿಂದಲೇ ಕೆಲಸ ಮಾಡಲು ಸೂಚಿಸಲಾಗಿದೆ. ಸರಕಾರಿ ಇಲಾಖೆಗಳ ಇಂಧನ ಭತ್ಯೆ ಶೇ.50 ಕಡಿತಗೊಳಿಸಲಾಗಿದೆ. ಸಚಿವರಿಗೆ 2 ತಿಂಗಳು ಸಂಬಳ ಇಲ್ಲ. ಸಂಸದರ ವೇತನದಲ್ಲಿಯೂ ಶೇ.50ರಷ್ಟು ಕಡಿತವಾಗಲಿದೆ. 3 ಲಕ್ಷ ರು.ಗಿಂತ ಹೆಚ್ಚು ವರಮಾನವಿರುವ ಬಿಎಸ್-20 ಅಧಿಕಾರಿಗಳ 2 ದಿನದ ಸಂಬಳವನ್ನು ಸಾರ್ವಜನಿಕ ಕಲ್ಯಾಣಕ್ಕೆ ಬಳಸಲಾಗುವುದು. ಸರಕಾರದ ಇಲಾಖೆಗಳ ವೆಚ್ಚದಲ್ಲಿಯೂ ಶೇ.20 ಕಡಿತ, ಹೊಸ ವಾಹನ-ಪೀಠೋಪಕರಣ-ಹವಾನಿಯಂತ್ರಣ ಖರೀದಿ ರದ್ದು. ಸಚಿವರು ಮತ್ತು ಅಧಿಕಾರಿಗಳ ವಿದೇಶ ಪ್ರವಾಸಕ್ಕೆ ನಿರ್ಬಂಧವಿದೆ ಎಂದೂ ಪ್ರಧಾನಿ ಘೋಷಿಸಿದ್ದಾರೆ. ತೈಲ ಪೂರೈಕೆ ಕೊರತೆಯಿಂದ ಶೆಹಬಾಜ್ ಸರಕಾರ ಇಂಧನ ತೈಲ ಬೆಲೆಯನ್ನು 55 ರು.ಗಳಷ್ಟು ಹೆಚ್ಚಿಸಲು ನಿರ್ಧರಿಸಿದೆ. ಇದು ಪಾಕ್ ಇತಿಹಾಸದಲ್ಲೇ ಅತ್ಯಧಿಕ ಎನ್ನಲಾಗಿದೆ.

ಬಿಜೆಪಿ ನವೀನ್, ಕಾಂಗ್ರೆಸ್ ಬಿಮೋಲ್

ಸಾರ್ವಜನಿಕ ಸೇವೆಗೆ ವೇತನ ಬೇಡ ಎಂದ 2 ಸಂಸದರು

ದೆಹಲಿ: ವೇತನ-ಭತ್ಯೆ ಹೆಚ್ಚಿಸುವಂತೆ ಸಂಸದರು ಆಗಾಗ ಬೇಡಿಕೆ ಮುಂದಿಡುತ್ತಲೇ ಇರುತ್ತಾರೆ. ಆದರೆ ಬಿಜೆಪಿ ಮತ್ತು ಕಾಂಗ್ರೆಸ್‌ನ ತಲಾ ಒಬ್ಬ ಸಂಸದರು 'ವೇತನವೂ ಬೇಡ, ಸರಕಾರಿ ಸೌಲಭ್ಯಗಳೂ ಬೇಡ' ಎಂದು ನಿರಾಕರಿಸಿ ಅಚ್ಚರಿಗೆ ಕಾರಣವಾಗಿದ್ದಾರೆ.

ಉತ್ತರ ಪ್ರದೇಶದ ಕುರುಕ್ಷೇತ್ರದ ಬಿಜೆಪಿ ಸಂಸದ ನವೀನ್ ಜಿಂದಾಲ್ ಮತ್ತು ಇನ್ನರ್ ಮಣಿಪುರದ ಕಾಂಗ್ರೆಸ್ ಸಂಸದ ಡಾ.ಬಿಮೋಲ್ ಅಕೋಯಿಜಮ್ ಅಂಗೋಮ್ಚಾ ವೇತನ ಪಡೆಯಲು ನಿರಾಕರಿಸಿದವರು. ಜಿಂದಾಲ್ ಸರಕಾರಿ ಭತ್ಯೆ-ಸವಲತ್ತುಗಳೂ ಒಂದೂ ಬೇಡ ಎಂದು ಲೋಕಸಭಾ ಸಚಿವಾಲಯಕ್ಕೆ ಪತ್ರ ಬರೆದಿದ್ದಾರೆ. ಇಬ್ಬರೂ ಭಿನ್ನ ಕಾರಣಗಳಿಗಾಗಿ ವೇತನ-ಭತ್ಯೆ ನಿರಾಕರಿಸಿದ್ದಾರೆ. ನವೀನ್ ಜಿಂದಾಲ್ 1,241 ಕೋಟಿ ರು. ಆಸ್ತಿ ಹೊಂದಿದ್ದಾರೆ. ಲೋಕಸಭೆಯ ಅತ್ಯಂತ ಸಿರಿವಂತ ಸಂಸದರಲ್ಲಿ ಒಬ್ಬರು ಎನಿಸಿಕೊಂಡಿದ್ದಾರೆ. ಡಾ. ಬಿಮೋಲ್ ಅಕೋಯಿಜಮ್ ಅವರೇನೂ ಭಾರೀ ಶ್ರೀಮಂತರಲ್ಲ. 97 ಲಕ್ಷ ರು. ಮೌಲ್ಯದ ಆಸ್ತಿಯಷ್ಟೇ ಹೊಂದಿದ್ದಾರೆ. ಆದರೆ, ಸಾರ್ವಜನಿಕ ಸೇವೆಗೆ ಸಂಬಳ ಪಡೆಯಬಾರದು ಎಂಬ ಕಾರಣಕ್ಕೆ ವೇತನ-ಭತ್ಯೆಗಳನ್ನು ತ್ಯಜಿಸಿದ್ದಾರೆ. ಗುಂಟೂರಿನ ಟಿಡಿಪಿ ಸಂಸದ ಡಾ. ಚಂದ್ರಶೇಖರ್ ಪೆಮ್ಮಸಾನಿ ಅತ್ಯಂತ ಸಿರಿವಂತ ಸಂಸದ. ಅವರ ಬಳಿ 5,705 ಕೋಟಿ ರು. ಆಸ್ತಿ ಇದೆ. ಚೆವೆಲ್ಲಾ ಕ್ಷೇತ್ರದ ಬಿಜೆಪಿ ಸಂಸದ ಕೊಂಡ ವಿಶ್ವೇಶ್ವರ ರೆಡ್ಡಿ 4,568 ಕೋಟಿ ರು. ಆಸ್ತಿ ಹೊಂದಿದ್ದಾರೆ. ಇವರಿಬ್ಬರೂ ಸೇರಿದಂತೆ ಲೋಕಸಭೆಯ 481 ಹಾಲಿ ಸದಸ್ಯರು ಸಂಬಳ-ಭತ್ಯೆಗಳನ್ನು ಯಥೋಚಿತವಾಗಿ ಪಡೆಯುತ್ತಿದ್ದಾರೆ.

ಲೆಬನಾನ್ ಮೇಲೆ ಇಸ್ರೇಲ್ ಬಿಳಿರಂಜಕ ದಾಳಿ: ಆರೋಪ

ಬೈರೂತ್: ಲೆಬನಾನ್ ದೇಶದ ದಕ್ಷಿಣ ಭಾಗದಲ್ಲಿನ ನಾಗರಿಕ ವಸತಿ ಪ್ರದೇಶದ ಮೇಲೆ ಇಸ್ರೇಲ್ ಸೇನೆ ಬಿಳಿ ರಂಜಕದ ಷೆಲ್‌ಗಳನ್ನು ಬಳಸಿ ದಾಳಿ ಮಾಡಿದೆ ಎಂದು ನ್ಯೂಯಾರ್ಕ್ ಮೂಲದ ಮಾನವಹಕ್ಕು ಸಂಘಟನೆಯೊಂದು ಆರೋಪಿಸಿದೆ.

ಮಾ.3ರಂದು ಲೆಬನಾನ್ ಯಹ್‌ಮೋರ್ ನಗರದ ಮೇಲೆ ಇಸ್ರೇಲ್‌ನ ವಾಯುಪಡೆ ನಡೆಸಿದ ದಾಳಿಯಲ್ಲಿ ಬಿಳಿ ರಂಜಕಯುಕ್ತ ಷೆಲ್‌ಗಳ ಪ್ರಯೋಗವಾಗಿದೆ. ಸುತ್ತಲ ಪ್ರದೇಶದಲ್ಲಿನ ಮನೆಗಳು, ಗಿಡಮರಗಳ ಮೇಲೆಲ್ಲಾ ಬಿಳಿಯ ಪುಡಿಯಂತಹುದು ಕಾಣಬಂದಿದೆ. ಆದರೆ, ಅದರಿಂದ ಬೆಂಕಿ ಉತ್ಪತ್ತಿ ಆಗಿಲ್ಲ. ಅಲ್ಲದೇ ಇದರಿಂದ ಯಾವುದೇ ಸಾವು ಉಂಟಾಗಿಲ್ಲ. ಅಲ್ಪ ಪ್ರಮಾಣದ ಆಸ್ತಿ ಹಾನಿಯಾಗಿದೆ ಎಂದು ವರದಿಯಾಗಿದೆ. ಈ ಹಿಂದೆ ಗಾಜಾಪಟ್ಟಿಯಲ್ಲೂ ಇದೇ ರಾಸಾಯನಿಕವನ್ನು ಇಸ್ರೇಲ್ ದಾಳಿಗೆ ಬಳಸಿತ್ತು. ರಾಸಾಯನಿಕ ಬಳಕೆ ವಿಚಾರದಲ್ಲಿ ಕಾನೂನನ್ನು ಇಸ್ರೇಲ್ ಉಲ್ಲಂಘಿಸಿದೆ ಎಂದು ಲೆಬನಾನ್ ಆರೋಪಿಸಿದೆ.

ಬಿಳಿ ರಂಜಕ ಪ್ರಕ್ರಿಯಾತ್ಮಕ ರಾಸಾಯನಿಕವಾಗಿದ್ದು, ವಾತಾವರಣದಲ್ಲಿನ ಆಮ್ಲಜನಕದ ಸಂಪರ್ಕಕ್ಕೆ ಒಳಗಾದ ಕೂಡಲೇ ಸ್ವಯಂ ಪ್ರೇರಿತವಾಗಿ ಹೊತ್ತಿ ಉರಿಯುತ್ತದೆ. ಅದರಿಂದ ಸುತ್ತಲಿನ ಪ್ರದೇಶವೂ ಹೊತ್ತಿ ಉರಿಯಲಾರಂಭಿಸುತ್ತದೆ. ಜನವಸತಿ ಪ್ರದೇಶದಲ್ಲಿ ಬಳಸುವುದರಿಂದ ಅಪಾರ ಪ್ರಾಣಹಾನಿಯಾಗುತ್ತದೆ. ಸೈನ್ಯದ ಚಲನವಲನ ಮರೆಮಾಚಲು, ವೈಮಾನಿಕ ದಾಳಿ ವೇಳೆ ರಾಡಾರ್ ಕಣ್ಣ ತಪ್ಪಿಸಲು ರಕ್ಷಣಾ ಪಡೆಗಳು ಈ ರಾಸಾಯನಿಕವನ್ನು ಬಳಸುತ್ತವೆ. 1960ರಲ್ಲಿ ವಿಯೆಟ್ನಾಂ ಸಮರದ ವೇಳೆ ಅಮೆರಿಕ ಸಹ ಬಿಳಿ ರಂಜಕದ ಶೆಲ್ ಬಾಂಬ್ ಬಳಸಿತ್ತು.

ಈಗಿನ ಸಂಘರ್ಷದ ಅವಧಿಯಲ್ಲಿ ಈವರೆಗೆ ಲೆಬನಾನ್ ಮೇಲಿನ ಇಸ್ರೇಲ್ ದಾಳಿಗಳಲ್ಲಿ ಒಟ್ಟು 394 ಜನರು ಹತರಾಗಿ, 1000ಕ್ಕೂ ಅಧಿಕ ಜನರು ಗಾಯಗೊಂಡಿದ್ದಾರೆ.

30 ತೈಲಘಟಕಕ್ಕೆ ದಾಳಿ: ಇಸ್ರೇಲ್‌ನತ್ತ ಟ್ರಂಪ್ ಸಿಟ್ಟು

ವಾಷಿಂಗ್ಟನ್: ಇರಾನ್‌ನ ವಿವಿಧೆಡೆಯ 30 ಕಚ್ಚಾತೈಲ ಸಂಸ್ಕರಣ ಘಟಕಗಳ ಮೇಲೆ ಇಸ್ರೇಲ್ ದಾಳಿ ನಡೆಸಿ, ಅಪಾರ ತೈಲ ಸಂಪತ್ತನ್ನು ಹಾಳು ಮಾಡಿದ್ದಕ್ಕೆ ಇಸ್ರೇಲ್ ಮೇಲೆ ಅಮೆರಿಕ ಸಿಟ್ಟಾಗಿದೆ. ಮಿತ್ರರಾಷ್ಟ್ರವನ್ನೇ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧ ಮಂಗಳವಾರ 11ನೇ ದಿನಕ್ಕೆ ಕಾಲಿಟ್ಟಿದೆ. ಕಳೆದ 10 ದಿನಗಳ ಯುದ್ಧದಲ್ಲಿ ಮೊದಲ ಬಾರಿಗೆ ಮಿತ್ರದೇಶಗಳ ಮಧ್ಯೆ ಭಿನ್ನಾಭಿಪ್ರಾಯ ಮೂಡಿದೆ. ಇರಾನ್ ರಾಜಧಾನಿ ಟೆಹ್ರಾನ್ ಸೇರಿದಂತೆ ವಿವಿಧೆಡೆಯ ತೈಲ ಘಟಕಗಳ ಮೇಲೆ ಇಸ್ರೇಲ್ ಭಾನುವಾರ ಕ್ಷಿಪಣಿಗಳ ಮಳೆಗರೆದಿತ್ತು. ಪರಿಣಾಮ 30 ತೈಲ ಬಾವಿಗಳು, ಸಂಸ್ಕರಣಾ ಘಟಕಗಳು ಹೊತ್ತಿ ಉರಿದು ಜ್ವಾಲೆ ಮುಗಿಲೆತ್ತರಕ್ಕೆ ಚಿಮ್ಮಿ, ಕಪ್ಪು ಹೊಗೆ ಇಡೀ ನಗರವನ್ನು ಆವರಿಸಿತ್ತು. ಈ ವೇಳೆ ನಾಲ್ವರು ಸಾವನ್ನಪ್ಪಿದ್ದರು. ಇಸ್ರೇಲ್ ಈ ದಾಳಿ ಬಗ್ಗೆ ಅಮೆರಿಕಕ್ಕೆ ಮಾಹಿತಿ ನೀಡಿತ್ತು. ಆದರೆ ದಾಳಿ ಪ್ರಮಾಣ ಊಹಿಸಿದ್ದಕ್ಕಿಂತ ತೀವ್ರವಾಗಿದ್ದರಿಂದ ಅಮೆರಿಕ ಅಸಮಾಧಾನಗೊಂಡಿತು. ಇಸ್ರೇಲ್ ಸೇನೆಯನ್ನು ತೀಕ್ಷ್ಣ ಪದಗಳಲ್ಲಿ ತರಾಟೆಗೆ ತೆಗೆದುಕೊಂಡಿತು. ಇಸ್ರೇಲ್ ಈ ದುಡುಕು ಕ್ರಮದಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಮಿತಿಮೀರಿ ಹೆಚ್ಚುವ ಸಾಧ್ಯತೆಯಿದೆ, ತೈಲ ಕೊರತೆ ಉಂಟಾಗಲಿದೆ ಎಂದು ಅಮೆರಿಕ ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದರು ಎಂದು ವರದಿಯಾಗಿದೆ.

3220 ಕೋಟಿ ರು.ಗೆ ಬ್ರಹ್ಮೋಸ್ ಕ್ಷಿಪಣಿ ಖರೀದಿ ಒಪ್ಪಂದ

ಬ್ರಹ್ಮೋಸ್ ಖರೀದಿಗೆ ಇಂಡೋನೇಷ್ಯಾ ಸಿದ್ಧ

ದೆಹಲಿ/ಜಕಾರ್ತ: ಪಾಕಿಸ್ತಾನ ವಿರುದ್ಧ ಭಾರತದ ಸೇನಾ ಕಾರ್ಯಾಚರಣೆ 'ಆಪರೇಷನ್ ಸಿಂಧೂರ್'ನಲ್ಲಿ ಪ್ರಮುಖ ಪಾತ್ರವಹಿಸಿ ಉಗ್ರರ ನೆಲೆಗಳನ್ನೂ, ಪಾಕ್ ಸೇನೆಯ ನೆಲೆಗಳನ್ನೂ ಧ್ವಂಸಗೊಳಿಸಿದ್ದ ಹಾಗೂ ಭಾರತದತ್ತ ಪಾಕ್ ಹಾರಿಸಿದ್ದ ಕ್ಷಿಪಣಿಗಳನ್ನು ಆಕಾಶದಲ್ಲೇ ನಾಶಪಡಿಸಿದ್ದ 'ಬ್ರಹ್ಮೋಸ್ ಕ್ಷಿಪಣಿ'ಗೆ ಜಾಗತಿಕ ಮಟ್ಟದಲ್ಲಿ ಬೇಡಿಕೆ ಹೆಚ್ಚುತ್ತಿದೆ. 2022ರಲ್ಲಿ ಫಿಲಿಪ್ಪೈನ್ಸ್ ಬ್ರಹ್ಮೋಸ್ ಖರೀದಿಗೆ ಒಪ್ಪಂದ ಮಾಡಿಕೊಂಡಿತ್ತು. ಈಗ ಇಂಡೋನೇಷ್ಯಾ ಸರದಿ.

ಭಾರತ-ರಷ್ಯಾ ಜಂಟಿಯಾಗಿ ಭಾರತದಲ್ಲೇ ತಯಾರಿಸುತ್ತಿರುವ ಪ್ರಬಲ ಯುದ್ಧಾಸ್ತ್ರ 'ಬ್ರಹ್ಮೋಸ್ ಮಿಸೈಲ್ ಸಿಸ್ಟಂ' ಖರೀದಿಗೆ ಇಂಡೋನೇಷ್ಯಾ ಭಾರತದ ಜತೆ ಒಪ್ಪಂದ ಮಾಡಿಕೊಂಡಿದೆ. ಈ ವಿಚಾರವನ್ನು ಇಂಡೋನೇಷ್ಯಾ ರಕ್ಷಣಾ ಸಚಿವಾಲಯ ವಕ್ತಾರರಾದ ರಿಕೋ ರಿಕಾರ್ಡೊ ಸಿರಾಯ್ಟ್ ತಿಳಿಸಿದ್ದಾರೆ.

ಇಂಡೋನೇಷ್ಯಾ 2023ರಲ್ಲೇ ತನ್ನ ಸೇನೆ ಮತ್ತು ನೌಕಾಪಡೆ ಬಲವರ್ಧನೆಗಾಗಿ ಬ್ರಹ್ಮೋಸ್ ಕ್ಷಿಪಣಿ-ಉಡಾವಣಾ ವ್ಯವಸ್ಥೆ ಖರೀದಿಗೆ ಆಸಕ್ತಿ ತೋರಿ ಭಾರತದ ಜತೆ 35 ಕೋಟಿ ಡಾಲರ್‌ಗಳ(3220 ಕೋಟಿ ರು.ಗಳ) ಒಪ್ಪಂದದ ಮಾತುಕತೆ ನಡೆಸಿತ್ತು. ಅದು ಅಂತಿಮ ಹಂತವನ್ನೂ ತಲುಪಿತ್ತು. ಈಗ ಅಖೈರುಗೊಳ್ಳುತ್ತಿದೆ.

ಬ್ರಹ್ಮೋಸ್

ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಮತ್ತು ರಷ್ಯಾದ 'ಎನ್‌ಪಿಒ ಮಷಿನೋಸ್ಟ್ರೊಯೇನಿಯ ಕಂಪನಿ' ಜಂಟಿಯಾಗಿ 'ಬ್ರಹ್ಮೋಸ್ ಏರೋಸ್ಪೇಸ್' ಸಂಸ್ಥೆ ಹುಟ್ಟುಹಾಕಿದ್ದು, ಭಾರತದಲ್ಲೇ ಕ್ಷಿಪಣಿಗಳನ್ನು ತಯಾರಿಸುತ್ತಿವೆ. ಅದರ ಒಂದು ದೊಡ್ಡ ಘಟಕ ಉತ್ತರ ಪ್ರದೇಶದಲ್ಲಿದೆ. ಭಾರತದ ಬ್ರಹ್ಮಪುತ್ರ ಮತ್ತು ರಷ್ಯಾದ ಮೋಸ್ಕವಾ ನದಿಗಳ ಹೆಸರು ಸೇರಿಸಿ ಬಲಿಷ್ಠ ಕ್ಷಿಪಣಿಗೆ 'ಬ್ರಹ್ಮೋಸ್' ಎಂದು ಹೆಸರಿಡಲಾಗಿದೆ. ಬ್ರಹ್ಮೋಸ್ ಕ್ಷಿಪಣಿಯನ್ನು ಯುದ್ಧ ವಿಮಾನ, ನೌಕಾಪಡೆಯ ಯುದ್ಧನೌಕೆ, ಜಲಾಂತರ್ಗಾಮಿ, ಸಂಚಾರಿ ಮಿಸೈಲ್ ಲಾಂಚರ್‌ಗಳಿಂದ ಶತ್ರು ನೆಲೆಯತ್ತ ಹಾಗೂ ಶತ್ರುದೇಶದ ಕ್ಷಿಪಣಿಗಳತ್ತ ಗುರಿಯಿಟ್ಟು ಉಡಾಯಿಸಬಹುದು. ಪಗ್ರಹ ನಕ್ಷೆ ಆಧರಿಸಿ ಗುರಿ ನಿಗದಿ ಮಾಡಿ ಉಡಾವಣೆ ಮಾಡಿದರೆ ಸಾಕು ಬ್ರಹ್ಮೋಸ್ ಕ್ಷಿಪಣಿ ಬಹಳ ನಿಖರವಾಗಿ ಗುರಿ ತಲುಪಿ ಶತ್ರುಗಳ ನೆಲೆ ಅಥವಾ ದಾಳಿಕೋರ ಕ್ಷಿಪಣಿಯನ್ನು ನಾಶಪಡಿಸುತ್ತದೆ. ಬ್ರಹ್ಮೋಸ್ ಸಾಮರ್ಥ್ಯ ಕನಿಷ್ಠ 290-ಗರಿಷ್ಠ 800 ಕಿಮೀಗಳಷ್ಟಿದೆ. ರಾಡಾರ್ ನಿಗಾ ತಪ್ಪಿಸಲು ಸಮುದ್ರದ ಮಟ್ಟದಿಂದ 3ರಿಂದ 10 ಮೀ.ಗಳಷ್ಟು ಕಡಿಮೆ ಎತ್ತರದಲ್ಲಿ ಸಾಗಬಲ್ಲದು. ವೇಗ ಮ್ಯಾಕ್ 3ರಷ್ಟಿದ್ದು, ಶಬ್ದಕ್ಕಿಂತ 3 ಪಟ್ಟು ವೇಗದಲ್ಲಿ ಸಾಗಬಲ್ಲದು.

ಕಟ್ಟಡ ಕುಸಿದು 7 ಕಾರ್ಮಿಕರ ಸಾವು

ಗುರುಗ್ರಾಮ: ದೆಹಲಿ ಹೊರವಲಯದ, ಹರಿಯಾಣ ರಾಜ್ಯದ ಗುರುಗ್ರಾಮದ ಸಿದ್ರಾವಲಿ ಪ್ರದೇಶದ ಸಿಗ್ನೇಚರ್ ಗ್ಲೋಬಲ್ ಸೊಸೈಟಿಯಲ್ಲಿ ನಿರ್ಮಾಣ



ಹಂತದ ಗೋಡೆ ಸೋಮವಾರ ರಾತ್ರಿ 8ರ ವೇಳೆ ಕುಸಿದು 7 ಕಾರ್ಮಿಕರು ದುರ್ಮರಣಕ್ಕೀಡಾದರು. ಸತೀಶ್, ಭಾಗೀರಥ, ಮಿಲನ್, ಶಿವಶಂಕರ್, ಮಂಗಲ್ ಮತ್ತು ಪರಮೇಶ್ವರ್ ಸೇರಿದಂತೆ 7 ಕಾರ್ಮಿಕರು ಸಾವನ್ನಪ್ಪಿದರು. ಬಹುಮಹಡಿ ಕಟ್ಟಡದ ಗೋಡೆ ಕುಸಿದಿದ್ದರಿಂದ ಹತ್ತಾರು ಟನ್‌ಗಳಷ್ಟು ಅವಶೇಷಗಳಡಿ 15ಕ್ಕೂ ಅಧಿಕ ಕಾರ್ಮಿಕರು ಸಿಲುಕಿಕೊಂಡರು. ರಕ್ಷಣಾ ಕಾರ್ಯಾಚರಣೆ ನಡೆಸಿ 20 ಕಾರ್ಮಿಕರನ್ನು ರಕ್ಷಣೆ ಮಾಡಿ ರಾಜಸ್ತಾನದ ಭಿವಾಡಿಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳಲ್ಲಿ ಚೋಟೆಲಾಲ್, ದೀನದಯಾಳ್, ಶಿವಕಾಂತ್ ಮತ್ತು ಇಂದ್ರಜಿತ್ ಸ್ಥಿತಿ ಅತ್ಯಂತ ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಟ್ಟಡದ ಗೋಡೆ ಕುಸಿತಕ್ಕೆ ಕಾರಣ ತಿಳಿಯಲು ಅಧಿಕಾರಿಗಳು ತನಿಖೆ ನಡೆಸಿದ್ದಾರೆ.

ಎಲ್ಲಾ ಪುಸ್ತಕ ಹಿಂಪಡೆದು ಕ್ಷಮೆ ಕೇಳಿದ ಎನ್ಸಿಇಆರ್ಟಿ

ದೆಹಲಿ: ಕೇಂದ್ರೀಯ ಪಠ್ಯ ಕ್ರಮದ ಪುಸ್ತಕಗಳನ್ನು ಪ್ರಕಟಿಸುವ 'ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ'(ಎನ್‌ಸಿಇಆರ್‌ಟಿ) 8ನೇ ತರಗತಿ ಸಮಾಜ ವಿಜ್ಞಾನ ಪುಸ್ತಕದ ಒಂದು ಅಧ್ಯಾಯದಲ್ಲಿ 'ನ್ಯಾಯಾಂಗದಲ್ಲಿನ ಭ್ರಷ್ಟಾಚಾರ' ಎಂಬ ಪಾಠ ಮುದ್ರಿಸಿ, ದೊಡ್ಡ ಕೋಲಾಹಲವನ್ನೇ ಸೃಷ್ಟಿಸಿತ್ತು. ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಸುಪ್ರೀಂ ಕೋರ್ಟ್, ನ್ಯಾಯಾಂಗ ನಿಂದನೆ ಕ್ರಮದ ಎಚ್ಚರಿಕೆ ನೀಡಿದ ಮೇಲೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರೇ ಕ್ಷಮೆ ಕೇಳಿದ್ದರು.

ಆ ಬಳಿಕ ಎನ್‌ಸಿಆರ್‌ಟಿ ಶಾಲೆಗಳು ಮತ್ತು ಮಾರುಕಟ್ಟೆಯಲ್ಲಿದ್ದ 8ನೇ ತರಗತಿಯ ಸಮಾಜ ವಿಜ್ಞಾನ ಪುಸ್ತಕಗಳೆಲ್ಲವನ್ನೂ ವಾಪಸ್ ತೆಗೆದುಕೊಂಡಿದೆ. ಅಲ್ಲದೇ, ಮಂಗಳವಾರ ಸಾರ್ವಜನಿಕವಾಗಿ ನ್ಯಾಯಾಲಯದ ಕ್ಷಮೆ ಕೇಳಿದೆ. ಇದಕ್ಕೂ ಮುನ್ನ, ಫೆ.26ರಂದು ಸುಪ್ರೀಂ ಕೋರ್ಟ್ 8ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದ ಮೇಲೆ ಪೂರ್ಣ ನಿಷೇಧ ಹೇರಿತ್ತು. ಅಲ್ಲದೇ ಅದರ ಎಲ್ಲಾ ಪ್ರತಿಗಳನ್ನು ವಶಪಡಿಸಿಕೊಳ್ಳಲು ಮತ್ತು ಅದರ ಡಿಜಿಟಲ್ ಆವೃತ್ತಿಗಳನ್ನು ತಕ್ಷಣವೇ ತೆಗೆದುಹಾಕಲು ಆದೇಶಿಸಿತ್ತು. ಈ ಸಂಬಂಧ ತಕ್ಷಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಹಾಗೂ ರಾಜ್ಯ ಸರಕಾರದ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ನಿರ್ದೇಶಿಸಿತ್ತು. ಈ ನಿರ್ದೇಶನಗಳನ್ನು ನಿರ್ಲಕ್ಷಿಸಿದರೆ ಗಂಭೀರ ಕ್ರಮ ಎದುರಿಸಬೇಕಾದೀತು ಎಂದೂ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ತ್ರಿಸದಸ್ಯ ಪೀಠ ಎಚ್ಚರಿಕೆ ನೀಡಿತ್ತು. ಅಲ್ಲದೇ, ವಿವಾದಿತ ಅಧ್ಯಾಯ ಪುಸ್ತಕಕ್ಕೆ ಸೇರ್ಪಡೆಯಾಗಲು ಕಾರಣರಾದವರ ಕ್ರಮ ತೆಗೆದುಕೊಳ್ಳಲೂ ಸೂಚಿಸಿತ್ತು.

'ಏಕರೂಪ ನಾಗರಿಕ ಸಂಹಿತೆ' ಜಾರಿಗೆ ಸಿಜೆಐ ನೇತೃತ್ವದ ತ್ರಿಸದಸ್ಯ ಪೀಠ ಬೆಂಬಲ

ಎಲ್ಲ ಧರ್ಮದ ಸ್ತ್ರೀಗೂ ಸಮಾನ ಅವಕಾಶ ಸಿಗಬೇಕು: ಸುಪ್ರೀಂ

ದೆಹಲಿ: ದೇಶಾದ್ಯಂತ ಮಹಿಳೆಯರಿಗೆ ಸಮಾನ ಹಕ್ಕುಗಳ ಸಿಗಬೇಕೆಂದರೆ ದೇಶದಲ್ಲಿ 'ಏಕರೂಪ ನಾಗರಿಕ ಸಂಹಿತೆ'ಯನ್ನು ಜಾರಿಗೆ ತರುವುದೇ ಆಗಿದೆ ಎಂದು ಸುಪ್ರೀಂಕೋರ್ಟ್ ಮಂಗಳವಾರ ಹೇಳಿದೆ. ಆ ಮೂಲಕ ಬಿಜೆಪಿಯ ಮಹತ್ವಾಕಾಂಕ್ಷೆಯ ಕಾಯಿದೆ ಎನಿಸಿಕೊಂಡಿರುವ 'ಏಕರೂಪ ನಾಗರಿಕ ಸಂಹಿತೆ'(ಯುಸಿಸಿ) ಪರವಾಗಿಯೇ ಸುಪ್ರೀಂಕೋರ್ಟ್ ಮಾತನಾಡಿದಂತಾಗಿದೆ.

ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ(ಷರಿಯಾ) ಮಹಿಳೆಯರ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ ಎಂದು ಆರೋಪಿಸಿ ಸಲ್ಲಿಕೆಯಾಗಿರುವ ಹಲವು ಅರ್ಜಿಗಳ ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ(ಸಿಜೆಐ) ಸೂರ್ಯಕಾಂತ್ ಮತ್ತು ನ್ಯಾ.ಆರ್.ಮಹದೇವನ್ ಮತ್ತು ನ್ಯಾ.ಜಾಯ್‌ಮೊಲ್ಯ ಬಾಗ್ಚಿ ಅವರ ತ್ರಿಸದಸ್ಯ ಪೀಠ ಹೀಗೆ ಅಭಿಪ್ರಾಯಪಟ್ಟಿದೆ.

ಮುಸ್ಲಿಂ ಸಮಾಜದ ಒಂದು ದೊಡ್ಡ ವರ್ಗವೇ 'ಸಮಾನ ಉತ್ತರಾಧಿಕಾರ ಹಕ್ಕು'ಗಳಿಂದ ವಂಚಿತವಾಗಿದೆ ಎಂಬ ಆರೋಪ ನೈಜವಾಗಿದೆ. ಆದರೆ ಷರಿಯಾ ಕಾನೂನಿನಲ್ಲಿನ ಉತ್ತರಾಧಿಕಾರಕ್ಕೆ ಸಂಬಂಧಿಸಿದ ನಿಬಂಧನೆಯನ್ನು ತೆಗೆದುಹಾಕಿದರೆ ಆ ಬಳಿಕ ಬರುವ ಉತ್ತರಾಧಿಕಾರ ಪ್ರಶ್ನೆಗಳನ್ನು ಯಾವ ಕಾನೂನಿನಡಿ ನಿರ್ವಹಿಸಲು ಸಾಧ್ಯ? ಎಂಬ ಪ್ರಶ್ನೆಗೆ 'ಏಕರೂಪ ನಾಗರಿಕ ಸಂಹಿತೆ'(ಯುಸಿಸಿ)ಯೇ ಸರಿಯಾದ ಉತ್ತರವಾಗಿದೆ ಎಂದು ತ್ರಿಸದಸ್ಯ ಪೀಠ ಸ್ಪಷ್ಟವಾಗಿ ಹೇಳಿದೆ.

ಅರ್ಜಿದಾರರ ಪರ ವಕಾಲತು ವಹಿಸಿದ್ದ ಹಿರಿಯ ವಕೀಲ ಪ್ರಶಾಂತ್ ಭೂಷಣ್, ಧಾರ್ಮಿಕ ಸ್ವಾತಂತ್ರ್ಯ ಖಾತರಿಪಡಿಸುವ ಸಂವಿಧಾನದ 25ನೇ ವಿಧಿಯಡಿ ಉತ್ತರಾಧಿಕಾರಕ್ಕೆ ಸಂಬಂಧಿಸಿದ ವೈಯಕ್ತಿಕ ಕಾನೂನನ್ನು ರಕ್ಷಿಸಲಾಗುವುದಿಲ್ಲ. ಉತ್ತರಾಧಿಕಾರ ಎಂಬುದು ನಾಗರಿಕ ಹಕ್ಕು ಮತ್ತು ಅಗತ್ಯ ಧಾರ್ಮಿಕ ಆಚರಣೆ ಎಂದು ಪರಿಗಣಿಸಲಾಗದು. ಷಾಯಿರಾ ಬಾನು ಕೇಸ್‌ನ ತೀರ್ಪಿನ ನಂತರ ದೇಶದಲ್ಲಿ ಈಗ ಆ ಪರಿಸ್ಥಿತಿ ಹೊಂದಲು ಸಾಧ್ಯವಿಲ್ಲ. ಮುಸ್ಲಿಂ ಮಹಿಳೆಯರಿಗೆ ಮುಸ್ಲಿಂ ಪುರುಷರಿಗೆ ಇರುವಂತೆ ಸಮಾನ ಹಕ್ಕುಗಳು ಇರುವುದಿಲ್ಲ ಎಂದು ವಾದ **ಮಂಡಿಸಿದರು.**

ಅರ್ಜಿ ತಿದ್ದುಪಡಿ: ಮುಸ್ಲಿಂ ಮಹಿಳೆಯರೇ ಸಲ್ಲಿಸಿರುವ ಅರ್ಜಿಯಲ್ಲಿ ನ್ಯಾಯಾಂಗದ ಮಧ್ಯಪ್ರವೇಶ ಸೂಕ್ತವಾಗಿದೆ ಎಂದು ಇದೇ ಸಂದರ್ಭ ಪೀಠ ಹೇಳಿತು. ಷರಿಯಾ ಕಾನೂನಿನಲ್ಲಿರುವ ಉತ್ತರಾಧಿಕಾರ ನಿಬಂಧನೆಗಳನ್ನು ರದ್ದುಗೊಳಿಸಿದರೆ ಅದಕ್ಕೆ ಪರಿಹಾರ ಏನು ಎಂಬ ಸಲಹೆಗಳನ್ನು ಸೇರಿಸಿ ಅರ್ಜಿಯಲ್ಲಿ ತಿದ್ದುಪಡಿ ಮಾಡಲೂ ಪೀಠ ಸೂಚಿಸಿತು. ವಕೀಲ ಪ್ರಶಾಂತ್ ಭೂಷಣ್ ಅವರು ಅರ್ಜಿಯನ್ನು ತಿದ್ದುಪಡಿ ಮಾಡಿ ಸಲ್ಲಿಸಲು ಒಪ್ಪಿದ ನಂತರ ಪೀಠ ವಿಚಾರಣೆಯನ್ನು ಹಲವು ದಿನಗಳ ಮಟ್ಟಿಗೆ ಮುಂದೂಡಿತು.

'ಒಬ್ಬ ಗಂಡಸಿಗೆ ಒಬ್ಬಳೇ ಪತ್ನಿ' ಎಂಬ ನಿಯಮ?

ಆದಿವಾಸಿಗಳು, ಬುಡಕಟ್ಟು ಜನರು ಸೇರಿದಂತೆ ವಿವಿಧ ಸಮಾಜಗಳಲ್ಲಿ ಸ್ತ್ರೀ-ಪುರುಷರಲ್ಲಿ ಬಹಳಷ್ಟು ಅಸಮತೋಲನಗಳಿವೆ ಎಂಬ ಸಂಗತಿಯನ್ನು ಒಪ್ಪಿದ ಪೀಠ, ಈ ಅಸಮತೋಲನವನ್ನು ತೆಗೆದುಹಾಕಬಹುದೇ? ಎಂದು ಅರ್ಜಿದಾರರನ್ನೇ ಪ್ರಶ್ನಿಸಿತು. ಅದಲ್ಲದೇ, 'ಒಬ್ಬ ಗಂಡಸಿಗೆ ಒಬ್ಬಳೇ ಪತ್ನಿ' ಎಂಬ ನಿಯಮವನ್ನು ಎಲ್ಲಾ ಸಮುದಾಯಗಳೂ ಏಕರೂಪವಾಗಿ ಅನುಸರಿಸುತ್ತಿಲ್ಲ ಎಂಬುದನ್ನೂ ಪೀಠ ಪರಿಗಣಿಸಿತು. ಆದರೆ, ಎಲ್ಲಾ ದ್ವಿಪತ್ನಿತ್ವ ಪ್ರಕರಣಗಳನ್ನು ಅಸಾಂವಿಧಾನಿಕ ಎಂದು ನ್ಯಾಯಾಲಯ ಘೋಷಿಸಬಹುದೇ? ಎಂಬುದು ಇದರ ಅರ್ಥ ಅಲ್ಲ. ಆದ್ದರಿಂದ ನಿರ್ದೇಶನ ತತ್ವಗಳನ್ನು ಜಾರಿಗೆ ತರಲು ನಾವು ಶಾಸಕಾಂಗಕ್ಕೆ ಅಧಿಕಾರವನ್ನು ನೀಡಬೇಕಾಗುತ್ತದೆ ಎಂದು ನ್ಯಾ.ಜಾಯ್‌ಮೊಲ್ಯ ಬಾಗ್ಚಿ ಹೇಳಿದರು. ಏಕರೂಪ ನಾಗರಿಕ ಸಂಹಿತೆ ಜಾರಿಗೆ ನ್ಯಾಯಾಲಯ ಈಗಾಗಲೇ ಶಾಸಕಾಂಗಕ್ಕೆ ಶಿಫಾರಸು ಮಾಡಿದೆ ಎಂದೂ ಅವರು ಹೇಳಿದರು.

ಸಮಾಚಾರ ಸಣ್ಣದಲ್ಲ

ತೈಲಕ್ಕಾಗಿ ಭಾರತಕ್ಕೆ ಬಾಂಗ್ಲಾ ಮನವಿ

ಢಾಕಾ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧ ಮತ್ತು ಹಾರ್ಮುಜ್ ಜಲಸಂಧಿಯಲ್ಲಿ ಉಂಟಾಗಿರುವ ತೈಲ ಪೂರೈಕೆಯ ಅಡೆತಡೆಗಳಿಂದಾಗಿ ಬಾಂಗ್ಲಾದೇಶದಲ್ಲಿ ಇಂಧನ ಬಿಕ್ಕಟ್ಟು ಎದುರಾಗಿದೆ. ತನ್ನ ತೈಲ ದಾಸ್ತಾನನ್ನು ಸ್ಥಿರಗೊಳಿಸಲು ಮತ್ತು ಅಭಾವವನ್ನು ತಡೆಗಟ್ಟಲು ಬಾಂಗ್ಲಾದೇಶವು ಭಾರತದಿಂದ ಹೆಚ್ಚುವರಿ ಡೀಸೆಲ್ ಪೂರೈಕೆಗೆ ವಿನಂತಿಸಿದೆ. ಮಾರ್ಚ್‌ನಿಂದ ಜೂನ್‌ವರೆಗಿನ ಅವಧಿಗೆ ಅನ್ವಯಿಸುವಂತೆ ಒಟ್ಟು 50,000 ಮೆಟ್ರಿಕ್ ಟನ್ ಹೆಚ್ಚುವರಿ ಡೀಸೆಲ್ ಒದಗಿಸುವಂತೆ ಬಾಂಗ್ಲಾದೇಶವು ಭಾರತಕ್ಕೆ ಅಧಿಕೃತವಾಗಿ ಮನವಿ ಮಾಡಿದೆ. ಮಾರ್ಚ್ 9ರಂದು ಬಾಂಗ್ಲಾದೇಶದ ಹಣಕಾಸು ಸಚಿವ ಅಮೀರ್ ಖಾಸ್ರು ಮಹಮೂದ್ ಚೌಧರಿ ಮತ್ತು ಭಾರತದ ಹೈಕಮಿಷನರ್ ಪ್ರಣಯ್ ವರ್ಮಾ ಅವರ ನಡುವೆ ನಡೆದ ಸಭೆಯಲ್ಲಿ ಈ ಮನವಿಯನ್ನು ಸಲ್ಲಿಸಲಾಗಿದೆ ಎಂದು ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ. ಭಾರತ ಮತ್ತು ಬಾಂಗ್ಲಾದೇಶದ ನಡುವೆ ಈಗಾಗಲೇ ಡೀಸೆಲ್ ಪೂರೈಕೆಯ ಒಪ್ಪಂದವಿದೆ. ಈ ಒಪ್ಪಂದದ ಭಾಗವಾಗಿ ಅಸ್ಸಾಂನ ನುಮಾಲಿಗಢ ಸಂಸ್ಕರಣಾಗಾರದಿಂದ ಪೈಪ್‌ಲೈನ್ ಮೂಲಕ ಈಗಾಗಲೇ 5,000 ಮೆಟ್ರಿಕ್ ಟನ್ ಡೀಸೆಲ್ ಅನ್ನು ಬಾಂಗ್ಲಾದೇಶಕ್ಕೆ ರವಾನಿಸಲಾಗಿದೆ.

ಏರ್ ಇಂಡಿಯಾ ಟಿಕೆಟ್ ದರ ಏರಿಕೆ

ದೆಹಲಿ: ಗಲ್ಫ್ ರಾಷ್ಟ್ರಗಳಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದಾಗಿ ವಿಮಾನಯಾನ ಟರ್ಬೈನ್ ಇಂಧನ ಬೆಲೆಗಳಲ್ಲಿ ತೀವ್ರ ಏರಿಕೆಯಾದ ಹಿನ್ನೆಲೆಯಲ್ಲಿ ಏರ್ ಇಂಡಿಯಾ ತನ್ನ ದೇಶೀಯ ಮತ್ತು ಅಂತಾರಾಷ್ಟ್ರೀಯ ನೆಟ್‌ವರ್ಕ್‌ನಲ್ಲಿ ಇಂಧನ ಹೆಚ್ಚುವರಿ ಶುಲ್ಕಗಳ ವಿಸ್ತರಣೆಯನ್ನು ಘೋಷಿಸಿದೆ. ಏರ್ ಇಂಡಿಯಾ ವಿಮಾನಯಾನ ನಿರ್ವಹಣಾ ವೆಚ್ಚದ ಸುಮಾರು ಶೇ. 40ರಷ್ಟಿದೆ. ಮಾರ್ಚ್ 12ರಿಂದ ಜಾರಿಗೆ ಬರುವ 1ನೇ ಹಂತದ ದೇಶೀಯ ಮತ್ತು ಪ್ರಾದೇಶಿಕ ಮಾರ್ಗಗಳಿಗೆ ಇದು ಅನ್ವಯಿಸುತ್ತದೆ. ಮಾರ್ಚ್ 12ರಿಂದ ದೇಶೀಯ ವಿಮಾನ ಟಿಕೆಟ್‌ಗಳಿಗೆ 399 ರು.ಗಳ ಇಂಧನ ಸರ್ಚಾರ್ಜ್ ಅನ್ನು ಸೇರಿಸಲಾಗುವುದು ಎಂದು ಏರ್ ಇಂಡಿಯಾ ಹೇಳಿಕೆಯಲ್ಲಿ ತಿಳಿಸಿದೆ. ಅಂತಾರಾಷ್ಟ್ರೀಯ ವಿಮಾನಗಳಲ್ಲಿನ ಪ್ರಯಾಣಿಕರು ಕೂಡ ಹೆಚ್ಚಿನ ಇಂಧನ ಸರ್ಚಾರ್ಜ್‌ಗಳನ್ನು ಎದುರಿಸಬೇಕಾಗುತ್ತದೆ ಎಂದು ವಿಮಾನಯಾನ ಸಂಸ್ಥೆಯು ದೃಢಪಡಿಸಿದೆ. ಇರಾನ್, ಇಸ್ರೇಲ್ ಮತ್ತು ಅಮೆರಿಕ ಒಳಗೊಂಡ ಸಂಘರ್ಷಕ್ಕೆ ಸಂಬಂಧಿಸಿದ ಜಾಗತಿಕ ಇಂಧನ ಮಾರುಕಟ್ಟೆಗಳಲ್ಲಿನ ಅಡೆತಡೆಗಳ ನಡುವೆ ವಿಶ್ವಾದ್ಯಂತ ವಿಮಾನಯಾನ ಸಂಸ್ಥೆಗಳು ಹೆಚ್ಚುತ್ತಿರುವ ಇಂಧನ ವೆಚ್ಚಗಳನ್ನು ಎದುರಿಸುತ್ತಿರುವುದರಿಂದ ಸರ್‌ಚಾರ್ಜ್ ಏರಿಕೆಯಾಗಿದೆ. ವಿಮಾನಯಾನ ಇಂಧನವು ಸಾಮಾನ್ಯವಾಗಿ ವಿಮಾನಯಾನ ಸಂಸ್ಥೆಗಳಿಗೆ ಅತಿ ದೊಡ್ಡ ನಿರ್ವಹಣಾ ವೆಚ್ಚಗಳಲ್ಲಿ ಒಂದಾಗಿದೆ. ಕಚ್ಚಾ ತೈಲ ಬೆಲೆಗಳು ಏರುತ್ತಿರುವುದು ಭಾರತದ ವಾಯುಯಾನ ವಲಯದ ಮೇಲೆ ವ್ಯಾಪಕ ಪರಿಣಾಮ ಬೀರಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ.

ಅಮೆರಿಕದವರಿಂದ ಯುದ್ಧಕ್ಕೆ ವಿರೋಧ

ವಾಷಿಂಗ್ಟನ್: ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ನಡೆಸಿ 11 ದಿನ ಕಳೆದಿದ್ದು, ಈ ಮಧ್ಯೆ ಇರಾನ್ ವಿರುದ್ಧದ ಯುದ್ಧಕ್ಕೆ ಅಮೆರಿಕನರೇ ವಿರೋಧ ವ್ಯಕ್ತಪಡಿಸಿದ್ದಾರೆ. ಅಮೆರಿಕದ ವಿಶ್ವವಿದ್ಯಾನಿಲಯವೊಂದು ನಡೆಸಿದ ಸಮೀಕ್ಷೆಯಲ್ಲಿ ಬಹುತೇಕ ಮಂದಿ ಯುದ್ಧ ಬೇಡ ಎಂದಿದ್ದಾರೆ. ಕ್ವಿನ್ನಿಪಿಯಾಕ್ ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸಮೀಕ್ಷೆಯಲ್ಲಿ ಭಾಗವಹಿಸಿದ ಬಹುತೇಕರು ಯುದ್ಧಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ವರದಿ ತಿಳಿಸಿದೆ. ಈ ಯುದ್ಧವು ಅಮೆರಿಕದಲ್ಲಿ ಪ್ರತೀಕಾರದ ಭಯೋತ್ಪಾದಕ ದಾಳಿಗೆ ಕಾರಣವಾಗಬಹುದು ಎಂದು ಬಹುತೇಕ ಮಂದಿ ಭಯಪಟ್ಟಿದ್ದಾರೆ. ಹೀಗಾಗಿ ಅವರು ಇರಾನಿನಲ್ಲಿ ಅಮೆರಿಕ ಸೈನ್ಯವು ಕಾರ್ಯಾಚರಣೆ ನಡೆಸುವುದನ್ನು ಇಷ್ಟಪಡುವುದಿಲ್ಲ. ಅದಾಗ್ಯೂ ಈ ಸಂಘರ್ಷ ತಕ್ಷಣ ಮುಗಿಯುವುದಿಲ್ಲ ಎಂದು ಸಮೀಕ್ಷೆ ತಿಳಿಸಿದೆ. ಸಮೀಕ್ಷೆಯಲ್ಲಿ ಪಾಲ್ಗೊಂಡ ಶೇಕಡಾ 53ರಷ್ಟು ಮಂದಿ ಇರಾನ್ ವಿರುದ್ಧದ ಸೈನಿಕ ಕಾರ್ಯಾಚರಣೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಕೇವಲ ಶೇಕಡಾ 40ರಷ್ಟು ಮಂದಿ ಮಾತ್ರ ಯುದ್ಧಕ್ಕೆ ಬೆಂಬಲ ಸೂಚಿಸಿದ್ದಾರೆ. ಶೇ.55ರಷ್ಟು ಮಂದಿ ಇರಾನ್ ಸೇನೆಯಿಂದ ಅಮೆರಿಕಕ್ಕೆ ಯಾವುದೇ ಬೆದರಿಕೆ ಇಲ್ಲ ಎಂದಿದ್ದರೆ, ಇದೆ ಎನ್ನುವುದಕ್ಕೆ ಶೇ. 39ರಷ್ಟು ಮತ ಬಿದ್ದಿದೆ. ಇರಾನ್ ವಿರುದ್ಧ ಮಿಲಿಟರಿ ಕ್ರಮಕ್ಕೆ ಪ್ರತಿಕ್ರಿಯೆಯಾಗಿ ಅಮೆರಿಕದ ನೆಲದಲ್ಲಿ ಭಯೋತ್ಪಾದಕ ದಾಳಿ ನಡೆಯುವ ಸಾಧ್ಯತೆ ಇದೆ ಎಂದು ಶೇಕಡಾ 77ರಷ್ಟು ಮಂದಿ ಆತಂಕ ವ್ಯಕ್ತಪಡಿಸಿದ್ದಾರೆ.

ಮಾಜಿ ಕೇಂದ್ರ ಸಚಿವ ಬಿರೇನ್ ಸಿಂಗ್ ನಿಧನ

ಗುವಾಹಟಿ: ಹಿರಿಯ ಕಾಂಗ್ರೆಸ್ ನಾಯಕ ಮತ್ತು ಮಾಜಿ ಕೇಂದ್ರ ಸಚಿವ ಬಿರೇನ್ ಸಿಂಗ್ ಎಂಗ್ಟಿ ಮಂಗಳವಾರ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 81 ವರ್ಷ ವಯಸ್ಸಾಗಿತ್ತು. ಎಂಗ್ಟಿ ಅವರನ್ನು ಚಿಕಿತ್ಸೆಗಾಗಿ ಗುವಾಹಟಿಗೆ ಕರೆತರಲಾಯಿತು. ಮಂಗಳವಾರ ಬೆಳಿಗ್ಗೆ ಅವರು ಕೊನೆಯುಸಿರೆಳೆದರು. ಮೃತರ ಪಾರ್ಥಿವ ಶರೀರವನ್ನು ದಿಪುವಿಗೆ ಕೊಂಡೊಯ್ಯಲಾಗಿದ್ದು, ಅಲ್ಲಿ ಅಂತಿಮ ಗೌರವ ಸಲ್ಲಿಸಿ ಬುಧವಾರ ಅಂತ್ಯಕ್ರಿಯೆ ನಡೆಸಲಾಗುವುದು. ದಿಪು ಕ್ಷೇತ್ರದಿಂದ ಐದು ಬಾರಿ ಲೋಕಸಭಾ ಸಂಸದರಾಗಿದ್ದ ಎಂಗ್ಟಿ, ಕೇಂದ್ರದ ರಾಜೀವ್ ಗಾಂಧಿ ಸರಕಾರದಲ್ಲಿ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. 1970ರ ದಶಕದಲ್ಲಿ ಲೋಕಸಭೆಯನ್ನು ಪ್ರವೇಶಿಸಿದ ನಂತರ, 2014ರಲ್ಲಿ ನಡೆದ ಕೊನೆಯ ಚುನಾವಣೆಯಲ್ಲಿ ಗೆದ್ದಿದ್ದರು. ಅವರು ಕರ್ಬಿ ಆಂಗ್ಲಾಂಗ್ ಸ್ವಾಯತ್ತ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.

ನಾಳೆ ವಿಶ್ವ ಕಿಡ್ನಿ ದಿನದ ಅಂಗವಾಗಿ ಆಸ್ಪತ್ರೆಯಿಂದ ಜಾಗೃತಿ ಜಾಥಾ | ವರ್ಷದಲ್ಲಿ 2,270 ಲಘು, 5,800 ಕಿರು ಶಸ್ತ್ರಚಿಕಿತ್ಸೆ

ನೆಫ್ರೋ ಯುರಾಲಜಿ ಸಂಸ್ಥೆಯಲ್ಲಿ ಸರ್ಜರಿ ಕ್ರಾಂತಿ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಪ್ರತಿಷ್ಠಿತ ಆಸ್ಪತ್ರೆಯಾದ ನೆಫ್ರೋ ಯುರಾಲಜಿ ಸಂಸ್ಥೆಯಲ್ಲಿ ಒಂದೇ ವರ್ಷದಲ್ಲಿ 2,270 ಲಘು ಶಸ್ತ್ರಚಿಕಿತ್ಸೆ ಹಾಗೂ 5,800 ಕಿರು ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ.

ನಾಳೆ ವಿಶ್ವ ಕಿಡ್ನಿ ದಿನ ಆಚರಣೆ ವಿಶ್ವದಾದ್ಯಂತ ಆಚರಿಸಲಾಗುತ್ತದೆ. ವಿಕ್ಟೋ ರಿಯಾ ಆಸ್ಪತ್ರೆಯ ಆವರಣದಲ್ಲಿರುವ ನೆಫ್ರೋ ಯುರಾಲಜಿ ಸಂಸ್ಥೆಯು ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಉನ್ನತ ದರ್ಜೆಯ ಚಿಕಿತ್ಸೆ ನೀಡಲಾಗು ತ್ತಿದೆ. ನಾಳೆ ವಿಶ್ವ ಕಿಡ್ನಿ ದಿನದ ಅಂಗವಾಗಿ ಆಸ್ಪತ್ರೆಯಿಂದ ಜಾಗೃತಿ ಜಾಥಾ ಹಮ್ಮಿಕೊಂಡಿದೆ.

ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡುವ ಮೂಲಕ ಹಲವು ಹೆಗ್ಗಳಿಕೆಗೆ ನೆಫ್ರೋ ಯುರಾಲಜಿ ಸಂಸ್ಥೆ ಪಾತ್ರವಾಗಿದೆ. ರೋಗಿಗಳಿಗೆ ಮೊದಲು ಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತದೆ. ರಾಜ್ಯ ಸರಕಾರ, ವೈದ್ಯಕೀಯ ಶಿಕ್ಷಣ ಇಲಾಖೆ ಸಹಕಾರದಿಂದ ಆಧುನಿಕ ವೈದ್ಯಕೀಯ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗುತ್ತಿದೆ.

-ಡಾ.ಎಂ.ಶಿವಲಿಂಗಯ್ಯ, ನೆಫ್ರೋ ಯುರಾಲಜಿ ಸಂಸ್ಥೆ ನಿರ್ದೇಶಕ

ಮನುಷ್ಯನ ದೇಹದಲ್ಲಿ ಕಂಡು ಬರುವ ಬಹು ಮುಖ್ಯ ಅಂಗಾಂಗಗಳಲ್ಲಿ ಮೂತ್ರಪಿಂಡಗಳ ಅಥವಾ ಕಿಡ್ನಿಗಳು ಕೂಡ ಸೇರಿರುತ್ತವೆ. ದೇಹದ ಒಳಗಿರುವ ಒಂದೊಂದು ಅಂಗಾಂಗಕ್ಕೆ ಒಂದೊಂದು ಬಗೆಯ ಕಾರ್ಯ ನಿರ್ವಹಣೆಯ ಜವಾಬ್ದಾರಿ ಇರುತ್ತದೆ. ಅದೇ ರೀತಿ ಕಿಡ್ನಿಗಳಿಗೆ ನಮ್ಮ ದೇಹದಲ್ಲಿ ಕಂಡು ಬರುವ ವಿಷ ಕಾರಿ ಅಂಶಗಳನ್ನು ಮೂತ್ರವಿಸರ್ಜನೆ ಮೂಲಕ ಹೊರ ಹಾಕುವ ಕೆಲಸ ಇರುತ್ತದೆ. ಹೀಗಾಗಿ ಕಿಡ್ನಿಗಳು ಸರಿಯಾಗಿ ಕಾರ್ಯನಿರ್ವಹಿಸಬೇಕಾದರೆ ನಮ್ಮ ಆಹಾರ ಪದ್ಧತಿ ಬಹಳ ಮುಖ್ಯವಾಗು ತ್ತದೆ. ನಾವು ಆಹಾರದಲ್ಲಿ ಸೇವನೆ ಮಾಡುವ ವಿವಿಧ ಬಗೆಯ ಪೋಷ ಕಾಂಶಗಳು, ಖನಿಜಾಂಶಗಳು ಹಾಗೂ ವಿಟಮಿನ್ ಅಂಶಗಳು, ಕಿಡ್ನಿಗಳ ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

- 389 ಕಿಡ್ನಿ ಕಸಿ ಯಶಸ್ವಿಗೊಳಿಸಿದ ಆಸ್ಪತ್ರೆ
- ನೆಫ್ರೋ ಯುರಾಲಜಿ ಸಂಸ್ಥೆ ನಿರ್ದೇಶಕ ಡಾ.ಶಿವಲಿಂಗಯ್ಯ ಅವರ ನೇತೃತ್ವದಲ್ಲಿ ಪ್ರಗತಿ
- ಬಡರೋಗಿಗಳಿಗೆ ಆಸರೆಯಾದ ನೆಫ್ರೋ ಯುರಾಲಜಿ ಆಸ್ಪತ್ರೆ
- ರೋಗಿಯ ಸುರಕ್ಷತೆ, ಆರೈಕೆಯ ಗುಣ ಮಟ್ಟದಲ್ಲಿ ಪ್ರಗತಿ
- ಕಿಡ್ನಿ ದಿನದ ಅಂಗವಾಗಿ ರಾಜ್ಯಾದ್ಯಂತ ಜಾಗೃತಿ ಅಭಿಯಾನ



ವಿಶ್ವ ಕಿಡ್ನಿ ದಿನದ ಮಹತ್ವ: ಜಾಗತಿಕ ವಾಗಿ, ವಿಶ್ವದಾದ್ಯಂತ ಕಿಡ್ನಿ ಸಂಬಂಧಿ ರೋಗಗಳ ಬಗ್ಗೆ ಅರಿವು ಜಾಗೃತಿ ಮೂಡಿ ಸುವ ಸದುದ್ದೇಶ ಹೊಂದಿದೆ. ಪ್ರಪಂಚ ದಲ್ಲಿರುವ ಜನರಲ್ಲಿ ಕಿಡ್ನಿಗಳ ಸುರಕ್ಷತೆ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಮೂಡಿ ಸುವ ಕೆಲಸ ಮಾಡಲಾಗುತ್ತದೆ. ಈ ದಿನ ದಂದು ಮಾಹಿತಿ ನೀಡುವ ಮುಖೇನ ಮೂತ್ರಪಿಂಡದ ಕಾಯಿಲೆಯ ಬರುವ ಸಾಧ್ಯತೆ ಕಡಿಮೆ ಮಾಡುವ ಗುರಿ ಇಟ್ಟು ಕೊಂಡಿದೆ. 2006ರಲ್ಲಿ ಇಂಟರ್‌ನ್ಯಾಷನಲ್ ಸೊಸೈಟಿ ಆಫ್ ನೆಫ್ರೋಲಾಜಿ ಮತ್ತು ಇಂಟರ್‌ನ್ಯಾಷನಲ್ ಫೆಡರೇ ಷನ್ ಆಫ್ ಕಿಡ್ನಿ ಫೌಂಡೇಶನ್ ಜಂಟಿ ಯಾಗಿ ಈ ವಿಶ್ವ ಕಿಡ್ನಿ ದಿನ ಆಚರಿಸಲು ಮುಂದಾಯಿತು. ಕಿಡ್ನಿ ಆರೋಗ್ಯ ಹಾಗೂ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಜನರಿಗೆ ಮಾಹಿತಿ ನೀಡುವ ಉದ್ದೇಶ ಹೊಂದಿತ್ತು. 2006ರಲ್ಲಿ 66 ದೇಶಗಳು ಒಟ್ಟಿಗೆ ಕಿಡ್ನಿ ದಿನವನ್ನು ಆಚರಿಸಿತು. ಇದೀಗ 88 ದೇಶಗಳು ವಿಶ್ವ ಕಿಡ್ನಿ ದಿನ ಆಚರಿಸುವ ಮೂಲಕ ಕಿಡ್ನಿ ಆರೋಗ್ಯದ ಕುರಿತು ಜಾಗೃತಿ ಮೂಡಿಸುತ್ತಿದೆ.

ವರ್ಷ	ಹೊರ ರೋಗಿಗಳು	ಒಳ ರೋಗಿಗಳು	ಲಘು ಶಸ್ತ್ರಚಿಕಿತ್ಸೆ	ಕಿರು ಶಸ್ತ್ರಚಿಕಿತ್ಸೆ	ಸಾವು
2021	59872	6937	2700	4395	394
2022	91470	7773	3187	5710	314
2023	108054	7589	3184	7282	298
2024	108503	7373	2776	6849	275
2025	106101	6345	2270	5800	208
2026(ಫೆ.)	18695	1057	385	841	27
ಒಟ್ಟು	492695	37074	14502	30877	1516

ಎನ್‌ಎಬಿಎಚ್ ಮಾನ್ಯತೆ ಪಡೆದ 2ನೇ ಸರಕಾರಿ ಆಸ್ಪತ್ರೆ

ಮೂತ್ರಶಾಸ್ತ್ರ ವಿಭಾಗದಲ್ಲಿ ಅತ್ಯಾಧುನಿಕ ಸೇವೆ ಒದಗಿಸುತ್ತಿರುವ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ಸರಕಾರದ ಸೂಪರ್ ಸ್ಪೆಷಾಲಿಟಿ ನೆಫ್ರೋ ಯುರಾಲಜಿ ಶಾಸ್ತ್ರ ಸಂಸ್ಥೆ ರಾಷ್ಟ್ರೀಯ ಮಾನ್ಯತಾ ಮಂಡಳಿಯ (ಎನ್‌ಎಬಿಎಚ್) ಮಾನ್ಯತೆಯನ್ನು ಪಡೆಯುವ ಮೂಲಕ ಮತ್ತೊಂದು ಮೈಲುಗಲ್ಲು ಸಾಧಿಸಿದೆ. ಜಯದೇವ ನಂತರ ನೆಫ್ರೋ ಯುರಾಲಜಿ ಆಸ್ಪತ್ರೆ ಎಚ್‌ಎಬಿಎಚ್ ಮಾನ್ಯತೆ ಹೊಂದಿದೆ.

ರೋಗಿಗಳ ಸುರಕ್ಷತೆ ಮತ್ತು ಆರೈಕೆಯಲ್ಲಿ ಜಾಗತಿಕ ಮಾನದಂಡಗಳನ್ನು ಅನುಸರಿಸಿದ್ದಕ್ಕಾಗಿ ಆರೋಗ್ಯ ಆರೈಕೆ ಗುಣಮಟ್ಟ ಸೊಸೈಟಿ ಸೇರಿದಂತೆ ಹಲವು ಅಂತರರಾಷ್ಟ್ರೀಯ ಸಂಸ್ಥೆಗಳು ನೀಡುವ ಗುಣಮಟ್ಟದ ಸರ್ಟಿಫಿಕೇಟ್ ಪಡೆದುಕೊಂಡಿದೆ. ರೋಗಿಯ ಸುರಕ್ಷತೆ, ಆರೈಕೆಯ ಗುಣಮಟ್ಟ, ಸೋಂಕು ನಿಯಂತ್ರಣ, ಮೂಲಸೌಕರ್ಯ ಮತ್ತು ಸಿಬ್ಬಂದಿ ಅರ್ಹತೆ ಸೇರಿದಂತೆ ಹಲವಾರು ಕಠಿಣ ಮಾನದಂಡಗಳನ್ನು ಅನುಸರಿಸಿದ ಆಧಾರದ ಮೇಲೆ ಮಾನ್ಯತೆ ನೀಡಲಾಗುತ್ತದೆ. ನಮ್ಮ ಆಸ್ಪತ್ರೆಗೆ ಈ ಮಾನ್ಯತೆ ದೊರೆತಿರುವುದು ಹೆಮ್ಮೆಯ ಸಾಧನೆ ಎಂದು ನೆಫ್ರೋ ಯುರಾಲಜಿ ಸಂಸ್ಥೆ ನಿರ್ದೇಶಕ ಡಾ.ಎಂ.ಶಿವಲಿಂಗಯ್ಯ ಅವರು ತಿಳಿಸಿದ್ದಾರೆ.

ಚರ್ಚೆ ಆರಂಭಿಸಿದ ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಸಚಿವರಾದ ಅಮಿತ್ ಶಾ, ಕಿರಣ್ ರಿಜಿಜು ತಕ್ಕ ಪ್ರತ್ಯುತ್ತರ

ಸದನ ಗೌರವ ರಕ್ಷಣೆಗೆ ಅವಿಶ್ವಾಸ ನಿರ್ಣಯ

ದೆಹಲಿ: ಸಂವಿಧಾನದ ಉಳಿವು, ಸದನದ ಗೌರವವನ್ನು ರಕ್ಷಿಸಲೆಂದೇ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಬೇಕಾಗಿ ಬಂದಿತು ಎಂದು ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಲೋಕಸಭೆಯಲ್ಲಿ ಮಂಗಳವಾರ ಹೇಳಿದರು.

ಅವಿಶ್ವಾಸ ನಿರ್ಣಯದ ಮೇಲೆ 10 ಗಂಟೆಗಳ ಚರ್ಚೆಗೆ ಅವಕಾಶ ನೀಡಿದ ಬಳಿಕ ಮಾತು ಆರಂಭಿಸಿದ ಗೊಗೊಯ್, ಸ್ಪೀಕರ್ ಪೀಠದಲ್ಲಿ ನಿಷ್ಪಕ್ಷಪಾತಿಯಾಗಿ ಇರಬೇಕಾದ ಓಂ ಬಿರ್ಲಾ ಅವರು ಪಕ್ಷಪಾತದಿಂದ ವರ್ತಿಸುತ್ತಿದ್ದಾರೆ. ಫೆಬ್ರವರಿಯಲ್ಲಿ ರಾಷ್ಟ್ರಪತಿ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ವೇಳೆ ಪ್ರತಿಪಕ್ಷಗಳ ಸದಸ್ಯರಿಗೆ ಮಾತನಾಡಲು ಅವಕಾಶವನ್ನೇ ಕೊಡಲಿಲ್ಲ. ಪ್ರತಿಪಕ್ಷ ನಾಯಕ ರಾಹುಲ್ ಮಾತನಾಡಲು ಬಯಸಿ ದಾಗ, ಸ್ಪೀಕರ್, ಸಭಾಧ್ಯಕ್ಷರ ಸಮಿತಿ ಸದಸ್ಯರು, ಖಜಾನೆ ಪೀಠಗಳ ಹಿರಿಯ ಸದಸ್ಯರೆಲ್ಲರೂ ಸೇರಿ 20 ಬಾರಿ ಅಡ್ಡಿಪಡಿಸಿದರು ಎಂದರು.

ಮಾಜಿ ಸೇನಾ ಮುಖ್ಯಸ್ಥ ಎಂಎಂ ನರವಾಣೆ ಅವರ ಅಪ್ರಕಟಿತ ಪುಸ್ತಕದ ಬಗ್ಗೆ ಮಾತನಾಡಲು ರಾಹುಲ್ ಗಾಂಧಿ ಬಯಸಿದ್ದರು ಎಂದರು. ಸ್ಪೀಕರ್ ಸ್ಥಾನದಲ್ಲಿದ್ದ ಜಗದಾಂಬಿಕಾ ಪಾಲ್ ಅವರು, ಅವಿಶ್ವಾಸ ನಿರ್ಣಯದ ಬಗೆಗಷ್ಟೇ ಚರ್ಚೆ ಮಾಡಿ ಎಂದು ಗೊಗೊಯ್ ಅವರಿಗೆ ಸೂಚಿಸಿದರು. ಈ ವೇಳೆ ಮಧ್ಯಪ್ರವೇಶಿಸಿದ ಸಂಸದೀಯ ವ್ಯವಹಾರ ಗಳ ಸಚಿವ ಕಿರಣ್ ರಿಜಿಜು, ಇದು ಸ್ಪೀಕರ್ ಕುರಿತ ಚರ್ಚೆ. ಪ್ರತಿಪಕ್ಷಗಳು ಇತರೆ ವಿಷಯಗಳ ಬಗ್ಗೆ ಮಾತನಾಡಿದರೆ ಅದಕ್ಕೆ ನಾವು ಸರಿಯಾದ ಉತ್ತರ ಕೊಡುತ್ತೇವೆ. ನೀವು ಅಡ್ಡಿಪಡಿಸಬೇಡಿ ಎಂದರು. ಸಚಿವ ರಿಜಿಜು ಅತಿ ಹೆಚ್ಚು ಬಾರಿ ಚರ್ಚೆಗೆ ಅಡ್ಡಿಪಡಿಸಿದ್ದಾರೆ ಎಂಬುದೇನೋ ನಿಜ. ಆದರೆ ಈಗ ಇರು ವಂತಹ ಪ್ರತಿಪಕ್ಷವನ್ನು ಹಿಂದೆಂದೂ ನೋಡಿರಲಿಲ್ಲ ಎಂದು ಅಮಿತ್ ಶಾ ವ್ಯಂಗ್ಯವಾಡಿದರು.

ಇಂಡಿಯಾ ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ಅಸೋಸಿಯೇಶನ್ ವತಿಯಿಂದ ಜೀವಮಾನ ಸಾಧನೆಗಾಗಿ ನೀಡಲಾಗುವ ಐಇಎಸ್‌ಎ ಸಾರಾಭಾಯಿ ಪ್ರಶಸ್ತಿಯನ್ನು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಅಧ್ಯಕ್ಷರಾದ ಬಿ.ವಿ. ನಾಯ್ಡು ಅವರಿಗೆ ನೀಡಿ ಗೌರವಿಸಲಾಯಿತು. ಈ ವೇಳೆ ಐಇಎಸ್‌ಎ ಅಧ್ಯಕ್ಷ ಅಶೋಕ್ ಚಂದಕ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಲವಂತವಾಗಿ ದೇವೇಗೌಡ್ರು ಹಣಕಾಸು ಖಾತೆ ಕೊಟ್ರು: ಸಿಎಂ

ವಿಧಾನಸಭೆ: ದೇವೇಗೌಡ ಅವರು ಹಣಕಾಸು ಇಲಾಖೆಯನ್ನು ಬಲವಂತವಾಗಿ ನನಗೆ ವಹಿಸಿ ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ವಿರೋಧ ಪಕ್ಷದ ನಾಯಕ ಆರ್, ಅಶೋಕ, 100 ಕುರಿಗಳನ್ನು ಲೆಕ್ಕ ಹಾಕಲು ಬಾರದ ಸಿದ್ದರಾಮಯ್ಯ ಅವರು ರಾಜ್ಯ ಬಜೆಟ್ ಅಲ್ಲಿ ಹೇಗೆ ಮಂಡಿಸುತ್ತಾರೆ ಎಂದು ಆರಂಭದ ದಿನಗಳಲ್ಲಿ ಟೀಕೆ ಮಾಡಿದನ್ನು ಸಿದ್ದರಾಮಯ್ಯ ಅವರೇ ಹೇಳಿ ಕೊಂಡಿದ್ದಾರೆ. ದೇವೇಗೌಡ ಅವರು ಅವಕಾಶ ಕೊಟ್ಟಿದ್ದರಿಂದಾಗಿ ಇಂದು ಸಿದ್ದರಾಮಯ್ಯ 17 ಬಜೆಟ್‌ಗಳನ್ನು ಮಂಡಿಸಲು ಸಾಧ್ಯವಾಗಿದೆ ಎಂದರು. ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ ಸಂಪುಟದಲ್ಲಿ ಖಾತೆಗಳ ಹಂಚಿಕೆ ಕುರಿತು ಆರ್.ಎಲ್. ಜಾಲಪ್ಪ ಅವರ ಮೆಡಿಕಲ್ ಕಾಲೇಜಿನಲ್ಲಿ ಚರ್ಚೆಯಾಗುತ್ತಿತ್ತು. ದೇವೇಗೌಡರು, ಎಂ.ಪಿ.ಪ್ರಕಾಶ್, ಪಿ.ಜಿ.ಆರ್.ಸಿಂಧ್ಯಾ, ಆರ್.ಎಲ್. ಜಾಲಪ್ಪ ಮತ್ತು ನಾನು ಹಾಜರಿದ್ದೇವು.

ನಾನು ಕಂದಾಯ ಇಲಾಖೆಯನ್ನು ಕೇಳಿದ್ದೆ. ಆರ್.ಎಲ್. ಜಾಲಪ್ಪ ಆ ಖಾತೆ ನನಗೆ ಬೇಕು ಎಂದು ಪಟ್ಟು ಹಿಡಿದರು. ಆಗ ದೇವೇಗೌಡರು ನನಗೆ ಹಣಕಾಸು ಖಾತೆ ತೆಗೆದುಕೊಳ್ಳುವಂತೆ ಸಲಹೆ ನೀಡಿದರು. ನಾನು ಆರ್ಥಿಕ ತಜ್ಞ ನಲ್ಲ ಅರ್ಥಶಾಸ್ತ್ರವನ್ನು ಓದಿಲ್ಲ. ಹಣಕಾಸು ಖಾತೆ ಬೇಡ ಎಂದು ಹೇಳಿದ್ದೆ. ಅದಕ್ಕೆ ಒಪ್ಪದ ದೇವೇಗೌಡರು ನನಗೆ ನಂಬಿಕಸ್ತರೇ ಬೇಕು. ನೀನೇ ಹಣಕಾಸು ಖಾತೆ ನೋಡಿಕೋ ಎಂದು ಬಲವಂತವಾಗಿ ನನಗೆ ನೀಡಿದರು ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ 49 ಯುವಬರಹಗಾರರಿಗೆ ನೆನಪಿನ ಕಾಣಿಕೆ ನೀಡಲಾಯಿತು. ಈ ವೇಳೆ ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ್, ಸಾಹಿತಿ ಸತೀಶ್ ಕುಲಕರ್ಣಿ, ನಾಡೋಜ ಡಾ. ಹಂಪ ನಾಗರಾಜಯ್ಯ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರಶ್ನೆ, ಪ್ರತಿಭಟನೆಗಳೇ ಲೇಖಕನ ಮೂಲ ದ್ರವ್ಯ

ಬೆಂಗಳೂರು: ಮನುಷ್ಯನಲ್ಲಿ ಮೂಡುವ ಪ್ರಶ್ನೆಗಳು ಹಾಗೂ ಸಮಾಜದ ಅನ್ಯಾಯಗಳ ವಿರುದ್ಧ ಪ್ರತಿಭಟಿಸುವ ಮನೋಧರ್ಮವೇ ಒಬ್ಬ ಲೇಖಕನ ಸೃಜನಶೀಲತೆಗೆ ಮೂಲದ್ರವ್ಯವಾಗಿದ್ದು, ಅದರಿಂದಲೇ ಉತ್ತಮ ಸಾಹಿತ್ಯ ಮೂಡಿಬರುತ್ತದೆ ಎಂದು ಲೇಖಕ ನಾಗತಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ನಗರದ ಕನ್ನಡ ಪುಸ್ತಕ ಪ್ರಾಧಿಕಾರದ ನಯನ ರಂಗಮಂದಿರದಲ್ಲಿ ಆಯೋಜಿಸಿದ್ದ 49 ಯುವಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಇಂದಿನ ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಹೊಸಬರಹಗಾರರು ಬರೆದದ್ದನ್ನೆಲ್ಲ ಮೊದಲು ಜಾಲತಾಣಗಳಲ್ಲಿ ಪ್ರಕಟಿಸುವ ಪ್ರವೃತ್ತಿ ಹೆಚ್ಚಾಗಿದೆ. ಆದರೆ ಒಬ್ಬ ಲೇಖಕನ ಮೊದಲ ಬರಹ ಪುಸ್ತಕ ರೂಪದಲ್ಲಿ ಹೊರಬಂದಾಗ ಸಿಗುವ ಸಂತೋಷ ಮತ್ತು ತೃಪ್ತಿ ವಿಶೇಷವಾಗಿರುತ್ತದೆ. ಆದ್ದರಿಂದ ಯುವ ಪೀಳಿಗೆ ಪುಸ್ತಕ ಬರೆಯುವ ಹಾಗೂ ಪುಸ್ತಕ ಓದುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದರು.

ಈ ವೇಳೆ ಸಾಹಿತಿ ಸತೀಶ್ ಕುಲಕರ್ಣಿ ಮಾತನಾಡಿ, ಎಲ್ಲಾ ಮೊದಲುಗಳು ಪ್ರತಿಯೊಬ್ಬರ ಜೀವನದಲ್ಲಿಯೂ ಸ್ಮರಣೀಯವಾಗಿ ಉಳಿಯುತ್ತದೆ. ಹಾಗಾಗಿ 49 ಬರಹಗಾರರ ಬದುಕಿನಲ್ಲೂ ಅವರ ಈ ಮೊದಲ ಕೃತಿಗಳು ಹಾಗೂ ಪ್ರಾಧಿಕಾರದ ಈ ಕಾರ್ಯಕ್ರಮ ಅವಿಸ್ಮರಣೀಯವಾಗಿರುತ್ತದೆ. ಹೊಸ ಲೇಖಕರು ಸಾಮಾಜಿಕ ಮಾಧ್ಯಮ ತಾಣಗಳಿಂದ ಹೊರಬಂದು ಪುಸ್ತಕ ಸಂಸ್ಕೃತಿಯ ಕಡೆಗೆ ಮನಸ್ಸು ಮಾಡಬೇಕು ಎಂದರು. ಈ ವೇಳೆ ನಾಡೋಜ ಡಾ. ಹಂಪ ನಾಗರಾಜಯ್ಯ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು

ಕುಡಿವ ನೀರಿನ ಅಭಾವ ಉಂಟಾಗದಂತೆ ಕ್ರಮ ಅಗತ್ಯ: ಸಚಿವ ಪ್ರಿಯಾಂಕ್ ಖರ್ಗೆ

ಬೆಂಗಳೂರು: ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಅಗತ್ಯ ವ್ಯವಸ್ಥೆ ಮುಖ್ಯ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ಎದುರಾಗಲಿರುವ ಕುಡಿಯುವ ನೀರಿನ ಅಭಾವವನ್ನು ಎದುರಿಸಲು ಮೊದಲ ಆದ್ಯತೆಯಾಗಿ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಮುಖಾಂತರ ಪಡೆಯಲಾಗುವುದಲ್ಲದೆ, ಅಗತ್ಯವಿರುವ ಸ್ಥಳದಲ್ಲಿ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದುರು.

ಮಾ. 2026ರಲ್ಲಿ ಫ್ಲಷಿಂಗ್ ಹಾಗೂ ಆಳಗೊಳಿಸುವ ಮೂಲಕ 1053 ಕೊಳವೆ ಬಾವಿಗಳನ್ನು ದುರಸ್ತಿಗೊಳಿಸುವುದು ಹಾಗೂ ತುರ್ತು ಸಂದರ್ಭಗಳಲ್ಲಿ ಹೊಸ ಕೊಳವೆ ಬಾವಿಗಳನ್ನು ಕೊರೆಯುವುದು ಅವಶ್ಯಕವೆಂದು ನಿರೀಕ್ಷಿಸಲಾಗಿದ್ದು, ಆದ್ಯತೆಯ ಮೇರೆಗೆ ಕ್ರಮವಹಿಸಲು ಎಲ್ಲಾ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ. 2026ನೇ ಸಾಲಿನ ಬೇಸಿಗೆಯಲ್ಲಿ ರಾಜ್ಯದ ಎಲ್ಲಾ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿಗೆ ತೊಂದರೆ ಉಂಟಾಗದಂತೆ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಅವಶ್ಯವಿರುವ ಮೊತ್ತವನ್ನು ಕೇಂದ್ರ ಹಾಗೂ ರಾಜ್ಯಗಳ ಬರ ಪರಿಹಾರ ನಿಧಿ ಹಾಗೂ ಇಲಾಖೆಯ ಟಾಸ್ಕ್‌ಫೋರ್ಸ್ ಅಡಿ ಸಂಯೋಜಿತಗೊಳಿಸಿ ಬಳಸಿಕೊಂಡು ಸಮರ್ಪಕವಾಗಿ ಕುಡಿಯುವ ನೀರನ್ನು ಒದಗಿಸಲು ಗ್ರಾಪಂ, ತಾಪಂಗಳು ಹಾಗೂ ಜಿಲ್ಲಾಡಳಿತದ ಸಮನ್ವಯದೊಂದಿಗೆ ಕ್ರಮ ಕೈಗೊಳ್ಳಲಿವೆ ಎಂದರು.

ಶುದ್ಧ ನೀರು ಸರಬರಾಜು ಮಾಡುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ಹಾಗೂ ಗ್ರಾಮ ಮಟ್ಟದಲ್ಲಿ ಪ್ರಾಥಮಿಕ ಹಂತವಾಗಿ ಎಲ್ಲಾ ಕುಡಿಯುವ ನೀರಿನ ಮೂಲಗಳ ಮಾದರಿಗಳನ್ನು, ಪ್ರತಿ ಗ್ರಾಮದಲ್ಲಿ ಕನಿಷ್ಠ 3 ನಳ ನೀರು ಸಂಪರ್ಕಗಳ ನೀರಿನ ಗುಣಮಟ್ಟದ ಪರೀಕ್ಷೆಗಳನ್ನು ಕೂಡಲೇ ಕೈಗೊಂಡು ಮಾಹಿತಿಗಳನ್ನು ದಾಖಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.

-ಪ್ರಿಯಾಂಕ್ ಖರ್ಗೆ, ಸಚಿವ

183 ಗ್ರಾಮಗಳಲ್ಲಿ ನೀರಿನ ಸಮಸ್ಯೆ

ರಾಜ್ಯದಲ್ಲಿ ಈಗಾಗಲೆ 21 ಜಿಲ್ಲೆಗಳ 144 ತಾಲ್ಲೂಕುಗಳಲ್ಲಿನ 183 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಇವುಗಳ ಪೈಕಿ 31 ಗ್ರಾಮಗಳಿಗೆ 96 ಟ್ಯಾಂಕರ್‌ಗಳ ಮುಖಾಂತರ ಹಾಗೂ 152 ಗ್ರಾಮಗಳಿಗೆ 154 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಕುಡಿಯುವ ನೀರನ್ನು ಒದಗಿಸಲು ಕ್ರಮವಹಿಸಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಕಡಿಮೆ ಮೌಲ್ಯದ ಪ್ಲಾಸ್ಟಿಕ್ ಬಳಸಿ ಡಾಂಬರೀಕರಣ ಮಾಡಿ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಡಿಮೆ ಮೌಲ್ಯಯುತ ಪ್ಲಾಸ್ಟಿಕ್‌ನ್ನು ರಸ್ತೆ ಡಾಂಬರೀಕರಣಕ್ಕೆ ಬಳಸಿಕೊಳ್ಳಲು ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು. ಸ್ವಚ್ಛ ಸರ್ವೇಕ್ಷಣಾ 2025-26 ರ ಅಂಗವಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಅಂಜನಾಪುರ ವಾರ್ಡ್ ವ್ಯಾಪ್ತಿಯ ಪೌರಕಾರ್ಮಿಕರ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿದ ಮುಖ್ಯ ಆಯುಕ್ತರು ಪೌರಕಾರ್ಮಿಕರೊಂದಿಗೆ ಚಹಾ ಸಂವಾದ ನಡೆಸಿದ ಬಳಿಕ ಮಾತನಾಡಿ, ಜಿಬಿಎ ವ್ಯಾಪ್ತಿಯಲ್ಲಿ ಈಗಾಗಲೇ ನಿತ್ಯ 520 ಮೆಟ್ರಿಕ್ ಟನ್ ಕಡಿಮೆ ಮೌಲ್ಯಯುತ ಪ್ಲಾಸ್ಟಿಕ್ (ಆರ್.ಡಿ.ಎಫ್) ಸಂಗ್ರಹಿಸಲಾಗುತ್ತಿದ್ದು, ಅದನ್ನು ಸಿಮೆಂಟ್ ತಯಾರಿಕಾ ಘಟಕಗಳಿಗೆ ಕಳುಹಿಸಿ ಅದರಿಂದ ಇ.ಪಿ.ಆರ್ ಕ್ರೆಡಿಟ್ ಪಡೆಯಲಾಗುತ್ತಿದೆ. ಇದೇ ಮಾದರಿಯಲ್ಲಿ ನಾಗರಿಕರಲ್ಲಿ ಮತ್ತಷ್ಟು ಜಾಗೃತಿ ಮೂಡಿಸಿ, ಮೂಲದಲ್ಲಿಯೇ ತ್ಯಾಜ್ಯವನ್ನು ವಿಂಗಡಿಸಿ ನೀಡುವ ಮೂಲಕ ಕಡಿಮೆ ಮೌಲ್ಯಯುತ ಪ್ಲಾಸ್ಟಿಕ್ ಉತ್ಪತ್ತಿ ಪ್ರಮಾಣ ಹೆಚ್ಚಿಸಿ, ಡಾಂಬರೀಕರಣ ಕಾರ್ಯಗಳಲ್ಲಿ ಬಳಸಿಕೊಳ್ಳಲು ಮುಂದಾಗಬೇಕು ಎಂದು ಸೂಚನೆ ನೀಡಿದರು.

ಬಂದೂಕು ಪರವಾನಗಿ ನವೀಕರಣಕ್ಕೆ ಆಗ್ರಹ

ವಿಧಾನಸಭೆ: ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಬಂದೂಕು ಪರವಾನಗಿ ನವೀಕರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ವಿಧಾನಸಭೆಯಲ್ಲಿ ಒಕ್ಕೊರಲ ಆಗ್ರಹ ಮಾಡಿದರು.

ಕಾಂಗ್ರೆಸ್ಸಿನ ಸದಸ್ಯ ಅಶೋಕ್ ರೈ ಪ್ರಶ್ನೆ ಕೇಳಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದೂಕುಗಳ ಪರವಾನಿಗೆ ನವೀಕರಣಕ್ಕೆ ಪೊಲೀಸ್ ಅಧಿಕಾರಿಗಳು ತಕರಾರು ತೆಗೆಯುತ್ತಿದ್ದಾರೆ ಕಾಡುಪ್ರಾಣಿಗಳು ಬೆಳೆನಾಶ ಮಾಡಿ, ಅದಕ್ಕೆ ಅರಣ್ಯ ಅಧಿಕಾರಿಗಳು ಪರಿಹಾರ ನೀಡಿದ್ದರೆ ಮಾತ್ರ ಅಂತಹ ಪ್ರಕರಣಗಳನ್ನು ಬಂದೂಕು ಪರವಾನಗಿ ನವೀಕರಣಕ್ಕೆ ಪರಿಗಣಿಸುವುದಾಗಿ ಹೇಳುತ್ತಿದ್ದಾರೆ. ಇದು ಸರಿಯಲ್ಲ ಮಂಗಗಳು ಕೃತಕ ಬಂದೂಕಿಗೆ ಎದುರುತ್ತಿಲ್ಲ . ಕಾಡು ಹಂದಿ ಬೆಳೆ ನಾಶ ಮಾಡುತ್ತಿವೆ. ಆನೆ ದಾಳಿಯಿಂದ ಮೂರು ಜನ ಸಾವನ್ನಪ್ಪಿದ್ದಾರೆ. ಬಂದೂಕುಗಳನ್ನು ಠೇವಣಿ ಮಾಡಲು ಪೊಲೀಸ್ ಠಾಣೆಗಳಲ್ಲಿ ಜಾಗ ಇಲ್ಲ. ಖಾಸಗಿ ಅಂಗಡಿಯಲ್ಲಿ ಇರಿಸಬೇಕಿದೆ. ಅಲ್ಲಿಯೂ ಜಾಗ ಸಾಲದೆ ಪರದಾಟವಾಗುತ್ತಿದೆ. ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಇದಕ್ಕಾಗಿ ಪ್ರತ್ಯೇಕ ಸ್ಥಳ ನಿಗದಿ ಮಾಡಿ ಎಂದು ಒತ್ತಾಯಿಸಿದರು. ಇದಕ್ಕೂ ಮುನ್ನ ಮತ್ತೊಂದು ಪ್ರಶ್ನೆಯಲ್ಲಿ ತೀರ್ಥಹಳ್ಳಿ ಕ್ಷೇತ್ರದ ಬಿಜೆಪಿ ಶಾಸಕ ಅರಗ ಜ್ಞಾನೇಂದ್ರ, ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚಾಗಿವೆ. ಈ ಮೊದಲು ದಾರಿ ತಿಳಿಯದೆ ನಮ್ಮ ಭಾಗದಲ್ಲಿ ಕಳ್ಳತನಕ್ಕೆ ಬರಲು ಹೆದರುತ್ತಿದ್ದರು. ಇತ್ತೀಚೆಗೆ ಬಂದೂಕುಗಳ ಪರವಾನಿಗೆಗಳ ನವೀಕರಣಕ್ಕೆ ಕಡಿವಾಣ ಹಾಕಲಾಗಿದೆ . ಇದರಿಂದಾಗಿ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದೆ ಎಂದು ಹೇಳಿದರು.

1.8 ಕೆಜಿ ಬಂಗಾರ, ಡೈಮಂಡ್ ಕದ್ದ ಕಳ್ಳನ ಸೆರೆ

ಬೆಂಗಳೂರು: ಖತರ್ನಾಕ್ ಪ್ಲ್ಯಾನ್ ಮಾಡಿ ಮನೆಯೊಂದರಿಂದ ಬರೋಬ್ಬರಿ ಮೂರು ಕೋಟಿ ಬೆಲೆ ಬಾಳುವ ಚಿನ್ನಾಭರಣ ದೋಚಿದ್ದ ಆರೋಪಿಯನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ. ರಾಜಸ್ಥಾನ ಮೂಲದ ವೇಲಾರಾಮ್ ಆರೋಪಿಯಾಗಿದ್ದು, ಈತ ನಿರ್ಮಾಣ ಹಂತದ ಕಟ್ಟಡಗಳಲ್ಲಿ ಟೈಲ್ಸ್ ಕಾಮಗಾರಿ ಮಡುತ್ತಿದ್ದ ಎನ್ನಲಾಗಿದೆ. ಬರೋಬ್ಬರಿ 6 ತಿಂಗಳು ಸ್ಕೆಚ್ ಹಾಕಿ ಆರೋಪಿ ಮನೆ ದೋಚಿರುವ ವಿಚಾರವೂ ತನಿಖೆ ವೇಳೆ ಬಯಲಾಗಿದೆ.

ಯಲಹಂಕ ಪೊಲೀಸ್ ಠಾಣಾ ವ್ಯಾಪ್ತಿಯ ಜ್ಯುಡಿಷಿಯಲ್ ಲೇಔಟ್‌ನಲ್ಲಿನ ಮನೆ ಮಾಲೀಕರು ಅಮೆರಿಕಾದಲ್ಲಿ ಸೆಟಲ್ ಆಗಿದ್ದರು. ಆರು ತಿಂಗಳಿಗೊಮ್ಮೆ ಅಥವಾ ವರ್ಷಕ್ಕೊಮ್ಮೆ ಮಾತ್ರ ಬೆಂಗಳೂರಿನಲ್ಲಿರುವ ಈ ಮನೆಗೆ ದಂಪತಿ ಬಂದು ಹೋಗುತ್ತಿದ್ದರು. ಈ ನಡುವೆ ನಿರ್ಮಾಣ ಹಂತದ ಕಟ್ಟಡದಲ್ಲಿ ಟೈಲ್ಸ್ ಕೆಲಸ ಮಾಡುತ್ತಿದ್ದ ವೇಲಾರಾಮ್ ಕಣ್ಣು ಈ ಮನೆಯ ಮೇಲೆ ಬಿದ್ದಿದೆ. ಸುಮಾರು ಇಪ್ಪತ್ತು ಮಂದಿ ರಾಜಸ್ಥಾನ ಮೂಲದ ಯುವಕರಿಂದ ಗ್ರಾನೈಟ್, ಟೈಲ್ಸ್ ಅಳವಡಿಕೆ ಕೆಲಸ ನಡೆಯುತ್ತಿದ್ದರೂ ಇವರ್ಯಾರಿಗೂ ಅನುಮಾನ ಬಾರದಂತೆ ಪಕ್ಕದ ಮನೆಯಲ್ಲಿ ಯಾರೂ ಇಲ್ಲ ಎಂಬುದನ್ನು ಆರೋಪಿ ಗಮನಿಸಿದ್ದ. ಮೂರು ಬಾರಿ ಮನೆಯ ಬಳಿ ಹೋಗಿ ಸ್ಲೈಡ್ ಡೋರ್ ಓಪನ್ ಮಾಡಿ ಹೇಗೆ ಕನ್ನ ಹಾಕಬಹುದು ಎಂಬ ಪ್ಲ್ಯಾನ್ ಮಾಡಿದ್ದ.

ತನ್ನ ಯೋಜನೆಯಂತೆ ಜೊತೆಯಲ್ಲಿರುವ ಸ್ನೇಹಿತರಿಗೂ ಹೇಳದೆ ಮನೆಯ ಸ್ಲೈಡ್ ಡೋರ್ ಮೂಲಕ ಒಳಗೆ ಎಂಟ್ರಿ ಕೊಟ್ಟಿದ್ದ ವೇಲಾರಾಮ್, ಲಾಕರ್ ಓಪನ್ ಮಾಡಿ ಮೂರು ಕೋಟಿ ಬೆಲೆ ಬಾಳುವ 1 ಕೆಜಿ 800 ಗ್ರಾಂ ಚಿನ್ನಾಭರಣ, ಡೈಮಂಡ್ ಹಾಗೂ ನಗದು ಕಳ್ಳತನ ಮಾಡಿದ್ದ. ನಿರೀಕ್ಷೆಗಿಂತ ಹೆಚ್ಚು ಪ್ರಮಾಣದಲ್ಲಿ ಚಿನ್ನಾಭರಣ ಸಿಕ್ಕ ಖುಷಿಗೆ ಯಾರಿಗೂ ಹೇಳದೆ ಸೀದಾ ರಾಜಸ್ಥಾನಕ್ಕೆ ತೆರಳಿ ಮನೆಯಲ್ಲಿ ಚಿನ್ನಾಭರಣ ಬಚ್ಚಿಟ್ಟಿದ್ದ. ಈ ನಡುವೆ ಮನೆಯ ಸಿಸಿಟಿವಿಯನ್ನ ಅಮೆರಿಕಾದಲ್ಲಿದ್ದ ದಂಪತಿ ಮೊಬೈಲ್ ಮೂಲಕ ಪರಿಶೀಲನೆ ನಡೆಸಿದಾಗ ಕಳ್ಳತನ ನಡೆದಿರೋ ವಿಷಯ ಗೊತ್ತಾಗಿದೆ. ಘಟನೆ ಸಂಬಂಧ ಸಂಬಂಧಿಕರ ಮೂಲಕ ಪೊಲೀಸರಿಗೆ ದೂರು ನೀಡಿದ್ದು, ಸಿಸಿಟಿವಿ ಕ್ಯಾಮರಾ ದೃಶ್ಯಾವಳಿ ಆಧರಿಸಿ ಆರೋಪಿ ವೇಲಾರಾಮ್‌ನ ಪೊಲೀಸರಿಗ ಬಂಧಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಇಂಡಿಗೋ ಸಿಇಒ ಎಲ್ಬರ್ಸ್ ರಾಜೀನಾಮೆ

ದೆಹಲಿ: ಡಿಸೆಂಬರ್‌ನಲ್ಲಿ ವಿಮಾನಯಾನ ಸಂಸ್ಥೆ ಎದುರಿಸಿದ ವಿಮಾನ ಬಿಕ್ಕಟ್ಟಿನ ನಂತರ ಇಂಡಿಗೋ ಸಿಇಒ ಪೀಟರ್ ಎಲ್ಬರ್ಸ್ ಮಂಗಳವಾರ ರಾಜೀನಾಮೆ ನೀಡಿದ್ದಾರೆ. ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಭಾಟಿಯಾ ಅವರು ಮಧ್ಯಂತರ ಆಧಾರದ ಮೇಲೆ ವಿಮಾನಯಾನ ಸಂಸ್ಥೆಯ ನಿರ್ವಹಣೆಯನ್ನು ವಹಿಸಿಕೊಂಡಿದ್ದಾರೆ.

'ವೈಯಕ್ತಿಕ ಕಾರಣಗಳಿಂದಾಗಿ, ಮಂಗಳವಾರದಿಂದ ಜಾರಿಗೆ ಬರುವಂತೆ ಇಂಡಿಗೋ ಸಿಇಒ ಹುದ್ದೆಗೆ ನನ್ನ ರಾಜೀನಾಮೆಯನ್ನು ಸಲ್ಲಿಸುತ್ತಿದ್ದೇನೆ. ನೋಟಿಸ್ ಅವಧಿಯನ್ನು ಮನ್ನಾ ಮಾಡಬೇಕೆಂದು ನಾನು ವಿನಂತಿಸುತ್ತೇನೆ' ಎಂದು ಎಲ್ಬರ್ಸ್, ವಿಮಾನಯಾನ ಸಂಸ್ಥೆಯ ಸಹ-ಸಂಸ್ಥಾಪಕರೂ ಆಗಿರುವ ಭಾಟಿಯಾ ಅವರಿಗೆ ಬರೆದಿರುವ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ. 2022ರ ಸೆಪ್ಟೆಂಬರ್‌ನಿಂದ ಕಳೆದ ವರ್ಷದ ವರೆಗೆ ಇಂಡಿಗೋ ಸಿಇಒ ಆಗಿ ಸೇವೆ ಸಲ್ಲಿಸುವುದಕ್ಕೆ ಹೆಮ್ಮೆ ಎನಿಸಿದೆ, ಶ್ರೇಷ್ಠ ಇಂಡಿಗೋ ಕುಟುಂಬದ ಭಾಗವಾಗಿದ್ದು ಖುಷಿ ಎನಿಸಿದೆ ಎಂದು ಎಲ್ಬರ್ಸ್ ತಿಳಿಸಿದ್ದಾರೆ.

ಟಿಎಂಸಿಯ ಮೊಯಿತ್ರಾ ವಿವಾದ ಹೇಳಿಕೆ

ಕೋಲ್ಕತಾ: ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸದವರು ಬಂಗಾಳಿಗಳೇ ಅಲ್ಲ, ಅವರಿಗೆ ನಮ್ಮ ರಾಜ್ಯದಲ್ಲಿ ವಾಸಿಸುವ ಯಾವುದೇ ಹಕ್ಕು ಇಲ್ಲ ಎಂದು ಟಿಎಂ ಸಂಸದೆ ಮಹುವಾ ಮೋಯಿತ್ರಾ ಹೇಳಿದ್ದಾರೆ. ಕೋಲ್ಕತ್ತಾದ ಧರ್ಮತಾಲಾದಲ್ಲಿ ಎಸ್ಐಆರ್ ವಿಷಯದ ಕುರಿತು ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ಮೊಯಿತ್ರಾ ಈ ಹೇಳಿಕೆ ನೀಡಿದ್ದು ಅವರ ಭಾಷಣದ ವಿಡಿಯೋ ಇದೀಗ ವ್ಯಾಪಕ ವೈರಲ್ ಆಗುತ್ತಿದೆ.

ಆ ವೇಳೆ ಮಾತನಾಡಿದ ಮಹುವಾ, 'ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬಂಗಾಳದ ಜನರ ಪರವಾಗಿ ರಾಜಕೀಯ ಹೋರಾಟ ನಡೆಸುತ್ತಿದ್ದಾರೆ. ಟಿಎಂಸಿಯೊಂದಿಗೆ ಈಗ ಇಲ್ಲದಿರುವವರು ಬಂಗಾಳಿಗಳಲ್ಲ, ಅವರಿಗೆ ಬಂಗಾಳದಲ್ಲಿ ಉಳಿಯುವ ಹಕ್ಕಿಲ್ಲ, ಏಕೆಂದರೆ ಮಮತಾ ದೀದಿ ಬಂಗಾಳದ ಜನರಿಗಾಗಿ ಈ ಯುದ್ಧ ಮಾಡುತ್ತಿದ್ದಾರೆ' ಎಂದರು.

ದುಬೈ ಭಾರತೀಯರಿಗೆ ಉದ್ಯಮಿಯಿಂದ ನೆರವು

ದುಬೈ: ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆ ಹಿನ್ನೆಲೆ ದುಬೈನಲ್ಲಿ ಸಿಲುಕಿರುವ ಭಾರತೀಯರ ನೆರವಿಗೆ ಉದ್ಯಮಿಯೊಬ್ಬರು ನಿಂತಿದ್ದಾರೆ. ಅಲ್ಲಿನ ಅಲ್ ಮಿಜಾನ್ ಗ್ರೂಪ್‌ನ ಅಧ್ಯಕ್ಷ ಯೋಗೇಶ್ ದೋಷಿ, ದುಬೈನಲ್ಲಿ ಸಿಲುಕಿಕೊಂಡಿದ್ದ ಭಾರತೀಯರಿಗೆ ತಮ್ಮ 64 ಅಪಾರ್ಟ್‌ಮೆಂಟ್‌ಗಳ ಸಂಪೂರ್ಣ ವಸತಿ ಕಟ್ಟಡವನ್ನು ತೆರೆದಿದ್ದಾರೆ. ಭಾರತೀಯರಿಗೆ ಊಟ, ವಸತಿ ಸೌಕರ್ಯ ಸೇರಿದಂತೆ ಮೂಲಭೂತ ಸೌಲಭ್ಯಗಳೊಂದಿಗೆ ಉಚಿತವಾಗಿ ಒದಗಿಸಿದ್ದಾರೆ.

ಯುಎಇಯ ಇಂಡಿಯನ್ ಪೀಪಲ್ ಫೋರಮ್ ಮತ್ತು ದುಬೈನಲ್ಲಿರುವ ಕಾನ್ಸುಲೇಟ್ ಜನರಲ್ ಆಫ್ ಇಂಡಿಯಾದ ಸಮನ್ವಯದೊಂದಿಗೆ ಈ ಸೌಲಭ್ಯ ಒದಗಿಸಲಾಗಿದೆ. ಮಕ್ಕಳಿರುವ ಕುಟುಂಬಗಳು ಸೇರಿದಂತೆ 125ಕ್ಕೂ ಹೆಚ್ಚು ಭಾರತೀಯರಿಗೆ ಕಷ್ಟದ ಸಮಯದಲ್ಲಿ ತಾತ್ಕಾಲಿಕ ಆಶ್ರಯ ಪಡೆಯಲು ಸಹಾಯ ಮಾಡಲಾಗಿದೆ ಎಂದು ಯೋಗೇಶ್ ತಿಳಿಸಿದ್ದಾರೆ. ದುಬೈನಿಂದ ಕೆಲವು ಕಿಲೋಮೀಟರ್ ದೂರದಲ್ಲಿರುವ ಅಜ್ಮಾನ್‌ನಲ್ಲಿರುವ ಆಶ್ರಯ ಮನೆಯಲ್ಲಿ ಹಲವಾರು ಭಾರತೀಯ ಪ್ರಯಾಣಿಕರು ಇನೊಂದು ತಾಣದಲ್ಲೂ ಆಶ್ರಯ ಪಡೆದಿದ್ದಾರೆ.

ಐವರು ಪಾಕಿಸ್ತಾನಿ ಪ್ರಜೆಗಳ ಬಂಧನ

ದೆಹಲಿ: ಕುವೈತ್, ಬಹ್ರೇನ್, ಕತಾರ್, ದುಬೈ ಸೇರಿದಂತೆ ಹಲವು ಗಲ್ಫ್ ದೇಶಗಳಲ್ಲಿರುವ ಅಮೆರಿಕದ ವಾಯುನೆಲೆಗಳ ಮೇಲೆ ಇರಾನ್ ದಾಳಿ ನಡೆಸಿತ್ತು. ಇರಾನ್ ನಡೆಸಿದ ದಾಳಿಯ ವಿಡಿಯೋಗಳನ್ನು ಸಾಮಾಜಿಕ ಮಾಧ್ಯಮ ದಲ್ಲಿ ಹರಡಿದ್ದಕ್ಕಾಗಿ ಐವರು ಪಾಕಿಸ್ತಾನಿ ಪ್ರಜೆಗಳನ್ನು ಬಹ್ರೇನ್‌ನಲ್ಲಿ ಬಂಧಿಸಲಾಗಿದೆ. ಇವರ ಜತೆ ಓರ್ವ ಬಾಂಗ್ಲಾದೇಶಿ ಪ್ರಜೆಯನ್ನು ಕೂಡ ಬಂಧಿಸಲಾಗಿದೆ. ಅಂತಹ ವಿಡಿಯೋಗಳು ತಪ್ಪು ಮಾಹಿತಿ ಮತ್ತು ಭಯವನ್ನು ಹರಡಬಹುದು ಎಂದು ಬಹ್ರೇನ್ ಅಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ. ಇರಾನ್‌ನ ದಾಳಿಗಳಿಗೆ ಸಂಬಂಧಿಸಿದ ವಿಡಿಯೋಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಡಿದ್ದಕ್ಕಾಗಿ ಬಹ್ರೇನ್‌ನಲ್ಲಿ ಆರು ಮಂದಿಯನ್ನು ಬಂಧಿಸಲಾಗಿದೆ. ಅವರಲ್ಲಿ ಐವರು ಪಾಕಿಸ್ತಾನಿಗಳು ಮತ್ತು ಒಬ್ಬ ಬಾಂಗ್ಲಾದೇಶಿ ಪ್ರಜೆ. ಈ ವ್ಯಕ್ತಿಗಳು ಇರಾನಿನ ದಾಳಿಯ ವಿಡಿಯೋಗಳನ್ನು ಚಿತ್ರೀಕರಿಸಿ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. ಈ ವಿಡಿಯೊಗಳು ಇರಾನಿನ ದಾಳಿಯನ್ನು ಉತ್ಪ್ರೇಕ್ಷೆ ಮಾಡುತ್ತಿವೆ. ಈ ವಿಡಿಯೊಗಳು ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿತ್ತು ಎಂದು ಸಚಿವಾಲಯ ಹೇಳಿದೆ. ಎಲ್ಲಾ ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಕಲಬುರಗಿ ಟೆನಿಸ್ ಕಿರೀಟ ಗೆದ್ದ ಯುವ ಆಟಗಾರ್ತಿ ವೈಷ್ಣವಿ ಅಡ್ಕರ್ ಜತೆ ವಿಶ್ವವಾಣಿ ಚಿಟ್ ಚಾಟ್

ಅಂಕಿತಾ ವಿರುದ್ಧದ ಗೆಲುವು ಮೈಲಿಗಲ್ಲು

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಇಲ್ಲಿನ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಐಟಿಎಫ್ ಡಬ್ಲ್ಯೂ-35 ಟೆನಿಸ್ ಟೂರ್ನಿಯಲ್ಲಿ ಸಿಂಗಲ್ಸ್ ಮತ್ತು ಡಬಲ್ಸ್ ಎರಡರಲ್ಲೂ ಪ್ರಶಸ್ತಿ ಗೆದ್ದು ಇತಿಹಾಸ ಬರೆದ ಮಹಾರಾಷ್ಟ್ರದ ಯುವ ಆಟಗಾರ್ತಿ ವೈಷ್ಣವಿ ಅಡ್ಕರ್, ತಮ್ಮ ಗೆಲುವಿನ ಹಾದಿ ಮತ್ತು ಭವಿಷ್ಯದ ಕನಸುಗಳ ಬಗ್ಗೆ 'ವಿಶ್ವವಾಣಿ'ಯೊಂದಿಗೆ ಮಾತುಕತೆ ನಡೆಸಿದ್ದಾರೆ. ಅದರ ವಿವರ ಇಲ್ಲಿವೆ.

ವಿಶ್ವವಾಣಿ: ಮೊಣಕಾಲು ಶಸ್ತ್ರಚಿಕಿತ್ಸೆಯಂತಹ ಕಠಿಣ ಹಂತ ದಾಟಿ ಬಂದು ಈ ಸಾಧನೆ ಮಾಡಿದ್ದು ಹೇಗೆ?

ವೈಷ್ಣವಿ: ನಾಲ್ಕು ವರ್ಷಗಳ ಹಿಂದೆ ಮೊಣಕಾಲಿನ ಶಸ್ತ್ರಚಿಕಿತ್ಸೆಯಾದಾಗ ಎಂಟು ತಿಂಗಳು ಅಂಗಳದಿಂದ ದೂರವಿದ್ದೆ. ಅದು ಮಾನಸಿಕವಾಗಿ ದೊಡ್ಡ ಸವಾಲಾಗಿತ್ತು, ಆದರೆ ಆ ಕಠಿಣ ಸಮಯವೇ ನನ್ನನ್ನು ಮತ್ತಷ್ಟು ಬಲಿಷ್ಠಗೊಳಿಸಿತು. ನಿರಂತರ ತರಬೇತಿ ಮತ್ತು ಫಿಟ್ನೆಸ್ ಕಡೆಗೆ ಗಮನ ಹರಿಸಿದ್ದರಿಂದ ಜ್ಯೂನಿಯರ್ ಹಂತದಿಂದ ಮತ್ತೆ ಯಶಸ್ಸಿನ ಹಾದಿಗೆ ಮರಳಲು ಸಾಧ್ಯವಾಯಿತು.

ವಿಶ್ವವಾಣಿ: ಭಾರತದ ಸ್ಟಾರ್ ಆಟಗಾರ್ತಿ ಅಂಕಿತಾ ರೈನಾ ವಿರುದ್ಧ ಗೆದ್ದ ಅನುಭವ ಹೇಗಿತ್ತು?

ವೈಷ್ಣವಿ: ಅಂಕಿತಾ ಅವರು ನಮ್ಮ ದೇಶದ ಶ್ರೇಷ್ಠ ಆಟಗಾರ್ತಿ. ಅವರನ್ನು ನೋಡಿ ಬೆಳೆದ ನಮಗೆ ಅವರೇ ನಿಜಕ್ಕೂ ಸ್ಫೂರ್ತಿ. ಅವರ ವಿರುದ್ಧ ಆಡುವಾಗ ನಾನು ಫಲಿತಾಂಶದ ಬಗ್ಗೆ ಯೋಚಿಸಲಿಲ್ಲ. ಕೇವಲ ಪ್ರತಿಯೊಂದು ಪಾಯಿಂಟ್ ಮೇಲೆ ಗಮನ ಹರಿಸಿದೆ. ಅವರು ತುಂಬಾ ಬಲಿಷ್ಟ ಎದುರಾಳಿ, ಆದರೆ ನನ್ನ ಆಟದ ಮೇಲಿನ ನಂಬಿಕೆ ನನಗೆ ಗೆಲುವನ್ನು ತಂದುಕೊಟ್ಟಿತು.

ವಿಶ್ವವಾಣಿ: ಕಲಬುರಗಿಯ ಬಿಸಿಲಿನ ನಡುವೆಯೂ ಸಿಂಗಲ್ಸ್, ಡಬಲ್ಸ್ ಎರಡರಲ್ಲೂ ಆಡುವುದು ಸುಲಭವಾಗಿತ್ತೇ?

ವೈಷ್ಣವಿ: ನಿಜಕ್ಕೂ ಇಲ್ಲಿನ ಬಿಸಿಲು ಒಂದು ದೊಡ್ಡ ಸವಾಲಾಗಿತ್ತು. ಅದರಲ್ಲೂ ಒಂದೇ ದಿನ ಎರಡು ಪಂದ್ಯಗಳನ್ನು ಆಡುವುದು ದೈಹಿಕವಾಗಿ ದಣಿವಿನ ಕೆಲಸ, ಆದರೆ ಪಂದ್ಯಗಳು ಮೂರನೇ ಸೆಟ್‌ಗೆ ಹೋಗದಂತೆ ಬೇಗ ಮುಗಿಸಲು ಪ್ರಯತ್ನಿಸಿದೆ. ವಾತಾವರಣಕ್ಕೆ ತಕ್ಕಂತೆ ತಂತ್ರ ಬದಲಾಯಿಸಿದ್ದು ಎರಡೂ ಕಿರೀಟ ಗೆಲ್ಲಲು ಸಹಕಾರಿಯಾಯಿತು.

> ಸದ್ಯ ಬಿಲ್ಲಿ ಜಿನ್ ಕಿಂಗ್ ಕಪ್ ಸೇರಿದಂತೆ ಹಲವು ಅಂತಾರಾಷ್ಟ್ರೀಯ ಟೂರ್ನಿಗಳ ಮೇಲೆ ಕಣ್ಣಿಟ್ಟಿದ್ದೇನೆ, ನಿರಂತರ ಫಿಟ್ನೆಸ್ ಕಾಯ್ದುಕೊಂಡು ಭಾರತದ ಕೀರ್ತಿ ಹೆಚ್ಚಿಸುವುದೇ ನನ್ನ ಪ್ರಮುಖ ಗುರಿ.
>
> - ವೈಷ್ಣವಿ ಅಡ್ಕರ್, ಸಿಂಗಲ್ಸ್-ಡಬಲ್ಸ್ ವಿನ್ನರ್.

ವಿಶ್ವವಾಣಿ: ನಿಮ್ಮ ಮುಂದಿನ ಗುರಿ ಮತ್ತು ಸಿದ್ಧತೆಗಳೇನು?

ವೈಷ್ಣವಿ: ಸದ್ಯ ಬಿಲ್ಲಿ ಜಿನ್ ಕಿಂಗ್ ಕಪ್ ಸೇರಿದಂತೆ ಹಲವು ಪ್ರಮುಖ ಅಂತಾರಾಷ್ಟ್ರೀಯ ಟೂರ್ನಿಗಳತ್ತ ಗಮನಹರಿಸಿದ್ದೇನೆ. ಭಾರತಕ್ಕೆ ಕೀರ್ತಿ ತರುವ ಆಟಗಾರ್ತಿಯಾಗಬೇಕೆಂಬುದೇ ನನ್ನ ಏಕೈಕ ಗುರಿ, ಅದಕ್ಕಾಗಿ ಈಗಿನಿಂದಲೇ ಕಠಿಣ ತರಬೇತಿ ಆರಂಭಿಸಿದ್ದೇನೆ.

ವಿಶ್ವವಾಣಿ: ಕಲಬುರಗಿಯ ಪ್ರೇಕ್ಷಕರ ಬಗ್ಗೆ ಏನು ಹೇಳುತ್ತೀರಿ?

ವೈಷ್ಣವಿ: ಇಲ್ಲಿನ ಜನರ ಬೆಂಬಲ ಅದ್ಭುತವಾಗಿತ್ತು, ಹಾಗಾಗಿ ನನಗೆ ಇದು ಹೋಮ್ ಗ್ರೌಂಡ್ ಎಂಬ ಭಾವನೆ ಮೂಡಿಸಿತು. ಇಲ್ಲಿ ಮತ್ತೆ ಟೂರ್ನಿ ಆಯೋಜಿಸಿದರೆ ಖಂಡಿತವಾಗಿಯೂ ನಾನು ಭಾಗವಹಿಸಲು ಉತ್ಸುಕಳಾಗಿದ್ದೇನೆ.

ಅಮಿತಾಬ್ ಕಾರ್ಯಕ್ರಮ ಮೂಲಕ ಸೈನಿ ಪರಿಚಿತ

ಕೆಬಿಸಿಯಲ್ಲಿ ಪಾಲ್ಗೊಂಡಿದ್ದ ಬಾಲಕ ಐಪಿಎಸ್ ಅಧಿಕಾರಿ

ದೆಹಲಿ: ನಟ ಅಮಿತಾಭ್ ಬಚ್ಚನ್ ನಡೆಸಿಕೊಡುವ ಕೌನ್ ಬನೇಗಾ ಕರೋಡ್‌ಪತಿ ರಿಯಾಲಿಟಿ ಶೋ ಜ್ಞಾನ ಮತ್ತು ಮನರಂಜನೆಯಲ್ಲಿ ಹೆಚ್ಚು ಖ್ಯಾತಿ ಗಳಿಸಿದೆ. ಕೇವಲ 14 ವರ್ಷದವನಿದ್ದಾಗ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಾಲಕನೊಬ್ಬ ಈಗ ದೇಶದ ಐಪಿಎಸ್ ಅಧಿಕಾರಿಯಾಗಿದ್ದಾರೆ.

2001ರಲ್ಲಿ ರವಿ ಮೋಹನ್ ಸೈನಿ ಎನ್ನುವ ಬಾಲಕ ಕೇವಲ 14 ವರ್ಷ ವಯಸ್ಸಿನವನಾಗಿದ್ದಾಗ ಕೆಬಿಸಿ ಜೂನಿಯರ್ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿದ್ದರು. ಜೂನಿಯರ್ ಶೋನಲ್ಲಿ ಅವರು 1 ಕೋಟಿ ರುಪಾಯಿ ಗೆದ್ದು ದೇಶದ ಗಮನ ಸೆಳೆದಿದ್ದರು. ಈಗ ಅವರು ಐಪಿಎಸ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ ಸಮಯದಲ್ಲಿ, ಅವರು 10ನೇ ತರಗತಿ ವಿದ್ಯಾರ್ಥಿಯಾಗಿದ್ದರು. ಎಲ್ಲ 15 ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿ 1 ಕೋಟಿ ರುಪಾಯಿ ಬಹುಮಾನ ಗೆದ್ದಿದ್ದರು. ಶಾಲಾ ಶಿಕ್ಷಣದ ಬಳಿಕ ಸೈನಿ ವೈದ್ಯಕೀಯ ಶಿಕ್ಷಣವನ್ನು ಮುಂದುವರಿಸಲು ನಿರ್ಧರಿಸಿ ವೈದ್ಯಕೀಯ ಪ್ರವೇಶ ಪರೀಕ್ಷೆಗಳಿಗೆ ತಯಾರಿ ನಡೆಸಿ ಜೈಪುರದ ಮಹಾತ್ಮ ಗಾಂಧಿ ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆದರು.

2004: ಕೆಬಿಸಿಯಲ್ಲಿ ಸ್ಪರ್ಧಿ ಆಗಿ ಭಾಗಿ
2021: ಪೋರ್‌ಬಂದರ್ ಪೊಲೀಸಾಧಿಕಾರಿ

ಅವರು ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಬರೆಯಲು ಕೂಡ ತಯಾರಿ ನಡೆಸಿದರು. ಅನೇಕ ಆಕಾಂಕ್ಷಿಗಳಂತೆ ತಮ್ಮ ಮೊದಲ ಪ್ರಯತ್ನದಲ್ಲಿ ಸಾಕಷ್ಟು ಸವಾಲು ಎದುರಿಸಿದರು. 2012ರಲ್ಲಿ ಮೊದಲ ಪ್ರಯತ್ನದಲ್ಲಿ ವಿಫಲರಾದ ಬಳಿಕ 2014ರಲ್ಲಿ ಮತ್ತೊಮ್ಮೆ ನಾಗರಿಕ ಸೇವಾ ಪರೀಕ್ಷೆಗೆ ಹಾಜರಾಗಿ 461ನೇ ಅಖಿಲ ಭಾರತ ಶ್ರೇಣಿಯನ್ನು ಪಡೆದು ಐಪಿಎಸ್ ಅಧಿಕಾರಿಯಾದರು. ತಮ್ಮ ಪರಿಶ್ರಮದಿಂದಾಗಿ ರವಿ ಮೋಹನ್ ಸೈನಿ ಗುಜರಾತ್ ಕೆಡರ್‌ನ ಐಪಿಎಸ್ ಅಧಿಕಾರಿಯಾಗಿ ನೇಮಕಗೊಂಡರು. 2021ರಲ್ಲಿ ಪೋರ್‌ಬಂದರ್‌ನಲ್ಲಿ ಪೊಲೀಸ್ ವರಿಷ್ಠಾಧಿಕಾರಿಯಾಗಿ ನೇಮಕಗೊಂಡಾಗ ಅವರ ಸಾಧನೆ ಮತ್ತಷ್ಟು ಗಮನ ಸೆಳೆಯಿತು.

ಲಕ್ಷಾಂತರ ಟನ್ ವಿದ್ಯುತ್ ಉತ್ಪಾದಿಸಬಲ್ಲ ಒಂದು ತುಂಡು ಯುರೇನಿಯಂ | ಭಾರತ-ಕೆನಡಾ ನಡುವೆ ಮಹತ್ವದ ಸಹಕಾರ

ಯುರೇನಿಯಂ ಒಪ್ಪಂದ: ಭಾರತಕ್ಕೆ ಲಾಭ

ದೆಹಲಿ: ಇತ್ತೀಚೆಗಷ್ಟೇ ಭಾರತ ಮತ್ತು ಕೆನಡಾ, ಯುರೇನಿಯಂ ಪೂರೈಕೆಯಲ್ಲಿ ಪರಸ್ಪರ ಸಹಕಾರದ ಕುರಿತು ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದವು. ಪ್ರಧಾನಿ ಮೋದಿ ಮತ್ತು ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ನಡುವಿನ ಮಾತುಕತೆಯ ನಂತರ ಶೀಘ್ರದಲ್ಲೇ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವನ್ನು ಅಂತಿಮಗೊಳಿಸಲೂ ನಿರ್ಧರಿಸಲಾಯಿತು. 2030ರ ಹೊತ್ತಿಗೆ ಉಭಯ ರಾಷ್ಟ್ರಗಳ ನಡುವಿನ ವ್ಯಾಪಾರವನ್ನು 50 ಶತಕೋಟಿ ಡಾಲರ್‌ಗೆ ಹೆಚ್ಚಿಸುವ ಬಗ್ಗೆಯೂ ಚರ್ಚಿಸಲಾಯಿತು.

ಮೋದಿ-ಕಾರ್ನಿ ಮಾತುಕತೆಯ ನಂತರ ಎರಡೂ ದೇಶಗಳು ಹಲವಾರು ಒಪ್ಪಂದಗಳಿಗೆ ಸಹಿ ಹಾಕಿದವು. ಅವುಗಳಲ್ಲಿ ನಿರ್ಣಾಯಕ ಖನಿಜ ವಲಯದಲ್ಲಿನ ಸಹಕಾರವೂ ಸೇರಿದೆ. ಈ ಒಪ್ಪಂದದ ಬಳಿಕ ಯುರೇನಿಯಂ ಬಗ್ಗೆ ಚರ್ಚೆಗಳು ಹುಟ್ಟಿಕೊಂಡಿವೆ.

ಎಷ್ಟು ಉಪಯುಕ್ತ: ನೈಸರ್ಗಿಕವಾಗಿ ಕಂಡುಬರುವ ಯುರೇನಿಯಂ ನೇರ ಬಳಕೆಗೆ ಹೆಚ್ಚು ಉಪಯುಕ್ತವಲ್ಲ, ಏಕೆಂದರೆ ಇದು ಹೆಚ್ಚಾಗಿ ಯು-238 ಐಸೊಟೋಪ್ ಅನ್ನು ಒಳಗೊಂಡಿರುತ್ತದೆ. ಇದು ನೈಸರ್ಗಿಕ ಯುರೇನಿಯಂನ 0.7%ರಷ್ಟು ಮಾತ್ರ ಇರುತ್ತದೆ. ಅದಕ್ಕಾಗಿಯೇ ಸಂಸ್ಕರಣೆಯಿಲ್ಲದೆ ಇದನ್ನು ತ್ಯಾಜ್ಯ ಎಂದು ಪರಿಗಣಿಸಲಾಗುತ್ತದೆ, ಏಕೆಂದರೆ ಇದನ್ನು ನೇರವಾಗಿ ಪರಮಾಣು ಇಂಧನವಾಗಿ ಅಥವಾ ಇತರ ಮುಂದುವರಿದ ಪರಮಾಣು ತಂತ್ರಜ್ಞಾನಗಳಲ್ಲಿ ಬಳಸಲಾಗುವುದಿಲ್ಲ.

ಯುರೇನಿಯಂ ಅನ್ನು ಉಪಯುಕ್ತವಾಗಿಸುವ ಪ್ರಕ್ರಿಯೆಯನ್ನು ಪುಷ್ಟೀಕರಣ ಎಂದು ಕರೆಯಲಾಗುತ್ತದೆ. ಇದು ವಿಶೇಷ ಯಂತ್ರೋಪಕರಣಗಳನ್ನ ಬಳಸಿಕೊಂಡು ಯು-235 ಪ್ರಮಾಣ ಹೆಚ್ಚಿಸುವುದಾಗಿರುತ್ತದೆ. ಇದರ ಶೇಕಡಾವಾರು ಪ್ರಮಾಣ ಹೆಚ್ಚಾದ ನಂತರ ಅದೇ ಯುರೇನಿಯಂ ವಿದ್ಯುತ್ ಉತ್ಪಾದಿಸುವ ಪರಮಾಣು ರಿಯಾಕ್ಟರ್‌ಗಳಿಗೆ ಇಂಧನವಾಗಬಹುದು. ಅತೀ ಹೆಚ್ಚು ಸಂಸ್ಕರಿಸುತ್ತಾ ಹೋದಂತೆ ಶಸ್ತ್ರಾಸ್ತ್ರಗಳಿಗೂ ಬಳಸುವ ಉಪಯುಕ್ತ ವಸ್ತುವಾಗಲಿದೆ. ಆದ್ದರಿಂದಲೇ ವಿಶ್ವಾದ್ಯಂತ ನ್ಯೂಕ್ಲಿಯರ್ ಸುತ್ತಲಿನ ವಿವಾದಗಳು ಒಂದು ದೇಶವು ಯುರೇನಿಯಂ ಅನ್ನು ಹೊಂದಿದೆಯೇ ಇಲ್ಲವೇ ಅನ್ನೋದಕ್ಕಿಂತ ಹೆಚ್ಚಾಗಿ, ಅದರ ಸಂಸ್ಕರಣ ಮಟ್ಟ ಎಷ್ಟಿದೆ ಎಂಬುದನ್ನು ಆಧರಿಸಿರುತ್ತದೆ.

ವಿದ್ಯುತ್ ಉತ್ಪಾದನಾ ಸಾಮರ್ಥ್ಯ

ವರ್ಲ್ಡ್ ನ್ಯೂಕ್ಲಿಯರ್ ಯೂನಿಯನ್ ಹೇಳುವಂತೆ 1 ತುಂಡು ಯುರೇನಿಯಂ 88 ಟನ್ ಕಲ್ಲಿದ್ದಲಿಗೆ ಸಮನಾಗಿ ವಿದ್ಯುತ್ ಉತ್ಪಾದಿಸುತ್ತದೆ. ನೈಸರ್ಗಿಕ ಯುರೇನಿಯಂ ಗಮನಾರ್ಹ ಪ್ರಮಾಣದ ವಿದ್ಯುತ್ ಉತ್ಪಾದಿಸಬಹುದು. 1 ಕೆ.ಜಿ ಯುರೇನಿಯಂ ಒಂದು ಗಂಟೆಗೆ 44,000 ಕಿಲೋ ವ್ಯಾಟ್ ವಿದ್ಯುತ್ ಉತ್ಪಾದಿಸುತ್ತದೆ. ಆದರೆ ಕಲ್ಲಿದ್ದಲಿನಿಂದ ಇಷ್ಟೊಂದು ವಿದ್ಯುತ್ ಉತ್ಪಾದಿಸಲು ಸಾವಿರಾರು ಟನ್ ತೈಲ ಅನಿಲ ಬೇಕಾಗುತ್ತದೆ. ಆದ್ದರಿಂದ ವಿಶ್ವಾದ್ಯಂತ ರಾಷ್ಟ್ರಗಳಿಂದು ಯುರೇನಿಯಂಗೆ ಹೆಚ್ಚು ಮಹತ್ವ ನೀಡುತ್ತವೆ.

ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ರಾಕೇಶ್ ಗಡುಪುಡಿಗೆ ಪ್ರಧಾನಿ 'ಯಶಸ್ವಿ' ಸಹಾಯ
ಸಕಾಲಕ್ಕೆ ನೆರವಾದ ಪ್ರಧಾನಿಗೆ ಪತ್ರ ಬರೆದು ಕೃತಜ್ಞತೆ ಸಲ್ಲಿಸಿದ ಐಐಐಟಿ ವಿದ್ಯಾರ್ಥಿ

ಧಾರವಾಡದ ವಿದ್ಯಾರ್ಥಿಗೆ ಪಿಎಂ ಯಶಸ್ವಿ ನೆರವು

ದೆಹಲಿ: ವಿದ್ಯಾರ್ಥಿವೇತನ ಮಂಜೂರಾತಿ ವಿಳಂಬದಿಂದ ವಿದ್ಯಾರ್ಥಿಗೆ ಉಂಟಾಗಿದ್ದ ಆರ್ಥಿಕ ಸಂಕಷ್ಟವು ಪಿಎಂ ಯಶಸ್ವಿ ಯೋಜನೆ ಮೂಲಕ ಬಗೆಹರಿದಿದೆ. ಈ ಸಮಸ್ಯೆ ಬಗೆಹರಿಸಲು ನೆರವಾದ ಪ್ರಧಾನಿ ನರೇಂದ್ರ ಮೋದಿಗೆ ವಿದ್ಯಾರ್ಥಿಯು ಧನ್ಯವಾದ ಅರ್ಪಿಸಿದ್ದಾರೆ.

ಧಾರವಾಡದ 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಇನ್ಫಾರ್ಮೇಶನ್ ಟೆಕ್ನಾಲಜಿ' (ಐಐಐಟಿ) ವಿದ್ಯಾರ್ಥಿ ರಾಕೇಶ್ ಗಡುಪುಡಿ ಅವರು 'ಸದೃಢ ಭಾರತಕ್ಕಾಗಿ ಪಿಎಂ ಯುವ ಸಾಧಕರ ವಿದ್ಯಾರ್ಥಿವೇತನ ಪ್ರಶಸ್ತಿ ಯೋಜನೆ' (ಪಿಎಂ ಯಶಸ್ವಿ) ಅಡಿಯಲ್ಲಿ ನೆರವು ಪಡೆದ ಹಿನ್ನೆಲೆಯಲ್ಲಿ ಪ್ರಧಾನಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ತನ್ನ ಅಧ್ಯಯನವನ್ನು ಮುಂದುವರಿಸಲು ಆರ್ಥಿಕ ತೊಂದರೆಯನ್ನು ಎದುರಿಸಿದ ವಿದ್ಯಾರ್ಥಿಗೆ ವಿದ್ಯಾರ್ಥಿವೇತನವು ನಿರಾಳತೆಯನ್ನು ನೀಡಿದೆ, ಆತ್ಮವಿಶ್ವಾಸದಿಂದ ತನ್ನ ಶಿಕ್ಷಣವನ್ನು ಮುಂದುವರಿಸಲು ಅನುವು ಮಾಡಿಕೊಟ್ಟಿದೆ ಎಂದು ಹೇಳಿದ್ದಾರೆ.

ವಿದ್ಯಾರ್ಥಿ ಬರೆದ ಪತ್ರವು ಕೇವಲ ಕೃತಜ್ಞತಾ ಪತ್ರವಾಗಿರಲಿಲ್ಲ; ಬದಲಿಗೆ ಅದು ಸಮಯೋಚಿತ ನೆರವಿನ ಮಹತ್ವ ಮತ್ತು 'ಪಿಎಂ ಯಶಸ್ವಿ'ಯಂತಹ ಯೋಜನೆಗಳ ತಳಮಟ್ಟದ ಪರಿಣಾಮವನ್ನು ಸೂಚಿಸುವಂತಿತ್ತು. ರಾಕೇಶ್ ಅವರು ಈ ಹಿಂದೆ ಪ್ರಧಾನಿಗೆ ಪತ್ರ ಬರೆದು, ತಾವು ಬಡ ಕುಟುಂಬದಿಂದ ಬಂದವರು ಮತ್ತು ತಮ್ಮ ಶಿಕ್ಷಣವನ್ನು ಮುಂದುವರಿಸಲು ವಿದ್ಯಾರ್ಥಿವೇತನವು ನಿರ್ಣಾಯಕವಾಗಿದೆ ಎಂದು ತಿಳಿಸಿದ್ದರು. ಕಾಲೇಜಿನ ಮೊದಲ ವರ್ಷದಲ್ಲಿ ವಿದ್ಯಾರ್ಥಿವೇತನ ಯೋಜನೆಯ ಬಗ್ಗೆ ತಮಗೆ ತಿಳಿದಿರಲಿಲ್ಲ. ಆದರೆ, ಅದರ ಬಗ್ಗೆ ತಿಳಿದ ನಂತರ ಅವರು ತಮ್ಮ ಎರಡನೇ ವರ್ಷದಲ್ಲಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದ್ದಾಗಿ ಅವರು ಪತ್ರದಲ್ಲಿ ತಿಳಿಸಿದ್ದರು.

ಅರ್ಜಿಯನ್ನು ಸಂಸ್ಥೆಯು ಅನುಮೋದಿಸಿತ್ತಾದರೂ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಂತಿಮ ಅನುಮೋದನೆ ಜನವರಿ 2025ರಿಂದ ಬಾಕಿ ಉಳಿದಿತ್ತು. ಈ ವಿಳಂಬವು ಆರ್ಥಿಕ ಸಂಕಷ್ಟಕ್ಕೆ ಕಾರಣವಾಗುತ್ತಿದೆ ಮತ್ತು ಅಧ್ಯಯನದತ್ತ ಗಮನ ಕೇಂದ್ರೀಕರಿಸುವ ತಮ್ಮ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತಿದೆ ಎಂದು ಪ್ರಧಾನಿಯವರ ನೆರವು ಕೋರಿ ಬರೆದ ಪತ್ರದಲ್ಲಿ ರಾಕೇಶ್ ಅವರು ತಿಳಿಸಿದ್ದರು. ಪ್ರಕ್ರಿಯೆಯಲ್ಲಿನ ವಿಳಂಬದಿಂದಾಗಿ ಅರ್ಹ ವಿದ್ಯಾರ್ಥಿಗಳು ತೊಂದರೆ ಎದುರಿಸದಂತೆ ತ್ವರಿತ ಅನುಮೋದನೆ ನೀಡಬೇಕೆಂದು ಅವರು ವಿನಂತಿಸಿದ್ದರು.

ಈ ಸಮಸ್ಯೆ ಪರಿಹಾರವಾದ ಬಳಿಕ ಮತ್ತು ವಿದ್ಯಾರ್ಥಿವೇತನವನ್ನು ಮಂಜೂರು ಮಾಡಿದ ನಂತರ, ರಾಕೇಶ್ ಅವರು ಡಿಸೆಂಬರ್ 2025ರಲ್ಲಿ ಪ್ರಧಾನಿಯವರಿಗೆ ಮತ್ತೆ ಪತ್ರ ಬರೆದು ತಮ್ಮ ಗೌರವ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಪಾರದರ್ಶಕ ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳ ಪಾತ್ರವನ್ನು ಕೊಂಡಾಡಿದ್ದಾರೆ. ಅವರ ಮಾತುಗಳಲ್ಲೇ ಹೇಳುವುದಾದರೆ, ದೀರ್ಘಕಾಲದ ಅಭಿಮಾನಿಯಾಗಿ, ಎಲ್ಲರನ್ನೂ ಒಳಗೊಳ್ಳುವ ಭಾರತವನ್ನು ನಿರ್ಮಿಸುವ ನಿಮ್ಮ ದೂರದೃಷ್ಟಿ ಮತ್ತು ಸಮರ್ಪಣೆಯಿಂದ ನಾನು ಸದಾ ಸ್ಫೂರ್ತಿ ಪಡೆದಿದ್ದೇನೆ. ದೇಶದ ಯುವಕರಿಗೆ ನಿಮ್ಮ ಬದ್ಧತೆ ಮತ್ತು ಪಾರದರ್ಶಕ ಆಡಳಿತದ ಕುರಿತು 'ಪಿಎಂ ಕುಂದುಕೊರತೆ ಪೋರ್ಟಲ್'ನಂತಹ ವೇದಿಕೆಗಳ ಮೂಲಕ ಸ್ಪಷ್ಟವಾಗಿ ತಿಳಿವಳಿಕೆಗೆ ನಿಲುಕಿದೆ ಎಂದು ಪ್ರಧಾನಿಯವರನ್ನು ಪ್ರಶಂಸಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಸಚಿವಾಲಯದ ಕಾರ್ಯವೈಖರಿ ಚರ್ಚೆ | ರಾಜ್ಯಸಭಾ ಸದಸ್ಯೆಯಿಂದ ಸಲಹೆ

ಗ್ರಾಮೀಣರಿಗೆ ಭಾಷಾ ತರಬೇತಿ ಅಗತ್ಯ: ಸುಧಾ ಮೂರ್ತಿ

ದೆಹಲಿ: ದೇಶದ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರಿಗೆ ವ್ಯಕ್ತಿತ್ವ ವಿಕಸನ ಮತ್ತು ಭಾಷಾ ತರಬೇತಿ ಒದಗಿಸುವುದು ಪ್ರಮುಖವಾಗಿದೆ ಎಂದು ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಮಂಗಳವಾರ ಸಲಹೆ ನೀಡಿದ್ದಾರೆ.

ರಾಜ್ಯಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಕಾರ್ಯವೈಖರಿ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಗ್ರಾಮಗಳು ಅಭಿವೃದ್ಧಿಯಾಗದ ಹೊರತು ದೇಶ ಪ್ರಗತಿಯಾಗುವುದಿಲ್ಲ. ಹಳ್ಳಿಗಳಲ್ಲಿನ ಗ್ರಾಮೀಣ ಜನರಿಗೆ ಕೌಶಲ್ಯ ನೀಡುವಲ್ಲಿ ಸರಕಾರ ಉತ್ತಮ ಕೆಲಸ ಮಾಡುತ್ತಿದೆ. ಆದರೆ, ಅವರಿಗೆ ತಾಂತ್ರಿಕವಾಗಿ ಕೌಶಲ ನೀಡುವುದರ ಜೊತೆಗೆ ವ್ಯಕ್ತಿತ್ವ ವಿಕಸನ ಮತ್ತು ಭಾಷಾ ತರಬೇತಿ ಒದಗಿಸುವ ಮೂಲಕ ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುವುದು ಅಷ್ಟೇ ಮುಖ್ಯವಾಗಿದೆ ಎಂದು ಮೂರ್ತಿ ಹೇಳಿದರು.

ವಿದ್ಯುತ್ ಅನ್ನು ಸುಸ್ಥಿರವಾಗಿ ಬಳಸಿಕೊಳ್ಳುವ, ಕೃಷಿ ಮತ್ತು ಇತರ ತ್ಯಾಜ್ಯವನ್ನು ಮರುಬಳಕೆ ಮಾಡುವ ಮತ್ತು ಹವಾಮಾನಕ್ಕೆ ಅನುಗುಣವಾಗಿ ರಸ್ತೆ, ವಸತಿ ಮತ್ತಿತರ ಮೂಲಸೌಕರ್ಯಗಳನ್ನು ಒದಗಿಸುವುದು ಕೂಡಾ ಮುಖ್ಯವಾಗಿದೆ ಎಂದರು. ಕೇಂದ್ರ ಸರಕಾರದ ಲಖಪತಿ ದೀದಿ ಯೋಜನೆಯನ್ನು ಶ್ಲಾಘಿಸಿದ ಸುಧಾ ಮೂರ್ತಿ, ಇತರ ಸ್ವಸಹಾಯ ಗುಂಪುಗಳು ತಮ್ಮ ಯಶಸ್ಸು ಮತ್ತು ಸವಾಲುಗಳನ್ನು ಉಲ್ಲೇಖಿಸಲು ಮತ್ತು ಕಲಿಯಲು ರಾಜ್ಯವಾರು ಡೇಟಾಬೇಸ್ ರಚಿಸಲು ಸರಕಾರವನ್ನು ಒತ್ತಾಯಿಸಿದರು.

ಉ.ಪ್ರ.ದಲ್ಲಿ 3 ಕೋಟಿ ವಲಸಿಗರು

ರಾಜ್ಯಸಭಾ ಚರ್ಚೆಯಲ್ಲಿ ಪಾಲ್ಗೊಂಡ ಕೇರಳ ಸಿಪಿಐ (ಎಂ) ಸಂಸದ ಜಾನ್ ಬ್ರಿಟ್ಟಾಸ್, ಗ್ರಾಮೀಣ ಸಂಕಷ್ಟದ ಪರಿಸ್ಥಿತಿಯನ್ನು ಪ್ರಸ್ತಾಪಿಸಿದರು. ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಅಪಾರ ಪ್ರಮಾಣದಲ್ಲಿ ಜನರು ವಲಸೆ ಹೋಗುತ್ತಿದ್ದಾರೆ. ಉತ್ತರ ಪ್ರದೇಶವೊಂದರಲ್ಲಿಯೇ 3 ಕೋಟಿ ವಲಸಿಗರ ಜನರಿದ್ದಾರೆ, ಬಿಹಾರದಲ್ಲಿ 2.5 ಕೋಟಿ ವಲಸಿಗರಿದ್ದಾರೆ. ಈ ಗ್ರಾಮೀಣ ಸಂಕಷ್ಟದ ಪರಿಸ್ಥಿತಿಯನ್ನು ಪರಿಶೀಲಿಸುವ ಮೂಲಕ ಸರಕಾರ ಗ್ರಾಮೀಣ ಭಾರತಕ್ಕೆ ನ್ಯಾಯ ಒದಗಿಸಬೇಕಾಗಿದೆ ಎಂದು ಅವರು ಹೇಳಿದರು.

ದಿಲೀಪ್‌ಗೆ ಸಂಕಷ್ಟ

ಎರ್ನಾಕುಲಂ: ಖ್ಯಾತ ನಟಿ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಎಂಟನೇ ಆರೋಪಿ ನಟ ದಿಲೀಪ್ ಮತ್ತು ಇತರ ಹಲವರನ್ನು ಖುಲಾಸೆಗೊಳಿಸಿದ ವಿಚಾರಣಾ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಕೇರಳ ರಾಜ್ಯ ಸರಕಾರ ಸಲ್ಲಿಸಿದ್ದ ಸಮಗ್ರ ಮೇಲ್ಮನವಿಯನ್ನು ಕೇರಳ ಹೈಕೋರ್ಟ್ ಮಂಗಳವಾರ ಸ್ವೀಕರಿಸಿದೆ.

ವಿವರವಾದ ವಿಚಾರಣೆಗಾಗಿ ಮೇಲ್ಮನವಿಯನ್ನು ಅಂಗೀಕರಿಸಿದ ಹೈಕೋರ್ಟ್‌ನ ವಿಭಾಗೀಯ ಪೀಠವು ದಿಲೀಪ್ ಮತ್ತು ಖುಲಾಸೆಗೊಂಡ ಇತರ ವ್ಯಕ್ತಿಗಳಿಗೆ ನೋಟಿಸ್ ನೀಡಿತು.

ನಕಲಿ ತುಪ್ಪದಿಂದ 20 ಕೋಟಿ ಲಡ್ಡು

ತಿರುಪತಿ: ಇಲ್ಲಿನ ತಿರುಮಲ ವೆಂಕಟೇಶ್ವರ ದೇವಾಲಯದಲ್ಲಿ 2019-2024ರ ಅವಧಿಯಲ್ಲಿ ತಿರುಪತಿ ತಿರುಮಲ ದೇವಸ್ಥಾನಂ ಟ್ರಸ್ಟ್ (ಟಿಟಿಡಿ) ಮಂಡಳಿಯ ಅಧ್ಯಕ್ಷ ಬಿ.ಆರ್. ನಾಯ್ಡು ಅವರು, ಒಟ್ಟು 48.76 ಕೋಟಿ ಲಡ್ಡುಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದ್ದು, ಇದರ ಪೈಕಿ 20 ಕೋಟಿ ಲಡ್ಡುಗಳನ್ನು ನಕಲಿ ತುಪ್ಪದಿಂದ ತಯಾರಿಸಲಾಗಿದೆ ಎಂಬ ಹೇಳಿಕೆ ನೀಡಿದ್ದಾರೆ. ದೇವಾಲಯಕ್ಕೆ ಪ್ರತಿನಿತ್ಯ ಬರುವ ಭಕ್ತರು, ಪ್ರಸಾದ ಖರೀದಿ ವಿವರಗಳು ಮತ್ತು ಉತ್ಪಾದನೆ, ಮಾರಾಟದ ಅಂಕಿಅಂಶಗಳನ್ನು ಆಧರಿಸಿ ಈ ಲೆಕ್ಕಾಚಾರ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಆರು ವರ್ಷಗಳ ಅವಧಿಯ ಲಡ್ಡು ವಿವರ ಬಹಿರಂಗ ಪಡಿಸಿದ ಟಿಟಿಡಿ ಮಂಡಳಿಯ ಅಧ್ಯಕ್ಷ

ಕೇಂದ್ರ ತನಿಖಾ ದಳದ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ) ಈ ಪ್ರಕರಣದ ತನಿಖೆ ನಡೆಸುತ್ತಿದೆ. ತಿರುಪತಿಯಲ್ಲಿ ಕಳೆದ ವರ್ಷ ಬೆಳಕಿಗೆ ಬಂದಿರುವ ಕಲಬೆರಕೆ ಪ್ರಕರಣ ಪ್ರಸಾದದ ಪಾವಿತ್ರ್ಯವನ್ನು ಗಮನದಲ್ಲಿಟ್ಟುಕೊಂಡು ಖರೀದಿ ಮಾಡುವ ಲಕ್ಷಾಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡಿದೆ. ಸುಮಾರು 250 ಕೋಟಿ ರು. ಮೌಲ್ಯದ ಪಾಮ್ ಎಣ್ಣೆ, ಪಾಮ್ ಕರ್ನಲ್ ಎಣ್ಣೆ ಮತ್ತು ಇತರ ವಿಷಕಾರಿ ಪದಾರ್ಥಗಳನ್ನು ಬಳಸಿದ 68 ಲಕ್ಷ ಕೆ.ಜಿ ಕಲಬೆರಕೆ ತುಪ್ಪವನ್ನು ಉತ್ತರಾಖಂಡದ ಭೋಲೆ ಬಾಬಾ ಡೈರಿ ಮತ್ತು ಅದರ ಕೆಲವು ಕಂಪನಿಗಳು ಪೂರೈಸಿವೆ ಎಂದು ಎಸ್‌ಐಟಿ ಹೇಳಿದೆ. ಕಳೆದ ಐದು ವರ್ಷಗಳಲ್ಲಿ ಸುಮಾರು 11 ಕೋಟಿ ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿದ್ದರು, ಆದರೆ ಯಾರೆಲ್ಲ ಕಲಬೆರಕೆ ತುಪ್ಪದಿಂದ ಮಾಡಿದ ಲಡ್ಡುಗಳನ್ನು ಖರೀದಿ ಮಾಡಿದ್ದಾರೆ ಎಂಬುದಕ್ಕೆ ದಾಖಲೆಗಳು ಇಲ್ಲ. ವಿವಿಐಪಿಗಳಿಗೂ ಕೂಡ ಲಡ್ಡುಗಳನ್ನು ಪ್ರತ್ಯೇಕವಾಗಿ ಮಾಡಲಾಗುವುದಿಲ್ಲ ಎಂದು ಟಿಟಿಡಿ ಹೇಳಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಟಿಟಿಡಿ ಅಧ್ಯಕ್ಷ ಮತ್ತು ವೈಎಸ್‌ಆರ್‌ಸಿಪಿ ಸಂಸದ ವೈವಿ ಸುಬ್ಬಾ ರೆಡ್ಡಿ ಅವರನ್ನು ಎಸ್‌ಐಟಿ ಇತ್ತೀಚಿಗೆ ವಿಚಾರಣೆ ನಡೆಸಿತು ಹಾಗೂ ಅವರ ಮಾಜಿ ಸಹಾಯಕ ಚಿನ್ನ ಅಪ್ಪಣ್ಣ ಅವರನ್ನು ಬಂಧಿಸಲಾಗಿದೆ. ಟಿಟಿಡಿಯ ಮಾಜಿ ಕಾರ್ಯನಿರ್ವಾಹಕ ಅಧಿಕಾರಿ ಎವಿ ಧರ್ಮ ರೆಡ್ಡಿ ಅವರನ್ನೂ ವಿಚಾರಣೆಗೆ ಒಳಪಡಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಸದ್ಯದಲ್ಲೇ ನೆಲ್ಲೂರಿನ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಕೆಯಾಗುವ ನಿರೀಕ್ಷೆ ಇದೆ.

ವಿಧಾನ ಪರಿಷತ್‌ನಲ್ಲಿ ರಾಜ್ಯ ಸರಕಾರದ ವಿರುದ್ಧ ಪ್ರತಿಪಕ್ಷಗಳ ಆಕ್ರೋಶ

ಕೈ ಕಚೇರಿಗೆ ಭೂಮಿ; ಕಾನೂನು ಉಲ್ಲಂಘನೆ ಇಲ್ಲ

ವಿಶ್ವವಾಣಿ ಸುದ್ದಿಮನೆ ವಿಧಾನ ಪರಿಷತ್

ರಾಜ್ಯದೆಲ್ಲೆಡೆ 100 ಸ್ಥಳಗಳಲ್ಲಿ ಕಾಂಗ್ರೆಸ್ ಕಚೇರಿ ತೆರೆಯುವ ಸಂಬಂಧ ಕಾನೂನು ಉಲ್ಲಂಘಿಸಿ ಭೂ ಮಂಜೂರು ಮಾಡಲಾಗಿದೆ ಎಂಬ ಆರೋಪದ ಕುರಿತು ರಾಜ್ಯ ಸರಕಾರದ ವಿರುದ್ಧ ಮಂಗಳವಾರ ವಿಧಾನ ಪರಿಷತ್‌ನಲ್ಲಿ ಪ್ರತಿಪಕ್ಷಗಳು ಆಕ್ರೋಶ ವ್ಯಕ್ತಪಡಿಸಿದವು.

ಅಧಿವೇಶನದ ಪ್ರಶ್ನೋತ್ತರ ವೇಳೆ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಅವರು ಈ ವಿಚಾರ ಪ್ರಸ್ತಾಪಿಸಿ, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕಾಗಿ 40 ಕೋಟಿ ರು. ಮೌಲ್ಯದ ಸರಕಾರಿ ಜಾಗವನ್ನು 2 ಕೋಟಿ ರು. ದರದಲ್ಲಿ ಮಂಜೂರು ಮಾಡಿರುವುದು ನಿಜವೇ? ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಕಾಂಗ್ರೆಸ್ ಕಚೇರಿ ತೆರೆಯುವ ಸಂಬಂಧ ನಾಗರಿಕ ಸೌಲಭ್ಯ ನಿವೇಶನಗಳಲ್ಲಿ ಮಂಜೂರು ಮಾಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿದೆ. ಮಾರುಕಟ್ಟೆ ದರಕ್ಕಿಂತ ಮಾರ್ಗಸೂಚಿ ಮೌಲ್ಯದ ಶೇ.5ರಷ್ಟು ಶುಲ್ಕ ವಿಧಿಸಿ (ಎಸ್ ಆರ್) ತುಮಕೂರಿನಲ್ಲಿ ಮಾತ್ರ ಭೂ ಮಂಜೂರು ಮಾಡಲಾಗಿದೆ. ಮಂಜೂರಾತಿ ಪ್ರಕ್ರಿಯೆಯಲ್ಲಿ ಕಾನೂನು ಉಲ್ಲಂಘಿಸಿಲ್ಲ ಎಂದು ಸ್ಪಷ್ಟಪಡಿಸಿದರು.

ಇದಕ್ಕೆ ಆಕ್ಷೇಪಿಸಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ರಾಜ್ಯದ 100 ಕಡೆಗಳಲ್ಲಿ ಕಾಂಗ್ರೆಸ್ ಕಚೇರಿ ಸ್ಥಾಪಿಸುವ ಉದ್ದೇಶ ರಾಜ್ಯ ಸರಕಾರಕ್ಕಿದೆ. ರಾಜಕೀಯ ಪಕ್ಷಗಳಿಗೆ ನಿರ್ದಿಷ್ಟ ಪ್ರಮಾಣದಲ್ಲಿ ಜಾಗ ಕೊಡಬಹುದು. ಆದರೆ ಎಲ್ಲ ಕಡೆಗಳಲ್ಲಿ ಮಾರ್ಗಸೂಚಿ ದರ ಅನ್ವಯ ಭೂ ಮಂಜೂರು ಮಾಡಲು ಸಾಧ್ಯವಿಲ್ಲ. ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರವಾದರೆ ಅಕ್ರಮ ಸಕ್ರಮವಾಗಲಿದೆಯಾ? ಸರಕಾರವೇ ನೇರವಾಗಿ ಲೂಟಿ ಹೊಡೆಯುತ್ತಿದೆ ಎಂದು ಆಕ್ರೋಶ ಹೊರಹಾಕಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಬೈರತಿ ಸುರೇಶ್, ರಾಜಕೀಯ ಪಕ್ಷಗಳಿಗೆ ಹಾಗೂ ಸಂಘ-ಸಂಸ್ಥೆಗಳಿಗೆ ಸಿಎ ನಿವೇಶನ ನೀಡುವುದು ಮುಂಚಿನಿಂದಲೂ ನಡೆದುಕೊಂಡು ಬರುತ್ತಿದೆ. ಬಿಜೆಪಿ ಸದಸ್ಯ ಡಿ.ಎಸ್.ಅರುಣ್ ಅವರೇ ಈ ಹಿಂದೆ ಎರಡು ಸಿಎ ನಿವೇಶನಗಳನ್ನು ಕಡಿಮೆ ಬೆಲೆಗೆ ಪಡೆದುಕೊಂಡಿದ್ದಾರೆ. ಅಲ್ಲದೆ ಬಿಜೆಪಿ ಕಚೇರಿಗಳಿಗೆ ಕಡಿಮೆ ಬೆಲೆಗೆ ನಿವೇಶನ ಪಡೆದುಕೊಂಡಿದ್ದಾರೆ. 10 ಸಾವಿರ ಚದರಡಿ ಜಾಗವನ್ನು 500 ರು.ಗೆ ನೀಡಲಾಗಿದೆ. 2022ರಲ್ಲಿ ನೂರು ಎಕರೆ ತೆಗೆದುಕೊಂಡಿದೆ ಎಂದರು.

ಉಭಯಪಕ್ಷಗಳ ನಡುವೆ ಜಟಾಪಟಿಯಾಗುತ್ತಿದ್ದಂತೆ ಮಧ್ಯಪ್ರವೇಶಿಸಿದ ಸಭಾಪತಿ, ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆ ನಡೆಸಬೇಡಿ. ಅರ್ಧ ಗಂಟೆಗೆ ಚರ್ಚೆ ನಡೆಸಬೇಕು ಎಂದರೆ ಬೇರೆ ರೂಪದಲ್ಲಿ ಕೊಡುತ್ತೇನೆ ಎಂದರು.

ಬಿಜೆಪಿ ಮತ್ತು ಕಾಂಗ್ರೆಸ್ ಶಾಸಕರ ನಡುವೆ ವಾಗ್ವಾದ

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕೆ ನಾಗರಿಕ ಸೌಲಭ್ಯ ನಿವೇಶನಗಳನ್ನು ಮಂಜೂರು ಮಾಡಿರುವ ವಿಷಯ ಪರಿಷತ್‌ನ ಪ್ರತಿಧ್ವನಿಸಿ ಬಿಜೆಪಿ ಮತ್ತು ಕಾಂಗ್ರೆಸ್ ಶಾಸಕರ ನಡುವೆ ವಾಗ್ವಾದಕ್ಕೆ ಎಡೆಮಾಡಿಕೊಟ್ಟಿತು. ಪ್ರಶೋತ್ತರ ವೇಳೆಯಲ್ಲಿ ಬಿಜೆಪಿ ಶಾಸಕ ಅರುಣ್ ಅವರ ಪ್ರಶ್ನೆಗೆ ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ಉತ್ತರಿಸಿದರು. ಸಚಿವರು ನೀಡಿದ ಉತ್ತರದಿಂದ ತೃಪ್ತರಾಗದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಶಾಸಕರಾದ ರವಿಕುಮಾರ್ ಸೇರಿದಂತೆ ಹಲವು ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಪ್ರತಿಯಾಗಿ ಆಡಳಿತ ಪಕ್ಷದ ಐವಾನ್ ಡಿಸೋಜ ಅವರು ಮಾತನಾಡಿ, ಅರ್ಧಗಂಟೆ ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹಿಸಿದರು. ಈ ಹಂತದಲ್ಲಿ ತೀವ್ರ ಅಸಮಾಧಾನಗೊಂಡ ಸಭಾಪತಿ ಬಸವರಾಜ ಹೊರಟ್ಟಿ ಅವರು ಎಲ್ಲರೂ ಎದ್ದು ನಿಂತು ಮಾತನಾಡಲು ಸದನ ಧರ್ಮಶಾಲೆಯಲ್ಲ, ಪ್ರಶೋತ್ತರವನ್ನು 75 ನಿಮಿಷಕ್ಕೆ ಮುಕ್ತಾಯಗೊಳಿಸಲಾಗುವುದು. ಅವಕಾಶ ಸಿಗದಿದ್ದರೆ ಆಕ್ಷೇಪ ಎತ್ತಬೇಡಿ. ಎಲ್ಲರೂ ಎದ್ದುನಿಂತು ಮಾತನಾಡುವುದಾದರೆ ಯಾವ ವಿಚಾರವೂ ಕಡತಕ್ಕೆ ಹೋಗುವುದಿಲ್ಲ, ಸಚಿವರು ನೀಡಿರುವ ಉತ್ತರ ತೃಪ್ತಿಯಾಗದಿದ್ದರೆ ಬೇರೆ ರೂಪದಲ್ಲಿ ಕೊಡಿ ಎಂದು ಸಲಹೆ ಮಾಡಿದರು.

ವಿಶ್ವವಾಣಿ ಬೆಂಗಳೂರು 11-03-2026 ಬುಧವಾರ
@vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಬಂಜೆಂಬ ಶಬುದವ ಬಿಡಿಸಿದವರ ನೋವು-ನಲಿವಿನ ಕಥನ

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

ಕಂದನ ಕೊಡು ಶಿವನೆ ಬಂಧನ ಪಡಲಾರೆ। ಬಂಜೆಂಬ ಶಬುದ ಹೊರಲಾರೆ। ಭೂಮಿ ಮ್ಯಾಲ ಹಂಗಿನ ಬಾನ ಉಣಲಾರೆ!

ನಮ್ಮ ಭಾರತೀಯ ಸಮಾಜವು, ಹುಟ್ಟುವಾಗಲೇ ಪ್ರತಿಯೊಬ್ಬರೂ ನಾಲ್ಕು ಋಣಗಳನ್ನು ಹೊತ್ತುಕೊಂಡು ಹುಟ್ಟುತ್ತಾರೆ ಎಂದು ನಂಬಿದೆ. ದೈವ ಋಣ, ಪಿತೃಋಣ, ಆಚಾರ್ಯ ಋಣ ಹಾಗೂ ಸಮಾಜ ಋಣ. ಪಿತೃಋಣವು ತೀರಬೇಕಾದರೆ ತಲೆತಲಾಂತರದಿಂದ ಬಂದ ಹಿರಿಯರ ವಂಶವಾಹಿಗಳನ್ನು ಮುಂದಿನ ತಲೆಮಾರಿಗೆ ಸಾಗಿಸಬೇಕು. ಹಾಗೆ ಸಾಗಿಸಲಿಲ್ಲವೆಂದರೆ ಅವರಿಗ ಋಣಮುಕ್ತಿಯಿಲ್ಲ ಎನ್ನುವ ನಂಬಿಕೆಯಿದೆ.

ಆಯುರ್ವೇದವು ಮಕ್ಕಳಿಲ್ಲದ ಸ್ಥಿತಿಯನ್ನು 'ವಂಧ್ಯತ್ವ' ಎಂದು ಕರೆದಿದೆ. ಮಕ್ಕಳಾಗಬೇಕಾದರೆ 'ನಾಲ್ಕು ಗರ್ಭ ಸಂಭವ ಸಾಮಾಗ್ರಿ'ಗಳು ಅಗತ್ಯ.

- ಮೊದಲನೆಯದು ಋತು. ಒಂದು ಬೀಜವು ಮೊಳೆಯಬೇಕಾದರೆ ಅದಕ್ಕೆ ಅನುಕೂಲಕರ ಋತು ಅಗತ್ಯ. ಎಲ್ಲ ಋತುಗಳಲ್ಲೂ ಬೀಜ ಮೊಳೆಯದು. ಹಾಗಾಗಿ ಮಕ್ಕಳಾಗಲೂ 'ಫಲವಂತಿಕೆಯ ಅವಧಿ' (ಫರ್ಟೈಲ್ ವಿಂಡೋ) ಎನ್ನುವುದು ಇರುತ್ತದೆ.
- ಎರಡನೆಯದು ಕ್ಷೇತ್ರ. ಅಂದರೆ ಗರ್ಭಾಶಯ. ಒಂದು ಸಸಿ ಮೊಳೆಯಬೇಕಾದರೆ ಹೇಗೆ ಮಣ್ಣು ಫಲವತ್ತಾಗಿ ಇರಬೇಕೋ, ಹಾಗೆಯೇ ಗರ್ಭಾಶಯವೂ ಎಲ್ಲ ರೀತಿಯ ಅನಾರೋಗ್ಯಗಳಿಂದ ಮುಕ್ತವಾಗಿರಬೇಕು.
- ಮೂರನೆಯದು ಅಂಬು. ಅಂಬು ನೀರನ್ನು ಒಳಗೊಂಡಂತೆ ಎಲ್ಲ ಪೋಷಕಾಂಶಗಳು. ಈ ಶೀರ್ಷಿಕೆಯ ವ್ಯಾಪ್ತಿಯಲ್ಲಿ ಹಾರ್ಮೋನುಗಳೂ ಬರುತ್ತವೆ. ರಕ್ತದಲ್ಲಿರುವ ಪ್ಲಾಸ್ಮಾದ ಮೂಲಕ ಎಲ್ಲ ಪೋಷಕಾಂಶಗಳ ಪೂರೈಕೆಯಾಗುತ್ತದೆ.
- ನಾಲ್ಕನೆಯದು ಬೀಜ. ಬೀಜ ಎಂದರೆ ಇದು ಅಂಡಾಣು (ಓವಮ್) ಮತ್ತು ವೀರ್ಯಾಣುಗಳನ್ನು (ಸ್ಪರ್ಮ್) ಸೂಚಿಸುತ್ತದೆ. ಎರಡೂ ಶುದ್ಧವಾಗಿರಬೇಕು ಹಾಗೂ ಪರಿಪೂರ್ಣ ಓಜಸ್ಸಿನಿಂದ (ಜೀವಶಕ್ತಿ ಹಾಗೂ ಚೈತನ್ಯ) ಕೂಡಿರಬೇಕು.

ಈ ನಾಲ್ಕು ಗರ್ಭ ಸಂಭವ ಸಾಮಾಗ್ರಿಗಳಲ್ಲಿ, ಯಾವುದಾದರೊಂದು ಸಾಮಾಗ್ರಿಯು ದೋಷಯುಕ್ತವಾಗಿದ್ದರೆ, ಅವರಿಗೆ ಸಹಜ ಮಕ್ಕಳಾಗುವುದಿಲ್ಲ ಎನ್ನುವುದನ್ನು ಆಯುರ್ವೇದ ಸ್ಪಷ್ಟವಾಗಿ ಹೇಳುತ್ತದೆ. ಇದೇ ಆಶಯವನ್ನು ಆಧುನಿಕ ವೈದ್ಯಕೀಯ ವಿಜ್ಞಾನವು ವ್ಯಕ್ತಪಡಿಸುತ್ತದೆ.

- ಬಂಜೆಂಬ ಶಬುದ: ನಮ್ಮ ದೇಶದ ಒಟ್ಟು ದಂಪತಿಗಳಲ್ಲಿ ಶೇ.10-15ರಷ್ಟು ದಂಪತಿಗಳಿಗೆ ಸಂತಾನಭಾಗ್ಯವಿಲ್ಲ. ಅಂದರೆ 27.5- 30 ದಶಲಕ್ಷ ದಂಪತಿಗಳಿಗೆ ಮಕ್ಕಳಿಲ್ಲ. ಮಕ್ಕಳಾಗದಿರಲು ಕಾರಣಗಳು ಶೇ.30-40ರಷ್ಟು ಗಂಡಸರಲ್ಲೂ ಹಾಗೂ ಶೇ. 30-40ರಷ್ಟು ಹೆಂಗಸರಲ್ಲೂ ಇರುತ್ತವೆ. ಶೇ. 20-30ರಷ್ಟು ಪ್ರಕರಣಗಳಲ್ಲಿ ಮಿಶ್ರ ಅಥವಾ ಅವ್ಯಕ್ತ ಕಾರಣಗಳಿರುತ್ತವೆ. ಇಂಥವರಿಗೆ ಸಂಜೀವಿನಿಯಂತೆ ದೊರೆತಿದೆ ಪ್ರನಾಳ ತಂತ್ರಜ್ಞಾನ ಅಥವ ಕೃತಕ ಗರ್ಭಧಾರಣಾ ಚಿಕಿತ್ಸೆ (ಐವಿಎಫ್- ಇನ್ ವಿಟ್ರೊ ಫರ್ಟಿಲೈಜೇಷನ್).

ಈ ತಂತ್ರಜ್ಞಾನವು ಮನುಕುಲಕ್ಕೆ ಲಭ್ಯವಾದ ಇತಿಹಾಸದ ಬಗ್ಗೆ ಒಂದು ಸಂಕ್ಷಿಪ್ತ ಪಕ್ಷಿನೋಟವನ್ನು ಹರಿಸೋಣ.

- ಲೂಯಿಸ್ ಜಾಯ್ ಬ್ರೌನ್: 1978ರ ಜುಲೈ 25. ರಾತ್ರಿ 11 ಗಂಟೆ 47 ನಿಮಿಷ. ಇಂಗ್ಲೆಂಡ್, ಓಲ್ಡ್‌ಹ್ಯಾಮ್, ಮಿಲ್‌ಟೌನಿನ ಜಿಲ್ಲಾ ಆಸ್ಪತ್ರೆ. ಮಗುವಿನ ಅಳುವಿಗಾಗಿ ಎಲ್ಲರೂ ಕಾದಿದ್ದರು. ನಡುರಾತ್ರಿಯಲ್ಲಿ ಮಗುವಿನ ಚೀತ್ಕಾರವು ಆಸ್ಪತ್ರೆಯ ಅಂಗಳದಲ್ಲಿ ಪ್ರತಿಧ್ವನಿಸುತ್ತಿರುವಂತೆಯೇ ಎಲ್ಲರ ಮುಖಗಳಲ್ಲಿ ಸಂತೋಷವು ಕಾಣಿಸಿಕೊಳ್ಳುವುದರ ಜತೆಯಲ್ಲಿ ಸದ್ದಿಲ್ಲದೆ ಒಂದು ಜಾಗತಿಕ ದಾಖಲೆಯೂ ಸ್ಥಾಪನೆಯಾಯಿತು. ಜಗತ್ತಿನಲ್ಲಿ ಮೊತ್ತ ಮೊದಲ ಬಾರಿಗೆ ತಾಯಿಯ ಬೆಚ್ಚನೆಯ ಗರ್ಭದಲ್ಲಿ ಅಂಕುರವೊಡೆಯದೆ, ಪ್ರಯೋ ಗಾಲಯದ ತಣ್ಣನೆಯ ಗಾಜಿನ ತಟ್ಟೆಯಲ್ಲಿ ಗರ್ಭಕಟ್ಟಿ, ಈಗ ಪೂರ್ಣರೂಪದ ಮಗುವು ಬೆಳೆದು, ಈಗಷ್ಟೇ ಅದರ ಸಿಸೇರಿ ಯನ್ ಪ್ರಸವದ ಮೂಲಕ ಜಗತ್ತಿಗೆ ಬಂದಿತ್ತು.



ಈ ಒಂದು ಘಟನೆಯು ವೈದ್ಯಕೀಯ ಇತಿಹಾಸಕ್ಕೇ ಮಹಾತಿರುವನ್ನು ಕೊಟ್ಟಿತು! ಪ್ರಜನನ ವಿಜ್ಞಾನ ಅಥವಾ ರಿ-ಪ್ರೊಡಕ್ಟಿವ್ ಮೆಡಿಸಿನ್ ಹಿಂದೆಂದೂ ಕಾಣದಂಥ ಚಿಮ್ಮುಹಲಗೆಯನ್ನು ಏರಿ, ಲಕ್ಷಾಂತರ ತಾಯಂದಿರನ್ನು 'ಬಂಜೆ' ಎಂಬ ಶಬ್ದದಿಂದ ಮುಕ್ತಿಯನ್ನು ನೀಡಿತು. 'ಬಾಲಕರಿಲ್ಲದ ಬಾಲೀದ್ಯಾತರ ಜನ್ಮ, ಬಾಳೆಲೆ ಹಾಸ್ಯುಂಡು ಬೀಸಿ ಒಗೆದಂಗ' ಎಂದು ಹೆಣ್ಣಿನ ಜೀವವನ್ನೇ ಅವಹೇಳನ ಮಾಡುತ್ತಿದ್ದ ಈ ಸಮಾಜಕ್ಕೆ, ಮೊದಲ ಬಾರಿಗೆ ಬೀಯಿಗೆ ಬೀಗವನ್ನು ಹಾಕಿಕೊಳ್ಳುವಂತೆ ಮಾಡಿತು.

- ದಂಪತಿಗಳು: ಒಂದು ಮಗುವನ್ನು ಹಡೆದರೆ ಮಾತ್ರ ಹೆಣ್ಣಿನ ಜೀವನವು ಸಾರ್ಥಕತೆಯನ್ನು ಪಡೆಯಲು ಸಾಧ್ಯ ಎಂಬ ನಂಬಿಕೆಯು ಇಂಗ್ಲೆಂಡಿನಲ್ಲೂ ಇತ್ತು. ಬ್ರಿಟನ್ನಿನ ಬ್ರಿಸ್ಟಲ್ ನಗರದಲ್ಲಿ ಲೆಸ್ಲಿ ಬ್ರೌನ್ ಮತ್ತು ಜಾನ್ ಬ್ರೌನ್ ಎಂಬ ದಂಪತಿಗಳು. ಜಾನ್ ಬ್ರಿಟಿಷ್ ರೈಲ್ವೆಯಲ್ಲಿ ಟ್ರಕ್ ಚಾಲಕನಾಗಿ ಕೆಲಸವನ್ನು ಮಾಡುತ್ತಿದ್ದ. ಅವರು ಮದುವೆಯಾಗಿ ಒಂಬತ್ತು ವರ್ಷಗಳಾಗಿದ್ದವು. ಆದರೂ ಅವರಿಗೆ ಮಕ್ಕಳಾಗಿರಲಿಲ್ಲ. ಈ ಕೊರಗು ಇಬ್ಬರನ್ನೂ ತೀವ್ರವಾಗಿ ಕಾಡುತ್ತಿತ್ತು. ಲೆಸ್ಲಿ ಬ್ರೌನ್‌ಳ ಗರ್ಭನಾಳಗಳಲ್ಲಿ ತಡೆಯಿದ್ದ ಕಾರಣ, ವೀರ್ಯಾಣುವು ಅಂಡಾಣುವಿನೊಡನೆ ಮಿಲನವಾಗುವ ಸಂದರ್ಭವೇ ಬರುತ್ತಿರಲಿಲ್ಲ. ಹಾಗಾಗಿ ಕ್ಷೇತ್ರದೋಷದ ಕಾರಣ ಅವರಿಗೆ ಮಕ್ಕಳಾಗಿರಲಿಲ್ಲ.

1976. ಓಲ್ಡ್‌ಹ್ಯಾಮ್ ನಗರದಲ್ಲಿ ಪ್ಯಾಟ್ರಿಕ್ ಸ್ಟೆಪ್‌ಟೋ (1913-1988) ಎಂಬ ಪ್ರಸೂತಿತಂತ್ರ ವೈದ್ಯರಿದ್ದರು. ಆತನನ್ನು ಭೇಟಿಯಾಗುವಂತೆ ಲೆಸ್ಲಿಗೆ ಯಾರೋ ಸೂಚಿಸಿದರು. ಪ್ಯಾಟ್ರಿಕ್, ರಾಬರ್ಟ್ ಎಡ್ವರ್ಡ್ಸ್ (1925-2013) ಎಂಬ ಅಂಗಕ್ರಿಯಾ ವಿಜ್ಞಾನಿ ಹಾಗೂ ಜೀನ್ ಪರ್ಡಿ (1945-1985) ಎಂಬ ನರ್ಸ್-ಭ್ರೂಣತ ಜ್ಞಳ ಜತೆಯಲ್ಲಿ ಸುಮಾರು ದಶಕಗಳಿಂದ ಪ್ರನಾಳ ಶಿಶು (ಕೃತಕ ಗರ್ಭಧಾರಣೆ) ಪ್ರಯೋಗಗಳಲ್ಲಿ ತೊಡಗಿದ್ದರು. ಆದರೂ ಅವರಿಗೆ ಯಶಸ್ಸು ದೊರೆತಿರಲಿಲ್ಲ. ಈ ಬಗ್ಗೆ ಅವರಿಗೆ ನಿರಾಸೆಯಾಗಿದ್ದರೂ, ಭರವಸೆಯನ್ನು ಕಳೆದುಕೊಂಡಿರಲಿಲ್ಲ. ತಮ್ಮ ಪ್ರಯೋಗಗಳನ್ನು ನಿಷ್ಠೆಯಿಂದ ನಡೆಸುತ್ತಿದ್ದರು. ಈ ಪ್ರಯೋಗದಲ್ಲಿ ಭಾಗಿಯಾಗಲು ಲೆಸ್ಲಿ ಒಪ್ಪಿಗೆ ಪತ್ರಕ್ಕೆ ಸಹಿಯನ್ನು ಹಾಕಿದಳು. 'ತಾನೊಂದು ಪ್ರಯೋಗದಲ್ಲಿ ಪಾಲುಗೊಳ್ಳುತ್ತಿದ್ದೇನೆ. ಈ ರೀತಿಯ ಪ್ರಯೋಗದ ಮೂಲಕ ಇದುವರೆಗೂ ಒಂದು ಮಗುವೂ ಹುಟ್ಟಿಲ್ಲ. ಒಂದು ವೇಳೆ ಈ ಪ್ರಯೋಗವು ಯಶಸ್ವಿಯಾದರೆ, ಇಡೀ ಜಗತ್ತಿನಲ್ಲಿ ಪ್ರನಾಳ ಶಿಶುವನ್ನು ಪಡೆದ ಮೊದಲ ತಾಯಿ ತಾನಾಗಲಿದ್ದೇನೆ' ಎಂಬ ಕಲ್ಪನೆಯೂ ಆಕೆಗೆ ಇರಲಿಲ್ಲ.

- ತ್ರಿಮೂರ್ತಿಗಳು: ಪ್ಯಾಟ್ರಿಕ್ ಸ್ಟೆಪ್‌ಟೋ ಉದರದರ್ಶಕ ಶಸ್ತ್ರಚಿಕಿತ್ಸೆಯಲ್ಲಿ ತಜ್ಞರಾಗಿದ್ದರು. ಅಂದಿನ ದಿನಗಳಲ್ಲಿ ಅನೇಕ ವೈದ್ಯರು 'ಉದರದರ್ಶಕ'ವು ಒಂದು ಅಪಾಯಕಾರಿ ಆಟಿಕೆ, ಅದರ ಸಹವಾಸವೇ ಬೇಡ ಎಂದು ಸುಮ್ಮನಿದ್ದರು. ರಾಬರ್ಟ್ ಎಡ್ವರ್ಡ್ ಅಂಗಕ್ರಿಯಾ ವಿಜ್ಞಾನಿಯಾಗಿದ್ದರು. ತಾವು ಭಾಗಿಯಾಗಿರುವ ಪ್ರಯೋಗದಲ್ಲಿ ಅಪಾರ ಭರವಸೆಯನ್ನು ಪಡೆದಿದ್ದರು. ಸ್ತ್ರೀಯರ ಒಡಲಿನಿಂದ ಪ್ರತ್ಯೇಕಿಸಿದ ಅಂಡಾಣುವನ್ನು, ಪ್ರಯೋಗಾಲಯದ ಪರಿಸರದಲ್ಲಿ ಹೇಗೆ ಆರೋಗ್ಯಕರವಾಗಿ ಬೆಳೆಸಬೇಕು ಎನ್ನುವ ಕ್ಷೇತ್ರದಲ್ಲಿ ಪರಿಣತಿಯನ್ನು ಪಡೆದಿದ್ದರು. ಜೀನ್ ಪರ್ಡಿ ಜಗತ್ತಿನ ಮೊದಲ ಭ್ರೂಣವಿಜ್ಞಾನಿ. ತನ್ನ ಪುಟ್ಟ ಪ್ರಯೋಗಾಲಯದಲ್ಲಿ ನೂರಾರು ಗಂಟೆಗಳ ಕಾಲ ಜೀವಕೋಶಗಳ ದ್ವಿಗುಣಗೊಳ್ಳುವಿಕೆಯನ್ನು ನೋಡಿ ಅಪಾರ ಅನುಭವವನ್ನು ಪಡೆದ ಹೆಣ್ಣುಮಗಳಾಗಿದ್ದಳು.

ಈ ತ್ರಿಮೂರ್ತಿಗಳಿಗೆ ಮೂರು ರೀತಿಯ ತೊಂದರೆಗಳು ಕಾಡುತ್ತಿದ್ದವು. ಮೊದಲನೆಯದಾಗಿ ಸರಕಾರವು ಪ್ರನಾಳ ಶಿಶುವಿನ ಯಾವ ಪ್ರಯೋಗಗಳಿಗೂ ಹಣಕಾಸಿನ ನೆರವನ್ನು ನೀಡುವುದಿಲ್ಲ ಎಂದು ಘೋಷಿಸಿತ್ತು. ಎರಡನೆಯದಾಗಿ ಸಮಾಜದಿಂದ ಬಂಧ ಪ್ರತಿರೋಧ. 'ನೀವೇ ದೇವರು ಆಗಲು ಹೊರಟಿದ್ದೀರಿ. ಅದು ಅಸಾಧ್ಯವಾದದ್ದರಿಂದ ನೀವು ದೆವ್ವವನ್ನು (ಫ್ರಾಂಕೆನ್‌ಸ್ಟೀನ್) ಸೃಜಿಸುವುದು ಖಚಿತ' ಎಂದು ಮೂದಲಿಸಿದರು. ಮೂರನೆಯದಾಗಿ ದೊಡ್ಡ ಆಸ್ಪತ್ರೆಗಳ ಆಡಳಿತ ವರ್ಗದವರ ಹಾಗೂ ಈ ಕ್ಷೇತ್ರದ ಹಿರಿಯ ವೈದ್ಯರು ಇವರಿಗೆ ತಾಂತ್ರಿಕ ಸಹಕಾರವನ್ನು ಬಿಡಿ, ಸಹಾನುಭೂತಿಯನ್ನೂ ತೋರಲಿಲ್ಲ. ಹಾಗಾಗಿ ಮೂವರು ಯಾವುದೇ ಒಂದು ಅನುಕೂಲತೆಗಳಿಲ್ಲದ, ಹಣಕಾಸಿನ ಕೊರತೆ ಸದಾ ಕಾಡುತ್ತಿದ್ದ, ಅನಾಮಧೇಯ ಆಸ್ಪತ್ರೆಯಲ್ಲಿ ತಮ್ಮ ಪ್ರಯೋಗಗಳನ್ನು ನಡೆಸುತ್ತಿದ್ದರು.

- ಪವಾಡ: 1977ರ ನವೆಂಬರ್ 10. ಲೆಸ್ಲಿಯ ಉದರದಲ್ಲಿ ರಂಧ್ರವನ್ನು ಕೊರೆದು, ಉದರದರ್ಶಕವನ್ನು ಆ ರಂಧ್ರದಲ್ಲಿ ತೂರಿಸಿ, ಲೆಸ್ಲಿ ಬ್ರೌನಳ ಒಂದೇ ಒಂದು ಅಂಡಾಣುವನ್ನು ಪ್ರತ್ಯೇಕಿಸಿದರು. ಆ ಅಂಡಾಣುವನ್ನು ಗಾಜಿನ ತಟ್ಟೆಯಲ್ಲಿಟ್ಟರು. ರಾಬರ್ಟ್ ಎಡ್ವರ್ಡ್ಸ್ ಆ ಗಾಜಿನ ತಟ್ಟೆಯೊಳಗೆ ಜಾನ್‌ನ ವೀರ್ಯವನ್ನು ಸೇರಿಸಿದರು. ಎರಡು ದಿನಗಳಾದವು. ಸೂಕ್ಷ್ಮದರ್ಶಕದಲ್ಲಿ ನೋಡಿದರು. ಅಂಡಾಣು-ವೀರ್ಯಾಣುಗಳೆರಡೂ ಸೇರಿ ಗರ್ಭವನ್ನು ಕಟ್ಟಿದ್ದವು. ಅಷ್ಟು ಮಾತ್ರವಲ್ಲ, ಅವು ನಿಗದಿತ ಅವಧಿಗೆ ಅನುಗುಣವಾಗಿ ದ್ವಿವಿಭಜನೆಗೊಂಡು ಎಂಟು ಜೀವಕೋಶಗಳ ಒಂದು ಎಳೇ ಎಳೇ ಭಾವಿ ಭ್ರೂಣಕ್ಕೆ ನಾಂದಿಯನ್ನು ಹಾಡಿದ್ದವು. ಅದನ್ನು ಎಚ್ಚರಿಕೆಯಿಂದ ಎತ್ತಿಕೊಂಡು, ಅದನ್ನು ಲೆಸ್ಲಿಯ ಗರ್ಭಾಶಯದ ಮೆತ್ತೆಯಲ್ಲಿ ಮಲಗಿಸಿದರು. ಆ ಎಳೇ ಎಳೇ ಭಾವಿ ಭ್ರೂಣವು ನಿಧಾನವಾಗಿ ಗರ್ಭಾಶಯದ ಮೆತ್ತೆಯಲ್ಲಿ ನಾಟಿಕೊಂಡಿತು.

ಒಂದಷ್ಟು ದಿನಗಳಾದ ಮೇಲೆ ಗರ್ಭಧಾರಣಾ ಪರೀಕ್ಷೆಯನ್ನು (ಪ್ರೆಗ್ನನ್ಸಿ ಟೆಸ್ಟ್) ಮಾಡಿದರು. ಇತ್ಯಾತ್ಮಕ ಫಲಿತಾಂಶವು ಬಂದಿತು. ಅಂದರೆ 'ಗರ್ಭ ಕಟ್ಟಿದೆ' ಎನ್ನುವುದಕ್ಕೆ ಪುರಾವೆಯು ದೊರೆಯಿತು. ಈ ಸುದ್ದಿಯು ಅದು ಹೇಗೋ ಆಸ್ಪತ್ರೆಯ ಗೋಡೆಗಳಿಂದ ಹೊರಗೆ ಹರಡಿತ್ತು. ಜಗತ್ತಿನ ಎಲ್ಲ ಮಾಧ್ಯಮಗಳು ಒಮ್ಮೆಲೇ ಓಲ್ಡ್ ಹ್ಯಾಮ್ ಜನರಲ್ ಹಾಸ್ಪಿಟಲ್ ಮೇಲೆ ಮುಗಿಬಿದ್ದವು. ಈಗ ನಿಜವಾದ ಸಮಸ್ಯೆಯು ಆರಂಭವಾಯಿತು. ಮಾಧ್ಯಮದವರ ಉಪಟಳವನ್ನು ಸಹಿಸಲಾಗದೆ ಆಸ್ಪತ್ರೆಯವರು ಪೊಲೀಸರ ನೆರವನ್ನು ಪಡೆದರು. 'ದೇವರೇ ಆಗಲು ಹೊರಟ ಪಾಖಂಡಿಗಳ ಆಸ್ಪತ್ರೆಯ ಮೇಲೆ ಬಾಂಬ್ ಹಾಕಿ ನೆಲಸಮ ಮಾಡುತ್ತೇವೆ' ಎಂಬ ಬೆದರಿಕೆಯ ಕರೆಗಳು ಬಂದವು. ಪಾಪರಾಜಿಗಳ (ಪ್ರಖ್ಯಾತ ಜನರ ಛಾಯಾಚಿತ್ರವನ್ನು ತೆಗೆದು ಹೆಚ್ಚಿನ ಬೆಲೆಗೆ ಪತ್ರಿಕೆಗಳಿಗೆ ಮಾರಾಟ ಮಾಡಲು ತುದಿಗಾಲಲ್ಲಿ ನಿಂತಿರುವ ಖಾಸಗಿ ಛಾಯಾಗ್ರಾಹಕರು) ಕಾಟವನ್ನು ತಡೆಯುವುದು ಒಂದು ದೊಡ್ಡ ಸವಾಲಾಗಿತ್ತು.

1978ರ ಜುಲೈ 25ರಂದು ರಾತ್ರಿ 11.47 ನಿಮಿಷಗಳಿಗೆ ಲೆಸ್ಲಿಯ ಉದರವನ್ನು ಛೇದಿಸಿ, ಸಿಸೇರಿಯನ್ ಮೂಲಕ ಪ್ರಸವ ಮಾಡಿಸಿದರು. ವೈದ್ಯರು ಇಡೀ ಪ್ರಸವ ಪ್ರಕ್ರಿಯೆಯನ್ನು ಚಿತ್ರೀಕರಿಸಿದರು. 'ಪ್ರನಾಳ ಶಿಶುವಿನ ತಂತ್ರಜ್ಞಾನದ ಮೂಲಕ ಆರೋಗ್ಯವಂತ ಶಿಶುವನ್ನು ಪಡೆಯಲು ಸಾಧ್ಯ' ಎನ್ನುವುದನ್ನು ಜಗತ್ತಿಗೆ ತೋರಿಸಬೇಕಾಗಿತ್ತು. ಹಾಗಾಗಿ ಪ್ರಸವದ ಪ್ರತಿಯೊಂದು ಘಟ್ಟವನ್ನು ದಾಖಲಿಸಿದರು.

ಬ್ರೌನ್ ದಂಪತಿಗಳು ತಮ್ಮ ಮಗುವಿಗೆ ಲೂಯಿಸ್ ಜಾಯ್ ಬ್ರೌನ್ ಎಂಬ ಹೆಸರನ್ನು ನೀಡಿದರು. ಈಗ ಹೊಸ ಸಮಸ್ಯೆಯು ಉದ್ಭವವಾಯಿತು. ಎಲ್ಲರಿಗೂ ಮಗುವನ್ನು ನೋಡುವ, ಮಾತನಾಡಿಸುವ, ಎತ್ತಿ ಮುದ್ದಾಡುವ ಆಸೆ. ಇದು ಕಿರಿಕಿರಿಯ ಮಟ್ಟವನ್ನು ತಲುಪಿದಾಗ, ಬ್ರೌನ್ ಕುಟುಂಬಕ್ಕೆ ಖಾಸಗಿ ಕ್ಷಣಗಳೇ ಇಲ್ಲದಂತಾದವು. ಮತ್ತೊಂದು ಕಡೆಯಿಂದ ಬ್ರೌನ್ ದಂಪತಿಗಳಿಗೆ ಅವಹೇಳನಕಾರಿ ಪತ್ರಗಳು, ಟೆಲಿಫೋನ್ ಕರೆಗಳು, ಗಾಜಿನ ಚೂರುಗಳ, ಪ್ಲಾಸ್ಟಿಕ್ ಭ್ರೂಣಗಳ ಪಾರ್ಸೆಲ್ಲುಗಳು ಬರಲಾರಂಭಿಸಿದವು. ಲೂಯಿಸ್ ಬ್ರೌನ್ 'ಆತ್ಮರಹಿತ'ಳಾಗಿ ಹುಟ್ಟಿದ್ದಾಳೆ ಎಂಬ ಸುದ್ದಿಯು ದೊಡ್ಡ ಪ್ರಮಾಣದಲ್ಲಿ ಹರಡಿತು.

- ಉತ್ತರ ದೊರೆಯಿತು: ಲೂಯಿಸ್ ಬ್ರೌನ್ ಸಹಜ ಮಗುವಲ್ಲ ಎನ್ನುವ ನಾನಾ ಕ್ಯಾತೆಗಳಿಗೆ ವೈಜ್ಞಾನಿಕ ಉತ್ತರವನ್ನು ನೀಡುವ ದಿನವೂ ಬಂದಿತು. ಬ್ರೌನ್ ದಂಪತಿಗಳು ಎರಡನೆಯ ಸಲ ಪ್ರನಾಳಶಿಶು ತಂತ್ರಜ್ಞಾನದ ಮೂಲಕ ಮತ್ತೊಂದು ಹೆಣ್ಣುಮಗು, ನಟಾಲಿಯನ್ನು ಪಡೆದರು. ನಟಾಲಿಯು ದೊಡ್ಡವಳಾಗಿ, ಸಹಜ ರೀತಿಯಲ್ಲಿ ಮಗುವೊಂದಕ್ಕೆ ಜನ್ಮವನ್ನು ನೀಡಿ, ಪ್ರನಾಳ ಶಿಶುವಿನ ತಂತ್ರಜ್ಞಾನದಿಂದ ಆರೋಗ್ಯವಂತ ಮಕ್ಕಳು ಹುಟ್ಟುತ್ತಾರೆ ಎನ್ನುವುದಕ್ಕೆ ಪುರಾವೆಯನ್ನು ಒದಗಿಸಿದಳು. ನಂತರ 2006ರಲ್ಲಿ ಲೂಯಿಸ್ ಬ್ರೌನ್, ಯಾವುದೇ ವೈದ್ಯಕೀಯ ತಂತ್ರಜ್ಞಾನದ ನೆರವಿಲ್ಲದೆ ನೈಜವಾಗಿ ಕ್ಯಾಮೆರೂನ್ ಎಂಬ ಮಗುವಿಗೆ ಜನ್ಮವಿತ್ತಳು.

ಇಂದು ಜಗತ್ತಿನಾದ್ಯಂತ ಕೃತಕ ಗರ್ಭಧಾರಣಾ ತಂತ್ರಜ್ಞಾನದ ಮೂಲಕ 12 ದಶಲಕ್ಷ ಮಕ್ಕಳು ಹುಟ್ಟಿದ್ದಾರೆ. ಬಂಜೆಂಬ ಶಬುದದಿಂದ ಮುಕ್ತಿಯನ್ನು ಪಡೆದಿದ್ದಾರೆ. ಲೂಯಿಸ್ ಬ್ರೌನ್ ಬ್ರಿಸ್ಟಲ್ ನಗರದ ಶಿಪ್ಪಿಂಗ್ ಕಂಪನಿಯಲ್ಲಿ ಕ್ಲರ್ಕ್ ಆಗಿ ಕೆಲಸ ಮಾಡುತ್ತಿದ್ದಾಳೆ. ಈಗ ಆಕೆಗೆ 48 ವರ್ಷಗಳು.

- ಮಹಾ ದುರಂತ: ಲೂಯಿಸ್ ಬ್ರೌನ್ ಹುಟ್ಟಿ, ಸರಿಯಾಗಿ 67 ದಿನಗಳ ನಂತರ, 1978ರ ಅಕ್ಟೋಬರ್ 3ರಂದು ಕನುಪ್ರಿಯ ಅಗರವಾಲ್ (ದುರ್ಗಾ) ಎಂಬ ಮಗುವು ಇದೇ ಕೃತಕ ಗರ್ಭಧಾರಣಾ ತಂತ್ರಜ್ಞಾನದ ಮೂಲಕ ಭಾರತದಲ್ಲಿ ಹುಟ್ಟಿತು. ಈ ತಂತ್ರಜ್ಞಾನವನ್ನು ಸ್ವತಂತ್ರವಾಗಿ ರೂಪಿಸಿ, ಮಗುವಿನ ಜನನಕ್ಕೆ ಕಾರಣರಾದವರು ಡಾ. ಸುಭಾಷ್ ಮುಖೋಪಾಧ್ಯಾಯ (1931-1981) ಎಂಬ ವೈದ್ಯರು. ತಮ್ಮ ಪುಟ್ಟ ಅಪಾರ್ಟ್‌ಮೆಂಟಿನ ರೆಫ್ರಿಜರೇಟರನ್ನು ಬಳಸಿಕೊಂಡು ಈ ತಂತ್ರಜ್ಞಾನವನ್ನು ರೂಪಿಸಿಕೊಳ್ಳುವಲ್ಲಿ ಅವರು ಅನೇಕ ವಿಶ್ವದಾಖಲೆಗಳನ್ನು ಮಾಡಿದರು.
- ಇವರು ಅಂಡಾಶಯವು ಹೆಚ್ಚು ಹೆಚ್ಚು ಅಂಡಗಳನ್ನು ಉತ್ಪಾದಿಸುವಂತೆ ಪ್ರಚೋದನೆಯನ್ನು ನೀಡುವ ಗೊನಡೋಟ್ರೋಫಿನ್ನುಗಳನ್ನು ಮೊದಲ ಬಾರಿಗೆ ಬಳಸಿದರು.
- ಇವರು ಉದರ ದರ್ಶಕದ ಬದಲು ಯೋನಿ ಮುಖಾಂತರ ಅಂಡಾಣುಗಳನ್ನು ಸಂಗ್ರಹಿಸಿದರು. ಇದು ಕಡಿಮೆ ವೆಚ್ಚದ ಹಾಗೂ ಹೆಚ್ಚು ಸುರಕ್ಷತೆಯ ವಿಧಾನವಾಗಿದೆ.
- ಇವರು 8 ಜೀವಕೋಶಗಳ ಎಳೇ ಭ್ರೂಣವನ್ನು ಕಾಪಾಡಲು 'ಶೀತಲಸಂರಕ್ಷಣೆ' (ಕ್ರಯೋಪ್ರಿಸರ್ವೇಶನ್) ತಂತ್ರಜ್ಞಾನವನ್ನು ರೂಪಿಸಿದರು. ಅಗತ್ಯ ಬಿದ್ದಾಗ ಶೀತಲೀಕರಣಕ್ಕೆ ಒಳಗಾಗಿದ್ದ ಭ್ರೂಣವನ್ನು ಕೋಣೆಯ ಉಷ್ಣತೆಗೆ ತಂದು ಗರ್ಭಾಶಯದಲ್ಲಿ ನಾಟಿಸಬಹುದು ಎನ್ನುವುದನ್ನೂ ತೋರಿಸಿಕೊಟ್ಟರು.

ಮುಖೋಪಾಧ್ಯಾಯ ಅವರ ಬುದ್ಧಿವಂತಿಕೆ, ಪ್ರಯೋಗಶೀಲತೆ, ಸಂಶೋಧನಾ ಸಾಮರ್ಥ್ಯವನ್ನು ಕಂಡು ಕರುಬಿದ ಅವರ ಸಹುದ್ಯೋಗಿಗಳೇ, ಅವರ ಮೇಲೆ ಆರೋಪಗಳನ್ನು ಹೊರಿಸಿ, ಸರಕಾರಿ ವಿಚಾರಣೆಯು ನಡೆಯುವಂತೆ ಮಾಡಿದರು. 'ಜಗತ್ತಿನಲ್ಲಿ ಯಾರೂ ಮಾಡದೇ ಇರುವಂಥ ಸಂಶೋಧನೆಯನ್ನು ಸರಕಾರಿ ಕಾಲೇಜಿನ ವೈದ್ಯನೊಬ್ಬನು ಮಾಡುತ್ತಾನೆ ಎಂದರೆ ಅದು ನಂಬಲಸಾಧ್ಯ' ಎಂದು ಅವಮಾನವನ್ನು ಮಾಡಿದರು. ಮುಖೋಪಾಧ್ಯಾಯ ಅವರು ಜೂನ್ 1981ರಲ್ಲಿ ಆತ್ಮಹತ್ಯೆ ಮಾಡಿಕೊಂಡರು.

20 ವರ್ಷಗಳ ನಂತರ, ಡಾ.ಟಿ.ಸಿ ಆನಂದಕುಮಾರ್ ಎಂಬ ವೈದ್ಯರು ಕೃತಕ ಗರ್ಭದಾರಣಾ ತಂತ್ರಜ್ಞಾನದ ಮೂಲಕ, 'ಹರ್ಷ' ಎನ್ನುವ ಭಾರತದ ಮೊದಲ ಪ್ರನಾಳಶಿಶುವಿನ ಜನನಕ್ಕೆ ಕಾರಣರಾದರು ಎನ್ನುವ ಸುದ್ದಿಯು ಪತ್ರಿಕೆಗಳಲ್ಲಿ ಬಂದಿತು. ಆದರೆ ಆನಂದಕುಮಾರ್ ಅವರು, ಮುಖೋಪಾಧ್ಯಾಯ ಅವರ ಕೈಬರಹದ ಟಿಪ್ಪಣಿಗಳನ್ನೆಲ್ಲ ಅಧ್ಯಯನ ಮಾಡಿ, ಅವರೇ 'ಭಾರತೀಯ ಕೃತಕ ಗರ್ಭಧಾರಣಾ ತಂತ್ರಜ್ಞಾನದ ಪಿತಾಮಹ' ಎಂದು ಘೋಷಿಸಿದರು. ಮುಖೋಪಾಧ್ಯಾಯರ ಜೀವನ್ನು ಆಧರಿಸಿದ 'ಏಕ್ ಡಾಕ್ಟರ್ ಕಿ ಮೌತ್' ಎನ್ನುವ ಚಿತ್ರವು ಅಂತರ್ಜಾಲದಲ್ಲಿ ದೊರೆಯುತ್ತಿದೆ.

ಗೊತ್ತಿಲ್ಲ ಎನ್ನುವುದು ಗೊತ್ತಿರಲಿ



• ಬೇಲೂರು ರಾಮಮೂರ್ತಿ

ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳ ಇಲ್ಲ ಎನ್ನುವ ಮಾತಿದೆ. ಇದರ ಅರ್ಥ ಏನೆಂದರೆ, ಯಾರೇ ಒಬ್ಬ ವ್ಯಕ್ತಿ ನನಗೆ ಎಲ್ಲಾ ಗೊತ್ತಿದೆ ಎಂದುಕೊಂಡರೂ ಅವನಿಗೆ ಗೊತ್ತಿಲ್ಲದಿರುವುದು ಇನ್ನೂ ಇದ್ದೇ ಇರುತ್ತದೆ. ಎಲ್ಲರೂ ಎಲ್ಲವನ್ನೂ ಕಲಿಯುವುದು ಸಾಧ್ಯವಿಲ್ಲ. ಹೀಗಾಗಿ ಪ್ರತಿಯೊಬ್ಬ ವ್ಯಕ್ತಿಯೂ ಎಷ್ಟೇ ವಯಸ್ಸಾಗಿದ್ದರೂ ಅವನು ವಿದ್ಯಾರ್ಥಿಯೇ. ಆದರೆ ಇದು ಗೊತ್ತಿರಬೇಕು ಅಷ್ಟೆ. ಗೊತ್ತಿಲ್ಲ ಎನ್ನುವುದು ಗೊತ್ತಾದರೆ ಮಾತ್ರ ಗೊತ್ತುಮಾಡಿಕೊಳ್ಳಬೇಕು ಎನ್ನುವುದು ಗೊತ್ತಾಗುತ್ತದೆ. ಎಲ್ಲ ಗೊತ್ತಿದೆ ಅಂದರೆ ಇನ್ನು ಗೊತ್ತಾಗು ವುದು ಏನೂ ಇಲ್ಲ ಎನ್ನುವ ಗತ್ತು ಬೆಳೆಯುತ್ತದೆ.

'ನಾನೇ ಎಲ್ಲಾ ಅಂದುಕೊಂಡರೆ ನೀನೇನೂ ಅಲ್ಲ, ನಾನೇನೂ ಅಲ್ಲ ಎಂದುಕೊಂಡರೆ ನೀನೇ ಎಲ್ಲ' ಎನ್ನುವಂತೆ ಗೊತ್ತಿಲ್ಲ ಎಂದುಕೊಂಡೇ ಇರುವುದು ಒಳ್ಳೆಯದು. ಒಂದು ವಿಷಯಕ್ಕೆ ಹಲವು ಆಯಾಮಗಳಿರುತ್ತವೆ. ಎಲ್ಲರೂ ಎಲ್ಲವನ್ನೂ ತಿಳಿದಿರುವುದು ಸಾಧ್ಯವಿಲ್ಲ. ಹೀಗಿರುವಾಗ ನನಗೆ ಗೊತ್ತಿರುವುದೇ ಅಂತಿಮ ಎಂದು ಸಾರುವುದು ಎಷ್ಟು ಸರಿ. 'ನಾನೂ ಸರಿ, ಅವರೂ ಸರಿ' ಎನ್ನುವ ವಿಶಾಲ ಮನೋಭಾವ ಇರಬೇಕು ಅಷ್ಟೆ. ಅಷ್ಟಕ್ಕೂ 'ಅಭಿಪ್ರಾಯಭೇದ' ಇರಬೇಕೇ ಹೊರತು, 'ವ್ಯಕ್ತಿಭೇದ' ಇರಬಾರದು. ಆದರೆ ನಮ್ಮಲ್ಲೀಗ ಆಗುತ್ತಿರುವುದು ಅದೇ- ''ಅವನು ನೋಡು, ಎಲ್ಲವೂ ತನಗೇ ಗೊತ್ತಿದೆ ಅನ್ನುವಂತೆ ಗತ್ತಿನಂತೆ ಇರುತ್ತಾನೆ, ಜತೆಗೆ ಇತರರಿಗೆ ಗೊತ್ತಿರುವುದು ಸರಿಯೇ ಅಲ್ಲ ಎನ್ನುವ ಗತ್ತು ಬೇರೆ'' ಎಂದು ನಾವು ಇಡಿಯಾಗಿ ವ್ಯಕ್ತಿಯನ್ನೇ ದೂಷಿಸುತ್ತೇವೆ. ಇಂಥವರನ್ನು ಕುರಿತೇ ಸರ್ವಜ್ಞ 'ಬಲ್ಲೆನೆಂಬುವ ಮಾತು ಎಲ್ಲವೂ ಹುಸಿ ಕಾಣೋ, ಬಲ್ಲರೆ ಬಲ್ಲೆನೆನಬೇಡ, ಸುಮ್ಮನಿರಬಲ್ಲವನೇ ಬಲ್ಲ ಸರ್ವಜ್ಞ' ಎಂದಿದ್ದಾನೆ. 'ನನಗೆ ಗೊತ್ತಿರುವುದು ಸರಿ, ಹಾಗೇ ನಿನಗೆ ಗೊತ್ತಿರುವುದೂ ಸರಿ' ಎನ್ನುವುದು ಸರಿಯಾದ ನಡವಳಿಕೆ. ಅಥವಾ, 'ನಾನು ಹೀಗೆ ತಿಳಿದುಕೊಂಡಿದ್ದೆ, ಆದರೆ ನೀನು ಅದು ಹೇಗೆ ಆ ರೀತಿ ತಿಳಿದುಕೊಂಡೆ?' ಎನ್ನುವ ಮೂಲಕ ಮತ್ತೊಬ್ಬರು ಕಲಿತಿರುವ ರೀತಿಯನ್ನು ನಾವೂ ಕಲಿಯುವುದು ಒಳ್ಳೆಯದು. ಒಟ್ಟಿನಲ್ಲಿ ವಿಷಯಗಳ ಮಂಥನವಾಗಬೇಕು.

'ಮನುಷ್ಯ ಎಷ್ಟೇ ಬೆಳೆದರೂ, ದೃಷ್ಟಿ ನಭಕ್ಕೆ ನೆಟ್ಟಿದ್ದರೂ, ಅವನ ಕಾಲು ನೆಲದ ಮೇಲೇ ಇರಬೇಕು' ಎನ್ನುತ್ತಾರೆ ಬಲ್ಲವರು. ಅಂದರೆ, ಮನುಷ್ಯ ತಾನು ಎಷ್ಟು ಜ್ಞಾನಿ ಅಂದುಕೊಂಡರೂ, ತನಗಿಂತ ದೊಡ್ಡ ಜ್ಞಾನಿಗಳಿದ್ದಾರೆ ಎನ್ನುವುದನ್ನು ತಿಳಿದಿರಬೇಕು. ಹಾಗೆಯೇ ತನ್ನ ಎದುರಿಗೆ ಜ್ಞಾನಿಗಳು ಬಂದರೆ ಅವರನ್ನು ಗೌರವಿಸಬೇಕು. ನಾವು ಯಾರ ಎದುರಿಗಾದರೂ ಹೋದಾಗ, ನಮ್ಮ ಜ್ಞಾನವನ್ನು ಪಕ್ಕಕ್ಕಿಟ್ಟು ಅವರ ಜ್ಞಾನವನ್ನು ಗುರುತಿಸಿ ಗೌರವಿಸುವುದು ಒಳ್ಳೆಯದು. ನಮ್ಮೆದುರು ಇರುವವರಿಗೆ ತಿಳಿದಿರುವುದು ಕಡಿಮೆ ಅಥವಾ ತಪ್ಪು ಅಂತ ಒಂದೊಮ್ಮೆ ಅನಿಸಿದರೂ ಏನೂ ಹೇಳದೆ ಸುಮ್ಮನಿರುವುದು ಲೇಸು. ಹಾಗೆ ಮಾಡದೆ, 'ಯಾವೋನ್ರೀ ನಿಮಗೆ ಹೇಳಿಕೊಟ್ಟಿದ್ದು?' ಎನ್ನುವಂತೆ ಮಾತಾಡುವುದು ಸರಿಯಲ್ಲ. ಕಾಳಿದಾಸನು ತಾನು ಎಷ್ಟೇ ಪಂಡಿತನಾಗಿದ್ದರೂ, ಭೋಜರಾಜನ ಆಸ್ಥಾನಕ್ಕೆ ಬಂದ ಯಾವ ಪಂಡಿತರನ್ನೂ ಅವಮಾನಿಸಲಿಲ್ಲ, ಮೂದಲಿಸಲಿಲ್ಲ; ಬದಲಿಗೆ 'ನೀವಿನ್ನೂ ಕಲಿಯುವುದಿದೆ' ಎಂಬುದನ್ನು ಅವರಿಗೆ ಪರೋಕ್ಷವಾಗಿ ಅರ್ಥಮಾಡಿಸುತ್ತಿದ್ದ. ಇದು ನಿಜವಾದ ಪಂಡಿತರ ಲಕ್ಷಣ.

ಪಂಚಭೂತಗಳು ತಮ್ಮಲ್ಲಿರುವ ಅಗಾಧ ಮಾಹಿತಿ ಭಂಡಾರವನ್ನು ನಮ್ಮ ಮುಂದೆ ಸುರಿದು, 'ನಿನಗೆಷ್ಟು ಬೇಕೋ ತೆಗೆದುಕೋ' ಎನ್ನುವಂತೆ ಇಟ್ಟಿರುತ್ತದೆ, ಎಲ್ಲರೂ ತಂತಮ್ಮ ಶಕ್ತಿಗೆ ತಕ್ಕಷ್ಟು ತೆಗೆದುಕೊಂಡಿರುತ್ತಾರೆ. ಹೀಗಾಗಿ, 'ಗೊತ್ತಿರುವವರು' ಮತ್ತು 'ಗೊತ್ತಿಲ್ಲದವರು' ಎನ್ನುವ ಭೇದವೇ ಇಲ್ಲ. ಅಷ್ಟಕ್ಕೂ, ನಮಗಿಂತ ಕಡಿಮೆ ತಿಳಿದಿರುವವರನ್ನು ಗೌರವಿಸುವುದರಲ್ಲಿ ತಪ್ಪೇನಿದೆ? 'ನನಗೆ ಗೊತ್ತಿರುವುದು ಇಷ್ಟು' ಎನ್ನುತ್ತಲೇ ಮಾತು ಪ್ರಾರಂಭಿಸುವುದು ಸರಿಯಾದ ಕ್ರಮ. ಶಿರದಲ್ಲಿ ಭಾರವಾದ ಗೊನೆಯನ್ನುಹೊತ್ತಿರುವ ಬಾಳೆಗಿಡ ನೆಲಕ್ಕೆ ಬಾಗುತ್ತದೆ- 'ನನ್ನ ಈ ಭಾರಕ್ಕೆ ಕಾರಣ ನೀನು' ಎಂಬ ಪವಿತ್ರಭಾವವನ್ನು ಅಂಜಲೀಬದ್ಧವಾಗಿ ಭೂತಾಯಿಗೆ ಅರ್ಪಿಸುತ್ತಿದೆ ಎನ್ನುವಂತೆ. ಹಾಗೆಯೇ, ಶ್ರೇಷ್ಠ ಜ್ಞಾನವನ್ನು ಗಳಿಸಿರುವ ವ್ಯಕ್ತಿಯು, 'ನನಗೆ ಲಭ್ಯವಾಗಿರುವ ಜ್ಞಾನಕ್ಕೆ ಈ ಭೂಮಿ, ಈ ಪಂಚಭೂತಗಳು, ನನ್ನೊಡನೆ ಇರುವ ವ್ಯಕ್ತಿಗಳು ಕಾರಣ' ಎನ್ನುವಂತೆ ತಲೆಬಾಗಿ ನಡೆಯಬೇಕು. ಅದು ನಿಜವಾದ ಜ್ಞಾನಿಯ ಲಕ್ಷಣ. ಇನ್ನೊಂದು ಸಂಗತಿ ಎಂದರೆ, ಗೊತ್ತಿರುವವರು ಗೊತ್ತಿಲ್ಲದವರನ್ನು ಹಂಗಿಸಿ ಮಾತನಾಡಬಾರದು, 'ಕತ್ತೆ ತರಹ ವಯಸ್ಸಾಗಿದೆ ನಿನಗೆ, ಅಷ್ಟೂ ಗೊತ್ತಿಲ್ವಾ?' ಎನ್ನಬಾರದು. ಏಕೆಂದರೆ, 'ಈತನಿಗೆ ಏನೂ ಗೊತ್ತಿಲ್ಲ' ಅಂತ ನಾವು ಅಂದುಕೊಂಡಿರುವ ಮನುಷ್ಯ ತನಗೆ ಗೊತ್ತಿರುವ ಯಾವುದೋ ವಿಷಯವನ್ನು ನಮ್ಮ ಮುಂದೆ ಹೇಳಿದಾಗ, ಅದು ನಮಗೆ ಗೊತ್ತಿಲ್ಲದಿದ್ದಾಗ, ಅವನ ಮುಂದೆ ನಾವು ತಲೆ ತಗ್ಗಿಸಬೇಕಾಗುತ್ತದೆ. ಒಟ್ಟಿನಲ್ಲಿ, 'ನಮಗೆ ಗೊತ್ತಿರುವುದಷ್ಟೇ ಸತ್ಯ ಅಲ್ಲ' ಮತ್ತು 'ನಾವು ಗೊತ್ತುಮಾಡಿಕೊಳ್ಳಬೇಕಾದ ವಿಷಯ ಇನ್ನೂ ಇದೆ' ಎಂಬುದನ್ನು ನಾವು ಅರಿತಿದ್ದರೆ ಸಾಕು...

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಟೆ



ಎಡದಿಂದ ಬಲಕ್ಕೆ

1. ಹುಟ್ಟಿನಿಂದಲೇ ಬಂದಿರುವ ಸ್ವಭಾವ (4)
3. ಎರಡು ನದಿಗಳು ಸೇರುವ ಸ್ಥಳ (3)
6. ಸಾರವೇ ಇಲ್ಲದ್ದು (3)
7. ತನ್ನ ಜತೆಗೆ ತಾನೇ ಮಾತನಾಡಿಕೊಳ್ಳುವುದು (3)
8. ದೃಢಪಡಿಸುವ ಸಾಕ್ಷ್ಯ (4)
10. ಮಾನದೊಂದಿಗೆ ಬಂದಿರುವ ಗಾಳಿ (4)
12. ಮರುಗುವವನಿಗೆ ತೋರಿದ ಕರುಣೆ (3)
13. ಗರತಿಗೆ ಕಾಣಿಸಿದ ವ್ಯಾಯಾಮ ಶಾಲೆ (3)
15. ತಂದೆ-ತಾಯಿಯನ್ನು ಕಳೆದುಕೊಂಡು ಅನಾಥವಾದವನು (3)
16. ಕಟ್ಟಡವೊಂದು ಭದ್ರವಾಗಿ ನಿಲ್ಲಲು ಬೇಕಾದ ಬುನಾದಿ (4)

ಮೇಲಿಂದ ಕೆಳಕ್ಕೆ

1. ಚಿಕ್ಕ ಚಿಕ್ಕ ತೂತುಗಳಿರುವ ಸೌಟು (3)
2. ಹೊಸದಾಗಿ ಕಂಡಿರುವ ಬೆಣ್ಣೆ (4)
4. ಮಾತೃಭಾಷೆಗೆ ಮತ್ತೊಂದು ಹೆಸರು (4)
5. ಹೆಪ್ಪುಗಟ್ಟಿದ ಹಾಲನ್ನು ಹೀಗೆನ್ನುವರು (3)
7. ಮಾನವನ ಸ್ವಾಭಾವಿಕವಾದ ಗುಣ (3)
9. ವಾದ್ಯವನ್ನು ನುಡಿಸುವವನು (3)
10. ಮನುಷ್ಯರ ನಡುವೆ ಮಾಡುವ ಭೇದಭಾವ (4)
11. ಕೈಯಲ್ಲಿರುವ ಹಣ (3)
12. ಹಳೆಯ ಸಂಪ್ರದಾಯಗಳನ್ನು ತಪ್ಪದೇ ಅನುಸರಿಸುವವನು (4)
14. ಪಾವತಿ ಅಥವಾ ಹಿಂತಿರುಗಿಸುವುದು (3)

ಸರಿಯುತ್ತರಗಳು

ಮಥುರಾ ಎಂಬ ದಿವ್ಯಧಾಮದ ರಹಸ್ಯ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಈ ಭೂಮಿಯ ಮೇಲೆ ಸಾವಿರಾರು ಪುಣ್ಯಕ್ಷೇತ್ರಗಳಿವೆ. ಕಾಶಿ, ರಾಮೇಶ್ವರ, ಬದರಿನಾಥ ಹೀಗೆ ಪ್ರತಿಯೊಂದು ಕ್ಷೇತ್ರವೂ ತನ್ನದೇ ಆದ ಮಹತ್ವವನ್ನು ಹೊಂದಿದೆ. ಆದರೆ, ಸ್ವತಃ ಭೂದೇವಿಗೆ ಒಂದು ಸಂದೇಹವಿತ್ತು. 'ಈ ಸಮಸ್ತ ಪವಿತ್ರ ಸ್ಥಳಗಳ ಪೈಕಿ ಮಥುರಾ ಮತ್ತು ವೃಂದಾವನಕ್ಕೆ ಮಾತ್ರ ಅಂಥ ವಿಶೇಷ ಸ್ಥಾನ ಏಕೆ? ಇವನ್ನು ಪರಮ ಪವಿತ್ರ ಎಂದು ಕರೆಯುವುದೇಕೆ?' ಎಂದು ಅವಳು ಆಲೋಚಿಸುತ್ತಿದ್ದಳು.

ಅವಳ ಈ ಜಿಜ್ಞಾಸೆಗೆ ಉತ್ತರ ನೀಡಲು ಭಗವಂತನೇ ಒಂದು ಲೀಲೆಯನ್ನು ನಡೆಸಿದನು. ಹಿರಣ್ಯಾಕ್ಷನೆಂಬ ರಾಕ್ಷಸನು ಭೂಮಿಯನ್ನು ಅಪಹರಿಸಿ ವಿಶ್ವದ ಪಾತಾಳಕ್ಕೆ ಎಸೆದಾಗ, ಭಗವಂತನು 'ವರಾಹ' ಅವತಾರವನ್ನು ತಳೆದು ಭೂಮಿಯನ್ನು ಉದ್ಧರಿಸಲು ಮುಂದಾದನು. ತನ್ನ ದಂಷ್ಟ್ರದ (ಕೋರೆಹಲ್ಲು) ಮೇಲೆ ಭೂದೇವಿಯನ್ನು ಹೊತ್ತು ತರುವಾಗ, ಭಗವಂತನು ಆಕಾಶದ ಮಧ್ಯದಲ್ಲಿ ಕ್ಷಣಕಾಲ ನಿಂತು ಅವಳಿಗೆ ಒಂದು ಅದ್ಭುತ ದೃಶ್ಯವನ್ನು ತೋರಿಸಿದನು.

ಸುತ್ತಲೂ ಪ್ರಳಯಕಾಲದ ಮಹಾಪ್ರವಾಹ, ಇಡೀ ವಿಶ್ವವೇ ಜಲಾವೃತವಾಗಿತ್ತು. ಆದರೆ ಆ ಜಲರಾಶಿಯ ಮಧ್ಯೆ ಒಂದು ತಾಣ ಮಾತ್ರ ಕಿಂಚಿತ್ತೂ ಅಲುಗಾಡದೆ, ಅತ್ಯಂತ ತೇಜೋಮಯವಾಗಿ ಕಂಗೊಳಿಸುತ್ತಿತ್ತು. ಅದೇ ಮಥುರಾ ಮಂಡಲ! ಪ್ರಳಯದ ನೀರು ಅದನ್ನು ಸ್ಪರ್ಶಿಸಲೂ ಸಾಧ್ಯವಾಗುತ್ತಿರಲಿಲ್ಲ. ಆಗ ವರಾಹ ರೂಪಿ ಭಗವಂತನು ಭೂದೇವಿಗೆ ಹೀಗೆ ವಿವರಿಸಿದನು: ''ದೇವೀ, ಮಥುರೆಯು ಕೇವಲ ಮಣ್ಣು-ಕಲ್ಲುಗಳಿಂದಾದ ಭೌತಿಕ ಪ್ರದೇಶವಲ್ಲ. ಅದು ನನ್ನ ನಿತ್ಯಧಾಮ. ಪ್ರಕೃತಿಯ ವಿಕೋಪಗಳಿಗೂ ಮೀರಿದ ಆಧ್ಯಾತ್ಮಿಕ ಶಕ್ತಿಯ ನೆಲೆವೀಡು ಅದು''. ಈ ದರ್ಶನದಿಂದ ಭೂದೇವಿಯ ಅಹಂಕಾರ ಮತ್ತು ಸಂದೇಹಗಳು ಕರಗಿಹೋದವು.

ಮಥುರಾ ಎಂದರೆ ಅದು ಭಗವಂತನ ಜನ್ಮಸ್ಥಳ ಮಾತ್ರವಲ್ಲ, ಅದು ನಮ್ಮೊಳಗಿನ ಭಕ್ತಿಯ ಜಾಗೃತಿಯ ಸಂಕೇತ. ಲೌಕಿಕ ಜಗತ್ತಿನ ಕಷ್ಟಗಳೆಂಬ ಪ್ರವಾಹ ನಮ್ಮನ್ನು ಸುತ್ತುವರಿದಾಗ, ಮಥುರೆಯಂಥ ಕ್ಷೇತ್ರದಲ್ಲಿ ಹೊಮ್ಮುವ ಆಧ್ಯಾತ್ಮಿಕ ಚಿಂತನೆ ಮಾತ್ರ ನಮಗೆ ರಕ್ಷಣೆ ನೀಡಬಲ್ಲದು. ವಿನಮ್ರತೆ, ಶರಣಾಗತಿ ಮತ್ತು ಪ್ರೇಮದ ಸಂಕೇತವಾಗಿ ಮಥುರೆ ನಿಂತಿದೆ.

''ಯತ್ ಪಾದ ಪಂಕಜ ಪಲಸ, ವಿಳಾಸ ಭಕ್ತ್ಯ ತಮ್ ಅರನಂ, ಭಜ ವಾಸುದೇವಂ'' ಎನ್ನುತ್ತದೆ ಭಾಗವತದ ಒಂದು ಶ್ಲೋಕ. ಅಂದರೆ, ಯಾರು ಭಗವಂತನ ಪಾದಕಮಲಗಳಲ್ಲಿ ನಿರಂತರ ಭಕ್ತಿಯನ್ನು ಇಟ್ಟಿರುತ್ತಾರೋ, ಅವರು ಕರ್ಮದ ಬಂಧನಗಳಿಂದ ಮುಕ್ತರಾಗುತ್ತಾರೆ. ಸಂಸಾರದ ಸುಳಿಯಲ್ಲಿ ಸಿಲುಕಿದ ನಮಗೆ, ವಾಸುದೇವನ ಭಕ್ತಿಯೇ ಪರಮ ಔಷಧ ಎಂದರ್ಥ. ನಮ್ಮ ಪುರಾಣಗಳು ಕೇವಲ ಕಥೆಗಳಲ್ಲ, ಅವು ಜೀವನದ ಪರಮಸತ್ಯವನ್ನು ಅರಿಯಲು ನಮಗೆ ಹಿರಿಯರು ನೀಡಿದ ದಾರಿದೀಪಗಳು. ಮಥುರಾ ಮತ್ತು ವೃಂದಾವನದ ಪವಿತ್ರತೆಯ ಬಗೆಗಿನ ಒಂದು ಅಪರೂಪದ ಕಥೆಯಿದು.

ಕೆಲವೊಮ್ಮೆ ಜೀವನದಲ್ಲಿ ಅನೇಕ ಅಡೆತಡೆಗಳು ಬರುತ್ತಿರುತ್ತವೆ. ಇನ್ನೇನು ಎಲ್ಲ ಸರಿಹೋಯಿತು ಎನ್ನುವಷ್ಟರಲ್ಲಿ ಮತ್ತೆ ತೊಂದರೆಗಳು ಎದುರಾಗುತ್ತವೆ. ಆದರೆ ಕೆಲವೊಮ್ಮೆ ಬಂದಷ್ಟೇ ಸುಲಭವಾಗಿ ಆ ತೊಂದರೆಗಳು ಪರಿಹಾರ ಕೂಡ ಆಗುತ್ತವೆ. ಅದಕ್ಕಾಗಿ ನಾವು ವಿಶೇಷ ಶ್ರಮವನ್ನೇನೂ ಪಟ್ಟಿರುವುದಿಲ್ಲ. ಇದು ಹೇಗೆ ಸಾಧ್ಯವಾಯಿತು ಎನ್ನುವ ಜಿಜ್ಞಾಸೆ ಮನಸ್ಸಿನಲ್ಲಿ ಮೂಡುತ್ತದೆ. ಇದಕ್ಕೆ ಕಾರಣ ನಮ್ಮ ಹಿರಿಯರ ಆಶೀರ್ವಾದ ಮತ್ತು ನಮ್ಮ ಮನೆಯ ಭಕ್ತಿಯ ವಾತಾವರಣ. ಯಾವ ಮನೆಯಲ್ಲಿ ನಿತ್ಯ ದೇವರ ಪೂಜೆ ಮಂತ್ರ ಪಠಣ, ಗುರು-ಹಿರಿಯರನ್ನು ಗೌರವಿಸುವ ಸಂಸ್ಕಾರ ಇರುತ್ತದೋ ಅಲ್ಲಿ ಎದುರಾದ ಕಷ್ಟಗಳು ಕೂಡ ಅದೇ ದೇವರ, ಗುರು-ಹಿರಿಯರ ಕೃಪೆ, ಆಶೀರ್ವಾದದಿಂದ ಸುಲಭವಾಗಿ ಪರಿಹಾರವಾ ಗುತ್ತಾ ಹೋಗುತ್ತವೆ. ಕೆಲವೊಮ್ಮೆ ಅನೇಕ ಸಮಸ್ಯೆಗ ಳನ್ನು ಬಗೆಹರಿಸಲು ನಮಗೆ ಹಣಕ್ಕಿಂತ ಆಶೀರ್ವಾದ ಬಹಳ ಮುಖ್ಯವಾಗುತ್ತದೆ. ಆದ್ದರಿಂದಲೇ ಅದನ್ನು ನಿರಂತರವಾಗಿ ಕಾಯ್ದಿರಿಸಿಕೊಳ್ಳಬೇಕು. ನಮ್ಮ ಒಳ್ಳೆಯ ಗುಣ, ವಿನಮ್ರತೆ ಮತ್ತು ಭಕ್ತಿ ಎಂದಿಗೂ ನಮ್ಮ ಕೈಬಿಡುವುದಿಲ್ಲ.

ಸಮಾಚಾರ ಸಣ್ಣದಲ್ಲ

ಗುಜರಾತ್ ಟೈಟನ್ಸ್‌ಗೆ ಹೇಡನ್ ಕೋಚ್



ದೆಹಲಿ: ಈ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲಿ ಗುಜರಾತ್ ಟೈಟನ್ಸ್ ತಂಡಕ್ಕೆ ಬ್ಯಾಟಿಂಗ್ ಕೋಚ್ ಆಗಿ ಆಸ್ಟ್ರೇಲಿಯಾ ಮಾಜಿ ಆರಂಭಿಕ ಮ್ಯಾಥ್ಯೂ ಹೇಡನ್ ನೇಮಕಗೊಂಡಿದ್ದಾರೆ. ಮಂಗಳವಾರ ತನ್ನ ಸೋಶಿಯಲ್ ಮೀಡಿಯಾ ಖಾತೆಗಳಲ್ಲಿ ಪೋಸ್ಟ್ ಹಾಕುವ ಮೂಲಕ ಗುಜರಾತ್ ಫ್ರಾಂಚೈಸಿ ಈ ಮಾಹಿತಿ ನೀಡಿದೆ. ಅಂತಾರಾಷ್ಟ್ರೀಯ ಹಾಗೂ ಐಪಿಎಲ್ ಸೇರಿದಂತೆ ಫ್ರಾಂಚೈಸಿ ಲೀಗ್‌ಗಳಲ್ಲಿ ಅಪಾರ ಅನುಭವವನ್ನು ಹೊಂದಿರುವ ಮ್ಯಾಥ್ಯೂ ಹೇಡನ್ ಅವರ ಸೇರ್ಪಡೆ ಯಾಗುವ ಗುಜರಾತ್ ಕೋಚಿಂಗ್ ವಿಭಾಗಕ್ಕೆ ಇದೀಗ ಭಾರೀ ಬಲ ಬಂದಂತಾಗಿದೆ. ಈ ಆವೃತ್ತಿಯಲ್ಲಿಯೂ ಶುಭಮನ್ ಗಿಲ್ ನಾಯಕತ್ವದಲ್ಲಿ ಗುಜರಾತ್ ಕಣಕ್ಕೆ ಇಳಿಯಲಿದೆ. ಕಳೆದ ಐಪಿಎಲ್ ಟೂರ್ನಿಯಲ್ಲಿ ಗುಜರಾತ್ ಟೈಟನ್ಸ್ ತಂಡ, 3ನೇ ಸ್ಥಾನ ಪಡೆಯುವ ಮೂಲಕ ತನ್ನ ಅಭಿಯಾನ ಮುಗಿಸಿತ್ತು. ಎಲಿಮಿ ನೇಟರ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರು ಸೋಲುವ ಮೂಲಕ ಅದು ಟೂರ್ನಿ ಯಿಂದ ಹೊರ ಬಿದ್ದಿತ್ತು. ಇದೀಗ ಮ್ಯಾಥ್ಯೂ ಹೇಡನ್ ಆಗಮನದಿಂದ ಗುಜರಾತ್ ತಂಡ ತನ್ನ ಬ್ಯಾಟಿಂಗ್ ವಿಭಾಗ ಇನಷ್ಟು ಬಲಿಷ್ಠವಾಗಲಿದೆ. ಮ್ಯಾಥ್ಯೂ ಹೇಡನ್ ಆಸ್ಟ್ರೇಲಿಯಾ ಪರ ಒಟ್ಟು 273 ಪಂದ್ಯಗಳನ್ನು ಆಡಿ, 15000ಕ್ಕೂ ಅಧಿಕ ರನ್‌ಗಳನ್ನು ಗಳಿಸಿದ್ದರು.

ತಂದೆ ಬಗ್ಗೆ ರಿಂಕು ಭಾವುಕ ಸಂದೇಶ

ದೆಹಲಿ: ಟಿ20 ವಿಶ್ವಕಪ್ ಸಮಯದಲ್ಲಿ ಟೀಮ್ ಇಂಡಿಯಾದ ಆಟಗಾರ ರಿಂಕು ಸಿಂಗ್ ಅವರ ತಂದೆ ಸಾವನ್ನಪ್ಪಿದ್ದರು. ಆ ನೋವಿನ ನಡುವೆ ರಿಂಕು ಸಿಂಗ್ ತನ್ನ ಮನೆಗೆ ತೆರಳಿದ ಬಳಿಕ ಮುಂದಿನ ಪಂದ್ಯಗಳಿಗೆ ತಂಡ ಸೇರಿ ಕೊಂಡಿದ್ದರು. ಇದೀಗ ಟಿ20 ವಿಶ್ವಕಪ್ ಗೆದ್ದು ತನ್ನ ಬದುಕು ಬದಲಿಸಿದ ತಂದೆಯ ಬಗ್ಗೆ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿರುವ ರಿಂಕು ಸಿಂಗ್, 'ನಾನು ನಿಮ್ಮೊಂದಿಗೆ ಮಾತನಾಡದೆ ಇಷ್ಟು ದಿನ ಗಳನ್ನು ಎಂದಿಗೂ ಕಳೆದಿಲ್ಲ. ನೀವು ಇಲ್ಲದೆ ನಾನು ಹೇಗೆ ಮುಂದುವರಿಯುತ್ತೇನೆ ಎಂದು ನನಗೆ ತಿಳಿದಿಲ್ಲ, ಆದರೆ ನನಗೆ ಪ್ರತಿ ಹಂತದಲ್ಲೂ ನೀವು ಬೇಕಾಗುತ್ತೀರಿ. ಕರ್ತವ್ಯ ಮೊದಲು ಎಂದು ನೀವು ನನಗೆ ಕಲಿಸಿದ್ದೀರಿ, ಆದ್ದರಿಂದ ನಾನು ಮೈದಾನದಲ್ಲಿ ನಿಮ್ಮ ಕನಸನ್ನು ನನಸಾಗಿಸಲು ಪ್ರಯತ್ನಿಸುತ್ತಿದ್ದೆ. ಈಗ ನಿಮ್ಮ ಕನಸು ನನಸಾಗಿದೆ, ನೀವು ಈಗ ನನ್ನೊಂದಿಗೆ ಇದ್ದಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು. ಪ್ರತಿಯೊಂದು ಸಣ್ಣ ಮತ್ತು ದೊಡ್ಡ ಸಂತೋಷ ದಲ್ಲೂ ನಾನು ನಿಮ್ಮನ್ನು ತುಂಬಾ ಮಿಸ್ ಮಾಡಿಕೊಳ್ಳುತ್ತೇನೆ ಅಪ್ಪಾ' ಎಂದು ರಿಂಕು ಸಿಂಗ್ ಬರೆದಿದ್ದಾರೆ.

ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಇಂಧನ ಕೊರತೆ | ಹೊಟೇಲ್ ಬಂದ್, ವಿಮಾನ ಸ್ಥಗಿತ ಸಾಧ್ಯತೆ ಬಗ್ಗೆ ಬಿಸಿಸಿಐಗೆ ಆತಂಕ

ಐಪಿಎಲ್ ಟೂರ್ನಿ ಮೇಲೆ ಕರಿನೆರಳು

ದೆಹಲಿ: ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಭಾರತದ ಪ್ರಮುಖ ಕ್ರೀಡಾಂಗಣಗಳನ್ನೊಳಗೊಂಡ ನಗರಗಳ ಹೊಟೆಲ್‌ಗಳಲ್ಲಿ ಅಡುಗೆ ಅನಿಲ ಕೊರತೆ ಉಂಟಾಗಿರುವುದು ಮತ್ತು ಭಾರತಕ್ಕೆ ಆಟಗಾರರು ಆಗಮಿಸಬೇಕಾದ ವಿಮಾನಗಳ ಸ್ಥಗಿತ ಸಾಧ್ಯತೆಯ ಹಿನ್ನೆಲೆಯಲ್ಲಿ ಈ ಸಲದ ಐಪಿಎಲ್ ಆವೃತ್ತಿಯ ಮೇಲೆ ಕರಿನೆರಳು ಬೀರುವ ಸಾಧ್ಯತೆಗಳಿವೆ ಎಂಬುದು ಸದ್ಯದ ವರದಿ.

ಈಗಾಗಲೇ ನಿಗದಿಯಾಗಿರುವಂತೆ ಇದೇ ತಿಂಗಳು 28 ರಿಂದ ಪ್ರಾರಂಭ ಆಗಬೇಕಿದೆ. ಭಾರತದ ಐದು ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣಾ ದಿನಾಂಕ ಘೋಷಣೆಯಾಗದಿರುವ ಹಿನ್ನೆಲೆಯಲ್ಲಿ ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಲೀಗ್ ಎನಿಸಿರುವ 19ನೇ ಆವೃತ್ತಿಯ ಐಪಿಎಲ್ ವೇಳಾಪಟ್ಟಿ ಇನ್ನೂ ಅಂತಿಮವಾಗಿಲ್ಲ.

ಆದರೆ ಇದೀಗ ಭಾರತದ ಪ್ರಮುಖ ನಗರಗಳಾದ ಮುಂಬೈ ಮತ್ತು ಚೆನ್ನೈಯಲ್ಲಿ ಮಂಗಳವಾರ ಎಲ್ಲಾ ಹೊಟೆಲ್‌ಗಳು ಎಲ್‌ಪಿಜಿ ಕ್ಷಾಮದ ಹಿನ್ನೆಲೆಯಲ್ಲಿ ಮಂಗಳವಾರ ಬಂದ್ ಆಗಿವೆ. ಈ ಎರಡೂ ಪ್ರಮುಖ ನಗರಗಳು ಐಪಿಎಲ್ ಪಂದ್ಯಾವಳಿಯ ಪ್ರಮುಖ ತಾಣಗಳಾಗಿವೆ. ಇದೀಗ ನಿಗದಿ ಆಗಿರುವ ಪ್ರಕಾರ ಐಪಿಎಲ್ ಆರಂಭವಾಗಲು ಇನ್ನು ಕೇವಲ ಮೂರು ವಾರಗಳ ಸಮಯವಷ್ಟೇ ಬಾಕಿ ಇದೆ. ಇದೇ ಸಂದರ್ಭದಲ್ಲಿ ಈ ಜಟಿಲ ಸಮಸ್ಯೆ ಗೋಚರಿಸಿರುವುದು ಐಪಿಎಲ್ ಟೂರ್ನಿ ಆಯೋಜನೆಯ ಬಗ್ಗೆ ಅನುಮಾನಗಳು ಹುಟ್ಟಲು ಕಾರಣವಾಗಿದೆ.

ಮುಂದಿನ ದಿನಗಳಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆಯಲ್ಲಿ ಇನ್ನೂ ಹೆಚ್ಚು ಸಮಸ್ಯೆ ಉಂಟಾದಲ್ಲಿ ಐಪಿಎಲ್ ಕ್ರೀಡಾಂಗಣವನ್ನು ಹೊಂದಿರುವ ಇನ್ನಷ್ಟು ನಗರಗಳ ಹೋಟೆಲ್, ರೆಸ್ಟೋರೆಂಟ್‌ಗಳನ್ನು ತಾತ್ಕಾಲಿಕವಾಗಿ ಮುಚ್ಚಬೇಕಾದ ಅನಿವಾರ್ಯತೆ ಎದುರಾಗಬಹುದು. ಆಗ ಅದು ಐಪಿಎಲ್ ಆಯೋಜನೆಯ ಮೇಲೆ ನೇರ ಪರಿಣಾಮ ಬೀರುವ ಸಾಧ್ಯತೆ ಹೆಚ್ಚು ಎಂದು ಹೇಳಲಾಗುತ್ತಿದೆ. ಐಪಿಎಲ್ ನಡೆಯಲಿರುವ ಸರಿಸುಮಾರು 2 ತಿಂಗಳ ಕಾಲ ಟೂರ್ನಿಯಲ್ಲಿ ಭಾಗವಹಿಸುವ ಒಟ್ಟು 10 ತಂಡಗಳು ಭಾರತದ ವಿವಿಧ ಹೋಟೆಲ್‌ಗಳಲ್ಲಿ ತಂಗಬೇಕಿರುವುದರಿಂದ ವ್ಯವಸ್ಥೆಗೆ ಸಮಸ್ಯೆಯಾಗುವ ಸಾಧ್ಯತೆ ಇದೆ. ಅದೇ ರೀತಿ ಟೂರ್ನಿಯನ್ನು ವೀಕ್ಷಿಸಲು ಸಾವಿರಾರು ಪ್ರೇಕ್ಷಕರು ಬರುವುದರಿಂದ ಹೊಟೆಲ್ ಸಮಸ್ಯೆ ಅವರಿಗೂ ಎದುರಾದರೆ ಅದು ಐಪಿಎಲ್‌ನ ಆದಾಯಕ್ಕೆ ಕೊಡಲಿ ಪೆಟ್ಟಾಗುವ ಸಾಧ್ಯತೆ ಇದೆ ಎಂಬುದನ್ನೂ ಬಿಸಿಸಿಐ ಗಂಭೀರವಾಗಿ ಯೋಚಿಸಿದೆ.

ವಿಮಾನ ಸೇವೆಯಲ್ಲಿ ವ್ಯತ್ಯಯ ಸಾಧ್ಯತೆ: ಗಲ್ಫ್ ದೇಶಗಳಲ್ಲಿ ವಿಮಾನ ಪ್ರಯಾಣದ ಮೇಲಿನ ನಿರ್ಬಂಧದಿಂದಾಗಿ ವಿಶ್ವಕಪ್ ಆಡಲು ಭಾರತಕ್ಕೆ ಆಗಮಿಸಿದ್ದ ತಂಡಗಳ ತಮ್ಮ ದೇಶಗಳಿಗೆ ವಾಪಾಗಲು ಬಹಳ ಸಮಸ್ಯೆ ಎದುರಿಸಿದವು. ಸೂಪರ್ 8 ಹಂತದಲ್ಲಿ ಹೊರಬಿದ್ದ ವೆಸ್ಟ್ ಇಂಡೀಸ್ ಮತ್ತು ಸೆಮಿಫೈನಲ್‌ನಲ್ಲಿ ಪರಾಭವಗೊಂಡ ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡಗಳು ಟೂರ್ನಿಯಲ್ಲಿ ಅಭಿಯಾನ ಮುಗಿದ ಬಳಿಕವೂ ತವರಿಗೆ ಮರಳಲು ಸಾಧ್ಯವಾಗದೆ ಕೋಲ್ಕತಾದ ಹೋಟೆಲ್‌ನಲ್ಲಿ ಹಲವಾರು ದಿನ ಉಳಿದುಕೊಳ್ಳಬೇಕಾದ ಕಷ್ಟದ ಪರಿಸ್ಥಿತಿಯನ್ನು ಎದುರಿಸಿದವು. ಇದೀಗ ಐಪಿಎಲ್‌ಗೆ ವಿವಿಧ ಫ್ರಾಂಚೈಸಿಗಳ ಖ್ಯಾತ ವಿದೇಶಿ ಆಟಗಾರರು ಭಾರತಕ್ಕೆ ಆಗಮಿಸಬೇಕಾಗಿದೆ. ಹಾಗಾಗಿ ಮಧ್ಯಪ್ರಾಚ್ಯ ಬಿಕ್ಕಟ್ಟು ಇನ್ನಷ್ಟು ಜಟಿಲವಾದರೆ ವಿದೇಶಿ ಆಟಗಾರರಿಗೆ ಸಕಾಲದಲ್ಲಿ ಭಾರತಕ್ಕೆ ತಲುಪುವುದು ಅಸಾಧ್ಯದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಈ ಎರಡೂ ಪ್ರಮುಖ ಕಾರಣಗಳಿಂದ ಇದೀಗ ಐಪಿಎಲ್ ಟೂರ್ನಿ ಬಗ್ಗೆ ಬಿಸಿಸಿಐ ಚಿಂತಾಕ್ರಾಂತವಾಗಿದ್ದು, ಐಪಿಎಲ್ ವೇಳಾಪಟ್ಟಿಯನ್ನು ಕೆಲವೇ ದಿನಗಳಲ್ಲಿ ಪ್ರಕಟಿಸಬೇಕಾಗಿರುವುದರಿಂದ ಸಂದಿಗ್ಧತೆಯಲ್ಲಿದ್ದು ಸಾಧಕ ಭಾದಕಗಳ ಬಗ್ಗೆ ತುರ್ತು ಸಭೆಯೊಂದರ ಮೂಲಕ ಚರ್ಚಿಸಿ ತನ್ನ ಸ್ಪಷ್ಟ ನಿರ್ಧಾರವನ್ನು ಘೋಷಿಸಲಿದೆ ಎಂದೂ ವರದಿಯಾಗಿದೆ.

ಸುಳಿವು ನೀಡಿದ ಧುಮಾಲ್

ಇದೀಗ ಉದ್ಭವಿಸಿರುವ ಐಪಿಎಲ್ ಸಂದಿಗ್ಧತೆಯ ಬಗ್ಗೆ ಮಾತನಾಡಿರುವ ಟೂರ್ನಿಯ ಮುಖ್ಯಸ್ಥ ಅರುಣ್ ಧುಮಾಲ್, 'ಒಂದು ವೇಳೆ ಮಧ್ಯ ಪ್ರಾಚ್ಯ ಯುದ್ಧ ಮುಂದುವರಿದು, ಮುಂದಿನ ಕೆಲವು ದಿನಗಳಲ್ಲಿ ಇನ್ನಷ್ಟು ಜಟಿಲವಾದರೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಐಪಿಎಲ್ ಮುಂದೂಡಿಕೆ ಬಗ್ಗೆ ಕಠಿಣವಾದೊಂದು ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ' ಎಂದು ಹೇಳುವ ಮೂಲಕ ಮುಂದಿನ ನಡೆಯ ಬಗ್ಗೆ ಸುಳಿವು ನೀಡಿದ್ದಾರೆ. ಸದ್ಯಕ್ಕೆ ಬಿಸಿಸಿಐ ಪರಿಸ್ಥಿತಿಯನ್ನು ಅವಲೋಕಿಸುತ್ತಿದೆ ಎಂದೂ ಅವರು ಹೇಳಿದ್ದಾರೆ.

ವಿಶ್ವಕಪ್ ಗೆದ್ದ ಭಾರತಕ್ಕೆ ದಾಖಲೆ ನಗದು ಬಹುಮಾನ

ಬಿಸಿಸಿಐಯಿಂದ 131 ಕೋಟಿ

ದೆಹಲಿ: ಐಸಿಸಿ ಟಿ20 ವಿಶ್ವಕಪ್ ಅನ್ನು 3ನೇ ಬಾರಿಗೆ ಗೆದ್ದು ಇತಿಹಾಸ ನಿರ್ಮಿಸಿದ ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ಕ್ರಿಕೆಟ್ ತಂಡಕ್ಕೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) 131 ಕೋಟಿ ರು.ನಗದು ಬಹುಮಾನವನ್ನು ಘೋಷಿಸಿದೆ. ವಿಶ್ವಚಾಂಪಿಯನ್ ಭಾರತ ತಂಡಕ್ಕೆ ಪ್ರಶಸ್ತಿ ಮೊತ್ತವಾಗಿ ಐಸಿಸಿಯಿಂದ 20.4 ಕೋಟಿ ರು.ದೊರಕಿತ್ತು. ಬಿಸಿಸಿಐ ನೀಡಿರುವ ಮೊತ್ತವು ಅದರ 6 ಪಟ್ಟುಗಿಂತ ಅಧಿಕವಾಗಿದೆ.

2024ರಲ್ಲಿ ರೋಹಿತ್ ಶರ್ಮಾ ನೇತೃತ್ವದ ಭಾರತ ತಂಡ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಪ್ರಶಸ್ತಿ ಗೆದ್ದಾಗ ಬಿಸಿಸಿಐ 125 ಕೋಟಿ ರು.ಬಹುಮಾನ ನೀಡಿತ್ತು. ಇದೀಗ ಅದಕ್ಕಿಂತಲೂ 6 ಕೋಟಿ ರು. ಘೋಷಿಸಿದೆ. 15 ಆಟಗಾರರು, ಕೋಚಿಂಗ್ ಸ್ಟಾಫ್ ಮತ್ತು ಇತರ ಸಹಾಯಕ ಸಿಬ್ಬಂದಿಗೆ ಈ ಮೊತ್ತವನ್ನು ಹಂಚಿಕೆ ಮಾಡಲಾಗುತ್ತದೆ.

ಈ ಬಗ್ಗೆ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಬಿಸಿಸಿಐ, ಟಿ20 ವಿಶ್ವಕಪ್ ಗೆದ್ದ ತಂಡದ ಆಟಗಾರರು, ಸಹಾಯಕ ಸಿಬ್ಬಂದಿ ಮತ್ತು ಆಯ್ಕೆಗಾರರನ್ನು ಅಭಿನಂದಿಸಿದ್ದು, 'ಈ ವಿಜಯವು ದೇಶದ ಕ್ರಿಕೆಟ್‌ನ ಆಳ ಮತ್ತು ಪ್ರತಿಭೆಗಳನ್ನು ಪೋಷಿಸುವ ವ್ಯವಸ್ಥೆಯ ಪ್ರತಿಬಿಂಬವಾಗಿದೆ' ಎಂದು ಬಣ್ಣಿಸಿದೆ. ಬಿಸಿಸಿಐ ಅಧ್ಯಕ್ಷ ಮಿಥುನ್ ಮನ್ಹಾಸ್ ಈ ಸಾಧನೆಯನ್ನು ರಾಷ್ಟ್ರದ ಹೆಮ್ಮೆಯ ಕ್ಷಣ ಎಂದು ಬಣ್ಣಿಸಿದ್ದಾರೆ. ಸ್ವಂತ ನೆಲದಲ್ಲಿ ಪ್ರಶಸ್ತಿಯನ್ನು ಉಳಿಸಿಕೊಂಡಿರುವುದು ಈ ಸಾಧನೆಯನ್ನು ಇನ್ನಷ್ಟು ವಿಶೇಷವಾಗಿಸಿದೆ ಎಂದು ಅವರು ಹೇಳಿದ್ದಾರೆ. ನಾಯಕ ಸೂರ್ಯಕುಮಾರ್ ಯಾದವ್, ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಪ್ರಶಸ್ತಿ ವಿಜೇತ ಇಡೀ ತಂಡದ ಶ್ರಮವನ್ನು ಅವರು ಶ್ಲಾಘಿಸಿದ್ದಾರೆ.

ಟಿ20 ನಾಯಕನ ಪತ್ನಿಯ ತವರಿನ ದೇಗುಲ | ತುಲಾಭಾರ ಸಂಕಲ್ಪ

ಕಾಪುಗೆ ಸೂರ್ಯಕುಮಾರ್ ಭೇಟಿ ಸಾಧ್ಯತೆ

ಉಡುಪಿ: ನ್ಯೂಜಿಲೆಂಡ್ ತಂಡದ ವಿರುದ್ಧ ಸಾಂಘಿಕ ಪ್ರದರ್ಶನ ನೀಡಿ ಟಿ20 ವಿಶ್ವಕಪ್ ಮತ್ತೊಮ್ಮೆ ತನ್ನ ಮುಡಿಗೇರಿಸಿಕೊಂಡಿರುವ ಭಾರತ ಕ್ರಿಕೆಟರರ ತಂಡದ ನಾಯಕನಾಗಿರುವ ಸೂರ್ಯಕುಮಾರ್ ಯಾದವ್ ಅವರಿಗೆ ಉಡುಪಿ ಜಿಲ್ಲೆಯ ಕಾಪು ಕ್ಷೇತ್ರದೊಂದಿಗೆ ವಿಶೇಷ ಭಕ್ತಿಭಾವದ ನಂಟಿದ್ದು, ಉಡುಪಿಯ ಅಳಿಯನ ಹೆಸರಲ್ಲಿ ವಿಶೇಷ ಪೂಜೆಗೆ ಕಾಪು ಕ್ಷೇತ್ರದಲ್ಲಿ ಸಿದ್ಧತೆ ಭರದಿಂದ ಸಾಗಿದೆ.

ಸೂರ್ಯಕುಮಾರ್ ಯಾದವ್ ಅವರ ಪತ್ನಿ ದೇವಿಶಾ ಶೆಟ್ಟಿ ಉಡುಪಿ ಜಿಲ್ಲೆಯ ಕಾಪು ತಾಲೂಕಿನ ಮೂಲದವರಾಗಿದ್ದು, ಅವರ ಕುಟುಂಬ ಸದ್ಯ ಮುಂಬೈನಲ್ಲಿ ವಾಸವಾಗಿದೆ. ಕಾಪು ಹೊಸ ಮಾರಿಯಮ್ಮ ದೇವಸ್ಥಾನವು ಸೂರ್ಯಕುಮಾರ್ ಯಾದವ್ ಪತ್ನಿಯ ಕುಟುಂಬದ ಆರಾಧ್ಯ ಕ್ಷೇತ್ರವಾಗಿದೆ. ಸೂರ್ಯಕುಮಾರ್ ಯಾದವ್ ಮತ್ತು ದೇವಿಶಾ ಶೆಟ್ಟಿ ದಂಪತಿ ಈಗಾಗಲೇ 2 ಬಾರಿ ಕಾಪು ಮಾರಿಗುಡಿಗೆ ಭೇಟಿ ನೀಡಿ ದೇವಿಯ ಆಶೀರ್ವಾದ ಪಡೆದಿದ್ದಾರೆ. 2024ರ ಜುಲೈ 9ರಂದು ಅವರು ಕಾಪು ಮಾರಿಗುಡಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ದೇವಾಲಯಕ್ಕೆ ಕಂಬವನ್ನು ದಾನವಾಗಿ ನೀಡಿ ದ್ದರು. ಅದಾದ ನಂತರ ಕೇವಲ 9 ದಿನಗಳಲ್ಲಿ ಸೂರ್ಯ ಕುಮಾರ್ ಯಾದವ್ ಅವರನ್ನು ಭಾರತೀಯ ಟಿ20 ಕ್ರಿಕೆಟ್ ತಂಡದ ನಾಯಕನಾಗಿ ಘೋಷಿಸಲಾಗಿತ್ತು. ದೇವಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅರ್ಚಕರು, ಮುಂದಿನ ದಿನ ಗಳಲ್ಲಿ ಸೂರ್ಯಕುಮಾರ್ ಭಾರತೀಯ ತಂಡದ ನಾಯಕ ನಾಗಲೆಂದು ಆಶೀರ್ವಾದ ಮಾಡಿದ್ದರು. ದೇವಿಯ ಸನ್ನಿಧಿ ಯಲ್ಲಿ ಅವರಾಡಿದ್ದ ಮಾತು ಸತ್ಯವಾಗಿತ್ತು. ವಿಶ್ವಕಪ್ ಗೆಲು ವಿನ ಬೆನ್ನಲ್ಲೇ ಇದೀಗ ಸೂರ್ಯಕುಮಾರ್ ಯಾದವ್ ದಂಪತಿ ಮತ್ತೆ ಕ್ಷೇತ್ರಕ್ಕೆ ಭೇಟಿ ನೀಡಬೇಕು ಎಂದು ದೇವಸ್ಥಾನದ ಪ್ರಮುಖರು ಸಂಕಲ್ಪ ಮಾಡಿಕೊಂಡಿದ್ದು, ಅದೇ ವೇಳೆ ದೇವಿಗೆ ಬೆಲ್ಲ , ಸಕ್ಕರೆಯ ತುಲಾಭಾರ ನಡೆಸುವ ಸಂಕಲ್ಪವನ್ನೂ ಭಕ್ತರು ಮಾಡಿದ್ದಾರೆ.

ಡ್ಯಾರಿಲ್ ಮಿಚೆಲ್ ಬಳಿ ಒರಟಾಗಿ ವರ್ತಿಸಿದ ಆರೋಪ | ಐಸಿಸಿಯಿಂದ ಕ್ರಮ

ವೇಗಿ ಅರ್ಷದೀಪ್ ಸಿಂಗ್‌ಗೆ ದಂಡ

ದೆಹಲಿ: ನ್ಯೂಜಿಲೆಂಡ್ ವಿರುದ್ಧ ಟಿ20 ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಐಸಿಸಿ ನಿಯಮ ಉಲ್ಲಂಘನೆ ಮಾಡಿದ್ದ ಭಾರತ ತಂಡದ ವೇಗದ ಬೌಲರ್ ಅರ್ಷದೀಪ್ ಸಿಂಗ್‌ಗೆ ಪಂದ್ಯದ ಸಂಭಾವನೆಯಲ್ಲಿ ಐಸಿಸಿ ಶೇ.15ರಷ್ಟು ದಂಡ ವಿಧಿಸಿದೆ. ಅರ್ಷದೀಪ್ ಸಿಂಗ್ ಅವರು ಕಿವೀಸ್ ಬ್ಯಾಟಿಂಗ್ ಮಾಡುತ್ತಿದ್ದ ವೇಳೆ ಡ್ಯಾರಿಲ್ ಮಿಚೆಲ್ ಅವರ ಮೇಲೆ ಅನಗತ್ಯವಾಗಿ ಚೆಂಡಿನಿಂದ ಥ್ರೋ ಮಾಡುವ ಮೂಲಕ ಐಸಿಸಿ ನಿಯಮವನ್ನು ಉಲ್ಲಂಘನೆ ಮಾಡಿದ್ದರು. ಆ ಘಟನೆಯನ್ನು ಗಮನಿಸಿದ ಐಸಿಸಿ ಯುವ ವೇಗಿಗೆ ದಂಡ ವಿಧಿಸಿದೆ.

ಮಂಗಳವಾರ ಐಸಿಸಿ ತನ್ನ ನಿರ್ಧಾರವನ್ನು ಪ್ರಕಟಿದ್ದು, ನಡವಳಿಕೆ ಸಂಹಿತೆಯ ಲೆವೆಲ್ 1 ಉಲ್ಲಂಘನೆಗಾಗಿ ಅರ್ಷದೀಪ್‌ಗೆ ದಂಡ ವಿಧಿಸಲಾಗಿದೆ ಎಂದು ಅದು ತಿಳಿಸಿದೆ. 'ಆಟಗಾರರು ಹಾಗೂ ಆಟಗಾರರ ಬೆಂಬಲ ಸಿಬ್ಬಂದಿಗೆ ಸಂಬಂಧಿಸಿದ ಐಸಿಸಿ ನಡವಳಿಕೆ ಸಂಹಿತೆಯ ವಿಧಿ 2.9 ಅನ್ನು ಅರ್ಷದೀಪ್ ಉಲ್ಲಂಘಿಸಿರುವುದು ಕಂಡುಬಂದಿದೆ. ಈ ವಿಧಿಯ ಪ್ರಕಾರ, ಅಂತಾರಾಷ್ಟ್ರೀಯ ಟೂರ್ನಿಯ ಪಂದ್ಯದ ವೇಳೆ ಆಟಗಾರನ ಕಡೆಗೆ ಅಥವಾ ಅವರ ಸಮೀಪಕ್ಕೆ ಚೆಂಡನ್ನು ಅಸಮರ್ಪಕ ಅಥವಾ ಅಪಾಯಕಾರಿಯಾದ ರೀತಿಯಲ್ಲಿ ಎಸೆಯಬಾರದು ಎಂಬ ನಿಯಮದ ಹಿನ್ನೆಲೆಯಲ್ಲಿ ಐಸಿಸಿ ಈ ಕ್ರಮ ಕೈಗೊಂಡಿದೆ.

ದಂಡ ವಿಧಿಸುವ ಜತೆಗೆ ಅರ್ಷದೀಪ್ ಸಿಂಗ್ ಅವರಿಗೆ ಒಂದು ಡೀಮೆರಿಟ್ ಅಂಕವನ್ನು ಕೂಡ ನೀಡಲಾಗಿದೆ. 24 ತಿಂಗಳ ಅವಧಿಯಲ್ಲಿ ಅವರ ಪ್ರಥಮ ಪ್ರಮಾದ ಇದಾಗಿದೆ. ಐಸಿಸಿ ಅಧಿಕಾರಿಗಳು ತೆಗೆದುಕೊಂಡು ತೀರ್ಪನ್ನು ಅರ್ಷದೀಪ್ ಸಿಂಗ್ ಒಪ್ಪಿಕೊಂಡಿದ್ದಾರೆ. ಹಾಗಾಗಿ ಯುವ ವೇಗಿ ಈ ಕುರಿತಾದ ಯಾವುದೇ ವಿಚಾರಣೆಯಲ್ಲಿ ಭಾಗಿಯಾಗುವ ಅಗತ್ಯವಿಲ್ಲ.

ಫೈನಲ್ ಪಂದ್ಯದ ಬಳಿಕ ಅರ್ಷದೀಪ್ ಸಿಂಗ್ ಹಾಗೂ ಡ್ಯಾರಿಲ್ ಮಿಚೆಲ್ ಅವರು ಒಂದು ಕಡೆ ಕಾಣಿಸಿದ ವಿಡಿಯೊ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು, ಅದರಲ್ಲಿ ಅರ್ಷದೀಪ್ ಸಿಂಗ್ ಅವರು ಕಿವೀಸ್ ಹಿರಿಯ ಬ್ಯಾಟ್ಸ್‌ಮನ್ ಬಳಿ ಕ್ಷಮೆಯಾಚಿಸಿದ ದೃಶ್ಯಾವಳಿ ಇತ್ತು.

ಟಾಕೀಸ್

ಟೀಸರ್‌ನಲ್ಲಿ ಮನಗೆದ್ದ

ಬಾಸ್

ವಿ.ಲವ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಬಾಸ್ ಚಿತ್ರದ ಫಸ್ಟ್ ಲುಕ್ ಟೀಸರ್ ಬಿಡುಗಡೆಯಾಗಿದೆ. ಟೀಸರ್ ಕುತೂಹಲ ಮೂಡಿಸಿದ್ದು, ಟೀಸರ್ ನೋಡಿದ ಪ್ರೇಕ್ಷಕರು ಖುಷಿಯಾಗಿದ್ದಾರೆ. ಬಾಸ್, ಕ್ರೈಂ ಥ್ರಿಲ್ಲರ್ ಜಾನರ್‌ನ ಚಿತ್ರವಾಗಿದೆ. ಈ ಚಿತ್ರಕ್ಕೆ ಸತ್ಯಮೇವ ಜಯತೇ ಎಂಬ ಅಡಿಬರಹವಿದೆ. ಇದನ್ನು ಗಮನಿಸಿದರೆ ನಾಯಕ ಅನ್ಯಾಯದ ವಿರುದ್ಧ ಹೋರಾಡುವ ರೋಚಕ ಕಥೆ ಇಲ್ಲಿ ಅಡಕವಾಗಿದೆ ಎಂಬುದು ತಿಳಿಯುತ್ತದೆ. ತನುಷ್ ಶಿವಣ್ಣ ನಾಯಕನಾಗಿ ನಟಿಸಿದ್ದು, ಮೋನಿಕಾ ಹಾಗೂ ಪಾಯಲ್ ನಾಯಕಿಯರಾಗಿ ಅಭಿನಯಿಸಿದ್ದಾರೆ. ವಿಜಯೇಶ್, ವೀರೇನ್ ಕೇಶವ್, ಭೀಷ್ಮ ರಾಮಯ್ಯ, ಲಕ್ಷ್ಮಣ್ ಪೂಜಾರಿ ಮುಂತಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ನಾನೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದೇನೆ. ಈಗಾಗಲೇ ಚಿತ್ರೀಕರಣ ಮುಕ್ತಾಯವಾಗಿದೆ. ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಮುಂದಿನ ತಿಂಗಳು ಚಿತ್ರವನ್ನು ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ ಎಂದು ನಿರ್ದೇಶಕರು ತಿಳಿಸಿದರು. ನನ್ನ ಚೊಚ್ಚಲ ಚಿತ್ರಕ್ಕೆ ಒಳ್ಳೆಯ ಸ್ಪಂದನೆ ಸಿಕ್ಕಿದೆ. ಅಂತೆಯೇ ಈ ಸಿನಿಮಾವನ್ನು ಪ್ರೇಕ್ಷಕರು ಮೆಚ್ಚಲಿದ್ದಾರೆ ಎಂಬ ನಂಬಿಕೆ ಇದೆ. ನಮ್ಮ ಚಿತ್ರದ ಫಸ್ಟ್ ಲುಕ್ ಟೀಸರ್ ಅನಾವರಣವಾಗಿದೆ. ಸದ್ಯದಲ್ಲಿಯೇ ಚಿತ್ರವನ್ನು ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ. ಈ ಚಿತ್ರದಲ್ಲಿ ನನ್ನದು ಸಮಾಜಕ್ಕೆ ಬೇಕಾಗಿರುವ ವ್ಯಕ್ತಿಯ ಪಾತ್ರ. ಈ ಪಾತ್ರ ಎಲ್ಲರನ್ನೂ ಸೆಳೆಯಲಿದೆ. ಕನೆಕ್ಟ್ ಆಗಲಿದೆ ಎಂದು ತನುಷ್ ಹೇಳಿದರು. ಚಿತ್ರದಲ್ಲಿ ಎರಡು ಹಾಡುಗಳಿದ್ದು, ಡೆವಿ ಸುರೇಶ್ ಸಂಗೀತ ಸಂಯೋಜಿಸಿದ್ದಾರೆ. ಶರತ್.ಎನ್.ಆರ್ ಪುರ ಛಾಯಾಗ್ರಹಣ ಹಾಗೂ ಮಹೇಶ್ ರೆಡ್ಡಿ ಸಂಕಲನ ಈ ಚಿತ್ರಕ್ಕಿದೆ. ಸಿರಿ ಪ್ರೊಡಕ್ಷನ್ಸ್‌ನಲ್ಲಿ ಪಿ.ಅನಿಲ್ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಅನ್ನದಾತನ ಕಥೆಯ ಮಹಾಕಾಳಿ ಪುತ್ರ

ತಿರುಪತಿ ತಿರುಮಲ ಪ್ರೊಡಕ್ಷನ್ಸ್‌ನಲ್ಲಿ ಎಸ್.ಎಂ.ಗಿರೀಶ್ ನಿರ್ಮಿಸುತ್ತಿರುವ ಹೊಸ ಚಿತ್ರದ ಶೀರ್ಷಿಕೆ ಬಿಡುಗಡೆಯಾಗಿದೆ. ಮಹಾಕಾಳಿ ಪುತ್ರ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದೆ. ಗಿರೀಶ್ ಅವರೇ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ನಾಯಕನಾಗಿಯೂ ಅಭಿನಯಿಸಿದ್ದಾರೆ. ನಾನು ಮೂಲತಃ ರೈತಾಪಿ ಕುಂಟಬದಿಂದ ಬಂದವನು, ಹಾಗಾಗಿ ರೈತರ ಸಮಸ್ಯೆಗಳನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಅನ್ನದಾತನ ನೋವು ನಲಿವುಗಳನ್ನು ಈ ಸಿನಿಮಾದ ಮೂಲಕ ಹೇಳುತ್ತಿದ್ದೇನೆ. ಮಹಾಕಾಳಿಪುತ್ರ ಎಂದರೆ ದೇವರ ಆರಾಧಕ. ರೈತರು ಪ್ರತಿದಿನ ದೇವಿಯ ಪೂಜೆ ಮಾಡಿಕೊಂಡೇ ತಮ್ಮ ಕಾಯಕಕ್ಕೆ ಹೊರಡುತ್ತಿದ್ದರು. ಆ ರೈತನನ್ನು ದೇವಿ ಪುತ್ರ ಅಂತ ಚಿತ್ರದಲ್ಲಿ ತೋರಿಸ್ತಿದ್ದೇವೆ. ದೇಶಕ್ಕೆ ಅನ್ನ ನೀಡುವ ರೈತನಿಗೆ ಸರಿಯಾದ ಗೌರವ, ಸಿಗುತ್ತಿಲ್ಲ. ಮಣ್ಣನ್ನು ನಂಬಿ ದುಡಿಯುವ ರೈತನಿಂದ ಹಿಡಿದು ದೇಶ ಕಾಯುವ ಸೈನಿಕನವರೆಗೂ ಸಾಗುವ ಕಥೆಯನ್ನು ಹೆಣೆದಿದ್ದೇನೆ. ರೈತರ ಬಗ್ಗೆ ಈವರೆಗೆ ಬಂದ ಎಲ್ಲಾ ಸಿನಿಮಾಗಳಿಗಿಂತ ಇದರಲ್ಲಿ ಹೊಸತನದ ಕಥೆಯಿದೆ. ಇದೇ ಮಣ್ಣು ಹೇಗೆ ನಮ್ಮ ಸೈನ್ಯಕ್ಕೆ ಸೇರುತ್ತದೆ. ನಮ್ಮ ಮಣ್ಣಿಂದ ಗನ್ ಪೌಡರ್ ಕೂಡ ಮಾಡಬಹುದು. ಅದರ ಮೈನಿಂಗ್‌ನ ಸಣ್ಣ ಎಳೆ ಆಧರಿಸಿ ಈ ಸಿನಿಮಾ ಮಾಡಿದ್ದೇವೆ. ನಮ್ಮ ಮಣ್ಣಿನ ಬೆಲೆ ಏನು ಅಂತ ತೋರಿಸಿದ್ದೇವೆ. ಮಹಾಕಾಳಿ ಪುತ್ರ ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಲಿದೆ, ಪರ ಭಾಷೆಯ ಖ್ಯಾತ ಕಲಾವಿದರು ಚಿತ್ರದಲ್ಲಿ ನಟಿಸಲಿದ್ದಾರೆ ಎಂದು ನಟ, ನಿರ್ದೇಶಕ ಗಿರೀಶ್ ಹೇಳಿದರು. ಮಹಾಕಾಳಿ ಪುತ್ರ ಚಿತ್ರದಲ್ಲಿ ಒಂದು ಹಾಡಿದ್ದು, ರಾಹುಲ್ ವಸ್ತಾರ ಸಂಗೀತ ಸಂಯೋಜಿಸಿದ್ದಾರೆ. ಕೀರ್ತನ್ ಪೂಜಾರಿ ಛಾಯಾಗ್ರಹಣ, ವಿಷ್ಣು ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ರಾಜನಿವಾಸ, ಪ್ಯಾರ್ ಚಿತ್ರಕ್ಕೆ ಸಂಭಾಷಣೆ ರಚಿಸಿರುವ ವೆಂಕಟೇಶ್ ಈ ಚಿತ್ರಕ್ಕೂ ಸಂಭಾಷಣೆ ಬರೆದಿದ್ದಾರೆ.

ಹೊಸ ಅವತಾರದಲ್ಲಿ

ಕೋಮಲ್ ಪ್ರತ್ಯಕ್ಷ

> ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ವಿಭಿನ್ನ ಕಥೆಯ ಸಿನಿಮಾ. ವಿಭಿನ್ನ ಕಥೆಯ ನಿರೂ ಪಣೆಗೆ ದೊಡ್ಡ ಬೆಂಬಲ ವಿದ್ದರೆ, ಅದು ಎಷ್ಟು ಚೆನ್ನಾಗಿ ಮೂಡಿ ಬರಬಹುದು ಎಂಬುದಕ್ಕೆ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ನಿದರ್ಶನ. ಕನ್ನಡದ ಚಿತ್ರರಂಗದ ಮಟ್ಟಿಗೆ ಇದೊಂದು ಅಪರೂಪದ ಚಿತ್ರವಾಗಿ ನಿಲ್ಲುತ್ತದೆ.
> **-ಸಂದೇಶ್ ಶೆಟ್ಟಿ ಆಜ್ರಿ**
> ನಿರ್ದೇಶಕ

ಕೋಣ ಚಿತ್ರದಲ್ಲಿ ಪ್ರೇಕ್ಷಕರನ್ನು ನಗಿಸಿದ ನಟ ಕೋಮಲ್ ಕುಮಾರ್ ಈಗ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಪ್ರತ್ಯಕ್ಷವಾಗಿದ್ದಾರೆ. ಹೌದು, ಕೋಮಲ್ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಚಿತ್ರದ ಮೂಲಕ ತೆರೆಗೆ ಎಂಟ್ರಿಕೊಡಲು ಸಿದ್ಧವಾಗಿದ್ದಾರೆ. ಸಿನಿಪ್ರಿಯರನ್ನು ಹಾಸ್ಯದ ಹೊನಲಿನಲ್ಲಿ ತೇಲಿಸಲಿದ್ದಾರೆ. ಮೇಘನಾ ರಾಜ್, ಅನುಷಾ ರೈ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಸದ್ಯ ಈ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಎರಡು ಹಂತಗಳಲ್ಲಿ ಸುಮಾರು ಎಪ್ಪತ್ತೈದು ದಿನಗಳ ಕಾಲ ಕುಂದಾಪುರ, ಶಿವಮೊಗ್ಗ, ತೀರ್ಥಹಳ್ಳಿ ಸೇರಿದಂತೆ ಕರಾವಳಿ ಮಲೆನಾಡು ಭಾಗದಲ್ಲಿ ಚಿತ್ರೀಕರಣ ನಡೆಸಲಾಗಿದೆ. ಚಿತ್ರದ ಶೂಟಿಂಗ್‌ಗಾಗಿ ಕುಂದಾಪುರದ ಅಂಪಾರಿನ ವಾಲ್ತೂರು ಗ್ರಾಮದಲ್ಲಿ ಏಳು ವಿಭಿನ್ನ ವಿನ್ಯಾಸದ ಬೃಹತ್ ಸೆಟ್‌ಗಳನ್ನು ನಿರ್ಮಿಸಿ, ಅಲ್ಲಿಯೇ ಪ್ರಮುಖ ಸನ್ನಿವೇಶಗಳನ್ನು ಸೆರೆಹಿಡಿಯಲಾಗಿದೆ. ಸಂದೇಶ್ ಶೆಟ್ಟಿ ಆಜ್ರಿ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದು, ವಿಕಾಸ್ ಶೆಟ್ಟಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಚಿತ್ರದ ಮೊದಲಾರ್ಧ ಬಾರ್‌ನಲ್ಲಿ ಶುರುವಾಗಿ, ಬಾರ್ ಸುತ್ತ ಸಾಗಿದರೆ, ದ್ವಿತೀಯಾರ್ಧ ದೇವರ ತಾಣದಲ್ಲಿ ಸಾಗಲಿದೆ. ಚಿತ್ರದ ಮೊದ ಲಾರ್ಧ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಆಗಿದ್ದರೆ, ದ್ವಿತೀಯಾರ್ಧ ದೇವರ ತಾಣ ಅಂತಿದೆ. ಈ ಎರಡೂ ಹೆಸರುಗಳು ಕೂಡ ನಮ್ಮ ಸಿನಿಮಾದ ಶೀರ್ಷಿಕೆಗಳು. ಆದರೆ ಸೆನ್ಸಾರ್ ನಿಯಮದಂತೆ, ಒಂದು ಸಿನಿಮಾಕ್ಕೆ ಒಂದೇ ಶೀರ್ಷಿಕೆ ಇಡಬೇಕಾಗಿರುವುದರಿಂದ, ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಟೈಟಲ್‌ನಲ್ಲಿ ಚಿತ್ರ ತೆರೆಗೆ ಬರಲಿದೆ ಎಂದು ನಿರ್ದೇಶಕ ಸಂದೇಶ್ ಶೆಟ್ಟಿ ಹೇಳಿದರು.

ಕೋಮಲ್, ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಸಿನಿಮಾದಲ್ಲಿ ಡಬಲ್ ಶೇಡ್‌ನಲ್ಲಿ ಮಿಂಚಿದ್ದಾರೆ. ಒಂದರಲ್ಲಿ ಆಸ್ಥಾನವೊಂದರ ವರ್ಣಚಿತ್ರ ಕಲಾವಿದನಾಗಿ ಕಾಣಿಸಿಕೊಂಡರೆ, ಮತ್ತೊಂದರಲ್ಲಿ ಸಿನಿಮಾ ನಿರ್ದೇಶಕನ ಪಾತ್ರದಲ್ಲಿ ಕೋಮಲ್ ಕಂಗೊಳಿಸಿದ್ದಾರೆ. ಮೇಘನಾ ರಾಜ್ ರಾಣಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಪ್ರಮೋದ್ ಶೆಟ್ಟಿ, ಪ್ರಕಾಶ್ ತುಮ್ಮಿನಾಡ್, ವಜ್ರಧೀರ್ ಜೈನ್, ಉತ್ಸವ್, ಕಾರ್ತಿಕ್ ರಾವ್, ರಾಘು ರಾಮನ ಕೊಪ್ಪ, ಸಿರಿಜಾ, ವರ್ಧನ್, ಕರಣ್, ರಾಧಿಕಾ ರಾವ್ ದಿವ್ಯಶ್ರೀ, ಅಕ್ಷತಾ, ಮಹೇಶ್, ನಾಗರಾಜ್, ಮನೀಶ್ ಶೆಟ್ಟಿ, ರಾಧಾಕೃಷ್ಣ, ಮಹಾಬಲೇಶ್ವರ ಭಟ್ ಹೀಗೆ ದೊಡ್ಡ ಕಲಾವಿದರ ಬಳಗವೇ ಚಿತ್ರ ದಲ್ಲಿದೆ. ನಿರ್ದೇಶಕ ಸಂದೇಶ್ ಶೆಟ್ಟಿ ಆಜ್ರಿ ಕೂಡ ಪಾತ್ರ ನಿರ್ವಹಿಸಿದ್ದಾರೆ. ಚಿತ್ರದಲ್ಲಿ ನಾಲ್ಕು ವಿಭಿನ್ನ ಹಾಡುಗಳಿವೆ. ಆ್ಯಕ್ಷನ್, ಕಾಮಿಡಿ, ಎಮೋಶನ್ ಹೀಗೆ ಎಲ್ಲಾ ಅಂಶಗಳು ಚಿತ್ರದ ಕಥೆಯಲ್ಲಿ ಬೆರೆತಿವೆ.

ಏಪ್ರಿಲ್‌ನಲ್ಲಿ ಕೆಡಿ ಅಬ್ಬರ

ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಯುಗಾದಿಗೆ ಟಾಕ್ಸಿಕ್ ಅದ್ದೂರಿಯಾಗಿ ವಿಶ್ವಾದ್ಯಂತ ತೆರೆಗೆ ಬರಬೇಕಿತ್ತು. ಆದರೆ ಯುದ್ಧದ ಪರಿಣಾಮ ಟಾಕ್ಸಿಕ್ ಬಿಡುಗಡೆಯ ದಿನಾಂಕವನ್ನು ಮುಂದೂಡಲಾಗಿದೆ. ಪ್ಯಾನ್ ವರ್ಲ್ಡ್ ಸಿನಿಮಾ ಟಾಕ್ಸಿಕ್, ಕೆವಿಎನ್ ಪ್ರೊಡಕ್ಷನ್ಸ್‌ನಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿದೆ. ಇದರ ಜತೆಗೆ ಕೆವಿಎನ್ ಪ್ರೊಡಕ್ಷನ್ ಕೆಡಿ ಚಿತ್ರವನ್ನು ನಿರ್ಮಾಣ ಮಾಡಿದೆ. ಕೆಡಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ತಾರಾಬಳಗದ ಮೂಲಕವೇ ಗಮನ ಸೆಳೆದಿದೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಕೆಡಿ ತೆರೆಗೆ ಸಿದ್ಧವಾಗಿದ್ದು ಏಪ್ರಿಲ್ 30ರಂದು ವಿಶ್ವಾದ್ಯಂತ ರಿಲೀಸ್ ಆಗಲಿದೆ. ಕೆಡಿ ಅರವತ್ತರ ದಶಕದ ಕಥೆಯನ್ನು ಒಳಗೊಂಡಿದ್ದು, ಭೂಗತ ಲೋಕದ ಡಾನ್ ಕಾಳಿದಾಸನ ಸ್ಟೋರಿಯನ್ನು ಹೊತ್ತು ಸಾಗಲಿದೆ. ಧ್ರುವ ಸರ್ಜಾ ಕೆಡಿಯಾಗಿ ಅಬ್ಬರಿಸಿದ್ದು, ರೀಷ್ಮಾ ನಾಣಯ್ಯ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಕ್ರೇಜಿಸ್ಟಾರ್ ರವಿಚಂದ್ರನ್, ರಮೇಶ್ ಅರವಿಂದ್, ಸಂಜಯ್ ದತ್, ಶಿಲ್ಪಾ ಶೆಟ್ಟಿ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ಹಾಡುಗಳೇ ಹೈಲೈಟ್

ಕೆಡಿ, ಜೋಗಿ ಪ್ರೇಮ್ ನಿರ್ದೇಶನದಲ್ಲಿ ಮೂಡಿಬರುತ್ತಿದ್ದು, ಇದು ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಲು ಪ್ರಮುಖ ಕಾರಣವಾಗಿದೆ. ಪ್ರೇಮ್ ಸಿನಿಮಾಗಳು ಎಂದ ಮೇಲೆ ಅಲ್ಲಿ ಹಾಡುಗಳಿಗೆ ಹೆಚ್ಚಿನ ಮಹತ್ವವಿರುತ್ತದೆ. ಸಿನಿಮಾದ ಹಾಡುಗಳೇ ಹೈಲೈಟ್ ಆಗಿರುತ್ತವೆ. ಈಗಾಗಲೇ ಬಿಡುಗಡೆಯಾಗಿರುವ ಶಿವ.. ಶಿವ.., ಜೋಡೆತ್ತು.. ಮತ್ತು ಸೆಟ್ಟಾಗಲ್ಲ ಹೋಗೆ.. ಹೀಗೆ ಮೂರು ಹಾಡುಗಳು ಬಿಡುಗಡೆಯಾಗಿದ್ದು ಈ ಮೂರು ಗೀತೆಗಳು ದೊಡ್ಡ ಮಟ್ಟಕ್ಕೆ ಹಿಟ್ ಆಗಿವೆ. ಅರ್ಜುನ್ ಜನ್ಯ ಸಂಗೀತ ಹಾಡಿನ ಮಾಧುರ್ಯ ಹೆಚ್ಚಿಸಿದೆ. ಈಗ ಸಿನಿಮಾದ ನಾಲ್ಕನೇ ಹಾಡು ರಿಲೀಸ್ ಮಾಡಲು ಚಿತ್ರತಂಡ ರೆಡಿಯಾಗಿದೆ. ಸರಿಸೆ..ನಿನ್ನ... ಎನ್ನುವ ಹಾಡು ಇದಾಗಿದ್ದು, ಮಾರ್ಚ್ 14ರಂದು ರಿಲೀಸ್ ಆಗಲಿದೆ. ಸದ್ಯ ಈ ಹಾಡಿನ ತುಣುಕು ರಿಲೀಸ್ ಆಗಿದೆ. ಕನ್ನಡದಲ್ಲಿ ಐಶ್ವರ್ಯಾ ರಂಗರಾಜನ್ ದನಿಯಲ್ಲಿ ಹಾಡು ಮೂಡಿಬಂದಿದ್ದು, ತೆಲುಗಿನ ಗೀತೆಗೆ ಮಂಗ್ಲಿ ದನಿಯಾಗಿದ್ದಾರೆ. ತಮಿಳಿನಲ್ಲಿ ರಾಜಲಕ್ಷ್ಮಿ ಹಾಗೂ ಮಲೆಯಾಳಂ ಭಾಷೆಯಲ್ಲಿ ಸಿತಾರಾ ಕೃಷ್ಣಕುಮಾರ್ ಹಾಡು ಹಾಡಿದ್ದಾರೆ. ವಿಶೇಷ ಎಂದರೆ ಬಾಲಿವುಡ್ ಬೆಡಗಿ ನೂರಾ ಫತೇಹಿ ಈ ಹಾಡಿನಲ್ಲಿ ಸೊಂಟ ಬಳುಕಿಸಿದ್ದಾರೆ. ಅದ್ದೂರಿ ಸೆಟ್ ನಿರ್ಮಿಸಿ ಅಲ್ಲಿಯೇ ಹಾಡಿನ ಚಿತ್ರೀಕರಣ ನಡೆಸಲಾಗಿದೆ. ಈ ಗೀತೆಯಲ್ಲಿ ಧ್ರುವ ಸರ್ಜಾ ಹಾಗೂ ನೂರಾ ಫತೇಹಿ ಭರ್ಜರಿಯಾಗಿ ಹೆಜ್ಜೆ ಹಾಕಿದ್ದು, ಈ ಹಾಡನ್ನು ಕಣ್ತುಂಬಿ ಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದಾರೆ.